ಮಂಗಳೂರು
ಶುಕ್ರವಾರ, 19 ಜೂನ್ 2026
ಸಂಪುಟ 48, ಸಂಚಿಕೆ 92, ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ ₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಇಪಿಎಫ್ ಬಡ್ಡಿ ದರ ಶೇ.8.25ಕ್ಕೆ ಒಪ್ಪಿಗೆ | ೦೨ ವಿಯೆಟ್ನಾಂ ಜತೆ ಬ್ರಹ್ಮೋಸ್ ಒಪ್ಪಂದ | ೦೨ ಶಿರಡಿ ಸಾಯಿಗೆ ₹660 ಕೋಟಿ ದೇಣಿಗೆ | ೦೨

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಆಶ್ಲೇಷ

ದಿನದ ಮಾತು

ತನ್ನಿಂದ ಜಯಿಸಲು ಸಾಧ್ಯ ಎಂದು ನಂಬುವವರಿಂದಲೇ ಜಯವನ್ನು ಪಡೆಯಲು ಸಾಧ್ಯ.
▲ ನಾಣ್ನುಡಿ

ಎಲ್ಲಾ ಪಕ್ಷಗಳು ರೆಸಾರ್ಟ್ ಸಂಸ್ಕೃತಿಗೆ ಕೊನೆ ಹಾಡಲಿ

ಲೇಖನ
• ಸುರೇಶ್ ಕುಮಾರ್

• ಪುಟ ೬

ಕಿರುಸುದ್ದಿ

ಜಾರ್ಖಂಡ್, ಮಿಜೋರಾಂ: ಎನ್‌ಡಿಎ ಅಭ್ಯರ್ಥಿ ಗೆಲುವು

• **ರಾಂಚಿ:** ಎನ್‌ಡಿಎ ಬೆಂಬಲಿತ ಜಾರ್ಖಂಡ್‌ನ ಸ್ವತಂತ್ರ ಅಭ್ಯರ್ಥಿ ಪರಿಮಲ್ ನಥವಾನಿ ಹಾಗೂ ಮಿಜೋರಾಂನ ಜೆಪಿಎಂ ಅಭ್ಯರ್ಥಿ ಕೆ.ಲಾಲ್ಹ್ ಲುವಾಂಗ್ ಕಿಮಾ ಗುರುವಾರ ರಾಜ್ಯಸಭೆಗೆ ಆಯ್ಕೆಯಾಗಿದ್ದಾರೆ. ಜಾರ್ಖಂಡ್‌ನಲ್ಲಿ ಕಾಂಗ್ರೆಸ್ ಮಿತ್ರಪಕ್ಷಗಳ ಅಡ್ಡಮತದಾನ ಎನ್‌ಡಿಎ ಬೆಂಬಲಿತ ಸ್ವತಂತ್ರ ಅಭ್ಯರ್ಥಿ ಪರಿಮಲ್ ನಥವಾನಿ ಗೆಲುವಿಗೆ ಸಹಕಾರಿಯಾಗಿದೆ.

• ಪುಟ ೨

ಪ್ಯಾರಿಸ್‌ನಲ್ಲಿ ಪ್ರಧಾನಿ ಮೋದಿಗೆ ಭವ್ಯ ಸ್ವಾಗತ

• ಪುಟ ೨

ಒಪ್ಪಂದ ತ್ವರಿತಗೊಳಿಸಲು ಮೋದಿ, ಟ್ರಂಪ್ ಕರೆ

• ಪುಟ ೨

ಪಿಎಂ ಕಿಸಾನ್ ಕಂತು ವರ್ಗಾವಣೆ ನಾಳೆ

• ಪುಟ ೨

ವದಂತಿಗೆ ಕಿವಿಗೊಡದಿರಿ: ನೀಟ್ ಅಭ್ಯರ್ಥಿಗಳಿಗೆ ಸಲಹೆ

• ಪುಟ ೨

ಮೇಕೆದಾಟು, ತ.ನಾಡು ಜತೆ ಚರ್ಚೆಗೆ ಸಿದ್ಧ: ಸಿಎಂ

• ಪುಟ ೩

ತೇಜೋವಧೆ ಸಲ್ಲದು: ಮಟ್ಟಣ್ಣನವರ್‌ಗೆ ಹೈ ತಾಕೀತು

• ಪುಟ ೩



ಭಾರತದ ಚೊಚ್ಚಲ 8 ಪಥದ ರಸ್ತೆ ಸುರಂಗ

• ಪುಟ ೨

ಸುದ್ದಿ ಸಮಗ್ರ

ಪರಿಷತ್ ಫಲಿತಾಂಶ: ಕೈ 5ನೇ ಸ್ಥಾನ ಗೆಲುವಿಗೆ ಅಡ್ಡಮತ ನೆರವು

ಕಾಂಗ್ರೆಸ್ 5, ಬಿಜೆಪಿ 2




ಮುಖ್ಯಮಂತ್ರಿ, ಡಿಕೆಶಿ ಜತೆ ಪರಿಷತ್ ಚುನಾವಣೆ ಗೆದ್ದ ಕೈ ಅಭ್ಯರ್ಥಿಗಳು.



ಬಿಜೆಪಿ ಅಭ್ಯರ್ಥಿಗಳಿಗೆ ಪಕ್ಷದ ಮುಖಂಡರ ಅಭಿನಂದನೆ.

• **ಬೆಂಗಳೂರು:** ವಿಧಾನಸಭೆಯಿಂದ ವಿಧಾನ ಪರಿಷತ್‌ನ 7 ಸ್ಥಾನಗಳಿಗೆ ನಡೆದ ದ್ವೈವಾರ್ಷಿಕ ಚುನಾವಣೆಯಲ್ಲಿ ನಿರೀಕ್ಷೆಯಂತೆ ಕಾಂಗ್ರೆಸ್ 5 ಸ್ಥಾನಗಳಲ್ಲಿ ಜಯಗಳಿಸಿದ್ದು, ಬಿಜೆಪಿ ಎರಡು ಸ್ಥಾನಗಳಲ್ಲಿ ಜಯಭೇರಿ ಭಾರಿಸಿದೆ. ಜೆಡಿಎಸ್ ಅಭ್ಯರ್ಥಿ ಗೋವಿಂದರಾಜು ಸೋಲು ಅನುಭವಿಸಿದ್ದಾರೆ. ಕಾಂಗ್ರೆಸ್‌ನ 5ನೇ ಅಭ್ಯರ್ಥಿ ಗೆಲುವಿಗೆ ಅಡ್ಡಮತದಾನ ನೆರವಾಗಿದೆ.



ಸಂಖ್ಯಾಬಲ ಪ್ರಕಾರ ಕಾಂಗ್ರೆಸ್ ನಾಲ್ಕು, ಬಿಜೆಪಿ ಎರಡು ಸ್ಥಾನಗಳನ್ನು ಸುಲಭವಾಗಿ ಗೆಲ್ಲಬಹುದಿತ್ತು, ಕಾಂಗ್ರೆಸ್ ಐದನೆ ಅಭ್ಯರ್ಥಿಯನ್ನು ಹಾಗೂ ಎನ್‌ಡಿಎಯಿಂದ ಜೆಡಿಎಸ್ ಅಭ್ಯರ್ಥಿಯನ್ನು ಕಣಕ್ಕಿಳಿಸಿರುವುದರಿಂದ ಚುನಾವಣೆ ನಡೆದಿತ್ತು. ಅಚ್ಚರಿ ಎಂಬಂತೆ ಕಾಂಗ್ರೆಸ್‌ನಿಂದ ಐದನೇ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ವಿನಯ್ ಕಾರ್ತಿಕ್ ನಿರೀಕ್ಷೆಗಿಂತ ಹೆಚ್ಚು ಬರೋಬ್ಬರಿ 32 ಮತಗಳನ್ನು ಪಡೆದಿದ್ದಾರೆ. ಜೆಡಿಎಸ್ ಅಭ್ಯರ್ಥಿ ಕೇವಲ 14 ಮತಗಳನ್ನು ಪಡೆಯುವ ಮೂಲಕ ಸೋಲು ಅನುಭವಿಸಿದ್ದಾರೆ.

ಯಾರ್‍ಯಾರಿಗೆ ಗೆಲುವು: ಕಾಂಗ್ರೆಸ್‌ನಿಂದ ಬಿ.ಕೆ. ಹರಿಪ್ರಸಾದ್, ತಿಪ್ಪಣ್ಣಪ್ಪ ಕಮಕನೂರ, ಪಿ.ವಿ. ಮೋಹನ್, ವಿನಯ್ ಕಾರ್ತಿಕ್, ಶಿವಣ್ಣ ಮಳವಳ್ಳಿ ಸೇರಿ 5 ಜನ ಗೆಲುವು ಸಾಧಿಸಿ ಪರಿಷತ್ ಪ್ರವೇಶಿಸಿದ್ದಾರೆ. ಬಿಜೆಪಿಯಿಂದ ರಘು ಕೌಟಿಲ್ಯ ಮತ್ತು ಲಿಂಗರಾಜ್ ಪಾಟೀಲ್ ವಿಜಯಶಾಲಿಗಳಾಗಿ ಪರಿಷತ್‌ಗೆ ಆಯ್ಕೆಯಾಗಿದ್ದಾರೆ. ಜೆಡಿಎಸ್‌ನಿಂದ ಗೋವಿಂದರಾಜು ಸೋಲುಂಡಿದ್ದಾರೆ.

ಬಿಜೆಪಿ-ಜೆಡಿಎಸ್ ಶಾಸಕರಿಂದ ಅಡ್ಡ ಮತದಾನ: ಜೆಡಿಎಸ್ ಹಾಗೂ ಬಿಜೆಪಿ ಶಾಸಕರು ಅಡ್ಡ ಮತದಾನ ಮಾಡಿದ್ದು, ಕಾಂಗ್ರೆಸ್‌ನ ಐದನೇ ಅಭ್ಯರ್ಥಿ ಗೆಲುವಿಗೆ ಕಾರಣವಾಗಿದೆ. ➡ಪುಟ ೪

ಪಡೆದ ಪ್ರಥಮ ಪ್ರಾಶಸ್ತ್ಯದ ಮತಗಳು

- ವಿನಯ್ ಕಾರ್ತಿಕ್ - 32
- ಬಿ.ಕೆ. ಹರಿಪ್ರಸಾದ್ - 30
- ತಿಪ್ಪಣ್ಣಪ್ಪ ಕಮಕನೂರ - 30
- ಶಿವಣ್ಣ ಮಳವಳ್ಳಿ - 30
- ಪಿ.ವಿ. ಮೋಹನ್ - 29
- ರಘು ಕೌಟಿಲ್ಯ - 29
- ಲಿಂಗರಾಜ್ ಪಾಟೀಲ್ - 27
- ಗೋವಿಂದ ರಾಜು - 14

- ಕಾಂಗ್ರೆಸ್ 136 ಮತಗಳು
- ಬಿಜೆಪಿ 62 ಮತಗಳು
- ಜೆಡಿಎಸ್ 18 ಮತಗಳು
- ಪಕ್ಷೇತರ 2 ಮತಗಳು
- ಸರ್ವೋದಯ ಪಕ್ಷ 1 ಮತ
- ಬಿಜೆಪಿ ಉಚ್ಚಾಟಿತ 3 ಮತಗಳು
- ಒಬ್ಬ ಅಭ್ಯರ್ಥಿ ಗೆಲುವಿಗೆ ಬೇಕಾದ್ದು 28 ಮತಗಳು

"ಹೊಸ ಸರ್ಕಾರ ಬಂದ ಬಳಿಕ ನಡೆದ ಚುನಾವಣೆಯಲ್ಲಿ ಶಾಸಕರ ಬೆಂಬಲ ನೋಡಿ ಆಶ್ಚರ್ಯವಾಗುತ್ತಿದೆ. ನಮ್ಮ ಸರ್ಕಾರಕ್ಕೆ ನೀವು ಮುಂದುವರಿಯಿರಿ ಎಂದು ರಾಜ್ಯದ ಜನರ ಅಭಿಪ್ರಾಯದ ಬೆಂಬಲ ಇದಾಗಿದೆ. ನಮಗೆ ಬೇರೆ ಪಕ್ಷದವರೂ ಮತ ನೀಡಿದ್ದಾರೆ.
■ **ಡಿ.ಕೆ. ಶಿವಕುಮಾರ್,** ಮುಖ್ಯಮಂತ್ರಿ

"ಅಡ್ಡ ಮತದಾನವಾಗಿದ್ದರ ಬಗ್ಗೆ ಪಕ್ಷ ಪರಿಶೀಲನೆ ಮಾಡಲಿದೆ. ಲಿಂಗರಾಜ ಪಾಟೀಲ್ ಅವರ ಮೂರು ಮತಗಳು ಅಡ್ಡ ಮತದಾನವಾಗಿದೆ. ರಘು ಅವರ 30 ಮತಗಳಲ್ಲಿ ಒಂದು ಮತ ಅಸಿಂಧುವಾಗಿದೆ. ಇದನ್ನು ಯಾರು ಮಾಡಿದ್ದಾರೆ, ಯಾಕೆ ಮಾಡಿದ್ದಾರೆ ಎಂಬುದನ್ನು ಮುಂದೆ ಪರಿಶೀಲನೆ ನಡೆಸಲಾಗುವುದು.
■ **ಬಿ.ವೈ. ವಿಜಯೇಂದ್ರ,** ಬಿಜೆಪಿ ರಾಜ್ಯಾಧ್ಯಕ್ಷ

6 ಸಂಸದರ ಬಂಡಾಯ | ಶಿಂಧೆ ಬಣದತ್ತ ಹೆಜ್ಜೆ

ಉದ್ಧವ್ ಶಿವಸೇನೆಗೆ ಮತ್ತೊಂದು ಆಘಾತ




• **ಮುಂಬೈ:** ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನೆಗೆ ಮತ್ತೊಮ್ಮೆ ದೊಡ್ಡ ರಾಜಕೀಯ ಹಿನ್ನಡೆ ಎದುರಾಗಿದೆ. ಪಕ್ಷದ ಆರು ಬಂಡಾಯ ಸಂಸದರು ಬುಧವಾರ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರನ್ನು ಭೇಟಿ ಮಾಡಿ ತಮ್ಮ ನಿಲುವು ಸ್ಪಷ್ಟಪಡಿಸಿದ್ದಾರೆ. ಪಕ್ಷವು ತನ್ನ ಮೂಲ ಸಿದ್ಧಾಂತದಿಂದ ದೂರ ಸರಿದಿದ್ದು, ಭವಿಷ್ಯದಲ್ಲಿ ಕಾಂಗ್ರೆಸ್‌ನೊಂದಿಗೆ ವಿಲೀನಗೊಳ್ಳುವ ಯೋಜನೆ ರೂಪಿಸಲಾಗುತ್ತಿದೆ ಎಂಬ ಗಂಭೀರ ಆರೋಪವನ್ನು ಅವರು ಮಾಡಿದ್ದಾರೆ.

ಮೂಲಗಳ ಪ್ರಕಾರ, ಇದೇ ಕಾರಣದಿಂದ ಅವರು ಉದ್ಧವ್ ಠಾಕ್ರೆ ಬಣವನ್ನು ತೊರೆದು ಮುಖ್ಯಮಂತ್ರಿ ಏಕನಾಥ್ ಶಿಂಧೆ ನೇತೃತ್ವದ ಶಿವಸೇನೆ ಬಣದೊಂದಿಗೆ ಕೈಜೋಡಿಸಲು ನಿರ್ಧರಿಸಿದ್ದಾರೆ. ಜತೆಗೆ, ಲೋಕಸಭೆಯಲ್ಲಿ ಶಿಂಧೆ ಬಣದ ಸಂಸದರ ಆಸನಗಳ ಸಮೀಪದಲ್ಲೇ ತಮ್ಮ ಆಸನಗಳನ್ನು ಮರುಹಂಚಿಕೆ ಮಾಡಬೇಕೆಂದು ಸ್ಪೀಕರ್‌ಗೆ ಮನವಿ ಮಾಡಿದ್ದಾರೆ.

ದಿಲ್ಲಿಯಲ್ಲಿ ರಹಸ್ಯ ಸಭೆ: ಕಳೆದ ಎರಡು ದಿನಗಳಿಂದ ಸಂಪರ್ಕಕ್ಕೆ ಸಿಗದಿದ್ದ ಆರು ಸಂಸದರು ಇದೀಗ ಬಹಿರಂಗವಾಗಿ ತಮ್ಮ ನಿಲುವು ಪ್ರಕಟಿಸಿದ್ದಾರೆ. ನಂದೇಡ್‌ನ ನಾಗೇಶ್ ಅಷ್ಟೀಕರ್, ಭೌಸಾಹೇಬ್ ವಾಘಚೌರೆ, ಸಂಜಯ್ ದಿನಾ ಪಾಟೀಲ್, ಓಂರಾಜೆ ನಿಂಬಾಳ್ಕರ್, ಸಂಜಯ್ ದೇಶಮುಖ್ ಹಾಗೂ ಸಂಜಯ್ ಜಾಧವ್ ಈ ಬಂಡಾಯ ಗುಂಪಿನ ಸದಸ್ಯರಾಗಿದ್ದಾರೆ. ಇವರು ವಿವಿಧ ನಗರಗಳಿಂದ ಖಾಸಗಿ ವಿಮಾನಗಳಲ್ಲಿ ದಿಲ್ಲಿಗೆ ಆಗಮಿಸಿ, ನೋಯ್ಡಾದ ಹೋಟೆಲ್‌ನಲ್ಲಿ ತಂಗಿದ್ದರು. ಬಳಿಕ ಏಕನಾಥ್ ಶಿಂಧೆ ಹಾಗೂ ಅವರ ಪುತ್ರ ಶ್ರೀಕಾಂತ್ ಶಿಂಧೆ ಅವರೊಂದಿಗೆ ಸಭೆ ನಡೆಸಿ ಸ್ಪೀಕರ್‌ರನ್ನು ಭೇಟಿಯಾಗಿದ್ದಾರೆ. ➡ಪುಟ ೪

ನಾಯಕತ್ವದ ವಿರುದ್ಧ ಅಸಮಾಧಾನ

ಬಂಡಾಯ ಸಂಸದರು ಉದ್ಧವ್ ಠಾಕ್ರೆ ಅವರ ನಾಯಕತ್ವದ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ತಮ್ಮ ಕ್ಷೇತ್ರಗಳಿಗೆ ಭೇಟಿ ನೀಡಲು ನಾಯಕತ್ವ ಆಸಕ್ತಿ ತೋರಲಿಲ್ಲ, ಚುನಾವಣೆ ಸಂದರ್ಭ ಅಗತ್ಯ ಬೆಂಬಲ ದೊರೆಯಲಿಲ್ಲ. ಉದ್ಧವ್ ಪುತ್ರ ಆದಿತ್ಯ ಠಾಕ್ರೆ ಅವರನ್ನೂ ಸಂಪರ್ಕಿಸುವುದು ಕಷ್ಟವಾಗಿತ್ತು ಎಂದು ಅವರು ಆರೋಪಿಸಿದ್ದಾರೆ.



ಬಂಡಾಯ ಸಂಸದರಿಗೆ ವೈ-ಪ್ಲಸ್ ಭದ್ರತೆ

ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನೆ (ಯುಬಿಟಿ) ಪಕ್ಷದ ವಿರುದ್ಧ ಬಂಡಾಯ ಎದ್ದಿರುವ ಆರು ಲೋಕಸಭಾ ಸದಸ್ಯರಿಗೆ ಮಹಾರಾಷ್ಟ್ರ ಪೊಲೀಸರು ವೈ-ಪ್ಲಸ್ ಭದ್ರತೆ ಒದಗಿಸಿದ್ದಾರೆ. ಗುಪ್ತಚರ ವಿಭಾಗದ ಆಯುಕ್ತ ಶಿರೀಷ್ ಜೈನ್ ಸಹಿ ಮಾಡಿರುವ ಪತ್ರದ ಪ್ರಕಾರ, ಸಂಜಯ್ ದಿನಾ ಪಾಟೀಲ್, ಸಂಜಯ್ ದೇಶಮುಖ್, ಸಂಜಯ್ ಜಾಧವ್, ಭೌಸಾಹೇಬ್ ವಾಕ್ ಚೌರೆ, ನಾಗೇಶ್ ಪಾಟೀಲ್ -ಅಷ್ಟೀಕರ್ ಹಾಗೂ ಓಂಪ್ರಕಾಶ್ ರಾಜೆ ನಿಂಬಾಳ್ಕರ್ ಅವರಿಗೆ ತಕ್ಷಣದಿಂದಲೇ ಈ ಭದ್ರತೆ ನೀಡಲಾಗಿದೆ. ವೈ-ಪ್ಲಸ್ ಭದ್ರತೆಯಲ್ಲಿ 11 ಭದ್ರತಾ ಸಿಬ್ಬಂದಿ ಇರುತ್ತಾರೆ.

ಅಮೆರಿಕದ ಎಐ ನಿರ್ಬಂಧಗಳ ನಡುವೆ ಪ್ರಧಾನಿ ಮೋದಿ ಕರೆ

ತಂತ್ರಜ್ಞಾನ ಎಲ್ಲರಿಗೂ ತಲುಪಲಿ



ಭಾರತಕ್ಕೆ ಎಐ ಎಂದರೆ 'ಆಲ್ ಇನ್‌ಕ್ಲೂಸಿವ್'

• **ಪ್ಯಾರಿಸ್:** ತಂತ್ರಜ್ಞಾನವು ಕೆಲವರ ಕೈಯಲ್ಲಿ ಸೀಮಿತವಾಗದೆ ಎಲ್ಲರಿಗೂ ಲಭ್ಯವಾಗಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದರು. ಯುರೋಪಿನ ಅತಿದೊಡ್ಡ ತಂತ್ರಜ್ಞಾನ ಮತ್ತು ನಾವೀನ್ಯತಾ ಸಮಾವೇಶವಾದ ವಿವಾಟೆಕ್ 2026ನಲ್ಲಿ ಮಾತನಾಡಿದ ಅವರು, ಭಾರತಕ್ಕೆ ಎಐ(ಕೃತಕ ಬುದ್ಧಿಮತ್ತೆ) ಎಂದರೆ 'ಆಲ್ ಇನ್‌ಕ್ಲೂಸಿವ್' (ಎಲ್ಲರನ್ನೂ ಒಳಗೊಂಡ) ಎಂಬುದಾಗಿದೆ ಎಂದರು. ಅಮೆರಿಕ ಸರ್ಕಾರವು ಕೆಲವು ಸುಧಾರಿತ ಎಐ ಮಾದರಿಗಳ ಬಳಕೆಗೆ ನಿರ್ಬಂಧ ಹೇರಿದ ಹಿನ್ನೆಲೆ ಜಾಗತಿಕ ಮಟ್ಟದಲ್ಲಿ ತಂತ್ರಜ್ಞಾನ ಲಭ್ಯತೆ ಕುರಿತು ಚರ್ಚೆಗಳು ನಡೆಯುತ್ತಿರುವ ಸಮಯದಲ್ಲೇ ಮೋದಿ ಈ ಅಭಿಪ್ರಾಯ ವ್ಯಕ್ತಪಡಿಸಿದರು. ತಂತ್ರಜ್ಞಾನದಲ್ಲಿ ನಾವೀನ್ಯತೆಯ ಜತೆಗೆ ಅದರ ಪ್ರವೇಶವೂ ಅತ್ಯಂತ ಮುಖ್ಯ. ತಂತ್ರಜ್ಞಾನವು ಪ್ರಗತಿಗೆ ಕಾರಣವಾಗಬೇಕಾದರೆ ಅದು ಜನಸಾಮಾನ್ಯರಿಗೂ ತಲುಪಬೇಕು. ➡ಪುಟ ೪


ಸ್ಟಾರ್ಟ್‌ಅಪ್ ಶಕ್ತಿಕೇಂದ್ರ

ಭಾರತದಲ್ಲಿ 2 ಲಕ್ಷಕ್ಕೂ ಅಧಿಕ ಸ್ಟಾರ್ಟ್‌ಅಪ್‌ಗಳಿದ್ದು, ವಿಶ್ವದ ಅತ್ಯಂತ ಚುರುಕು ನಾವೀನ್ಯತಾ ಪರಿಸರ ವ್ಯವಸ್ಥೆಗಳಲ್ಲಿ ಒಂದಾಗಿದೆ. ವಿವಾಟೆಕ್‌ನಲ್ಲಿ ಸ್ಥಾಪಿಸಲಾದ ಭಾರತದ ಪೆವಿಲಿಯನ್‌ಗೆ ಭೇಟಿ ನೀಡುವಂತೆ ಆಹ್ವಾನಿಸಿದ ಅವರು, 3ಡಿ ಮುದ್ರಿತ ರಾಕೆಟ್ ಎಂಜಿನ್‌ಗಳು, ಜಿನೋಮಿಕ್ ಚಿಕಿತ್ಸೆಗಳು, ಕ್ಯಾನ್ಸರ್ ಪತ್ತೆಹಚ್ಚುವ ಎಐ ಪರಿಹಾರಗಳು, ಸೈಬರ್ ಭದ್ರತಾ ತಂತ್ರಜ್ಞಾನ, ಸ್ವಯಂಚಾಲಿತ ರೋಬೋಟ್‌ಗಳು, ಸ್ಮಾರ್ಟ್ ಸಿಟಿ ಮತ್ತು ಮೊಬಿಲಿಟಿ ಪರಿಹಾರಗಳನ್ನು ಮೋದಿ ಉಲ್ಲೇಖಿಸಿದರು.

ಆರೆಸ್ಸೆಸ್ ಕಚೇರಿ ಮೇಲೆ ಪೆಟ್ರೋಲ್ ಬಾಂಬ್ ದಾಳಿ ಪ್ರಕರಣ

ಬಂಧಿತರಿಗೆ ಪಾಕ್ ಉಗ್ರ ಸಂಪರ್ಕ

• **ರಾಂಚಿ:** ಜಾರ್ಖಂಡ್‌ನ ರಾಂಚಿಯಲ್ಲಿರುವ ಆರ್‌ಎಸ್‌ಎಸ್ ಕಚೇರಿ ಮೇಲೆ ಪೆಟ್ರೋಲ್ ಬಾಂಬ್ ಎಸೆದ ಪ್ರಕರಣಕ್ಕೆ ಸಂಬಂಧಿಸಿದಂತೆ ಪಾಕಿಸ್ತಾನ ಮೂಲದ ಉಗ್ರ ಸಂಘಟನೆಗಳ ಸಂಪರ್ಕ ಶಂಕೆ ಹಿನ್ನೆಲೆ ಮೂವರನ್ನು ಪೊಲೀಸರು ಬಂಧಿಸಿದ್ದಾರೆ.



ಬಂಧಿತರಲ್ಲಿ ಒಬ್ಬನಾದ ಸೈಫ್ ಅನ್ಸಾರಿ ಅಲಿಯಾಸ್ ರೋಹಿತ್ ವಿಚಾರಣೆ ವೇಳೆ ಪೊಲೀಸ್ ವಶದಿಂದ ತಪ್ಪಿಸಿಕೊಂಡು ನಂತರ ನಡೆದ ಗುಂಡಿನ ಚಕಮಕಿಯಲ್ಲಿ ಗಾಯಗೊಂಡು ಮತ್ತೆ ಸೆರೆ ಸಿಕ್ಕಿದ್ದಾನೆ. ರಾಂಚಿಯ ನಿವಾರಣಪುರ ಪ್ರದೇಶದಲ್ಲಿರುವ ಆರ್‌ಎಸ್‌ಎಸ್ ಕಚೇರಿ ಮೇಲೆ ಬುಧವಾರ ಮುಂಜಾನೆ ಪೆಟ್ರೋಲ್ ಬಾಂಬ್ ದಾಳಿ ನಡೆದಿತ್ತು. ಈ ಘಟನೆ ಹಿನ್ನೆಲೆಯಲ್ಲಿ ಪೊಲೀಸರು ವಿಶೇಷ ತನಿಖಾ ತಂಡ(ಎಸ್‌ಐಟಿ) ರಚಿಸಿ ತನಿಖೆ ಆರಂಭಿಸಿದ್ದರು. ಇಬ್ಬರು ಆರೋಪಿಗಳನ್ನು ಬುಧವಾರ ರಾತ್ರಿ ಲೋಹಾರ್ಡಾಗಾ ಜಿಲ್ಲೆಯಲ್ಲಿ ಬಂಧಿಸಲಾಗಿದ್ದು, ದಾಳಿಗೆ ಬಳಸಿದ್ದ ಕಾರನ್ನೂ ವಶಪಡಿಸಿಕೊಳ್ಳಲಾಗಿದೆ. ➡ಪುಟ ೪

- ಒಬ್ಬ ಆರೋಪಿ ಪರಾರಿಯಾಗಿ ಮತ್ತೆ ಬಂಧನ
- ಗುಂಡಿನ ಚಕಮಕಿಯಲ್ಲಿ ಆರೋಪಿಗೆ ಗಾಯ




ಐಎಸ್‌ಐ ಸಂಪರ್ಕ ಶಂಕೆ

ಆರೋಪಿಗಳಿಗೆ ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐ ಅಥವಾ ಇತರ ಉಗ್ರ ಸಂಘಟನೆಗಳ ಸಂಪರ್ಕವಿದೆಯೇ ಎಂಬ ಬಗ್ಗೆ ತನಿಖೆ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಧ್ಯಪ್ರಾಚ್ಯ ಯುದ್ಧಕ್ಕೆ ವಿರಾಮ

- ಮಧ್ಯಂತರ ಒಪ್ಪಂದಕ್ಕೆ ಅಮೆರಿಕ-ಇರಾನ್ ಸಹಿ
- ಪರಮಾಣು ಮಾತುಕತೆಗೆ 60 ದಿನಗಳ ಕಾಲಾವಕಾಶ
- ಹಾರ್ಮುಜ್‌ನಲ್ಲಿ ಹಡಗುಗಳಿಗೆ ಮುಕ್ತ ಸಂಚಾರ
- 60 ದಿನಗಳಿಗೆ ಇರಾನ್ ಶುಲ್ಕ ವಿಧಿಸುವಂತಿಲ್ಲ



• **ಎವಿಯನ್-ಲೆ-ಬೈನ್ಸ್(ಫ್ರಾನ್ಸ್):** ಇರಾನ್‌ನೊಂದಿಗಿನ ಮಧ್ಯಂತರ ಒಪ್ಪಂದಕ್ಕೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಹಿ ಹಾಕಿದ್ದಾರೆ. ಮಧ್ಯಂತರ ಒಪ್ಪಂದಕ್ಕೆ ಟ್ರಂಪ್ ಸಹಿ ಮಾಡುವುದರೊಂದಿಗೆ 111 ದಿನಗಳ ಮಧ್ಯಪ್ರಾಚ್ಯ ಯುದ್ಧವು ತಾತ್ಕಾಲಿಕ ಅಂತ್ಯವನ್ನು ಕಂಡಿದ್ದು, ಒಪ್ಪಂದದಂತೆ ಹಾರ್ಮುಜ್ ಜಲಸಂಧಿ ತಕ್ಷಣವೇ ತೆರೆಯಲಾಗುವುದು. ➡ಪುಟ ೪

ಹಿಂದೂ ಯುವತಿ ಕರೆದೊಯ್ದ ಮುಸ್ಲಿಂ ಯುವಕನ ಬಂಧನ

• **ಭಟ್ಕಳ:** ಸೂಪರ್ ಮಾರ್ಕೆಟೊಂದರಲ್ಲಿ ಕೆಲಸಕ್ಕಿದ್ದ ಹಿಂದೂ ಯುವತಿಯೊಬ್ಬಳನ್ನು ಕಾರಿನಲ್ಲಿ ಕರೆದೊಯ್ದ ಮುಸ್ಲಿಂ ಯುವಕ ಶಾಹೀದ್ ಖಾನ್ ಎಂಬಾತನನ್ನು ಯುವತಿ ನೀಡಿದ ದೂರಿನ ಮೇರೆಗೆ ಪೊಲೀಸರು ಬಂಧಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದು, ನ್ಯಾಯಾಲಯ ನ್ಯಾಯಾಂಗ ಬಂಧನ ವಿಧಿಸಿದೆ. • ವಿವರ ಪುಟ ೫

ಪ್ರಗತಿಗಾಗಿ ಭಾರತ–ಫ್ರಾನ್ಸ್ ಪಾಲುದಾರಿಕೆ ಅಗತ್ಯ

ಪ್ಯಾರಿಸ್‌ನಲ್ಲಿ ಪ್ರಧಾನಿ ಮೋದಿಗೆ ಭವ್ಯ ಸ್ವಾಗತ

ಪ್ಯಾರಿಸ್: ಪ್ಯಾರಿಸ್‌ಗೆ ಭೇಟಿ ನೀಡಿದ ಪ್ರಧಾನಿ ನರೇಂದ್ರ ಮೋದಿಯವರನ್ನು ಅನಿವಾಸಿ ಭಾರತೀಯರು ಆತ್ಮೀಯವಾಗಿ ಸ್ವಾಗತಿಸಿದ್ದಾರೆ. ಈ ವೇಳೆ, ಜಾಗತಿಕ ಪ್ರಗತಿಗೆ ಭಾರತ–ಫ್ರಾನ್ಸ್ ಪಾಲುದಾರಿಕೆ ಅತ್ಯಗತ್ಯ ಎಂದು ಮೋದಿ ಹೇಳಿದ್ದಾರೆ. ತಮ್ಮ ಪ್ಯಾರಿಸ್ ಭೇಟಿ ಬಗ್ಗೆ ಎಕ್ಸ್‌ನಲ್ಲಿ ಹಂಚಿಕೊಂಡ ಮೋದಿ, ನಾನು ಪ್ಯಾರಿಸ್‌ಗೆ ಆಗಮಿಸಿದ್ದೇನೆ. ಇಲ್ಲಿನ ಭಾರತೀಯ ಸಮುದಾಯದವರು ನನ್ನನ್ನು ಆತ್ಮೀಯವಾಗಿ ಸ್ವಾಗತಿಸಿದ್ದಾರೆ. ಭಾರತ ಮತ್ತು ಫ್ರಾನ್ಸ್ ನಡುವಿನ ಬಾಂಧವ್ಯವನ್ನು ಮತ್ತಷ್ಟು ಬಲಪಡಿಸಲು ಫ್ಯಾರಿಸ್‌ನ ಅನಿವಾಸಿ ಭಾರತೀಯರು ಮಾಡುತ್ತಿರುವ ಬಗ್ಗೆ ನನಗೆ ಹೆಮ್ಮೆಯಿದೆ ಎಂದು ಹೇಳಿದ್ದಾರೆ.

ಪಾಲುದಾರಿಕೆ ಮತ್ತು ವಲಸಿಗರು: ಭಾರತ ಮತ್ತು ಫ್ರಾನ್ಸ್ ಕಾರ್ಯತಂತ್ರದ ಪಾಲುದಾರಿಕೆ, ರಕ್ಷಣೆ, ಭದ್ರತೆ, ಬಾಹ್ಯಾಕಾಶ, ನಾಗರಿಕ ಪರಮಾಣು ಇಂಧನ, ಹವಾಮಾನ ವೈಪರೀತ್ಯ ತಡೆ, ಉದಯೋನ್ಮುಖ ತಂತ್ರಜ್ಞಾನಗಳು, ಇಂಡೋ–ಪೆಸಿಫಿಕ್, ಆವಿಷ್ಕಾರ ಮತ್ತು ಜಾಗತಿಕ ಆಡಳಿತವನ್ನು ಒಳಗೊಂಡಿದೆ. ಫ್ರಾನ್ಸ್ ನ ಮುಖ್ಯ ಭೂಭಾಗದಲ್ಲಿರುವ ಭಾರತೀಯ ವಲಸಿಗರ ಸಂಖ್ಯೆ ಸುಮಾರು 1,19,000 ಎಂದು ಅಂದಾಜಿಸಲಾಗಿದ್ದು, 3,50,000 ಕ್ಕೂ ಹೆಚ್ಚು ಭಾರತೀಯ ಮೂಲದ ಜನರು ಫ್ರೆಂಚ್ ಸಾಗರೋತ್ತರ ಪ್ರಾಂತ್ಯಗಳಲ್ಲಿ ವಾಸಿಸುತ್ತಿದ್ದಾರೆ.

ಸಮುದ್ರ ಮಾರ್ಗ ಮತ್ತು ರೈಲ್ವೆ ವಲಯ: ಮೋದಿ, ಸಿಎಂಎ ಸಿಜಿಎಂ ಕಂಪನಿಯ ಅಧ್ಯಕ್ಷ ಮತ್ತು ಸಿಇಒ ರೊಡಾಲ್ಫ್ ಸಾದೆ ಅವರನ್ನು ಭೇಟಿ ಮಾಡಿ ಕಡಲ ಹಡಗು ಸಾಗಣೆ, ಲಾಜಿಸ್ಟಿಕ್ಸ್, ಕಂಟೈನರ್ ಹಡಗು ನಿರ್ಮಾಣ ಮತ್ತು ಜಾಗತಿಕ ಪೂರೈಕೆ ಸರಪಳಿಗಳ ಕುರಿತು ಚರ್ಚಿಸಿದರು. ಅಲ್‌ಸ್ಟಾಮ್ ಸಿಇಒ ಮಾರ್ಟಿನ್ ಸಿಯೋನ್, ಭಾರತದಲ್ಲಿ ರೈಲ್ವೆ ಆಧುನೀಕರಣ ಮತ್ತು ಮುಂದಿನ ಹೂಡಿಕೆ ಯೋಜನೆಗಳ ಕುರಿತು ಚರ್ಚಿಸಿದರು.



ಪ್ರಮುಖ ಸಿಇಒಗಳನ್ನು ಭೇಟಿಯಾದ ಮೋದಿ

ಪ್ಯಾರಿಸ್: ಪ್ರಧಾನಮಂತ್ರಿ ನರೇಂದ್ರ ಮೋದಿ, ಗುರುವಾರ, ಇಲ್ಲಿನ ಪ್ರಮುಖ ಉದ್ಯಮಿಗಳನ್ನು ಭೇಟಿ ಮಾಡಿ, ಭಾರತದಲ್ಲಿನ ಹೂಡಿಕೆ ಅವಕಾಶಗಳು ಮತ್ತು ವಿಸ್ತರಣಾ ಯೋಜನೆಗಳ ಕುರಿತು ಚರ್ಚೆ ನಡೆಸಿದರು. ಹಡಗು ಸಾಗಣೆ, ಲಾಜಿಸ್ಟಿಕ್ಸ್, ರೈಲ್ವೆ, ನಿರ್ಮಾಣ ಮತ್ತು ಕೃತಕ ಬುದ್ಧಿಮತ್ತೆ (ಎಐ) ಕ್ಷೇತ್ರಗಳಲ್ಲಿ ಸಹಕಾರವನ್ನು ಬಲಪಡಿಸುವ ಕುರಿತು ಈ ಮಾತುಕತೆಗಳು ನಡೆದವು ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ಸೇಂಟ್–ಗೋಬೈನ್ ಅಧ್ಯಕ್ಷ ಮತ್ತು ಸಿಇಒ ಬೆನೈಟ್ ಬಾಜಿನ್ ಅವರೊಂದಿಗೆ ಸುಸ್ಥಿರತೆ ಹಾಗೂ ನಿರ್ಮಾಣ ವಲಯದ ಅವಕಾಶಗಳ ಕುರಿತು ಮಾತನಾಡಿದರು. ಹಾಗೆಯೇ, ಮಿಸ್ಟ್ರಲ್ ಎಐ ಸಹ–ಸಂಸ್ಥಾಪಕ ಮತ್ತು ಸಿಇಒ ಆರ್ಥರ್ ಮೆನ್ಷ್ ಅವರನ್ನೂ ಭೇಟಿಯಾದರು. ಮೋದಿ, ಫ್ರೆಂಚ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರಾನ್ ಅವರೊಂದಿಗೆ ವಿವಾಟೆಕ್ 2026 ಕಾರ್ಯಕ್ರಮದಲ್ಲಿ ಭಾಗವಹಿಸಿದರು.



ಭಾರತದ ಚೊಚ್ಚಲ 8 ಪಥದ ರಸ್ತೆ ಸುರಂಗ

ದಿಲ್ಲಿಮುಂಬೈ ಎಕ್ಸ್‌ಪ್ರೆಸ್‌ವೇ ಯೋಜನೆಯ ಕೊನೆಯ ಕೊಂಡಿ ರಾಜಸ್ಥಾನದ ಮುಕುಂದ್ರಾ ಹಿಲ್ಸ್ ಹುಲಿ ಸಂರಕ್ಷಿತ ಪ್ರದೇಶದಡಿ ನಿರ್ಮಿಸಲಾದ 4.9 ಕಿಮೀ ಉದ್ದದ ಸುರಂಗ ಮಾರ್ಗ ಜೂ.20ರಂದು ಉದ್ಘಾಟನೆಯಾಗಲಿದ್ದು, ಇದರೊಂದಿಗೆ ಸಂಪೂರ್ಣ ಎಕ್ಸ್‌ಪ್ರೆಸ್‌ವೇ ಕಾರ್ಯಾಚರಣೆಗೆ ಸಜ್ಜಾಗಲಿದೆ. ಆ ಕುರಿತ ವಿವರ ಇಲ್ಲಿದೆ.

12 ಗಂಟೆಗಳಲ್ಲಿ ದಿಲ್ಲಿಯಿಂದ ಮುಂಬೈ

ಎಕ್ಸ್‌ಪ್ರೆಸ್‌ವೇ ಸಂಪೂರ್ಣವಾಗಿ ಕಾರ್ಯಾರಂಭಿಸಿದ ಬಳಿಕ ದಿಲ್ಲಿ ಮತ್ತು ಮುಂಬೈ ನಡುವಿನ ರಸ್ತೆ ಪ್ರಯಾಣದ ಅವಧಿ ಗಣನೀಯವಾಗಿ ಕಡಿಮೆಯಾಗಲಿದೆ. ಪ್ರಸ್ತುತ ಈ ಎರಡು ಮಹಾನಗರಗಳ ನಡುವಿನ ರಸ್ತೆ ಪ್ರಯಾಣಕ್ಕೆ 24 ಗಂಟೆಗಳಿಗಿಂತ ಹೆಚ್ಚು ಸಮಯ ಬೇಕಾಗುತ್ತದೆ. ಆದರೆ ಹೊಸ ಎಕ್ಸ್‌ಪ್ರೆಸ್‌ವೇ ಮೂಲಕ ಈ ಪ್ರಯಾಣದ ಅವಧಿ ಸುಮಾರು 12 ಗಂಟೆಗಳಿಗೆ ಇಳಿಯಲಿದೆ. 120 ಕಿಮೀ ಪ್ರತಿ ಗಂಟೆ ವೇಗದವರೆಗೆ ಸಂಚಾರಕ್ಕೆ ಅನುಕೂಲವಾಗುವಂತೆ ಈ ನಿಯಂತ್ರಿತ ಪ್ರವೇಶದ ಹೆದ್ದಾರಿಯನ್ನು ನಿರ್ಮಿಸಲಾಗಿದೆ. ಸ್ಥಳೀಯ ರಸ್ತೆಗಳು, ಮಿಶ್ರ ವಾಹನ ಸಂಚಾರ ಮತ್ತು ಇತರ ಅಡಚಣೆಗಳನ್ನು ಕಡಿಮೆ ಮಾಡುವ ಮೂಲಕ ವೇಗದ ಹಾಗೂ ನಿರಂತರ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿದೆ. ಇದರಿಂದ ದೂರದ ಪ್ರಯಾಣ ಮಾಡುವ ಪ್ರಯಾಣಿಕರು ಹಾಗೂ ಸರಕು ಸಾಗಣೆ ವಲಯಕ್ಕೆ ಮಹತ್ತರ ಲಾಭವಾಗುವ ನಿರೀಕ್ಷೆಯಿದೆ.



ಸುದ್ದಿ ಸಮಗ್ರ

ಭವಿಷ್ಯದ ಅಗತ್ಯಗಳಿಗೆ ಸಿದ್ಧತೆ

ಈ ಎಕ್ಸ್‌ಪ್ರೆಸ್‌ವೇಯನ್ನು ಭವಿಷ್ಯದ ವಾಹನ ಸಂಚಾರದ ಪ್ರಮಾಣವನ್ನು ಗಮನದಲ್ಲಿಟ್ಟುಕೊಂಡು ವಿನ್ಯಾಸಗೊಳಿಸಲಾಗಿದೆ. ಪ್ರಸ್ತುತ ಎಂಟು ಪಥಗಳಿರುವ ರಸ್ತೆ ಅಗತ್ಯವಿದ್ದಲ್ಲಿ 12 ಪಥಗಳಿಗೆ ವಿಸ್ತರಿಸಲು ಸಾಧ್ಯವಾಗುವಂತೆ ಮಧ್ಯಭಾಗವನ್ನು ವಿನ್ಯಾಸಗೊಳಿಸಲಾಗಿದೆ. ಇದರಿಂದ ಭವಿಷ್ಯದಲ್ಲಿ ಹೆಚ್ಚುವರಿ ವಾಹನ ಸಂಚಾರವನ್ನು ನಿರ್ವಹಿಸಲು ಅನುಕೂಲವಾಗಲಿದೆ.

ದಿಲ್ಲಿ-ಮುಂಬೈ ಎಕ್ಸ್‌ಪ್ರೆಸ್‌ವೇ: ಜೂ.20ರಿಂದ ಸಂಪೂರ್ಣ ಸಂಚಾರಕ್ಕೆ ಸಿದ್ಧ

ಪರಿಸರ ಸ್ನೇಹಿ ವಿನ್ಯಾಸ

ಎಕ್ಸ್‌ಪ್ರೆಸ್‌ವೇ ಯೋಜನೆಯಲ್ಲಿ ಪರಿಸರ ಸಂರಕ್ಷಣೆಗೆ ವಿಶೇಷ ಆದ್ಯತೆ ನೀಡಲಾಗಿದೆ. ಯೋಜನೆಯ ಭಾಗವಾಗಿ 20 ಲಕ್ಷ ಮರಗಳನ್ನು ನೆಡುವ ಗುರಿ ಹೊಂದಲಾಗಿದೆ. ವನ್ಯಜೀವಿಗಳ ಸುರಕ್ಷಿತ ಸಂಚಾರಕ್ಕಾಗಿ ಒಟ್ಟು 2.5 ಕಿಮೀ ಉದ್ದದ ವಿಶೇಷ ಕ್ರಾಸಿಂಗ್ ವ್ಯವಸ್ಥೆಗಳನ್ನೂ ರೂಪಿಸಲಾಗಿದೆ. ಪ್ರತಿ 500 ಮೀಟರ್‌ಗಳಿಗೆ ಮಳೆನೀರು ಸಂಗ್ರಹ ವ್ಯವಸ್ಥೆ ಹಾಗೂ ಮರಗಳ ನಿರ್ವಹಣೆಗೆ ಡ್ರಿಪ್ ನೀರಾವರಿ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಮುಕುಂದ್ರಾ ಹಿಲ್ಸ್ ಹುಲಿ ಸಂರಕ್ಷಿತ ಪ್ರದೇಶದಡಿ ಸುರಂಗ ನಿರ್ಮಾಣವೂ ಪರಿಸರ ಸಂರಕ್ಷಣೆಯನ್ನು ಗಮನದಲ್ಲಿಟ್ಟುಕೊಂಡು ಕೈಗೊಳ್ಳಲಾದ ಪ್ರಮುಖ ಕ್ರಮವಾಗಿದೆ.

ಸಂಕೀರ್ಣ ಎಂಜಿನಿಯರಿಂಗ್ ಸಾಧನೆ

ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಪ್ರಕಾರ, ಮುಕುಂದ್ರಾ ಹಿಲ್ಸ್ ಪ್ರದೇಶ, ತಾಂತ್ರಿಕವಾಗಿ ಎಕ್ಸ್‌ಪ್ರೆಸ್‌ವೇ ಯೋಜನೆಯಲ್ಲೇ ಅತ್ಯಂತ ಸಂಕೀರ್ಣ ಹಾಗೂ ಪರಿಸರದ ದೃಷ್ಟಿಯಿಂದ ಸವಾಲಿನ ಭಾಗವೆಂದು ಪರಿಗಣಿಸಲಾಗಿತ್ತು. ಹುಲಿ ಸಂರಕ್ಷಿತ ಪ್ರದೇಶದೊಳಗೆ ಸಾಮಾನ್ಯ ಮೇಲ್ಮೈ ರಸ್ತೆ ನಿರ್ಮಿಸಲು ಸಾಧ್ಯವಾಗದ ಕಾರಣ, ಎಂಜಿನಿಯರ್‌ಗಳು ಭೂಗರ್ಭ ಸುರಂಗದ ಮಾರ್ಗವನ್ನು ಆಯ್ಕೆ ಮಾಡಿದ್ದರು. ಈ ವಿನ್ಯಾಸದಿಂದ ಮೇಲ್ಭಾಗದಲ್ಲಿರುವ ವನ್ಯಜೀವಿಗಳಿಗೆ ಯಾವುದೇ ತೊಂದರೆಯಾಗುವುದಿಲ್ಲ. ಅಧಿಕಾರಿಗಳ ಹೇಳಿಕೆಯಂತೆ, ವಾಹನಗಳು ಹೆಚ್ಚಿನ ವೇಗದಲ್ಲಿ ಸಂಚರಿಸಿದರೂ ಮೇಲಿನ ಪರಿಸರ ವ್ಯವಸ್ಥೆಗೆ ಅಡ್ಡಿಯಾಗದಂತೆ ಈ ಸುರಂಗವನ್ನು ವಿನ್ಯಾಸಗೊಳಿಸಲಾಗಿದೆ.

ಆರ್ಥಿಕ ಚಟುವಟಿಕೆಗೆ ಉತ್ತೇಜನ

ಭಾರತದ ಅತ್ಯಂತ ಬ್ಯುಸಿ ಸರಕು ಸಾಗಣೆ ಮಾರ್ಗಗಳಲ್ಲಿ ಒಂದಾದ ಈ ಕಾರಿಡಾರ್‌ನಲ್ಲಿ ಲಾಜಿಸ್ಟಿಕ್ಸ್ ವೆಚ್ಚ ಕಡಿಮೆಯಾಗುವ ನಿರೀಕ್ಷೆಯಿದೆ. ರಾಜಸ್ಥಾನ, ಗುಜರಾತ್ ಮತ್ತು ಮಹಾರಾಷ್ಟ್ರ ಸೇರಿದಂತೆ ಹಲವು ರಾಜ್ಯಗಳ ಕೈಗಾರಿಕೆಗಳು, ವ್ಯಾಪಾರ ಹಾಗೂ ಪ್ರವಾಸೋದ್ಯಮ ಕ್ಷೇತ್ರಗಳಿಗೆ ಇದರ ಪ್ರಯೋಜನ ದೊರೆಯಲಿದೆ. ರಸ್ತೆಯ ಸಮೀಪದ ಕೋಟಾ, ರತ್ಲಾಮ್ ಮತ್ತು ಭರುಚ್ ನಗರಗಳಲ್ಲಿ ಆರ್ಥಿಕ ಚಟುವಟಿಕೆಗಳು ಹೆಚ್ಚಾಗುವ ಸಾಧ್ಯತೆಯಿದೆ. ಉತ್ತಮ ಸಂಪರ್ಕ ವ್ಯವಸ್ಥೆಯಿಂದ ಹೊಸ ಹೂಡಿಕೆಗಳಿಗೆ ಅವಕಾಶ ಸೃಷ್ಟಿಯಾಗಲಿದ್ದು, ಪ್ರಾದೇಶಿಕ ಅಭಿವೃದ್ಧಿಗೂ ವೇಗ ಸಿಗುವ ನಿರೀಕ್ಷೆ ವ್ಯಕ್ತವಾಗಿದೆ.

ವಿಮಾನ ನಿಲ್ದಾಣ ಮತ್ತು ಬಂದರುಗಳಿಗೆ ನೇರ ಸಂಪರ್ಕ

ಈ ಎಕ್ಸ್‌ಪ್ರೆಸ್‌ವೇ ಉತ್ತರ ಪ್ರದೇಶದ ಜೇವರ್ ವಿಮಾನ ನಿಲ್ದಾಣ ಹಾಗೂ ಮಹಾರಾಷ್ಟ್ರದ ನವಿ ಮುಂಬೈ ವಿಮಾನ ನಿಲ್ದಾಣಗಳಿಗೆ ನೇರ ಸಂಪರ್ಕ ಕಲ್ಪಿಸಲಿದೆ. ಇದೇ ವೇಳೆ ಇದು ಜವಾಹರಲಾಲ್ ನೆಹರೂ ಪೋರ್ಟ್ ಟ್ರಸ್ಟ್‌ನಲ್ಲಿ ಅಂತ್ಯಗೊಳ್ಳಲಿದೆ. ಇದರಿಂದ ರಸ್ತೆ, ವಾಯು ಮತ್ತು ಸಮುದ್ರ ಸಾರಿಗೆ ವ್ಯವಸ್ಥೆಗಳ ನಡುವೆ ನೇರ ಸಂಪರ್ಕ ಸಾಧ್ಯವಾಗಲಿದೆ. ಪ್ರಯಾಣಿಕರ ಸಂಚಾರ ಹಾಗೂ ಸರಕು ಸಾಗಣೆಯನ್ನು ಹೆಚ್ಚು ವೇಗವಾಗಿ ಮತ್ತು ಪರಿಣಾಮಕಾರಿಯಾಗಿ ನಡೆಸಲು ಈ ಸಂಪರ್ಕಗಳು ನೆರವಾಗಲಿವೆ. ವ್ಯಾಪಾರ ಮತ್ತು ಪ್ರವಾಸೋದ್ಯಮ ಕ್ಷೇತ್ರಗಳಿಗೂ ಇದು ಉತ್ತೇಜನ ನೀಡುವ ನಿರೀಕ್ಷೆಯಿದೆ.



ಹುಲಿ ಸಂರಕ್ಷಿತ ಪ್ರದೇಶದಡಿ ನಿರ್ಮಾಣ

ರಾಜಸ್ಥಾನದ ಮುಕುಂದ್ರಾ ಹಿಲ್ಸ್ ಟೈಗರ್ ರಿಸರ್ವ್ ಅಡಿಯಲ್ಲಿ ನಿರ್ಮಿಸಲಾದ 4.9 ಕಿಮೀ ಉದ್ದದ ಜೋಡಿ ಸುರಂಗ ಮಾರ್ಗ ದಿಲ್ಲಿಮುಂಬೈ ಎಕ್ಸ್‌ಪ್ರೆಸ್‌ವೇಯ ಕೊನೆಯ ಬಾಕಿ ಉಳಿದ ಭಾಗವಾಗಿತ್ತು. ಜೂ.20ರಂದು ಇದು ಸಾರ್ವಜನಿಕ ಸಂಚಾರಕ್ಕೆ ತೆರೆಯಲಿದ್ದು, ಇದರೊಂದಿಗೆ 1,386 ಕಿಮೀ ಉದ್ದದ ದಿಲ್ಲಿಮುಂಬೈ ಎಕ್ಸ್‌ಪ್ರೆಸ್‌ವೇ ಸಂಪೂರ್ಣವಾಗಿ ಕಾರ್ಯಾರಂಭ ಮಾಡಲಿದೆ. ಈ ಸುರಂಗ ಭಾರತದ ಮೊದಲ ಎಂಟು ಪಥಗಳ ರಸ್ತೆ ಸುರಂಗ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಹುಲಿ ಸಂರಕ್ಷಿತ ಪ್ರದೇಶದ ಮೇಲ್ಭಾಗದಲ್ಲಿರುವ ವನ್ಯಜೀವಿಗಳ ಸಂಚಾರಕ್ಕೆ ಯಾವುದೇ ಅಡ್ಡಿಯಾಗದಂತೆ ಇದನ್ನು ಭೂಗರ್ಭದಲ್ಲಿ ನಿರ್ಮಿಸಲಾಗಿದೆ. ಇದರಿಂದ ವಾಹನಗಳು ತಿರುವು–ಮುರುವುಗಳಿರುವ ಬೆಟ್ಟದ ರಸ್ತೆಯನ್ನು ತಪ್ಪಿಸಿ ವೇಗವಾಗಿ ಸಂಚರಿಸಲು ಸಾಧ್ಯವಾಗುತ್ತದೆ.

ಅಧಿಕಾರಿ ವರ್ಗಕ್ಕೆ ಮೋದಿ, ಟ್ರಂಪ್ ನಿರ್ದೇಶನ

ಒಪ್ಪಂದ ತ್ವರಿತಗೊಳಿಸಲು ಕರೆ

ಎವಿಯನ್–ಲೆಸ್–ಬೈನ್ಸ್ (ಫ್ರಾನ್ಸ್): ಆದಷ್ಟು ಶೀಘ್ರ ಸಮತೋಲಿತ , ಪರಸ್ಪರ ಪ್ರಯೋಜನಕಾರಿ ಮತ್ತು ವಾಣಿಜ್ಯಕವಾಗಿ ಅರ್ಥಪೂರ್ಣವಾದ ವ್ಯಾಪಾರ ಒಪ್ಪಂದವನ್ನು ಸಿದ್ಧಪಡಿಸುವ ನಿಟ್ಟಿನಲ್ಲಿ ಕಾರ್ಯತತ್ಪರರಾಗುವಂತೆ, ಭಾರತದ ಪ್ರಧಾನಿ ನರೇಂದ್ರ ಮೋದಿ ಮತ್ತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಮ್ಮ ಅಧಿಕಾರಿವರ್ಗಕ್ಕೆ ನಿರ್ದೇಶವಿತ್ತಿದ್ದಾರೆ.

16 ತಿಂಗಳ ನಂತರ ಪ್ರಪ್ರಥಮ ಬಾರಿ ಉಭಯ ನಾಯಕರು, ನಲುಗಿರುವ ತಮ್ಮ ದ್ವಿಪಕ್ಷೀಯ ಬಾಂಧವ್ಯಗಳನ್ನು ಮತ್ತೆ ಬಲಪಡಿಸುವ ನಿಟ್ಟಿನಲ್ಲಿ, ಜಿ 7ಶೃಂಗಸಭೆ ಸಂದರ್ಭ ವ್ಯಾಪಕ ಸುತ್ತಿನ ಮಾತುಕತೆ ನಡೆಸಿದ್ದರು. ಈ ವಿದ್ಯಮಾನದ ಮರುದಿನ ಗುರುವಾರ ಭಾರತದ ವಿದೇಶ ವ್ಯವಹಾರಗಳ ಖಾತೆ ಪ್ರಸ್ತುತ ಮಾಹಿತಿ ನೀಡಿದೆ. ಪ್ರಸ್ತಾವಿತ ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿ ಮಾತುಕತೆ ಮುನ್ನಡೆಸಲು ಅಮೆರಿಕದ ವಾಣಿಜ್ಯ ಪ್ರತಿನಿಧಿ ಜಮ್ಯೆಸನ್ ಗ್ರೀರ್ ಮುಂದಿನ ವಾರ ಭಾರತಕ್ಕೆ ಭೇಟಿ ನೀಡಲಿದ್ದಾರೆ.

ಮರುಸಂಕಲ್ಪ : ಭಾರತ–ಅಮೆರಿಕ ನಡುವಣ ಸಮಗ್ರ ಜಾಗತಿಕ ವ್ಯೂಹಾತ್ಮಕ ಪಾಲುದಾರಿಕೆಯನ್ನು ಮತ್ತಷ್ಟು ಬಲಪಡಿಸುವ ಸಂಕಲ್ಪವನ್ನು ಪ್ರಧಾನಿ ಮೋದಿ ,ಅಧ್ಯಕ್ಷ ಟ್ರಂಪ್ ಮಾತುಕತೆ ಸಂದರ್ಭ ಮರುದೃಢೀಕರಿಸಿದ್ದಾರೆ ಮತ್ತು ಉಭಯ ರಾಷ್ಟ್ರಗಳು ಹಾಗೂ ತಮ್ಮ ಜನರಿಗೆ ಪರಸ್ಪರ ಪ್ರಯೋಜನಕಾರಿಯಾಗುವಂತೆ ಎಲ್ಲಾ ರಂಗಗಳಲ್ಲೂ ಸಹಕಾರ ವಿಸ್ತರಿಸಲು ಮರುಸಂಕಲ್ಪ ಮಾಡಿದ್ದಾರೆ.

ಮಾತುಕತೆಯಲ್ಲಿ ಪ್ರಗತಿ ಬಗ್ಗೆ ಸಂತೃಪ್ತಿ: ಮಧ್ಯಂತರ ದ್ವಿಪಕ್ಷೀಯ ವ್ಯಾಪಾರ ಒಪ್ಪಂದ ನಿಟ್ಟಿನಲ್ಲಿ ನಡೆದ ಮಾತುಕತೆಯಲ್ಲಾಗಿರುವ ಮಹತ್ವದ ಪ್ರಗತಿಯನ್ನು ಉಭಯ ನಾಯಕರು ಸಂತೃಪ್ತಿಯೊಂದಿಗೆ ಗುರುತಿಸಿದ್ದಾರೆ ಮತ್ತು ಆದಷ್ಟು ಶೀಘ್ರ ಸಮತೋಲಿತ , ಪರಸ್ಪರ ಪ್ರಯೋಜನಕಾರಿ ಹಾಗೂ ವಾಣಿಜ್ಯಕವಾಗಿ ಅರ್ಥಪೂರ್ಣ ಒಪ್ಪಂದವನ್ನು ಹೊಂದುವ ನಿಟ್ಟಿನಲ್ಲಿ ಕಾರ್ಯತತ್ಪರರಾಗುವಂತೆ ತಮ್ಮ ಅಧಿಕಾರಿಗಳಿಗೆ ನಿರ್ದೇಶವಿತ್ತಿರುವುದಾಗಿ ವಿದೇಶ ವ್ಯವಹಾರಗಳ ಖಾತೆ ಹೇಳಿಕೆಯಲ್ಲಿ ತಿಳಿಸಿದೆ. ಪ್ರಸ್ತಾವಿತ ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿ ಇತ್ತಂಡಗಳು ಈಗಾಗಲೆ ಸರಣಿ ಮಾತುಕತೆ ನಡೆಸಿವೆ.

ಕಿರುಸುದ್ದಿ

ಶಿರಡಿ ಸಾಯಿ ದೇಗುಲಕ್ಕೆ ₹660 ಕೋಟಿ ದೇಣಿಗೆ

ಮುಂಬೈ: ಮಹಾರಾಷ್ಟ್ರದ ಸಾಯಿಬಾಬಾ ದೇವಾಲಯಕ್ಕೆ 2025–26ರಲ್ಲಿ ನಗದು, ಡಿಜಿಟಲ್ ಮತ್ತು ವಸ್ತು ರೂಪದಲ್ಲಿ ಭಕ್ತರು ಸುಮಾರು 660 ಕೋಟಿ ರೂ. ದೇಣಿಗೆ ನೀಡಿದ್ದಾರೆ ಎಂದು ಶಿರಡಿ ಸಾಯಿಬಾಬಾ ಸಂಸ್ಥಾನವು ಹೇಳಿದೆ. ಇದರ ಜತೆಗೆ ಸಂಸ್ಥಾನದ ಸ್ಥಿರ ಠೇವಣಿಗಳು 3,618 ಕೋಟಿ ರೂ.ಗಳಷ್ಟಿದ್ದು, ಇದರ ಬಡ್ಡಿಯಿಂದ 256 ಕೋಟಿ ರೂ.ಗಳ ಆದಾಯವನ್ನು ಗಳಿಸಿದೆ ಎಂದು ಸಂಸ್ಥಾನದ ಸಿಇಒ ಗೋರಕ್ಷ ಗಾಡಿಲ್ಕರ್ ಹೇಳಿದ್ದಾರೆ. ಸಾಯಿ ಸಂಸ್ಥಾನದ ಆಸ್ಪತ್ರೆಗಳಿಗೆ ಭಕ್ತರು 15–20 ಕೋಟಿ ರೂ.ಗಳವರೆಗೆ ಆಧುನಿಕ ವೈದ್ಯಕೀಯ ಉಪಕರಣಗಳನ್ನು ದಾನ ಮಾಡಿದ್ದಾರೆ. ಒಟ್ಟು ಸುಮಾರು 660 ಕೋಟಿ ರೂ.ಗಳಷ್ಟು ಕೊಡುಗೆ ನೀಡಿದ್ದಾರೆ ಎಂದು ಗಾಡಿಲ್ಕರ್ ಮಾಹಿತಿ ನೀಡಿದ್ದಾರೆ. ವಿದೇಶಗಳಲ್ಲಿರುವ ಸಾಯಿ ಭಕ್ತರು ಸುಮಾರು 4.89 ಕೋಟಿ ರೂ. ಮೌಲ್ಯದ ವಿದೇಶಿ ಕರೆನ್ಸಿಯನ್ನು ನೀಡಿದ್ದು, 39.55 ಕೋಟಿ ರೂ. ಆದಾಯವು ದರ್ಶನ ಮತ್ತು ಆರತಿ ಶುಲ್ಕದಿಂದ ಬಂದಿದೆ.



ಸ್ವದೇಶಿ ಏರ್ ಕುಷನ್ ವೆಹಿಕಲ್ ಸೇರ್ಪಡೆ

ಹೊಸದಿಲ್ಲಿ: ದೇಶದ ಮೊದಲ ಸ್ಥಳೀಯವಾಗಿ ನಿರ್ಮಿಸಲಾದ ಏರ್ ಕುಷನ್ ವೆಹಿಕಲ್ (ಎಸಿವಿ), ಎಚ್–561 ಅನ್ನು ಗೋವಾದ ಚೌಗುಲೆ ಕಂಪನಿ ಪ್ರೈವೇಟ್ ಲಿಮಿಟೆಡ್‌ನ ಶಿಪ್‌ಯಾರ್ಡ್ ಸೌಲಭ್ಯದಲ್ಲಿ ಗುರುವಾರ ಔಪಚಾರಿಕವಾಗಿ ಸೇವೆಗೆ ಸೇರ್ಪಡೆ ಮಾಡಲಾಗಿದೆ. ಇದು ಭಾರತದ ಸ್ಥಳೀಯ ಕಡಲ ಸಾಮರ್ಥ್ಯಗಳಿಗೆ ಗಮನಾರ್ಹ ಉತ್ತೇಜನ ನೀಡುತ್ತದೆ. ಎಚ್–561 ಭಾರತದ ರಕ್ಷಣಾ ಉತ್ಪಾದನಾ ವಲಯಕ್ಕೆ ಒಂದು ಮೈಲಿಗಲ್ಲಾಗಿದೆ. ಆತ್ಮನಿರ್ಭರ ಭಾರತ ಯೋಜನೆಯಲ್ಲಿ ರಕ್ಷಣಾ ಉತ್ಪಾದನೆಯಲ್ಲಿ ಸ್ವಾವಲಂಬನೆಗಾಗಿ ಸರ್ಕಾರದ ಪ್ರಯತ್ನದೊಂದಿಗೆ ಇದು ಬಲ ನೀಡುತ್ತದೆ.

ರಷ್ಯಾ ಮೇಲೆ ಡ್ರೋನ್ ದಾಳಿ ನಡೆಸಿದ ಉಕ್ರೇನ್

ಮಾಸ್ಕೋ: ರಷ್ಯಾರಾಜಧಾನಿಯಾದ ಮಾಸ್ಕೋ ನಗರದಲ್ಲಿರುವ ಪ್ರಮುಖ ತೈಲ ಸಂಸ್ಕರಣಾ ಘಟಕದ ಮೇಲೆ ಉಕ್ರೇನ್ ಭೀಕರ ಡ್ರೋನ್ ದಾಳಿಯನ್ನು ಗುರುವಾರ ನಡೆಸಿದೆ. ದಾಳಿಯಲ್ಲಿ 17 ಮಂದಿಗೆ ಗಾಯಗಳಾಗಿವೆ ಎಂದು ರಷ್ಯಾ ಮಹಿತಿ ನೀಡಿದೆ. ಇದನ್ನು ಕಳೆದ ಎರಡು ವರ್ಷಗಳಲ್ಲಿ ನಡೆದ ಅತಿದೊಡ್ಡ ಡ್ರೋನ್ ದಾಳಿ ಎಂದು ರಷ್ಯಾ ಹೇಳಿದೆ.



ಇಪಿಎಫ್ ಬಡ್ಡಿ ದರ ಶೇ. 8.25ಕ್ಕೆ ಅನುಮೋದನೆ

ಹೊಸದಿಲ್ಲಿ: ನೌಕರರ ಭವಿಷ್ಯ ನಿಧಿ (ಇಪಿಎಫ್) ಠೇವಣಿಗಳ ಮೇಲಿನ ಬಡ್ಡಿ ದರವನ್ನು 2025–26ನೇ ಸಾಲಿಗೆ ಶೇ 8.25 ರಷ್ಟು ಕಾಯ್ದುಕೊಳ್ಳಲು ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ. ಈ ಬಡ್ಡಿಯನ್ನು ಪ್ರಸಕ್ತ ತಿಂಗಳಿನಲ್ಲೇ ಏಳು ಕೋಟಿಗೂ ಹೆಚ್ಚು ಸದಸ್ಯರ ಖಾತೆಗಳಿಗೆ ಜಮೆ ಮಾಡುವ ಸಾಧ್ಯತೆಯಿದೆ ಎಂದು ಗುರುವಾರ ಮೂಲಗಳು ತಿಳಿಸಿವೆ. ಭಾರತ ಸರ್ಕಾರ ಇಪಿಎಫ್‌ನ ಗ್ಯಾರಂಟರ್ ಆಗಿರುವುದರಿಂದ ಈ ಪ್ರಸ್ತಾವನೆಯನ್ನು ಹಣಕಾಸು ಸಚಿವಾಲಯದ ಒಪ್ಪಿಗೆಗೆ ಕಳುಹಿಸಲಾಗಿತ್ತು.



ಉದ್ಯೋಗಿಗಳ ಭವಿಷ್ಯ ನಿಧಿ ಸಂಸ್ಥೆಯ (ಇಪಿಎಫ್‌ಒ) ಕೇಂದ್ರ ವಿಶ್ವಸ್ತ ಮಂಡಳಿ (ಸಿಬಿಟಿ) ನಿಗದಿಪಡಿಸಿದ್ದ ಈ ದರಕ್ಕೆ ಹಣಕಾಸು ಸಚಿವಾಲಯ ಸಮ್ಮತಿ ಸೂಚಿಸಿದೆ. ಕೇಂದ್ರ ಕಾರ್ಮಿಕ ಸಚಿವ ಮನ್ಸೂಖ್ ಮಾಂಡವಿಯಾ ನೇತೃತ್ವದಲ್ಲಿ 2026ರ ಮಾ.2 ರಂದು ನಡೆದ ಸಿಬಿಟಿ ಸಭೆಯಲ್ಲಿ, 2025–26ರ ಹಣಕಾಸು ವರ್ಷಕ್ಕೆ ಶೇ 8.25 ರಷ್ಟು ಬಡ್ಡಿ ದರವನ್ನು ನಿಗದಿಪಡಿಸಲು ನಿರ್ಧರಿಸಲಾಗಿತ್ತು. ಈ ದರವನ್ನು ಸತತ ಮೂರನೇ ವರ್ಷವೂ ಮುಂದುವರಿಸಲಾಗಿದೆ. ಇಪಿಎಫ್‌ಒ ಅಭಿವೃದ್ಧಿಪಡಿಸಿರುವ ಹೊಸ ವ್ಯವಸ್ಥೆಯಲ್ಲಿ, ಈ ತಿಂಗಳಲ್ಲೇ ಚಂದಾದಾರರ ಖಾತೆಗಳಿಗೆ ಬಡ್ಡಿ ತಕ್ಷಣವೇ ಜಮೆಯಾಗಲಿದೆ.

ಹಿಂದಿನ ದರಗಳು: ಸಂಸ್ಥೆ, 2024–25ರ ಹಣಕಾಸು ವರ್ಷದಲ್ಲೂ ಶೇ 8.25 ರಷ್ಟು ಬಡ್ಡಿ ದರವನ್ನು ಕಾಯ್ದುಕೊಂಡಿತ್ತು. 2022–23ರಲ್ಲಿ ಶೇ 8.15ರಷ್ಟಿದ್ದ ಬಡ್ಡಿ ದರವನ್ನು 2023–24ರಲ್ಲಿ ಶೇ 8.25 ಕ್ಕೆ ಏರಿಸಲಾಗಿತ್ತು.

ವದಂತಿಗೆ ಕಿವಿಗೊಡದಿರಿ: ಅಭ್ಯರ್ಥಿಗಳಿಗೆ ಮನವಿ

ಹೊಸದಿಲ್ಲಿ: ಮರು ಪರೀಕ್ಷೆಗೂ ಮುನ್ನ ವದಂತಿಗಳಿಗೆ ಕಿವಿಗೊಡದೆ ಶಾಂತವಾಗಿರಲು ನೀಟ್–ಯುಜಿ ಅಭ್ಯರ್ಥಿಗಳಿಗೆ ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ (ಎನ್‌ಟಿಎ) ಮನವಿ ಮಾಡಿದೆ. ಸುರಕ್ಷಿತ, ಸುರಕ್ಷಿತ ಮತ್ತು ನ್ಯಾಯಯುತ ಪರೀಕ್ಷೆಯನ್ನು ಖಚಿತಪಡಿಸಿಕೊಳ್ಳಲು ವ್ಯಾಪಕ ವ್ಯವಸ್ಥೆಗಳನ್ನು ಮಾಡಲಾಗಿದೆ ಎಂದು ಎನ್‌ಟಿಎ ಭರವಸೆ ನೀಡಿದೆ. ಎಕ್ಸ್‌ನಲ್ಲಿ ಸಂದೇಶವೊಂದರಲ್ಲಿ, ಎನ್‌ಟಿಎ ಭಾನುವಾರ ನಿಗದಿಯಂತೆ ಮರುಪರೀಕ್ಷೆಯನ್ನು ನಡೆಸಲಾಗುವುದು ಎಂದು ಹೇಳಿದೆ. ಮುಂದೊಡುವ ವದಂತಿಗಳು ಮತ್ತು ಸಾಮಾಜಿಕ ಮಾಧ್ಯಮದಲ್ಲಿನ ವರದಿಗಳಿಗೆ ಕಿವಿಗೊಡದಂತೆ ಅಭ್ಯರ್ಥಿಗಳನ್ನು ಕೇಳಿಕೊಂಡಿದೆ. ಎನ್‌ಟಿಎಯ ಅಧಿಕೃತ ಸಂವಹನವನ್ನು ಮಾತ್ರ ಅವಲಂಬಿಸಿ ಎಂದು ಹೇಳಿದೆ. ಸಂಬಂಧಿತ ಸಚಿವಾಲಯಗಳು, ರಾಜ್ಯ ಸರ್ಕಾರಗಳು ಮತ್ತು ಭದ್ರತಾ ಸಂಸ್ಥೆಗಳೊಂದಿಗೆ ನಿಕಟ ಸಮನ್ವಯದಲ್ಲಿ ಸುರಕ್ಷಿತ ಮತ್ತು ನ್ಯಾಯಯುತ ಪರೀಕ್ಷೆಗೆ ವ್ಯಾಪಕ ವ್ಯವಸ್ಥೆಗಳು ಜಾರಿಯಲ್ಲಿವೆ ಎಂದು ನಾವು ನಿಮಗೆ ಭರವಸೆ ನೀಡಲು ಬಯಸುತ್ತೇವೆ. ಈ ಪ್ರಕ್ರಿಯೆಯ ಸಮಗ್ರತೆಯು ನಮ್ಮ ಅತ್ಯುನ್ನತ ಆದ್ಯತೆಯಾಗಿದೆ ಮತ್ತು ದೃಢವಾದ, ಬಹು ಹಂತದ ಸುರಕ್ಷತಾ ಕ್ರಮಗಳನ್ನು ಜಾರಿಗೆ ತರಲಾಗಿದೆ ಎಂದು ಅದು ಹೇಳಿದೆ.



ಪ್ರಧಾನ್ ನೇತೃತ್ವದಲ್ಲಿ ಸಭೆ : ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ಅಧ್ಯಕ್ಷತೆಯಲ್ಲಿ ಗುರುವಾರ ಶಿಕ್ಷಣ ಸಚಿವಾಲಯ, ರಾಜ್ಯ ಸರ್ಕಾರಗಳು, ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳ ಹಿರಿಯ ಅಧಿಕಾರಿಗಳೊಂದಿಗೆ ಉನ್ನತ ಮಟ್ಟದ ಪರಿಶೀಲನಾ ಸಭೆ ನಡೆಯಿತು.

ಜಾರ್ಖಂಡ್, ಮಿಜೋರಾಂ: ಎನ್‌ಡಿಎಗೆ ಭರ್ಜರಿ ಗೆಲುವು

ರಾಂಚಿ: ಎನ್‌ಡಿಎ ಬೆಂಬಲಿತ ಜಾರ್ಖಂಡ್‌ನ ಸ್ವತಂತ್ರ ಅಭ್ಯರ್ಥಿ ಪರಿಮಲ್ ನಥವಾನಿ ಹಾಗೂ ಮಿಜೋರಾಂನ ಜೆಪಿಎಂ ಅಭ್ಯರ್ಥಿ ಕೆ.ಲಾಲ್ವೆಲುವಾಂಗ್‌ಕಿಮಾ ಗುರುವಾರ ರಾಜ್ಯಸಭೆಗೆ ಆಯ್ಕೆಯಾಗಿದ್ದಾರೆ. ಇದರೊಂದಿಗೆ ಎನ್‌ಡಿಎ ರಾಜ್ಯಸಭಾ ಸೀಟುಗಳ ಸಂಖ್ಯೆ 154ಕ್ಕೇರಿದೆ. ಜಾರ್ಖಂಡ್ ರಾಜ್ಯಸಭಾ ಚುನಾವಣೆಯಲ್ಲಿ 28 ಮತಗಳನ್ನು ಪಡೆದ ಎನ್‌ಡಿಎ ಬೆಂಬಲಿತ ಸ್ವತಂತ್ರ ಅಭ್ಯರ್ಥಿ ಪರಿಮಲ್ ನಥವಾನಿ ಗೆಲುವು ಸಾಧಿಸಿದ್ದಾರೆ. ನಥವಾನಿ ಅವರು ಗೆಲ್ಲುತ್ತಿದ್ದಂತೆ ವಿಧಾನಸಭೆಯಲ್ಲಿ ಜೈ ಶ್ರೀರಾಮ್ ಘೋಷಣೆ ಕೂಗಲಾಯಿತು. ಇಂಡಿ ಕೂಟದ ಶಾಸಕರು ಪರಿಮಲ್ ಪರವಾಗಿ ಅಡ್ಡಮತದಾನ ಮಾಡಿದ್ದಾರೆಂದು ಹೇಳಲಾಗುತ್ತಿದೆ.

ಸ್ವತಂತ್ರ ಅಭ್ಯರ್ಥಿ ನಥವಾನಿ, 20 ಮತಗಳನ್ನು ಪಡೆದ ಕಾಂಗ್ರೆಸ್ ಅಭ್ಯರ್ಥಿ ಪ್ರಣವ್ ಝಾರನ್ನು ಸೋಲಿಸಿದ್ದಾರೆ. 30 ಮತಗಳನ್ನು ಪಡೆದ ಜೆಎಂಎಂ ಅಭ್ಯರ್ಥಿ ಬೈದ್ಯನಾಥ ರಾಮ್ ಇನ್ನೊಂದು ಸ್ಥಾನದಿಂದ ಆಯ್ಕೆಯಾಗಿದ್ದಾರೆ. ಬೈದ್ಯನಾಥ ಗೆಲುವು ನಿರೀಕ್ಷಿತ ಗೆಲುವಾಗಿತ್ತು. ಒಟ್ಟು 81 ಶಾಸಕರು ಮತ ಚಲಾಯಿಸಿದ್ದು, ಮೂರು ಮತಗಳು ಅಮಾನ್ಯವಾಗಿದ್ದವು. ನಥವಾನಿ 30 ಮತಗಳನ್ನು ಪಡೆದಿದ್ದರೂ, ಎರಡು ಮತಗಳು ಅಮಾನ್ಯಗೊಂಡಿದ್ದರಿಂದ ಅವರ ಮತಗಳ ಸಂಖ್ಯೆ 28ಕ್ಕೆ ಇಳಿದಿದ್ದವು. ಮಿಜೋರಾಂನಲ್ಲಿ ಝೋರಮ್ ಪೀಪಲ್ಸ್ ಮೂವ್ಮೆಂಟ್ (ಜೆಪಿಎಂ) ಅಭ್ಯರ್ಥಿ ಕೆ.ಲಾಲ್ವೆಲುವಾಂಗ್‌ಕಿಮಾ 36 ಚಲಾಯಿತ ಮತಗಳಲ್ಲಿ 26 ಮತಗಳನ್ನು ಪಡೆದು ರಾಜ್ಯಸಭೆಗೆ ಆಯ್ಕೆಯಾಗಿದ್ದಾರೆ. ಜೆಪಿಎಂ ಎನ್‌ಡಿಎ ಬೆಂಬಲಿತ ಪ್ರಾದೇಶಿಕ ಪಕ್ಷವಾಗಿದೆ. ರಾಜ್ಯಸಭೆಯಲ್ಲಿ 2/3 ಬಹುಮತ (164 ಸ್ಥಾನ) ಪಡೆಯುವ ಗುರಿಯನ್ನು ಎನ್‌ಡಿಎ ಸಮೀಪಿಸುತ್ತಿದೆ.

ವಿಪಕ್ಷ ನಾಯಕನ ಆಯ್ಕೆ ಪ್ರಕ್ರಿಯೆ ತಡೆಗೆ ಹೈ ನಕಾರ

ಕೋಲ್ಕತ್ತಾ: ಪಶ್ಚಿಮ ಬಂಗಾಳ ವಿಧಾನಸಭೆಯ ಸ್ಪೀಕರ್ ರತೀಂದ್ರ ಬೋಸ್, ತೃಣಮೂಲ ಕಾಂಗ್ರೆಸ್ (ಟಿಎಂಸಿ) ಭಿನ್ನಮತೀಯ ಬಣದ ಶಾಸಕ ರಿತಬ್ರತ ಬ್ಯಾನರ್ಜಿ ಅವರನ್ನು ವಿರೋಧ ಪಕ್ಷದ ನಾಯಕರನ್ನಾಗಿ (ಎಲ್‌ಒಪಿ) ನೇಮಕ ಮಾಡಿದ ನಿರ್ಧಾರಕ್ಕೆ ಮಧ್ಯಂತರ ತಡೆಯಾಜ್ಞೆ ನೀಡಲು ಕಲ್ಕತ್ತಾ ಹೈಕೋರ್ಟ್ ಗುರುವಾರ ನಿರಾಕರಿಸಿದೆ. ತಮ್ಮ ನಾಮನಿರ್ದೇಶನ ತಿರಸ್ಕಾರ ಮತ್ತು ಬ್ಯಾನರ್ಜಿ ನೇಮಕವನ್ನು ಪ್ರಶ್ನಿಸಿ ಟಿಎಂಸಿ ಶಾಸಕ ಶೋಭಂದೇಬ್ ಚಟ್ಟೋಪಾಧ್ಯಾಯ ಸಲ್ಲಿಸಿದ್ದ ಅರ್ಜಿಯ ಮಧ್ಯಂತರ ಪರಿಹಾರವನ್ನು ನ್ಯಾಯಮೂರ್ತಿ ಕೃಷ್ಣರಾವ್ ತಿರಸ್ಕರಿಸಿದ್ದಾರೆ. ಅಲ್ಲದೆ, ಈ ಪ್ರಕರಣದ ಮುಂದಿನ ವಿಚಾರಣೆಯನ್ನು ಜು.28 ಕ್ಕೆ ನಿಗದಿಪಡಿಸಿದ್ದಾರೆ. ರಾಜ್ಯ ವಿಧಾನಸಭೆಯ ಬಜೆಟ್ ಅಧಿವೇಶನ ಗುರುವಾರದಿಂದ ಆರಂಭವಾಗಿದ್ದು, ಜೂ.25ರಂದು ಮುಕ್ತಾಯಗೊಳ್ಳಲಿದೆ. ಸ್ಪೀಕರ್ ಬ್ಯಾನರ್ಜಿ ಅವರನ್ನು ಎಲ್‌ಒಪಿ ಆಗಿ, ಜಾವೇದ್ ಖಾನ್, ಸಂದೀಪನ್ ಸಹಾ, ಸಬೀನಾ ಯಾಸ್ಮಿನ್ ಮತ್ತು ಸಿಯುಲಿ ಸಹಾರನ್ನು ಉಪನಾಯಕರನ್ನಾಗಿ ಹಾಗೂ ಅಖ್ರುಜ್ಜಮಾನ್‌ರನ್ನು ಮುಖ್ಯ ಸಚೇತಕರನ್ನಾಗಿ ಅನುಮೋದಿಸಿದ್ದಾರೆ.

ಕೆಲವು ಅನುಮೋದನೆ ಸಿಗುವುದು ಬಾಕಿ: ಬ್ರಹ್ಮೋಸ್ ಸಿಇಒ ಜೈತೀರ್ಥ

ವಿಯೆಟ್ನಾಂ ಜತೆ ಬ್ರಹ್ಮೋಸ್ ರಫ್ತು ಒಪ್ಪಂದ

ನಾಗ್ಪುರ: ವಿಯೆಟ್ನಾಂನೊಂದಿಗಿನ ಬಹುನಿರೀಕ್ಷಿತ ಬ್ರಹ್ಮೋಸ್ ರಫ್ತು ಒಪ್ಪಂದ ಅಂತಿಮ ಹಂತವನ್ನು ತಲುಪಿದ್ದು, ಅನುಮೋದನೆ ಸಿಗುವುದಷ್ಟೇ ಬಾಕಿ. ಬ್ರಹ್ಮೋಸ್ ಹೊಸ ಆವೃತ್ತಿಗಳ ಕೆಲಸ ಪ್ರಗತಿಯಲ್ಲಿವೆ ಎಂದು ಬ್ರಹ್ಮೋಸ್ ಏರೋಸ್ಪೇಸ್ ಸಿಇಒ ಜೈತೀರ್ಥ ಜೋಷಿ ಗುರುವಾರ ಹೇಳಿದ್ದಾರೆ. ನಾಗ್ಪುರದಲ್ಲಿ ಸೋಲಾರ್ ಇಂಡಸ್ಟ್ರೀಸ್ ಇಂಡಿಯಾ ಲಿ. ಬ್ರಹ್ಮೋಸ್ ಕ್ಷಿಪಣಿ ಯೋಜನೆಗೆ ಅಗತ್ಯದ 100ನೇ ದೇಸಿ ಬೂಸ್ಟರ್‌ಗೆ ಚಾಲನೆ ನೀಡಿ ಜೋಷಿ ಮಾತನಾಡಿದ್ದಾರೆ. ಬೂಸ್ಟರ್, ಬ್ರಹ್ಮೋಸ್ ಕ್ಷಿಪಣಿಯಲ್ಲಿ ಬಳಸುವ ಪ್ರಮುಖ ಉಪಕರಣವಾಗಿದೆ. ರಕ್ಷಣಾ ಉತ್ಪಾದನೆಯಲ್ಲಿ ಆತ್ಮನಿರ್ಭರತೆ (ಸ್ವಾವಲಂಬನೆ) ಸಾಧಿಸುವಲ್ಲಿ ಬ್ರಹ್ಮೋಸ್ ಮೈಲಿಗಲ್ಲು ಯೋಜನೆಯಾಗಿದೆ.

ಈ ಹಿಂದೆ ಬೂಸ್ಟರ್‌ಗಳನ್ನು ರಷ್ಯಾದಿಂದ ಆಮದು ಮಾಡಿಕೊಳ್ಳುತ್ತಿದ್ದೆವು. ಈಗ ಅದನ್ನು ಭಾರತದಲ್ಲೇ ನಿರ್ಮಾಣ ಮಾಡುತ್ತಿದ್ದೇವೆ ಎಂದು ಜೋಷಿ ತಿಳಿಸಿದ್ದಾರೆ.



ಅಂತಿಮ ಹಂತದಲ್ಲಿ ವಿಯೆಟ್ನಾಂ ಒಪ್ಪಂದ: ವಿಯೆಟ್ನಾಂನೊಂದಿಗಿನ ಬ್ರಹ್ಮೋಸ್ ರಫ್ತು ಮಾತುಕತೆ ಬಹುತೇಕ ಅಂತಿಮ ಹಂತದಲ್ಲಿದೆ. ಒಪ್ಪಂದ ಅಂತಿಮಗೊಳ್ಳುವ ಮುನ್ನ ಕೆಲವು ಸಣ್ಣಪುಟ್ಟ ಅನುಮೋದನೆಗಳು ಸಿಗುವುದು ಬಾಕಿ ಇದೆ. ಹಲವು ಪೂರ್ವ ಮತ್ತು ಪಾಶ್ಚಿಮಾತ್ಯ ರಾಷ್ಟ್ರಗಳೊಂದಿಗೆ ಮಾತುಕತೆಯನ್ನು ನಡೆಸುತ್ತಿದ್ದೇವೆ. ಬ್ರಹ್ಮೋಸ್ ಸೂಪರ್‌ಸೋನಿಕ್ ಕ್ಷಿಪಣಿಯನ್ನು ಖರೀದಿಸಲು ಹಲವು ರಾಷ್ಟ್ರಗಳು ಆಸಕ್ತಿ ತೋರಿಸಿವೆ. ಒಮ್ಮೆ ಸರ್ಕಾರಗಳ ಅನುಮೋದನೆ ಸಿಕ್ಕ ನಂತರ ನಾವು ಮುಕ್ತವಾಗಿ ಘೋಷಿಸಲಿದ್ದೇವೆ ಎಂದು ಸಿಇಒ ಜೈತೀರ್ಥ ಹೇಳಿದ್ದಾರೆ.

ಪ್ರಗತಿಯಲ್ಲಿ ಹೊಸ ಆವೃತ್ತಿಗಳ ಆವಿಷ್ಕಾರ

ಬ್ರಹ್ಮೋಸ್, ಬ್ರಹ್ಮೋಸ್ ಎನ್‌ಜಿ ರೀತಿಯಲ್ಲಿ ಬ್ರಹ್ಮೋಸ್‌ನ ಅತ್ಯಾಧುನಿಕ ಹೊಸ ಆವೃತ್ತಿಗಳ ಆವಿಷ್ಕಾರ ಪ್ರಗತಿಯಲ್ಲಿದ್ದು, ವಿನ್ಯಾಸ ಮತ್ತು ಸಿಮ್ಯುಲೇಷನ್ ಪರೀಕ್ಷೆಗಳು ನಡೆಸಿದ ಬಳಿಕ ಅಂತಿಮ ವಿಶೇಷತೆಗಳನ್ನು ನಿರ್ಧರಿಸಲು ಸಾಧ್ಯ ಎಂದು ಬ್ರಹ್ಮೋಸ್ ಮುಖ್ಯಸ್ಥ ಜೋಷಿ ತಿಳಿಸಿದ್ದಾರೆ. ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಮತ್ತು ಎನ್‌ಪಿಒ ಮಶಿನೋಸ್ಟ್ರೊಯೆನಿಯಾ ಜಂಟಿಯಾಗಿ ಬ್ರಹ್ಮೋಸ್ ಏರೋಸ್ಪೇಸ್ ಲಿಮಿಟೆಡ್‌ನಲ್ಲಿ ಬ್ರಹ್ಮೋಸ್ ಕ್ಷಿಪಣಿಗಳ ಉತ್ಪಾದನೆ ಮಾಡುತ್ತಿವೆ.

9.44ಕೋಟಿ ರೈತರ ಖಾತೆಗಳಿಗೆ 18,880 ಕೋಟಿ ರೂ.

ಪಿಎಂ ಕಿಸಾನ್ ಕಂತು ನಾಳೆ ಜಮೆ

ಹೊಸದಿಲ್ಲಿ : ಪಿಎಂ–ಕಿಸಾನ್ ಯೋಜನೆಯಲ್ಲಿ 23ನೇ ಕಂತಿನ ರೂಪದಲ್ಲಿ ಸುಮಾರು 18,880 ಕೋಟಿ ರೂ. ಮೊತ್ತವನ್ನು, ದೇಶಾದ್ಯಂತದ 9.44ಕೋಟಿ ರೈತರ ಖಾತೆಗಳಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಜೂ.20ರಂದು ನೇರ ವರ್ಗಾವಣೆ ಮಾಡಲಿದ್ದಾರೆ. ಪ.ಬಂಗಾಳದ ಹೂಗ್ಲಿ ಜಿಲ್ಲೆಗೆ ಭೇಟಿ ಸಂದರ್ಭ ಪ್ರಸ್ತುತ ಪರಿಹಾರ ನಿಧಿ ವರ್ಗಾವಣೆ ಪ್ರಕ್ರಿಯೆಯನ್ನು ಪ್ರಧಾನಿ ಮೋದಿ ನಿರ್ವಹಿಸಲಿದ್ದಾರೆ.

ಪ.ಬಂಗಾಳದಲ್ಲೇ ಸುಮಾರು 45.35ಲಕ್ಷ ರೈತರು ಪರಿಹಾರ ಕಂತುಗಳ ರೂಪದಲ್ಲಿ ಅತ್ಯಧಿಕ ಅಂದರೆ ಒಟ್ಟು 907ಕೋಟಿ ರೂ.ಪಡೆಯಲಿದ್ದಾರೆ. ತನ್ಮೂಲಕ ಪಿಎಂ–ಕಿಸಾನ್ ಯೋಜನೆಯಡಿ ರಾಜ್ಯದಲ್ಲಿ ಸಂಚಿತ ಪರಿಹಾರ ವಿತರಣೆ ರೂ.15,055 ಕೋಟಿ ರೂ.ಮೀರಲಿದೆ ಮತ್ತು 2019ರಲ್ಲಿ ಯೋಜನೆ ಅಸ್ತಿತ್ವಕ್ಕೆ ಬಂದ ನಂತರ ರಾಷ್ಟ್ರಾದ್ಯಂತ ರೈತರಿಗೆ ವಿತರಣೆಯಾಗಿರುವ ನೆರವಿನ ಮೊತ್ತ 4.46ಲಕ್ಷ ಕೋಟಿ ರೂ.ಮೀರಲಿದೆ. ನೇರವಾಗಿ ಪರಿಹಾರ ವರ್ಗಾವಣೆ (ಡಿಬಿಟಿ) ಮೂಲಕ ರೈತರ ಖಾತೆಗಳಿಗೆ ನಿಧಿಯನ್ನು ವರ್ಗಾಯಿಸಲಾಗುವುದು ,ತನ್ಮೂಲಕ ಸಣ್ಣ ಹಾಗೂ ಮಧ್ಯಮ ರೈತರ ಆದಾಯ ಭದ್ರತೆಯ ಬಲವರ್ಧನೆಗೆ ಸರಕಾರ ನೆರವಾಗಲಿದೆ ಎಂದು ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.


ಫಸಲ್ ಬಿಮಾ ಯೋಜನೆಗೆ ಚಾಲನೆ: ಒಟ್ಟು 12,200ಕೋಟಿ ರೂ.ಅಂದಾಜು ವೆಚ್ಚದ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ ಮತ್ತು ಪುನಾರಚಿತ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಗಳಿಗೂ ಪ್ರಧಾನಿ ಮೋದಿ ಬಂಗಾಳದಲ್ಲಿ ಚಾಲನೆ ನೀಡಲಿದ್ದಾರೆ.2026–27ರಲ್ಲಿ ಸುಮಾರು 30ಲಕ್ಷ ಹೆಕ್ಟೇರ್ ವ್ಯಾಪ್ತಿಯ 1.10ಕೋಟಿ ರೈತರಿಗೆ ಬೆಳೆ ವಿಮಾ ಯೋಜನೆಯ ಪ್ರಯೋಜನ ವಿಸ್ತರಿಸುವುದು ಸರಕಾರದ ಗುರಿ. ತನ್ಮೂಲಕ ಸುಮಾರು 28,140 ಕೋಟಿ ಮೌಲ್ಯದ ಬೆಳೆಗಳು ಫಸಲ್ ಬಿಮಾ ಯೋಜನೆ ವ್ಯಾಪ್ತಿಗೆ ಒಳಪಡಲಿವೆ.

ರಾಷ್ಟ್ರೀಯ ನೈಸರ್ಗಿಕ ಕೃಷಿ ಮಿಷನ್: ಡಿಜಿಟಲ್ ಅಗ್ರಿಕಲ್ಚರ್ ಮಿಷನ್‌ನಲ್ಲಿ ರಸಗೊಬ್ಬರ ವಿತರಣೆ, ಕಿಸಾನ್ ಕ್ರೆಡಿಟ್ ಕಾರ್ಡ್‌ಗಳು, ಡಿಬಿಟಿ ಸೇವೆಗಳು ಮತ್ತು ಎಂಎಸ್‌ಪಿ ಆಧಾರಿತ ಸರ್ಕಾರಿ ಖರೀದಿಗಳಿಗೆ ಪೂರಕ ಸಮಗ್ರ ಕೃಷಿ–ತಂತ್ರಜ್ಞಾನ ವೇದಿಕೆಗೆ ಪ್ರಧಾನಿ ಮೋದಿ ಚಾಲನೆ ನೀಡಲಿದ್ದಾರೆ. ರಾಷ್ಟ್ರೀಯ ನೈಸರ್ಗಿಕ ಕೃಷಿ ಮಿಷನ್‌ಗೆ ಪ್ರಧಾನಿ ಮೋದಿ ಚಾಲನೆ ನೀಡುವರು.ಇದರಲ್ಲಿ 2026–27ರಲ್ಲಿ ಪ.ಬಂಗಾಳದ ಸುಮಾರು 17,300ಹೆಕ್ಟೇರ್ ಪ್ರದೇಶದಲ್ಲಿ ಸುಮಾರು 346 ನೈಸರ್ಗಿಕ ಕೃಷಿ ಕ್ಲಸ್ಟರ್‌ಗಳನ್ನು ತೆರೆಯಲಾಗುವುದು.

ಕಿರುಸುದ್ದಿ

ಯೋಗ ಚಿಕಿತ್ಸಾ ವರ್ಗ

ಮಂಗಳೂರು: ಮಂಗಳೂರಿನ ಆರೋಗ್ಯ ಭಾರತಿಯು ಜೈಲು ರಸ್ತೆಯ ಸುಬ್ರಹ್ಮಣ್ಯ ಸಭಾದಲ್ಲಿ ಸದ್ಬೋಧ ಗುರುಕುಲದ ಸಹಯೋಗದಲ್ಲಿ ಜೂ. 20ರ ಸಂಜೆ 5 ರಿಂದ 7ರ ವರೆಗೆ ಯೋಗ ಚಿಕಿತ್ಸಾ ಅಭ್ಯಾಸ ವರ್ಗವನ್ನು ಉಚಿತವಾಗಿ ನಡೆಸಲಿದೆ. ಸುವಿಖ್ಯಾತ ಯೋಗ ಚಿಕಿತ್ಸಾ ಪರಿಣತರು ಅನಾರೋಗ್ಯದ ಕಾರಣಗಳನ್ನು ವಿವರಿಸಿ ಯೌಗಿಕ ಚಿಕಿತ್ಸೆಯಿಂದಾಗುವ ಪರಿಹಾರವನ್ನು ತಿಳಿಸಿ ಆಯಾ ರೋಗ ನಿವಾರಣೆಗೆ, ರೋಗ ಬಾರದಂತೆ ಮಾಡಬೇಕಾದ ಯೋಗಾಭ್ಯಾಸವನ್ನು ಈ ಕಾರ್ಯಾಗಾರದಲ್ಲಿ ಕಲಿಸುವರು. ಯೋಗರತ್ನ ಗೋಪಾಲಕೃಷ್ಣ ದೇಲಂಪಾಡಿ ಮಧುಮೇಹ ರೋಗೋಪಶಮನೋಪಾಯಗಳನ್ನು ಯೋಗಾಚಾರ್ಯ ಶ್ರೀಕಾಂತ ಯೋಗಿಯವರು ಹೃದಯ ಸಂಬಂಧಿ ರೋಗಗಳಿಗೆ ಯೋಗ ಚಿಕಿತ್ಸೆಯನ್ನು, ಯೋಗ ಪರಿಣತ ಶಿಕ್ಷಕ ಕುಶಾಲಪ್ಪ ಗೌಡರು ರಕ್ತದೊತ್ತಡ ಹಾಗೂ ಶ್ವಾಸಕೋಶ ರೋಗಗಳಿಗೆ ಯೌಗಿಕ ಉಪಶಮನವನ್ನು, ಯೋಗಿನಿ ಸಂಜನಾ ಭಟ್ಟರು ಮಂಡಿ, ಬೆನ್ನುಮೂಳೆ ನೋವುಗಳ ಪರಿಹಾರಾಭ್ಯಾಸವನ್ನು ಮಾಡಿಸುವರು ಎಂದು ಆರೋಗ್ಯಭಾರತೀ ಅಧ್ಯಕ್ಷ ಡಾ. ಈಶ್ವರ ಭಟ್ ಪಲ್ಲಾದೆ ಪ್ರಕಟಿಸಿದ್ದಾರೆ.



ಡಾ.ಗಾಯತ್ರಿ ಹೆಗ್ಡೆಗೆ ಪಿಎಚ್‌ಡಿ ಪದವಿ



ಮಂಗಳೂರು: ವಾಣಿಮಂಗಳೂರಿನ ಡಾ. ಗಾಯತ್ರಿ ಹೆಗ್ಡೆ ಅವರು ಬೆಂಗಳೂರು ವಿಶ್ವವಿದ್ಯಾಲಯದ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜಿನಿಂದ ಕಂಪ್ಯೂಟರ್ ಸೈನ್ಸ್ ಮತ್ತು ಇಂಜಿನಿಯರಿಂಗ್ ವಿಭಾಗದಲ್ಲಿ ಇಲೆಕ್ಟ್ರಾನಿಕ್ ಆರೋಗ್ಯ ದಾಖಲೆಗಳಿಗೆ ಸುರಕ್ಷಿತ ಮತ್ತು ಗೌಪ್ಯತೆ- ಸಂರಕ್ಷಿತ ವಿಧಾನಗಳು ವಿಷಯದಲ್ಲಿ ಪಿಎಚ್‌ಡಿ ಪದವಿ ಪಡೆದು ಕೊಂಡಿದ್ದಾರೆ. ಇವರು ಬಿ. ಶಶಿಧರ ಕಾಮತ್ ಅವರ ಪತ್ನಿ.

ಜೂ. 21: ಸಂಘನಿಕೇತನದಲ್ಲಿ ವಿಶ್ವ ಯೋಗ ದಿನಾಚರಣೆ

ಮಂಗಳೂರು: ಕೇಶವ ಸ್ಮೃತಿ ಸಂವರ್ಧನ ಸಮಿತಿ ಪ್ರತಾಪನಗರ ಮತ್ತು ಪತಂಜಲಿ ಯೋಗ ಶಿಕ್ಷಣ ಪ್ರತಿಷ್ಠಾನದ ಜಂಟಿ ಆಶ್ರಯದಲ್ಲಿ 12ನೇ ವಿಶ್ವ ಯೋಗ ದಿನಾಚರಣೆಯನ್ನು ಪ್ರತಾಪನಗರದ ಸಂಘನಿಕೇತನದಲ್ಲಿ ಜೂ. 21ರಂದು ಬೆಳಗ್ಗೆ 5.15 ರಿಂದ 7.30 ರವರೆಗೆ ಆಚರಿಸಲಾಗುವುದು. ಕೇಶವ ಸ್ಮೃತಿ ಸಂವರ್ಧನ ಸಮಿತಿಯ ಅಧ್ಯಕ್ಷ ಡಾ. ವಾಮನ್ ಶೆಣೈ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಪ್ರತಿಷ್ಠಾನದ ಅಧ್ಯಕ್ಷ ಏಕನಾಥ ಬಾಳಿಗಾ ಮತ್ತಿತರ ಪದಾಧಿಕಾರಿಗಳು ಉಪಸ್ಥಿತರಿರುವರು. ಕಾರ್ಯಕ್ರಮದಲ್ಲಿ ವಿಶ್ವ ಯೋಗ ದಿನದ ಪ್ರೊಟೋಕಾಲ್ ಆಸನಾಭ್ಯಾಸ ನಡೆಯಲಿದೆ. ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಎಲ್ಲಾ ಆಸಕ್ತರಿಗೂ ಸಾರ್ವಜನಿಕರಿಗೂ ಮುಕ್ತ ಆಹ್ವಾನವಿದೆ ಎಂದು ಪ್ರಕಟಣೆ ತಿಳಿಸಿದೆ.

ಇಂದು ಕಂಬಾರ ಕವಿ-ಕಾವ್ಯ- ಸಾಹಿತ್ಯ- ಪರಂಪರೆ ಉಪನ್ಯಾಸ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಂಗಳೂರು ಹಾಗೂ ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯ ಶಿಕ್ಷಣ ವಿಭಾಗ ಸಂಯುಕ್ತ ಆಶ್ರಯದಲ್ಲಿ, ಜ್ಞಾನಪೀಠ ಪುರಸ್ಕೃತ ಚಂದ್ರಶೇಖರ ಕಂಬಾರ ಅವರ ಕವಿ-ಕಾವ್ಯ- ಸಾಹಿತ್ಯ- ಪರಂಪರೆ ಮಾಲಿಕೆ 8 ಕಾರ್ಯಕ್ರಮ ಜೂ.19ರಂದು ಮಧ್ಯಾಹ್ನ 3ಕ್ಕೆ ಅಲೋಶಿಯಸ್ ವಿವಿ ಕಾನೂನು ಶಿಕ್ಷಣ ವಿಭಾಗದ ನಾಲ್ಕನೇ ಮಹಡಿ ಸಭಾಭವನದಲ್ಲಿ ನಡೆಯಲಿದೆ. ಕಸಾಪ ದ.ಕ. ಜಿಲ್ಲಾಧ್ಯಕ್ಷ ಡಾ.ಎಂ.ಪಿ. ಶ್ರೀನಾಥ ಅಧ್ಯಕ್ಷತೆ ವಹಿಸುವರು. ಅಲೋಶಿಯಸ್ ವಿವಿ ಶಿಕ್ಷಣ ವಿಭಾಗ ಸಹ ಪ್ರಾಧ್ಯಾಪಕಿ ಡಾ. ಫರೀಟಾ ವೇಗಸ್ ಉದ್ಘಾಟಿಸುವರು. ಮಂಗಳೂರು ವಿಶ್ವವಿದ್ಯಾಲಯ ಕನ್ನಡ ವಿಭಾಗ ಪ್ರಾಧ್ಯಾಪಕ ಡಾ. ಧನಂಜಯ ಕುಂಬ್ಳೆ ಉಪನ್ಯಾಸ ನೀಡುವರು. ಅಲೋಶಿಯಸ್ ವಿವಿ ಶಿಕ್ಷಣ ವಿಭಾಗ ಮುಖ್ಯಸ್ಥೆ ಡೆಲ್ಲಾ ಲೋಬೊ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ಇಂದು ಗಿರೀಶ್ ಕಾರ್ನಾಡ್ ಕವಿ-ಕಾವ್ಯ- ಸಾಹಿತ್ಯ- ಪರಂಪರೆ ಉಪನ್ಯಾಸ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಂಗಳೂರು ಹಾಗೂ ಸಂತ ಆಗ್ನೆಸ್ ಕಾಲೇಜು (ಸ್ವಾಯತ್ತ) ಸಂಯುಕ್ತ ಆಶ್ರಯದಲ್ಲಿ, ಜ್ಞಾನಪೀಠ ಪುರಸ್ಕೃತ ಗಿರೀಶ್ ಕಾರ್ನಾಡ್ ಅವರ ಕವಿ-ಕಾವ್ಯ- ಸಾಹಿತ್ಯ- ಪರಂಪರೆ ಮಾಲಿಕೆ 7 ಕಾರ್ಯಕ್ರಮ ಜೂ.19ರಂದು ಬೆಳಗ್ಗೆ 9ಕ್ಕೆ ನಗರದ ಸಂತ ಆಗ್ನೆಸ್ ಕಾಲೇಜು ಸಭಾಂಗಣದಲ್ಲಿ ನಡೆಯಲಿದೆ. ಸಂತ ಆಗ್ನೆಸ್ ಕಾಲೇಜು ಪ್ರಾಂಶುಪಾಲೆ ಡಾ.ಎಂ. ವೆನಿಸ್ಸಾ ಎಸಿ ಅಧ್ಯಕ್ಷತೆ ವಹಿಸುವರು. ಕಸಾಪ ದ.ಕ. ಜಿಲ್ಲಾಧ್ಯಕ್ಷ ಡಾ.ಎಂ.ಪಿ. ಶ್ರೀನಾಥ ಉದ್ಘಾಟಿಸುವರು. ಪತ್ರಕರ್ತೆ ರಾಜಲಕ್ಷ್ಮಿ ಕೋಡಿಬೆಟ್ಟು ಉಪನ್ಯಾಸ ನೀಡುವರು ಎಂದು ಪ್ರಕಟಣೆ ತಿಳಿಸಿದೆ.



ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ಕುಂತೂರು ಗ್ರಾಮದ ಅಂತಕ್ಕ ಶೆಟ್ಟಿ ಅವರಿಗೆ ಗಾಲಿ ಕುರ್ಚಿ ವಿತರಣೆ ಮಾಡಲಾಯಿತು. ಯೋಜನೆಯ ಕಡಬ ತಾಲೂಕು ಯೋಜನಾಧಿಕಾರಿ ಪ್ರಕಾಶ್ ಕುಮಾರ್ ಗಾಲಿ, ಅಲಂಕಾರು ವಲಯದ ಮೇಲ್ವಿಚಾರಕಿ ಲತಾ, ಸೇವಾಪ್ರತಿನಿಧಿ ಸವಿತಾ, ಸುವಿಧಾ ಸಹಾಯಕ ಚೆನ್ನಕೇಶವ ರೈ ಗುತ್ತುಪಾಲು, ಶೌರ್ಯ ತಂಡದ ಕೇಶವ ಗೌಡ ಉಪಸ್ಥಿತರಿದ್ದರು.

ಪ್ರಧಾನಮಂತ್ರಿ ವಿಕಸಿತ್ ಭಾರತ್ ರೋಜ್‌ಗಾರ್ ಯೋಜನೆ
ಮಂಗಳೂರಿನಲ್ಲಿಂದು ಕಾರ್ಯಕ್ರಮ

ಮಂಗಳೂರು: ದೇಶದಲ್ಲಿ ದೊಡ್ಡ ಪ್ರಮಾಣದ ಉದ್ಯೋಗ ಸೃಷ್ಟಿ ಹಾಗೂ ಸಾಮಾಜಿಕ ಭದ್ರತಾ ವ್ಯಾಪ್ತಿಯನ್ನು ವಿಸ್ತರಿಸುವ ಉದ್ದೇಶದಿಂದ ಆರಂಭಗೊಂಡ ಪ್ರಧಾನಮಂತ್ರಿ ವಿಕಸಿತ್ ಭಾರತ್ ರೋಜ್‌ಗಾರ್ ಯೋಜನೆಯ (ಪಿಎಂ-ವಿಬಿಆರ್‌ವೈ) ಬಗ್ಗೆ ದೇಶವ್ಯಾಪಿ ಜಾಗೃತಿ ಕಾರ್ಯಕ್ರಮದ ಅಂಗವಾಗಿ ಮಂಗಳೂರು ಇಪಿಎಫ್‌ಒ ಪ್ರಾದೇಶಿಕ ಕಚೇರಿ ವತಿಯಿಂದ ಶುಕ್ರವಾರ ಸಂಜೆ 4ಕ್ಕೆ ಮಂಗಳೂರಿನ ಬಂದರ್‌ನಲ್ಲಿರುವ ಕೆನರಾ ಚೇಂಬರ್ ಆಫ್ ಕಾಮರ್ಸ್ ಆ್ಯಂಡ್ ಇಂಡಸ್ಟ್ರಿ ಸಭಾಂಗಣದಲ್ಲಿ ಜಾಗೃತಿ ಹಾಗೂ ವಿಶೇಷ ಕಾರ್ಯಕ್ರಮ ಆಯೋಜಿಸಲಾಗಿದೆ.

ಈ ಕಾರ್ಯಕ್ರಮ ನವದೆಹಲಿಯ ವಿಜ್ಞಾನ ಭವನದಲ್ಲಿ ನಡೆಯುವ ರಾಷ್ಟ್ರೀಯ ಮಟ್ಟದ ಪಿಎಂ-ವಿಬಿಆರ್‌ವೈ ಕಾರ್ಯಕ್ರಮದೊಂದಿಗೆ ಸಂಯೋಜಿತವಾಗಿದ್ದು, ಈ ಸಂದರ್ಭದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಯೋಜನೆಯ ಅರ್ಹ ಫಲಾನುಭವಿಗಳಿಗೆ ಸೌಲಭ್ಯಗಳನ್ನು ಬಿಡುಗಡೆ ಮಾಡಲಿದ್ದಾರೆ. ಮಂಗಳೂರಿನ ಕೆಸಿಸಿಐನಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಆರೋಗ್ಯ ಸಚಿವ ಯು.ಟಿ. ಖಾದರ್, ಸಂಸದ ಬ್ರಿಜೇಶ್ ಚೌಟ, ಶಾಸಕರಾದ ಡಿ.ವೇದವ್ಯಾಸ ಕಾಮತ್, ಡಾ.ವೈ.ಭರತ್ ಶೆಟ್ಟಿ, ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ, ಇಪಿಎಫ್‌ಒ ಪ್ರಾದೇಶಿಕ ಸಮಿತಿ ಸದಸ್ಯ ವಿಶ್ವನಾಥ ಶೆಟ್ಟಿ, ಕೆಸಿಸಿಐ ಅಧ್ಯಕ್ಷ ಪಿ.ಬಿ. ಅಹ್ಮದ್ ಮುದಾಸ್ಸಿರ್ ಭಾಗವಹಿಸುವರು ಎಂದು ದ.ಕ. ಇಪಿಎಫ್‌ಒ ಪ್ರಾದೇಶಿಕ ಆಯುಕ್ತ ಸಂದೀಪ್ ಬಿಸ್ವಾಸ್ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಇಪಿಎಫ್‌ಒ ಮಂಗಳೂರು ಪ್ರಾದೇಶಿಕ ಕಚೇರಿ ವ್ಯಾಪ್ತಿಯಲ್ಲಿ, ಯೋಜನೆಯ ಭಾಗ-ಎ ಅಡಿಯಲ್ಲಿ ಅರ್ಹ ಉದ್ಯೋಗಿಗಳಿಗೆ ಸುಮಾರು 47 ಲಕ್ಷ ರೂ. ಮೊತ್ತದ ಪ್ರಯೋಜನಗಳನ್ನು ಹಾಗೂ ಭಾಗ-ಬಿ ಅಡಿಯಲ್ಲಿ ಅರ್ಹ ಉದ್ಯೋಗದಾತರಿಗೆ ಸುಮಾರು 5.3 ಕೋಟಿ ರೂ. ಪ್ರೋತ್ಸಾಹ ಧನವನ್ನು ವಿತರಿಸಲು ಉದ್ದೇಶಿಸಲಾಗಿದೆ. ಇದೇ ವೇಳೆ ಹೊಸದಾಗಿ ನೇಮಕಗೊಂಡ ಉದ್ಯೋಗಿಗಳಿಗೆ ನೇಮಕಾತಿ ಪತ್ರಗಳನ್ನೂ ಸಾಂಕೇತಿಕವಾಗಿ ವಿತರಿಸಲಾಗುವುದು.

ಇಪಿಎಫ್‌ಒ ಮಂಗಳೂರು ಪ್ರಾದೇಶಿಕ ಸಹಾಯಕ ಆಯುಕ್ತ ಅಂಕಿತ್ ಸಿಂಗ್, ಅಧಿಕಾರಿಗಳಾದ ಅನಿತಾ, ಯು. ಪಾಂಡುರಂಗ ಕಿಣಿ ಉಪಸ್ಥಿತರಿದ್ದರು.

ಇಳಿಮುಖದ ಹಾದಿಯಲ್ಲಿ ಕೊರಗ ಸಮುದಾಯದ ಜನಸಂಖ್ಯೆ | ದ.ಕ.ದಲ್ಲಿ ಕೇವಲ 4290
ಅಳಿವಿನಂಚಿನಲ್ಲಿದೆ ಮೂಲ ನಿವಾಸಿಗಳ ಬದುಕು!

ಮಂಗಳೂರು: ಬುಡಕಟ್ಟು ಸಂಸ್ಕೃತಿಯನ್ನು ಇಂದಿಗೂ ಅಳವಡಿಸಿಕೊಂಡು ಬರುತ್ತಿರುವ ಕರಾವಳಿಯ ಮೂಲ ನಿವಾಸಿಗಳಾದ ಕೊರಗ ಸಮುದಾಯದ ಜನಸಂಖ್ಯೆ ದಿನದಿಂದ ದಿನಕ್ಕೆ ಇಳಿಮುಖದತ್ತ ಸಾಗುತ್ತಿದೆಯೇ?.

ಹೌದೆನ್ನುತ್ತಿವೆ ಇಲಾಖಾ ಅಂಕಿ ಅಂಶಗಳು.

ಪ್ರಸಕ್ತನಡೆಯುತ್ತಿರುವಇಲಾಖಾಸಮೀಕ್ಷೆಯಲ್ಲಿ ದೊರೆತ ಮಾಹಿತಿಯಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1118 ಕೊರಗ ಕುಟುಂಬಗಳಿದ್ದು, ಒಟ್ಟು ಜನಸಂಖ್ಯೆ 4290 ಎಂದು ಅಂದಾಜಿಸಲಾಗಿದೆ. 2011ರ ಜನಸಂಖ್ಯೆಯ ಆಧಾರದಲ್ಲಿ ಈ ಸಮುದಾಯದ ಸಂಖ್ಯೆ 4858 ಆಗಿತ್ತು.

2023-24ನೇ ಸಾಲಿನಲ್ಲಿ ಪ್ರಧಾನ ಮಂತ್ರಿ ಜನ್ ಮನ್ ಕಾರ್ಯಕ್ರಮದ ನಿಮಿತ್ತ ದೇಶದಲ್ಲಿನ ಪಿವಿಟಿಜಿ ಸಮುದಾಯಗಳ ಸಾಮಾಜಿಕ ಆರ್ಥಿಕ ಪರಿಸ್ಥಿತಿ ಸುಧಾರಿಸಲು ನಡೆದ ಸಮೀಕ್ಷೆಯ ಪ್ರಕಾರ ಅಂದಾಜು 4500 ಕೊರಗ ಜನಸಂಖ್ಯೆಯನ್ನು ಗುರುತಿಸಲಾಗಿತ್ತು. ಕಳೆದೆರಡು ವರ್ಷಗಳಿಂದೀಚೆಗೆ ಮತ್ತಷ್ಟು ಜನಸಂಖ್ಯೆ ಇಳಿಕೆಯಾಗಿದೆ ಎನ್ನಲಾಗುತ್ತಿದೆ. ಸಮುದಾಯದಲ್ಲಿ ಜನನ ಪ್ರಮಾಣಕ್ಕಿಂತ ಮರಣ ಪ್ರಮಾಣವೇ ಅಧಿಕವಿರುವುದು ಆತಂಕದ ವಿಚಾರವಾಗಿದೆ.

ಪಿವಿಟಿಜಿಎಸ್ ಸಮೀಕ್ಷೆ

ಕೇಂದ್ರದ ಸರಕಾರದ ಬುಡಕಟ್ಟು ಸಚಿವಾಲಯದ ನಿರ್ದೇಶನದ ಮೇರೆಗೆ ಕರ್ನಾಟಕದ ದುರ್ಬಲ ಬುಡಕಟ್ಟು ಗುಂಪು (ಪಿವಿಟಿಜಿಎಸ್) ಎಂದು ಗುರುತಿಸಲಾಗಿರುವ ಕೊರಗ ಹಾಗೂ ಜೇನುಕುರುಬ ಸಮುದಾಯಗಳ ಸಮೀಕ್ಷೆ ಇತ್ತೀಚೆಗೆ ನಡೆಸಲಾಗಿದೆ. ಈ ಸಮೀಕ್ಷೆಯಲ್ಲಿ ಜಿಲ್ಲೆಯಲ್ಲಿ ಕೊರಗ ಸಮುದಾಯದ ಜನಸಂಖ್ಯೆ ಇಳಿಕೆಯ ಹಾದಿ ಹಿಡಿದಿರುವುದು ಸ್ಪಷ್ಟವಾಗಿದೆ.

ಪುರುಷರ ಸಂಖ್ಯೆ ಕಡಿಮೆ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇತ್ತೀಚೆಗೆ ನಡೆಸಲಾದ ಸಮೀಕ್ಷೆ ಪ್ರಕಾರ ಪುರುಷರ ಸಂಖ್ಯೆ ಮಹಿಳೆಯರಿಗಿಂತ ಕಡಿಮೆ ಇದೆ. ಸಮುದಾಯದ ಒಟ್ಟು ಜನಸಂಖ್ಯೆ 4290ರಲ್ಲಿ 2242 ಮಹಿಳೆಯರು ಮತ್ತು 1215 ಪುರುಷರಿದ್ದಾರೆ. ಪಿವಿಟಿಜಿ ಗುಂಪುಗಳಿಗೆ ರಾಜ್ಯ ಸರ್ಕಾರದಿಂದ ನೀಡುವ ಆಹಾರ ಕಿಟ್‌ನ ಪ್ರಕಾರ ಫೆಬ್ರವರಿ ತಿಂಗಳವರೆಗೆ 1215 ಕೊರಗ ಕುಟುಂಬಗಳಿದ್ದವು. ಇತ್ತೀಚೆಗೆ ನಡೆದ ಸಮೀಕ್ಷೆಯಲ್ಲಿ ಕೆಲ ಕುಟುಂಬಗಳ ಮಾಹಿತಿಗಳು ಲಭ್ಯವಾಗಿಲ್ಲ. ಅಂತಹ ಕುಟುಂಬಗಳಿಂದ ದಾಖಲೆಗಳು ಲಭ್ಯವಿದ್ದಲ್ಲಿ ಅದನ್ನು ಪಡೆಯುವ ಪ್ರಯತ್ನ ನಡೆಯುತ್ತಿದೆ ಎನ್ನುತ್ತಾರೆ ಐಟಿಡಿಪಿ ಅಧಿಕಾರಿಗಳು.

ಸಂಗ್ರಹ ಚಿತ್ರ



ಕೊರಗರ ಭೂಮಿ ಹಬ್ಬ ಸಂಭ್ರಮದಲ್ಲಿ ಕೊರಗ ಸಮುದಾಯದ ಮಂದಿ

ಸ್ಥಗಿತಗೊಂಡಿದೆ ಆಹಾರ ಕಿಟ್!

ರಾಜ್ಯದಲ್ಲಿ ಜೇನುಕುರುಬ, ಮಲೆಕುಡಿಯ, ಕೊರಗ ಸೇರಿದಂತೆ ಅಳಿವಿನಂಚಿನಲ್ಲಿರುವ ಬುಡಕಟ್ಟು ಸಮುದಾಯ(ಪಿವಿಟಿಜಿ)ಗಳಿಗೆ ಪ್ರತಿ ತಿಂಗಳು ಪೂರೈಕೆ ಮಾಡಲಾಗುತ್ತಿದ್ದ ಪೌಷ್ಟಿಕ ಆಹಾರದ ಪೂರೈಕೆ ಜನವರಿಯಿಂದ ಸ್ಥಗಿತಗೊಂಡಿದೆ. ಆಹಾರ ಕಿಟ್ ಪೂರೈಕೆ ಮಾಡುತ್ತಿದ್ದ ಗುತ್ತಿಗೆದಾರರ ಟೆಂಡರ್ ಅವಧಿ ಮುಗಿದಿದ್ದು, ಹೊಸ ಟೆಂಡರ್ ಪ್ರಕ್ರಿಯೆ ಆಗುವವರೆಗೆ ಈ ಸಮುದಾಯದ ಮಂದಿ ಆಹಾರ ಕಿಟ್‌ಗಾಗಿ ಕಾಯಬೇಕಿದೆ.

ದ.ಕ, ಉಡುಪಿ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಭಾಗದಲ್ಲಿ ಒಟ್ಟು ಸುಮಾರು 14000ದಷ್ಟು ಕೊರಗ ಸಮುದಾಯದವರಿದ್ದಾರೆ. ಆದರೆ ತುಸು ಹೆಚ್ಚು ಇರುವುದು ಉಡುಪಿ ಮತ್ತು ದ.ಕ. ಜಿಲ್ಲೆಯಲ್ಲಿಯೇ. ಉಳಿದ ಜಿಲ್ಲೆಗಳಲ್ಲಿ ಬೆರಳೆಣಿಕೆಯ ಕುಟುಂಬಗಳಿವೆ. ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆ (ಐಟಿಡಿಪಿ) ಇಲಾಖೆಯ ಪ್ರಕಾರ 2011ರ ಜನಸಂಖ್ಯೆಯ ಆಧಾರದಲ್ಲಿ ದ.ಕ. ಜಿಲ್ಲೆಯಲ್ಲಿ 4858, ಉಡುಪಿ ಜಿಲ್ಲೆಯಲ್ಲಿ 9000 ಮಂದಿ ಕೊರಗರಿದ್ದರು. ಆದರೆ 2021ರ ಅಂಕಿ ಅಂಶಗಳ ಪ್ರಕಾರ ಅದು 4300ಕ್ಕೆ ಇಳಿಕೆಯಾಗಿದೆ. ಉಡುಪಿಯಲ್ಲಿ ಸುಮಾರು 8500ರಷ್ಟು ಜನಸಂಖ್ಯೆಯಿದೆ.

ದ.ಕ. ಜಿಲ್ಲೆಯಲ್ಲಿ ಕೊರಗ ಸಮುದಾಯದ ಜನಸಂಖ್ಯೆ

ತಾಲೂಕು	ಪುರುಷರು	ಮಹಿಳೆಯರು
ಮಂಗಳೂರು	826	978
ಮುಲ್ಕಿ	304	338
ಬಂಟ್ವಾಳ	218	233
ಮೂಡುಬಿದಿರೆ	241	244
ಬೆಳ್ತಂಗಡಿ	170	169
ಪುತ್ತೂರು	120	113
ಉಳ್ಳಾಲ	80	92
ಸುಳ್ಯ	55	44
ಕಡಬ	34	31
ಒಟ್ಟು	2048	2242

ಪಿಎಚ್‌ಡಿ ಪಡೆದಿದ್ದಾರೆ 4 ಮಂದಿ

ಕೊರಗ ಸಮುದಾಯದಲ್ಲಿ ಈ ವರೆಗೆ ಡಾ.ಬಾಬು ಬೆಳ್ತಂಗಡಿ, ಡಾ.ಸಬಿತಾ, ಡಾ.ದಿನಕರ್, ಡಾ.ಕಲಾವತಿ ಸೇರಿದಂತೆ ನಾಲ್ಕು ಮಂದಿ ಪಿಎಚ್‌ಡಿ ಪದವಿ ಪಡೆದವರಿದ್ದಾರೆ. ಮೂರು ಮಂದಿ ಅಧ್ಯಯನ ನಡೆಸುತ್ತಿದ್ದಾರೆ. ಅವಿಭಜಿತ ದ.ಕ. ಜಿಲ್ಲೆಯಲ್ಲಿ ಸುಮಾರು 40 ಮಂದಿ ಸ್ನಾತಕೋತ್ತರ ಪದವೀಧರರು ಸೇರಿದಂತೆ ಸುಮಾರು 140 ಮಂದಿ ಪದವೀಧರರಿದ್ದಾರೆ.

ನಿರುದ್ಯೋಗ ಭತ್ಯೆ

ಸರ್ಕಾರ ಕೊರಗ ಸಮುದಾಯದ ವಿದ್ಯಾವಂತ ನಿರುದ್ಯೋಗಿಗಳಿಗೆ ಭತ್ಯೆ ನೀಡುವ ಮೂಲಕ ಪ್ರೋತ್ಸಾಹಿಸುತ್ತಾ ಬಂದಿದೆ. ದ.ಕ. ಜಿಲ್ಲೆಯಲ್ಲಿ 2018ರಿಂದ 2023ನೇ ಸಾಲಿನವರೆಗೆ 171 ಮಂದಿ ಈ ಪ್ರಯೋಜನ ಪಡೆದಿದ್ದಾರೆ. ಐಟಿಡಿಪಿ ಇಲಾಖೆಯ ಮಾಹಿತಿಯಂತೆ ಈ ಅವಧಿಯಲ್ಲಿ ಎಸ್ಸೆಸ್ಸೆಲ್ಸಿ ಉತ್ತೀರ್ಣರಾದವರಿಗೆ ತಲಾ 2000 ರೂ.ನಂತೆ 68 ಮಂದಿ, ಪಿಯುಸಿ ಉತ್ತೀರ್ಣರಾದವರಿಗೆ ತಲಾ 2500 ರೂ.ನಂತೆ 61 ಮಂದಿ, ಪದವಿ ಪೂರೈಸಿದವರಿಗೆ ತಲಾ 3500 ರೂ.ನಂತೆ 30 ಮಂದಿ, ಸ್ನಾತಕೋತ್ತರ ಪದವಿ ಪೂರೈಸಿದ 12 ಮಂದಿಗೆ ತಲಾ 4500 ರೂ.ನಂತೆ ನಿರುದ್ಯೋಗಿ ಜೀವನ ಭತ್ಯೆ ವಿತರಿಸಲಾಗಿದೆ.

ನವೀಕರಣಕ್ಕಾಗಿ ಗ್ರಾಮ ಪಂಚಾಯತ್‌ನಿಂದ 1.50 ಕೋಟಿ ರೂ. ಮೀಸಲು
ತಟ್ಟುಮಲ್ ಕ್ರೀಡಾಂಗಣ ಶೀಘ್ರ ಉದ್ಘಾಟನೆಯತ್ತ



ಕಾಸರಗೋಡು: ಕೋಡೋಂ ಬೇಳೂರು ಗ್ರಾಮ ಪಂಚಾಯತ್‌ನ ವ್ಯಾಪ್ತಿಯಲ್ಲಿರುವ ತಟ್ಟುಮಲ್ ಕ್ರೀಡಾಂಗಣವು ಉದ್ಘಾಟನೆಯತ್ತ ಹೆಜ್ಜೆ ಇಡುತ್ತಿದೆ. ಕ್ರೀಡಾಂಗಣದ ನವೀಕರಣಕ್ಕಾಗಿ ಗ್ರಾಮ ಪಂಚಾಯತ್ ಆಡಳಿತವು 1.50 ಕೋಟಿ ರೂ.ಗಳನ್ನು ಮೀಸಲಿರಿಸಿದೆ.

ಲೋಕೋಪಯೋಗಿ ಇಲಾಖೆಯ ವಾಸ್ತುಶಿಲ್ಪ ವಿಭಾಗದ ಉಪ ವಾಸ್ತುಶಿಲ್ಪಿ ಸಿ.ಸುನಿ, ಲೋಕೋಪಯೋಗಿ ಇಲಾಖೆಯ ಕಟ್ಟಡ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಪಿ.ಪ್ರಕಾಶನ್, ಲೋಕೋಪಯೋಗಿ ಇಲಾಖೆಯ ಕಟ್ಟಡ ವಿಭಾಗದ ಸಹಾಯಕ ಇಂಜಿನಿಯರ್ ಬೆನ್ನಿ ಜೋಸೆಫ್ ಮತ್ತು ಇತರ ಪಂಚಾಯತ್ ಅಧಿಕಾರಿಗಳು ಕ್ರೀಡಾಂಗಣದ ವಿನ್ಯಾಸವನ್ನು ಅಂತಿಮಗೊಳಿಸಲು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಕೋಡೋಂಬೇಳೂರು ಗ್ರಾಮ ಪಂಚಾಯತ್ ಅಧ್ಯಕ್ಷ ಟಿ.ವಿ.ಜಯಚಂದ್ರನ್, ಜಿಲ್ಲಾ ಕ್ರೀಡಾ ಮಂಡಳಿ ಅಧ್ಯಕ್ಷ ಪಿ.ರಘುನಾಥ್, ಪಂಚಾಯತ್ ಅಭಿವೃದ್ಧಿ ಸ್ಥಾಯೀ ಸಮಿತಿ ಅಧ್ಯಕ್ಷ ಸುರೇಶ್ ವಯಾಂಪ್, ಪಂಚಾಯತ್ ಸದಸ್ಯ ಟಿ.ಕೃಷ್ಣನ್, ಪಂಚಾಯತ್ ಮಾಜಿ ಉಪಾಧ್ಯಕ್ಷ ಪಿ.ದಾಮೋದರನ್, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಶಿನೋಜ್ ಚಾಕೋ, ಪಂಚಾಯತ್ ಮಾಜಿ ಸ್ಥಾಯೀ ಸಮಿತಿ ಅಧ್ಯಕ್ಷೆ ಜಯಶ್ರೀ ಎನ್.ಎಸ್., ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳಾದ ಎಚ್.ನಾಗೇಶ್, ರಾಮಚಂದ್ರನ್ ಮತ್ತು ವರ್ಗೀಸ್ ಭಾಗವಹಿಸಿದ್ದರು.

ತಟ್ಟುಮಲ್ ಕ್ರೀಡಾಂಗಣದಲ್ಲಿ ಅಂತಾರಾಷ್ಟ್ರೀಯ ಗುಣಮಟ್ಟದ ಫುಟ್ಬಾಲ್ ಮೈದಾನ, ಗ್ಯಾಲರಿ, ಆಡಳಿತ ಕಚೇರಿ, ಸಿಂಥೆಟಿಕ್ ಟ್ರ್ಯಾಕ್ ಮತ್ತು ಶೌಚಾಲಯಗಳನ್ನು ನಿರ್ಮಿಸಲು ಯೋಜನೆ ರೂಪಿಸಲಾಗಿದೆ.

ಆ. 1ರಂದು ಭ್ರಾಮರಿ ಯಕ್ಷ ವೈಭವ -2026 | ಯಕ್ಷಗಾನ ಪ್ರದರ್ಶನ
ಹಿರಿಯ ಯಕ್ಷಗಾನ ಕಲಾವಿದ ಕೆ.ಎಚ್. ದಾಸಪ್ಪ ರೈಗೆ ಭ್ರಾಮರೀ ಯಕ್ಷಮಣಿ ಪ್ರಶಸ್ತಿ



ಮಂಗಳೂರು: ಭ್ರಾಮರೀ ಯಕ್ಷಮಿತ್ರರು ಮಂಗಳೂರು ಟ್ರಸ್ಟ್ ವತಿಯಿಂದ ನೀಡಲಾಗುವ ಭ್ರಾಮರೀ ಯಕ್ಷಮಣಿ ಪ್ರಶಸ್ತಿಗೆ ಹಿರಿಯ ಯಕ್ಷಗಾನ ಕಲಾವಿದ ಕೆ.ಎಚ್. ದಾಸಪ್ಪ ರೈ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ಹದಿನೈದು ಸಾವಿರ ರೂ. ನಗದು, ಪ್ರಶಸ್ತಿ ಪತ್ರ, ಬೆಳ್ಳಿಯ ಪದಕವನ್ನು ಒಳಗೊಂಡಿರುತ್ತದೆ. ಆಗಸ್ಟ್ 1 ರಂದು ಸಂಜೆ 7 ರಿಂದ ಮಂಗಳೂರಿನ ಕುದ್ಮಲ್ ರಂಗರಾವ್ ಪುರಭವನದಲ್ಲಿ ನಡೆಯುವ ಭ್ರಾಮರೀ ಯಕ್ಷವೈಭವ 2026ರಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ತನ್ನ 15ನೇ ವಯಸ್ಸಿನಲ್ಲಿ ಯಕ್ಷಗಾನ ರಂಗವನ್ನು ಪ್ರವೇಶ ಮಾಡಿದ ಕೆ.ಎಚ್. ದಾಸಪ್ಪರೈ ಅವರು ಆರು ದಶಕಗಳಿಂದಲೂ ಅಧಿಕ ವರ್ಷಗಳಿಂದ ಯಕ್ಷಗಾನ ಕ್ಷೇತ್ರದಲ್ಲಿ ಗುರುತಿಸಿಕೊಂಡ ಹಿರಿಯ ಕಲಾವಿದರು. ಕರ್ನಾಟಕ ಮೇಳ, ಕದ್ರಿ ಮೇಳ, ಕುಂಬಳೆ ಕಣಿಪುರ ಮೇಳ, ಮಂಗಳಾದೇವಿ ಮೇಳ ಸಹಿತ ದೇಶ ವಿದೇಶದಲ್ಲಿ ಪ್ರದರ್ಶನ ನೀಡಿದ ಹಿರಿಯ ಕಲಾವಿದರು. ಕೋಟಿ ಚೆನ್ನಯ ಯಕ್ಷಗಾನದ ಕೋಟಿ, ಕಾಡಮಲ್ಲಿಗೆ ಯಕ್ಷಗಾನದ ಮೈಂದ ಗುರಿಕಾರೆ ಪಾತ್ರದ ಮೂಲಕ ಯಕ್ಷಾಭಿಮಾನಿಗಳನ್ನು ಸೆಳೆದವರು. ಯಕ್ಷಗಾನ ಕಲಾವಿದ ಮಾತ್ರವಲ್ಲದೆ ಸ್ವತಃ ಮೇಳ ನಡೆಸಿ ಮೇಳದ ಯಜಮಾನರಾಗಿಯೂ ಗುರುತಿಸಿಕೊಂಡವರು.

ಭ್ರಾಮರೀ ಯಕ್ಷಸೇವಾ ಪುರಸ್ಕಾರ

ಕಳೆದ ಮೂರು ದಶಕಗಳಿಂದ ಯಕ್ಷಗಾನದ ನೇಪಥ್ಯ ಕಲಾವಿದರಾಗಿ ಗುರುತಿಸಿಕೊಂಡಿರುವ ಮೋನಪ್ಪ ಗೌಡ ಹಾಗೂ ಕಳೆದ 90 ವರ್ಷಕ್ಕೂ ಅಧಿಕ ಕಾಲದಿಂದ ನಿರಂತರವಾಗಿ ಯಕ್ಷಗಾನ ತಾಳಮದ್ದಳೆ ಆಯೋಜಿಸಿಕೊಂಡು, ಯಕ್ಷಗಾನ ತರಬೇತಿಯನ್ನು ನಡೆಸುತ್ತಿರುವ ಮುಡಿಪು ಕುರ್ನಾಡಿನ ಶ್ರೀ ದತ್ತಾತ್ರೇಯ ಯಕ್ಷಗಾನ ಮತ್ತು ಭಜನಾಮಂಡಳಿ ಸಂಸ್ಥೆಗೆ ಈ ಬಾರಿಯ ಭ್ರಾಮರೀ ಯಕ್ಷಸೇವಾ ಪುರಸ್ಕಾರ ನೀಡಿ ಗೌರವಿಸಲಾಗುವುದು. ಭ್ರಾಮರೀ ಯಕ್ಷಸೇವಾ ಪುರಸ್ಕಾರ ತಲಾ ಆರು ಸಾವಿರ ರೂ. ನಗದು ಮತ್ತು ಪ್ರಶಸ್ತಿ ಪತ್ರವನ್ನು ಒಳಗೊಂಡಿದೆ.

ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಹಿರಿಯ ಯಕ್ಷಗಾನ ಅರ್ಥಧಾರಿ ಜಿ.ಕೆ. ಭಟ್ ಸೇರಾಜೆ, ಶಾಸಕ ವೇದವ್ಯಾಸ ಕಾಮತ್, ಎಸ್.ಸಿ.ಡಿ.ಸಿ.ಸಿ. ಬ್ಯಾಂಕ್ ನಿರ್ದೇಶಕ ಟಿ.ಜಿ. ರಾಜಾರಾಮ್ ಭಟ್, ಕಲ್ಕೂರ ಪ್ರತಿಷ್ಠಾನ ಅಧ್ಯಕ್ಷ ಪ್ರದೀಪ ಕುಮಾರ ಕಲ್ಕೂರ, ಉದ್ಯಮಿ ರಾಜಶೇಖರ ಕೋಟ್ಯಾನ್, ಪುಳಿಂಚ ಸೇವಾ ಪ್ರತಿಷ್ಠಾನ ಅಧ್ಯಕ್ಷ ಶ್ರೀಧರ ಶೆಟ್ಟಿ ಪುಳಿಂಚ ಭಾಗವಹಿಸಲಿದ್ದಾರೆ. ಸಭಾ ಕಾರ್ಯಕ್ರಮದ ನಂತರ ಇಡೀ ರಾತ್ರಿ ತೆಂಕುತಿಟ್ಟಿನ ಪ್ರಸಿದ್ಧ ಕಲಾವಿದರ ಒಗ್ಗೂಡುವಿಕೆಯಲ್ಲಿ ಅಂಬಾ ಶಪಥ, ಲಕ್ಷ್ಮೀ ಸ್ವಯಂವರ, ತಾಮ್ರಧ್ವಜ ಕಾಳಗ ಯಕ್ಷಗಾನ ಉಚಿತವಾಗಿ ಪ್ರದರ್ಶನಗೊಳ್ಳಲಿದೆ ಎಂದು ಸಂಘಟಕರ ಪ್ರಕಟಣೆ ತಿಳಿಸಿದೆ.

ಬೆಂಗಳೂರಿನ ಹೆಗ್ಗುಂಜೆ ರಾಜೀವ ಶೆಟ್ಟಿ ಚಾರಿಟೇಬಲ್ ಟ್ರಸ್ಟ್‌ನ ನೇತೃತ್ವ
ಸಮವಸ್ತ್ರ ವಿತರಣೆ, ವೆಬ್‌ಸೈಟ್ ಅನಾವರಣ

ಮಂಗಳೂರು: ಬೆಂಗಳೂರಿನ ಹೆಗ್ಗುಂಜೆ ರಾಜೀವ ಶೆಟ್ಟಿ ಚಾರಿಟೇಬಲ್ ಟ್ರಸ್ಟ್‌ನ ವತಿಯಿಂದ ಉಡುಪಿ ಜಿಲ್ಲಾ ಅನುದಾನಿತ ಶಾಲಾ ಸಂಘಗಳ ಸಹಕಾರದೊಂದಿಗೆ, ಉಡುಪಿ ಜಿಲ್ಲೆಯ 200 ಅನುದಾನಿತ ಶಾಲೆಗಳ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ 20,000 ಜೊತೆ ಶಾಲಾ ಸಮವಸ್ತ್ರಗಳ ಉಚಿತ ವಿತರಣೆ ಹಾಗೂ ಹೆಗ್ಗುಂಜೆ ರಾಜೀವ ಶೆಟ್ಟಿ ವಿದ್ಯಾಪೋಷಕ ಪ್ರಶಸ್ತಿ ಪ್ರದಾನ ಮತ್ತು ವೆಬ್‌ಸೈಟ್ ಅನಾವರಣ ಕಾರ್ಯಕ್ರಮವನ್ನು ಜೂ. 20ರಂದು ಬೆಳಿಗ್ಗೆ 10.30ಕ್ಕೆ ಉಡುಪಿ ಶಾರದಾ ಮಂಟಪ ರಸ್ತೆಯ ಯಕ್ಷಗಾನ ಕಲಾರಂಗದ ಐವೈಸಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಕಾರ್ಯಕ್ರಮವನ್ನು ಉಡುಪಿ- ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಸದಸ್ಯ ಕೋಟ ಶ್ರೀನಿವಾಸ ಪೂಜಾರಿ ಅವರು ಉದ್ಘಾಟಿಸಲಿದ್ದಾರೆ. ಸಮಾರಂಭದ ಅಧ್ಯಕ್ಷತೆಯನ್ನು ಉಡುಪಿ ಶಾಸಕ ಯಶಪಾಲ್ ಎ.ಸುವರ್ಣ ಅವರು ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಉಡುಪಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹರಿರಾಮ್ ಶಂಕರ್ ಭಾಗವಹಿಸಲಿದ್ದಾರೆ. ವೆಬ್‌ಸೈಟ್ ಅನಾವರಣವನ್ನು ಉಡುಪಿಯ ಮಾನವ ಹಕ್ಕುಗಳ ರಕ್ಷಣಾ ಪ್ರತಿಷ್ಠಾನದ ಅಧ್ಯಕ್ಷ ಡಾ.ರವೀಂದ್ರನಾಥ ಶಾನುಭಾಗ್ ಅವರು ನೆರವೇರಿಸಲಿದ್ದಾರೆ.

ಸಮಾಜ ಸೇವಕ ಹಾಗೂ ಉಡುಪಿ ಯಕ್ಷಗಾನ ಕಲಾರಂಗದ ಕಾರ್ಯದರ್ಶಿ ಮುರಳಿ ಕಡೆಕಾರ್, ಉಡುಪಿ ಜಿಲ್ಲಾ ಅನುದಾನಿತ ಪ್ರೌಢಶಾಲೆಗಳ ನೌಕರರ ಸಂಘದ ಅಧ್ಯಕ್ಷ ಡಾ.ಜಯಶೀಲ ಶೆಟ್ಟಿ ಕಂದಾವರ, ಉಡುಪಿ ಜಿಲ್ಲಾ ಪ್ರಾಥಮಿಕ ಅನುದಾನಿತ ಶಾಲಾ ಸಂಘದ ಅಧ್ಯಕ್ಷ ಕೆ.ಅರುಣ್ ಕುಮಾರ್ ಶೆಟ್ಟಿ ಅವರ ಉಪಸ್ಥಿತಿ ಇರಲಿದೆ.

ಈ ಸಂದರ್ಭ, ಹೆಗ್ಗುಂಜೆ ರಾಜೀವ ಶೆಟ್ಟಿ ವಿದ್ಯಾಪೋಷಕ ಪ್ರಶಸ್ತಿಯನ್ನು ನಿವೃತ್ತ ಪ್ರಾಧ್ಯಾಪಕ ಹಾಗೂ ಪರಿಸರ ಮತ್ತು ಕೃಷಿ ಲೇಖಕರಾದ ಎನ್. ನರೇಂದ್ರ ರೈ ದೇರ್ಲ ಅವರಿಗೆ ಪ್ರದಾನ ಮಾಡಲಾಗುವುದು ಎಂದು ಬೆಂಗಳೂರಿನ ಹೆಗ್ಗುಂಜೆ ರಾಜೀವ ಶೆಟ್ಟಿ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಡಾ.ಎಚ್.ಎಸ್.ಶೆಟ್ಟಿ ಅವರು ತಿಳಿಸಿದ್ದಾರೆ.

ಟ್ರಸ್ಟ್ ಬಗ್ಗೆ...

ಹೆಗ್ಗುಂಜೆ ರಾಜೀವ ಶೆಟ್ಟಿ ಚಾರಿಟೇಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ.ಎಚ್.ಎಸ್.ಶೆಟ್ಟಿ ಅವರು ಬೆಂಗಳೂರಿನಲ್ಲಿ ಉದ್ಯಮಿಯಾಗಿದ್ದು, ಅವರು ಶಿಕ್ಷಕರಾಗಿದ್ದ ತಮ್ಮ ತಂದೆಯವರಾದ ಹೆಗ್ಗುಂಜೆ ರಾಜೀವ ಶೆಟ್ಟಿ ಅವರು ಶಿಕ್ಷಣ ಕ್ಷೇತ್ರಕ್ಕೆ ನೀಡಿದ ನಿಸ್ವಾರ್ಥ ಕೊಡುಗೆಯ ಸ್ಮರಣೆಗಾಗಿ ಸಾಮಾಜಿಕ ಕಳಕಳಿಯೊಂದಿಗೆ ನಿರಂತರವಾಗಿ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಬಂದಿದ್ದಾರೆ. ಕುಂದಾಪುರ ತಾಲೂಕಿನ ಜನ್ನಾಡಿ ಮತ್ತು ಮಣಿಗೇರಿ ಕಾಲೋನಿಗಳಲ್ಲಿ ಕೊರಗರಿಗೆ ಉಚಿತ ಮನೆಗಳನ್ನು ನಿರ್ಮಿಸಿ ಅವರ ಬದುಕಿಗೆ ಬೆಳಕು ನೀಡುವ ಸೇವಾ ಕಾರ್ಯಗಳನ್ನು ನಡೆಸುತ್ತಿದ್ದಾರೆ. ಈಗಾಗಲೇ ಹಲವು ಮನೆಗಳನ್ನು ನಿರ್ಮಿಸಿ ಫಲಾನುಭವಿಗಳಿಗೆ ಒದಗಿಸಲಾಗಿದ್ದು, ಒಟ್ಟು 108 ಮನೆಗಳನ್ನು ನಿರ್ಮಿಸಲು ಅವರು ಯೋಜನೆ ರೂಪಿಸಿದ್ದಾರೆ.

ಲೈಟ್ಸ್ ಆ್ಯಂಡ್ ಸೌಂಡ್ಸ್ ಚಪ್ಪರ ಡೆಕೋರೇಷನ್ ಮಜ್ದೂರ್ ಸಂಘ ಸಮಾವೇಶ
ಕಾರ್ಮಿಕರ ಸಮಸ್ಯೆ ಪರಿಹರಿಸಲು ಆಗ್ರಹ

ಕಾಸರಗೋಡು: ರಾಜ್ಯದಲ್ಲಿ ಸುಮಾರು ಮೂರು ಲಕ್ಷಕ್ಕಿಂತಲೂ ಮೇಲ್ಪಟ್ಟ ಲೈಟ್ಸ್ ಆ್ಯಂಡ್ ಸೌಂಡ್ಸ್ ಡೆಕೋರೇಷನ್ ವಲಯದ ಕಾರ್ಮಿಕರು ಸಂಕಷ್ಟ ಅನುಭವಿಸುತ್ತಾರೆ ಎಂದು ಭಾರತೀಯ ಲೈಟ್ಸ್ ಆ್ಯಂಡ್ ಸೌಂಡ್ಸ್ ಚಪ್ಪರ ಡೆಕೋರೇಷನ್ ಮಜ್ದೂರ್ ಸಂಘ (ಬಿಎಂಎಸ್)ದ ಕಾಸರಗೋಡು ಜಿಲ್ಲಾ ಸಮ್ಮೇಳನದಲ್ಲಿ ತಿಳಿಸಲಾಗಿದೆ.

ರಾತ್ರಿ ಹಗಲೆನ್ನದೆ ಈ ವಲಯದಲ್ಲಿ ಕೆಲಸ ಮಾಡುವ ಕಾರ್ಮಿಕರು ಅದೆಷ್ಟೋ ಭಾರವಾದ ವಸ್ತುಗಳನ್ನು ಏರಿಸುವುದು ಮತ್ತು ಇಳಿಸುವುದರಿಂದ ಆರೋಗ್ಯ ಸಮಸ್ಯೆಯೂ ಉಂಟಾಗುತ್ತದೆ. ಅಲ್ಲದೆ ವಿದ್ಯುತ್ ಸಂಪರ್ಕವಿರುವ ಸಮಯದಲ್ಲಿ ಎತ್ತರದ ಪ್ರದೇಶಗಳಲ್ಲಿ ಲೈಟ್ಸ್ ಹಾಗೂ ಇನ್ನಿತರ ವಸ್ತುಗಳನ್ನು ಅಳವಡಿಸಬೇಕಾಗಿ ಬರುತ್ತದೆ. ಹೀಗೆ ಅಳವಡಿಸುವ ಸಮಯದಲ್ಲಿ ಅವಘಡಗಳು ಬರುವುದು ಸಹಜ ಎಂದು ಸಮಾವೇಶದಲ್ಲಿ ಉಲ್ಲೇಖಿಸಲಾಯಿತು.

ಈ ವಲಯದ ಕಾರ್ಮಿಕರೆಲ್ಲರೂ ಅಸಂಘಟಿತರಾಗಿ ದುಡಿಯುವವರಾಗಿದ್ದರಿಂದ ಇಪಿಎಫ್, ಇಎಸ್‌ಐ ಮುಂತಾದ ಯಾವುದೇ ಸೌಲಭ್ಯಕ್ಕೆ ಅರ್ಹರಲ್ಲ. ಆದ್ದರಿಂದ ಸರಕಾರವು ಇಂತಹ ಕಾರ್ಮಿಕರಿಗೆ ಪ್ರತ್ಯೇಕ ಪ್ಯಾಕೇಜ್‌ನೊಂದಿಗೆ ಇನ್ಶೂರೆನ್ಸ್ ಅಂಗೀಕರಿಸಿ ಒದಗಿಸಬೇಕೆಂದು ಸಮ್ಮೇಳನದಲ್ಲಿ ಒತ್ತಾಯಿಸಲಾಗಿದೆ.



ಸಮ್ಮೇಳನವನ್ನು ಬಿಎಂಎಸ್ ಜಿಲ್ಲಾಧ್ಯಕ್ಷ ಉಪೇಂದ್ರನ್ ಕೋಟೆಕಣಿ ಉದ್ಘಾಟಿಸಿದರು. ಸಂಘಟನೆಯ ಜಿಲ್ಲಾಧ್ಯಕ್ಷ ಪುಷ್ಪರಾಜ್ ಕೊರಕೋಡು ಅಧ್ಯಕ್ಷತೆ ವಹಿಸಿದ್ದರು. ಬಿಎಂಎಸ್ ಜಿಲ್ಲಾ ಜೊತೆ ಕಾರ್ಯದರ್ಶಿಗಳಾದ ಪಿ.ದಿನೇಶ್ ಬಂಬ್ರಾಣ, ಗುರುದಾಸ್ ಚೇನಕ್ಕೋಡು, ಕಾಸರಗೋಡು ನಗರ ಕಾರ್ಯದರ್ಶಿ ಮನೋಜ್ ಜೆ.ಪಿ.ನಗರ ಮಾತನಾಡಿದರು.

ಸಮಾವೇಶದಲ್ಲಿ ನೂತನ ಸಮಿತಿ ರಚಿಸಲಾಯಿತು. ಅಧ್ಯಕ್ಷರಾಗಿ ಪುಷ್ಪರಾಜ್ ಕೊರಕೋಡು, ಉಪಾಧ್ಯಕ್ಷರಾಗಿ ಮುರಳಿ ಪಾರೆಕಟ್ಟೆ, ಗುರುರಾಜ್ ನಾಯ್ಕಾಪು, ಪ್ರಧಾನ ಕಾರ್ಯದರ್ಶಿಯಾಗಿ ವಿಘ್ನೇಶ್ ಮಧೂರು, ಕಾರ್ಯದರ್ಶಿಯಾಗಿ ಸ್ವಾತಿಕ್ ಕಣ್ಣೂರು, ರಜನಿ ಬದಿಯಡ್ಕ, ಕೋಶಾಧಿಕಾರಿಯಾಗಿ ವಿಜೇಶ್ ಜೆ.ಪಿ.ನಗರ ಹಾಗೂ ಸಮಿತಿ ಸದಸ್ಯರನ್ನು ಆರಿಸಲಾಯಿತು. ವಿಘ್ನೇಶ್ ಮಧೂರು ಸ್ವಾಗತಿಸಿ, ವಿಜೇಶ್ ಜೆ.ಪಿ.ನಗರ ವಂದಿಸಿದರು.

ಊಟದಲ್ಲಿ ಹುಳು: ವಿದ್ಯಾರ್ಥಿಗಳ ಪ್ರತಿಭಟನೆ

ಬೆಳಗಾವಿ: ಊಟ ಮಾಡಲು ಹೋದರೆ ಅಡುಗೆಯಲ್ಲಿ ಹುಳು ಬರುತ್ತದೆ. ಜಳಕಕ್ಕೆ ಹೋದರೆ ನೀರೇ ಬರುವುದಿಲ್ಲ. ಕುಡಿಯಲು ಶುದ್ಧ ನೀರಿನ ವ್ಯವಸ್ಥೆಯೂ ಇಲ್ಲ. ನಲ್ಲಿ ನೀರು ಕುಡಿದು ಆಸ್ಪತ್ರೆಗೆ ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಆರೋಪಿಸಿ ಬೆಳಗಾವಿಯ ಸಂಗಮೇಶ್ವರ ನಗರದ ಬಾಲಕರ ಮೆಟ್ರಿಕ್ ನಂತರದ ವಸತಿ ನಿಲಯದ ವಿದ್ಯಾರ್ಥಿಗಳು ಗುರುವಾರ ವಿದ್ಯಾರ್ಥಿಗಳು ದಿಢೀರ್ ಪ್ರತಿಭಟನೆ ನಡೆಸಿದರು.

ಕಳೆದ ಹಲವು ದಿನಗಳಿಂದ ವಸತಿ ನಿಲಯದಲ್ಲಿ ತೀವ್ರ ನೀರಿನ ಅಭಾವ ಎದುರಾಗಿದ್ದು, ಶುದ್ಧ ಕುಡಿಯುವ ನೀರು ಹಾಗೂ ಮೂಲಭೂತ ಸೌಲಭ್ಯಗಳ ಕೊರತೆಯಿಂದ ವಿದ್ಯಾರ್ಥಿಗಳು ಸಂಕಷ್ಟ ಅನುಭವಿಸುತ್ತಿದ್ದಾರೆ. ಶೌಚಾಲಯ ಬಳಕೆಗೆ ಸಹ ನೀರು ಲಭ್ಯವಾಗುತ್ತಿಲ್ಲ ಎಂದು ವಿದ್ಯಾರ್ಥಿಗಳು ದೂರಿದರು.ವಸತಿ ನಿಲಯದ ಊಟದಲ್ಲಿ ಪದೇ ಪದೇ ಹುಳುಗಳು ಪತ್ತೆಯಾಗುತ್ತಿದ್ದು, ವಿದ್ಯಾರ್ಥಿಗಳ ಆರೋಗ್ಯದ ಬಗ್ಗೆ ಆತಂಕ ಹೆಚ್ಚಾಗಿದೆ.


ರಘು ಕೌಟಿಲ್ಯ, ಲಿಂಗರಾಜ್‌ಗೆ ಅಭಿನಂದನೆ

ಬೆಂಗಳೂರು: ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿಯ ಅಭ್ಯರ್ಥಿಗಳಾದ ರಘು ಕೌಟಿಲ್ಯ ಮತ್ತು ಲಿಂಗರಾಜ್ ಪಾಟೀಲ್ ಗೆಲುವು ಸಾಧಿಸಿದ್ದಾರೆ. ಅವರನ್ನು ಅಭಿನಂದಿಸುವುದಾಗಿ ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ ತಿಳಿಸಿದ್ದಾರೆ.

ವಿಧಾನಸೌಧದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮತದಾನ ಪ್ರಕ್ರಿಯೆಯಲ್ಲಿ ನಮ್ಮ ಮೂರು ಮತಗಳು ಅಡ್ಡಮತದಾನ ಆಗಿವೆ ಎಂಬುದು ಗೊತ್ತಾಗಿದೆ. ಅದನ್ನು ಯಾರು ಮಾಡಿದ್ದಾರೆ ಎಂಬುದು ಗೊತ್ತಾಗುತ್ತದೆ. ಆ ಕುರಿತು ನಮ್ಮ ಪಕ್ಷ ತೀರ್ಮಾನ ತೆಗೆದುಕೊಳ್ಳುತ್ತದೆ ಎಂದು ತಿಳಿಸಿದರು.

ನಮ್ಮದು ಒಂದು ಮತ ಅಸಿಂಧು ಆಗಿದೆ. 30 ಮತಗಳನ್ನು ರಘು ಅವರಿಗೆ ಕೊಟ್ಟಿದ್ದೆವು. ಅದರಲ್ಲಿ ಒಂದು ಮತ ಅಸಿಂಧು ಆಗಿದೆ. 30 ಮತಗಳನ್ನು ಪಾಟೀಲ್ ಅವರಿಗೆ ಕೊಟ್ಟಿದ್ದೆವು. ಅದರಲ್ಲಿ ಮೂರು ಮತಗಳು ನಮಗೆ ಬಂದಿಲ್ಲ. ಉಳಿದ ಎರಡು ಮತಗಳನ್ನು ಜೆಡಿಎಸ್‌ಗೆ ಕೊಟ್ಟಿತ್ತು. ನಮ್ಮದು ಮೂರು ಮತಗಳು ಹೆಚ್ಚು ಕಡಿಮೆಯಾಗಿರುವುದು ಕಾಣಿಸುತ್ತಿದೆ. ಯಾರೂ ಪಕ್ಷಕ್ಕೆ ದ್ರೋಹ ಬಗೆದಿದ್ದಾರೆ ಎಂಬುದು ಗೊತ್ತಾಗಲಿದೆ ಎಂದು ಅಶೋಕ ಹೇಳಿದರು.

ರಾಮಬಾಣ



ಪಿತ್ರಾರ್ಜಿತ ಆಸ್ತಿ, ವಿಭಜನೆ ಬಳಿಕ ಕುಟುಂಬದ ಆಸ್ತಿಯಾಗಲ್ಲ: ಹೈ

ಬೆಂಗಳೂರು: ತಾತನು ತನ್ನ ಜೀವಿತಾವಧಿಯಲ್ಲಿ ಸ್ವಂತವಾಗಿ ಸಂಪಾದಿಸಿದ ಆಸ್ತಿಯು ವಿಭಜನೆಯ ನಂತರ ಆ ಆಸ್ತಿ ತಂದೆಯ ಕೈಸೇರಿದರೂ ಅದು ತಂದೆಯ ವೈಯಕ್ತಿಕ ಆಸ್ತಿಯಾಗುತ್ತದೆಯೇ ವಿನಃ ಹಿಂದೂ ಅವಿಭಕ್ತ ಕುಟುಂಬದ ಆಸ್ತಿಯಾಗುವುದಿಲ್ಲ ಎಂದು ಹೈಕೋರ್ಟ್ ಆದೇಶಿಸಿದೆ.

ಅಲ್ಲದೆ, ಆ ರೀತಿಯಲ್ಲಿ ವಿಭಜನೆಯಾದ ಆಸ್ತಿಯಲ್ಲಿ ಮೊಮ್ಮಗಳು ಪಾಲು ಕೇಳುವುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ.

ಅಮೆರಿಕದಲ್ಲಿ ನೆಲೆಸಿರುವ ಉಷಾ ಎನ್ ಸ್ವಾಮಿ ಸಲ್ಲಿಸಿದ್ದ ಮೇಲ್ಮನವಿ ಕುರಿತು ವಿಚಾರಣೆ ನಡೆಸಿದ ನ್ಯಾಯಮೂರ್ತಿ ಡಿ.ಕೆ.ಸಿಂಗ್ ಮತ್ತು ನ್ಯಾಯಮೂರ್ತಿ ಟಿ.ಎಂ.ನದಾಫ್ ಅವರಿದ್ದ ವಿಭಾಗೀಯ ಪೀಠ, ಈ ಮಹತ್ವದ ತೀರ್ಪು ನೀಡಿದೆ.

ವಾದ-ಪ್ರತಿವಾದ ಆಲಿಸಿ ಪ್ರಕರಣದ ಎಲ್ಲಾ ಅಂಶಗಳನ್ನು ಅವಲೋಕಿಸಿದ ಬಳಿಕ ನ್ಯಾಯಾಲಯ, ಉಷಾ ಉಲ್ಲೇಖಿಸಿರುವ ಆಸ್ತಿಗಳ ದಾಖಲೆಗಳನ್ನು ಪರಿಶೀಲಿಸಿದರೆ ಆಕೆಯ ತಾತ, ಅಂದರೆ ತಂದೆಯ ತಂದೆ ಸ್ವಂತವಾಗಿ ಸಂಪಾದಿಸಿದ್ದರೆಂಬುದು ತಿಳಿದು ಬರಲಿದೆ.

ಆ ಆಸ್ತಿಯನ್ನು ಅವರ ತಾತ, ಅವರ ಮಕ್ಕಳಿಗೆ ಕೌಟುಂಬಿಕ ಒಪ್ಪಂದದ ಮೂಲಕ ಹಂಚಿಕೆ ಮಾಡಿದ್ದಾರೆ. ತಾತನ ಸ್ವಯಾರ್ಜಿತ ಆಸ್ತಿ ಭಾಗವಾಗಿ ತಂದೆಗೆ ಬಂದಾಗ, ಅದು ಆ ತಂದೆಯ ವೈಯಕ್ತಿಕ ಆಸ್ತಿಯಾಗುತ್ತದೆ. ಆದರೆ ಪಿತ್ರಾರ್ಜಿತ ಆಸ್ತಿಯಾಗುವುದಿಲ್ಲ ಎಂದು ಆದೇಶಿಸಿದೆ.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ಭಾಷೆ, ಪೂಜಾ ಪದ್ಧತಿಗಳು ಬೇರೆ ಬೇರೆಯಾಗಿದ್ದರೂ ಪರೋಪಕಾರವೇ ಪುಣ್ಯ ಪರಪೀಡನೆಯೇ ಪಾಪ ಎಂಬ ತತ್ವದ ಪಾಲನೆಯಿಂದಾಗಿ ಭಾರತ ಇಂದು ಒಂದಾಗಿ ಉಳಿದಿದೆ

– ಮೋದಿ

-ದಾರಿಗಳು ಬೇರೆ ಬೇರೆಯಾಗಿದ್ದರೂ ಗುರಿ ಒಂದೇ. ನದಿಗಳು ಬೇರೆ ಬೇರೆಯಾಗಿದ್ದರೂ ಸೇರುವುದು ಒಂದೇ ಸಮುದ್ರಕ್ಕೆ. ಪಕ್ಷಗಳು ಬೇರೆ ಬೇರೆಯಾಗಿದ್ದರೂ ದೇಶ ಒಂದೇ. ಅನೇಕತೆಯಲ್ಲಿ ಏಕತೆಯೇ ಹಿಂದುತ್ವ!

ದಿನ ಭವಿಷ್ಯ

ಮೇಷ ಉದಾಸೀನ ಕಾಡಲಿದೆ. ಕಾರ್ಯ ವಿಳಂಬ. ಶೇರು ಹೂಡಿಕೆ ಲಾಭ ತರುವುದು. ಅವಿವಾಹಿತರಿಗೆ ಸಂಬಂಧ ಕೂಡಿಬರುವ ಸಾಧ್ಯತೆ.

ವೃಷಭ ಉದ್ದೇಶಿತ ಕಾರ್ಯ ಪೂರ್ಣವಾಗದೆ ನಿರಾಶೆ. ಪ್ರೀತಿಪಾತ್ರರಿಂದ ಟೀಕೆ ಕೇಳುವಿರಿ. ಹಣದ ವಿಚಾರದಲ್ಲಿ ರಿಸ್ಕ್ ಬೇಡ, ಎಚ್ಚರದ ನಡೆಯಿರಲಿ.

ಮಿಥುನ ಕೆಲಸದಲ್ಲಿ ಹೆಚ್ಚು ಪರಿಶ್ರಮ ಅಗತ್ಯ. ನಿಮ್ಮ ಕಾರ್ಯಕ್ಕೆ ಟೀಕೆ ಬಂದೀತು. ಸರಿಯಾಗಿ ತಿಳಿದಿರದ ಕ್ಷೇತ್ರದಲ್ಲಿ ಹಣ ಹೂಡುವ ರಿಸ್ಕ್ ಬೇಡ.

ಕಟಕ ಜೀವನದಲ್ಲಿ ನಿಮಗೇನು ಬೇಕು ಎಂದು ಪ್ರಶ್ನಿಸಿಕೊಳ್ಳಿ. ಸ್ಪಷ್ಟ ಗುರಿ ಇಟ್ಟುಕೊಳ್ಳಿ. ಪ್ರಸ್ತುತ ನಿಮ್ಮ ಬದುಕು ಗುರಿಯಿಲ್ಲದ ನಾವೆಯಂತಾಗಿದೆ.

ಸಿಂಹ ಭವಿಷ್ಯಕ್ಕೆ ಸೂಕ್ತ ಯೋಜನೆ ಹಾಕಿಕೊಳ್ಳಿ. ಆಸಕ್ತ ವ್ಯಕ್ತಿಯ ಭೇಟಿ, ಸಂಬಂಧ ಗಾಢವಾದೀತು. ಅಲರ್ಜಿಯಂತಹ ಸಮಸ್ಯೆ ಕಾಡಬಹುದು.

ಕನ್ಯಾ ಉತ್ತಮ ಉದ್ಯೋಗ ಅವಕಾಶ ದೊರಕೀತು. ಆತ್ಮೀಯರ ಭಾವನೆಗೆ ಸರಿಯಾಗಿ ಸ್ಪಂದಿಸಿ. ನಿರಾಸಕ್ತಿ ತೋರದಿರಿ. ಪ್ರಮುಖ ಕಾರ್ಯಸಿದ್ಧಿ.

ತುಲಾ ಕೆಲಸದ ಏಕತಾನತೆ ಬೋರ್ ಹೊಡೆಸಬಹುದು. ಹೊಸತನಕ್ಕೆ ತೆರೆದುಕೊಳ್ಳಿ. ಅನವಶ್ಯ ಶಾಪಿಂಗ್ ತಪ್ಪಿಸಿ. ಖರ್ಚು ನಿಯಂತ್ರಿಸಿ.

ವೃಶ್ಚಿಕ ಉದ್ಯಮ ವ್ಯವಹಾರದಲ್ಲಿ ಎಚ್ಚರ ವಹಿಸಿ. ವಂಚನೆ ನಡೆದೀತು. ಖಾಸಗಿ ಬದುಕಿನಲ್ಲಿ ಸ್ಥಿರತೆಗೆ ಆದ್ಯತೆ ಕೊಡಿ. ತಲೆನೋವು ಭಾದಿಸೀತು.

ಧನು ವೃತ್ತಿಗೆ ಸಂಬಂಧಿಸಿ ಶುಭ ಬೆಳವಣಿಗೆ. ಆರೋಗ್ಯದ ವಿಚಾರ ಆತಂಕ ತರಬಹುದು. ಅಗತ್ಯ ಬಿದ್ದರೆ ವೈದ್ಯರ ಕಾಣುವುದು ಒಳಿತು.

ಮಕರ ನಿಮ್ಮ ಸುತ್ತ ಶಾಂತ ವಾತಾವರಣ. ಕಾರ್ಯ ಸುಗಮ. ಇತರರ ಸಹಕಾರ ಪಡೆಯುವಿರಿ. ಆಹಾರ ಸೇವನೆಯಲ್ಲಿ ಪಥ್ಯ ಕಾಯ್ದುಕೊಳ್ಳಿ.

ಕುಂಭ ವೃತ್ತಿ ಕಾರ್ಯದಲ್ಲಿ ಸಫಲತೆ. ಮ್ಯೂಚುವಲ್ ಫಂಡ್‌ನಲ್ಲಿ ಹಣ ಹೂಡುವಾಗ ಎಚ್ಚರ ವಹಿಸಿ. ವಿವಾಹ ಸಂಬಂಧ ಕೂಡಿಬರಬಹುದು.

ಮೀನ ಆರ್ಥಿಕ ಸಫಲತೆ. ನಿಮ್ಮ ಪ್ರಮುಖ ಗುರಿ ಸಾಧಿಸಲ್ಪಡಲಿದೆ. ರಸ್ತೆ ಸಂಚಾರದ ವೇಳೆ ತುಸು ಜಾಗ್ರತೆ ವಹಿಸಿ. ಖರ್ಚು ನಿಯಂತ್ರಣ.

ರಾಹುಕಾಲ : 10.30-12.00
ಗುಳಿಕಕಾಲ : 7.30-9.00
ಅದೃಷ್ಟ ಸಂಖ್ಯೆ : 5,9,2,7

ಮೇಲ್ಮನೆಯಲ್ಲಿ ಕೈಚಳಕ | ವಿರೋಧ ಪಕ್ಷಗಳಿಗೆ ಮುಖಭಂಗ


ಫಲಿಸಿದ ಕಾಂಗ್ರೆಸ್ ತಂತ್ರ

ಬೆಂಗಳೂರು: ತೀವ್ರ ಕುತೂಹಲ ಮೂಡಿಸಿದ್ದ ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ರೂಪಿಸಿದ್ದ ತಂತ್ರ ಫಲಿಸಿದ್ದು, 5ನೇ ಅಭ್ಯರ್ಥಿಯನ್ನು ಅನಾಯಾಸವಾಗಿ ಗೆಲ್ಲಿಸುವ ಮೂಲಕ ವಿಪಕ್ಷಗಳಿಗೆ ತ್ರೀವ್ರ ಮುಖಭಂಗ ಆಗುವಂತೆ ಮಾಡಿದೆ.

ಈ ಚುನಾವಣೆಯಲ್ಲಿ ನಿರೀಕ್ಷೆಗಿಂತ ಹೆಚ್ಚಿಗೆಯೇ ಅಡ್ಡ ಮತದಾನ ಆಗಿರುವುದು ಮೈತ್ರಿ ಪಕ್ಷಗಳಿಗೆ ತೀವ್ರ ಆಘಾತ ಮೂಡಿಸಿದ್ದು, ಎಲ್ಲವೂ ಸರಿ ಇಲ್ಲ ಎಂಬುವುದನ್ನು ತೋರಿಸಿದೆ. ಬಿಜೆಪಿಯಿಂದ 3 ಮತ್ತು ಜೆಡಿಎಸ್‌ನಿಂದ 4 ಅಡ್ಡ ಮತದಾನವಾಗಿದೆ. ಬಿಜೆಪಿಯ ಒಂದು ಮತ ಅಸಿಂಧುವಾಗಿದೆ. ಮೈತ್ರಿ ಪಕ್ಷಗಳು ಕೊನೆ ಗಳಿಗೆಯಲ್ಲಿ ಮ್ಯಾಜಿಕ್ ಮಾಡಿ ಜೆಡಿಎಸ್ ಅಭ್ಯರ್ಥಿ ಗೆಲ್ಲಿಸಬಹುದು ಎಂಬ ನಿರೀಕ್ಷೆ ಸುಳ್ಳಾಗಿದೆ.ಈ ಗೆಲುವಿನ ಮೂಲಕ ಕಾಂಗ್ರೆಸ್ ಮೇಲ್ಮನೆಯಲ್ಲಿ ಹೆಚ್ಚುವರಿಯಾಗಿ 1 ಸ್ಥಾನವನ್ನು ಪಡೆದುಕೊಂಡರೆ, ಬಿಜೆಪಿ 1 ಸ್ಥಾನವನ್ನು ಕಳೆದುಕೊಂಡಿದ್ದು, ಜೆಡಿಎಸ್‌ಗೆ ಯಾವುದೇ ನಷ್ಟವಾಗಿಲ್ಲ. ಫಲಿತಾಂಶದ ನಂತರದ ಈಗಿನ ಸಂಖ್ಯಾಬಲ ಪ್ರಕಾರ ಕಾಂಗ್ರೆಸ್ 38, ಬಿಜೆಪಿ 28, ಜೆಡಿಎಸ್ 7 ಸ್ಥಾನ ಹೊಂದಿದ್ದರೆ, ಪಕ್ಷೇತರ 1 ಮತ್ತು ಸಭಾಧ್ಯಕ್ಷ 1 ಸ್ಥಾನ ಇದೆ.

ಕಾಂಗ್ರೆಸ್‌ನಿಂದ ಖಾಲಿಯಾದ ನಾಲ್ಕು ಸ್ಥಾನಗಳ ಪೈಕಿ ಬಿ.ಕೆ. ಹರಿಪ್ರಸಾದ್ ಮತ್ತು ತಿಪ್ಪಣ್ಣ ಕಮಕನೂರ ಮರು ಆಯ್ಕೆಯಾದರೆ, ಗೋವಿಂದ ರಾಜು, ನಸೀರ್ ಅಹ್ಮದ್ ಸ್ಥಾನಕ್ಕೆ ಪಿ.ವಿ ಮೋಹನ್, ಬಿ.ಎಸ್. ಶಿವಣ್ಣ ಅವರು ಆಯ್ಕೆಯಾಗಿದ್ದು, ಹೆಚ್ಚುವರಿಯಾಗಿ ವಿನಯ್ ಕಾರ್ತಿಕ್ ಮೇಲ್ಮನೆ ಪ್ರವೇಶಿಸಿದ್ದಾರೆ.ಬಿಜೆಪಿಯಿಂದ ಮೂವರು ಸದಸ್ಯರು ನಿವೃತ್ತಿಗೊಂಡಿದ್ದು, ಸಂಖ್ಯಾ ಬಲದ ಆಧಾರದಲ್ಲಿ ಇಬ್ಬರನ್ನು ಮಾತ್ರ ಗೆಲ್ಲಿಸಲು ಅವಕಾಶ ಇದಿದ್ದರಿಂದ ಒಂದು ಸ್ಥಾನವನ್ನು ಕಳೆದುಕೊಂಡಿದೆ. ಈ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿ ಸೋತಿದ್ದರೂ ಆ ಪಕ್ಷಕ್ಕೆ ಯಾವುದೇ ನಷ್ಟವಾಗಿಲ್ಲ.ಬಿಜೆಪಿ ಮತ್ತು ಜೆಡಿಎಸ್‌ನ ಅಸಮಾಧಾನಿತರನ್ನು ಸೆಳೆಯಲು ಕಾಂಗ್ರೆಸ್ ಯಶಸ್ವಿಯಾಗಿದ್ದು, ಗೆಲುವಿಗಾಗಿ ನಡೆಸಿದ ಪೂರ್ವ ಸಿದ್ಧತೆಯ ಪರಿಣಾಮ ಕಾಂಗ್ರೆಸ್‌ನ 5ನೇ ಅಭ್ಯರ್ಥಿಯು ಗೆಲ್ಲುವಂತಾಗಿದೆ. ಈ ಗೆಲುವಿನಿಂದ ವಿಧಾನ ಪರಿಷತ್‌ಗೆ ಇನ್ನೊಬ್ಬರಿಗೆ ಸಚಿವ ಸ್ಥಾನ ಸಿಗಬಹುದಾಗಿದೆ.

ಮೇಲ್ಮನೆಯಲ್ಲಿ ಬಹುಮತ?: ಮೇಲ್ಮನೆಯಲ್ಲಿ ಕಾಂಗ್ರೆಸ್‌ಗೆ 38 ಸ್ಥಾನಗಳಿದ್ದು, ಬಿಜೆಪಿಯ 28, ಜೆಡಿಎಸ್‌ನ 7 ಮತ್ತು ಸಭಾಧ್ಯಕ್ಷ 1 ಸ್ಥಾನ ಸೇರಿದರೆ 35 ಆಗಲಿದ್ದು, ಪಕ್ಷೇತರ ಸದಸ್ಯ ಲಖನ್ ಜಾರಕಿಹೊಳಿ ಅವರು ಕಾಂಗ್ರೆಸ್‌ಗೆ ಬೆಂಬಲ ನೀಡಿದರೆ ಬಹುಮತ ಸಿಗಲಿದ್ದು, ಸಭಾಪತಿ ಸ್ಥಾನ ಪಡೆಯಬಹುದಾಗಿದೆ. ಇದರ ಜತೆಗೆ ಜುಲೈ 21ಕ್ಕೆ 5 ನಾಮನಿರ್ದೇಶಿತ ಸ್ಥಾನಗಳು ಖಾಲಿಯಾಗಲಿದ್ದು, ಇದು ಕಾಂಗ್ರೆಸ್‌ಗೆ ಬೊನಸ್ ಆಗಲಿದೆ.



ನಾವು ಯಾವುದೇ ತಂತ್ರಗಾರಿಕೆ ಮಾಡಿಲ್ಲ. ಅದರ ಅವಶ್ಯಕತೆ ಇಲ್ಲ. ಎಲ್ಲರೂ ಪ್ರಜ್ಞಾವಂತರು, ಬುದ್ಧಿವಂತರಿದ್ದು, ಜನರ ಪ್ರತಿನಿಧಿಗಳಾಗಿದ್ದಾರೆ. ಅವರು ತಮ್ಮ ಸ್ವಇಚ್ಛೆ ಮೇಲೆ ಯಾರಿಗೆ ಮತ ಹಾಕಬೇಕೋ ಹಾಕಿದ್ದಾರೆ. ನಾನು ನಮ್ಮ ಶಾಸಕರ ಜೊತೆ ಎರಡು ದಿನ ಕಾಲ ಕಳೆದಿದ್ದೇನೆ ಹೊರತು, ಬೇರೆ ಯಾವ ತಂತ್ರಗಾರಿಕೆ ಮಾಡಿಲ್ಲ.
■ ಡಿ.ಕೆ. ಶಿವಕುಮಾರ್, ಮುಖ್ಯಮಂತ್ರಿ

ಶಾಸಕರಿಗೆ ತರಬೇತಿ ನೀಡಲಾಗಿತ್ತು

ನಮ್ಮ ಪಕ್ಷದ ಶಾಸಕರ ಒಂದು ಮತವೂ ತಿರಸ್ಕೃತವಾಗಬಾರದು ಎಂದು ತರಬೇತಿ ನೀಡಲಾಗಿತ್ತು. ಇದಕ್ಕೆ ಸಹಕರಿಸಿದ ಎಲ್ಲಾ ಪದಾಧಿಕಾರಿಗಳಿಗೆ ನಾನು ವಿಶೇಷವಾಗಿ ಧನ್ಯವಾದ ಹೇಳುತ್ತೇನೆ. ಇದಕ್ಕೆ ದುಡಿದಂತಹ ಪಕ್ಷದ ಎಲ್ಲಾ ಶಾಸಕರು, ನಾಯಕರು, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೇವಾಲಾ ಅವರು ಹಾಗೂ ಇತರೇ ಕಾರ್ಯದರ್ಶಿಗಳನ್ನು ನಾನು ಅಭಿನಂಧಿಸುತ್ತೇನೆ ಎಂದರು. ಮಾಧ್ಯಮಗಳು ಸಹ ಸರ್ಕಾರಕ್ಕೆ ಬೆಂಬಲವಾಗಿ ಸಲಹೆ ನೀಡಿದ್ದೀರಿ. ನಿಮಗೂ ಧನ್ಯವಾದಗಳು ಎಂದರು.

ನಮಗೆ ನೀಡಿದ ವಿಶ್ವಾಸ ಜನರಿಗೆ ನೀಡಿದ ಶಕ್ತಿ: ಡಿಕೆಶಿ

ಶಾಸಕರ ಪಕ್ಷಾತೀತ ಬೆಂಬಲ

ಬೆಂಗಳೂರು: ವಿಧಾನ ಪರಿಷತ್ ಚುನಾವಣೆಯಲ್ಲಿ ನಮ್ಮ ಸರ್ಕಾರಕ್ಕೆ ಶಾಸಕರ ಬೆಂಬಲ ನೋಡಿ ನನಗೆ ಆಶ್ಚರ್ಯವಾಗಿದೆ. ಇದು ನಮ್ಮ ಸರ್ಕಾರಕ್ಕೆ ಮಾತ್ರ ನೀಡಿರುವ ಬೆಂಬಲವಲ್ಲ. ರಾಜ್ಯದ ಜನತೆಯ ಹಿತಕ್ಕಾಗಿ ನಿಮ್ಮ ಜತೆ ಇದ್ದೇವೆ ಎಂದು ನೀಡಿರುವ ಬೆಂಬಲ ಎಂದು ಸಿಎಂ ಡಿ.ಕೆ. ಶಿವಕುಮಾರ್ ಹೇಳಿದರು.

ವಿಧಾನಸಭೆಯಿಂದ ವಿಧಾನ ಪರಿಷತ್‌ಗೆ ಗುರುವಾರ ನಡೆದ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಪಕ್ಷದ ಬಿ.ಕೆ.ಹರಿಪ್ರಸಾದ್, ಮಳವಳ್ಳಿ ಶಿವಣ್ಣ, ಪಿ.ವಿ.ಮೋಹನ್, ವಿನಯ್ ಕಾರ್ತಿಕ್, ತಿಪ್ಪಣ್ಣಪ್ಪ ಕಮಕನೂರು ಅವರನ್ನು ವಿಧಾನಸೌಧದಲ್ಲಿ ಅಭಿನಂದಿಸಿದ ನಂತರ ಮಾಧ್ಯಮಗೋಷ್ಠಿ ಉದ್ದೇಶಿಸಿ ಮಾತನಾಡಿದರು.

ನಾವು ಯಾವ ಹೆಜ್ಜೆಯನ್ನಿಟ್ಟು ಮುಂದುವರೆಯುತ್ತಿದ್ದೇವೆಯೋ ಅದಕ್ಕೆ ನಾವೂ ಜೊತೆಗಿದ್ದೇವೆ ಎಂದು ಪಕ್ಷಾತೀತವಾಗಿ ಬೆಂಬಲ ನೀಡಿದ್ದಾರೆ. ನಮ್ಮ ಪಕ್ಷದ ಶಾಸಕರೂ ಒಗ್ಗಟ್ಟಾಗಿ ಬೆಂಬಲಿಸಿದ್ದಾರೆ. ನಮಗೆ ಹೆಚ್ಚಿನ ಮತ ನೀಡಿದ ಬೇರೆ, ಬೇರೆ ಪಕ್ಷದ ವಿಶ್ವಾಸವನ್ನು ನಾವು ಉಳಿಸಿಕೊಳ್ಳುತ್ತೇವೆ. ನಿಮ್ಮ ಭಾವನೆಯನ್ನು ಅರಿತುಕೊಂಡು ನಿಮ್ಮ ಸೇವೆಯಲ್ಲಿ ಮುಂದುವರೆಯುತ್ತೇವೆ. ನೀವು ನಮಗೆ ನೀಡಿದ ವಿಶ್ವಾಸ ಜನರಿಗೆ ನೀಡಿದ ಶಕ್ತಿ ಎಂದು ಬಣ್ಣಿಸಿದರು.

ನಮಗೆ ಹೆಚ್ಚಿನ ಮತ ನೀಡಿದ ಬೇರೆ, ಬೇರೆ ಪಕ್ಷದ ವಿಶ್ವಾಸವನ್ನು ನಾವು ಉಳಿಸಿಕೊಳ್ಳುತ್ತೇವೆ. ನಿಮ್ಮ ಭಾವನೆಯನ್ನು ಅರಿತುಕೊಂಡು ನಿಮ್ಮ ಸೇವೆಯಲ್ಲಿ ಮುಂದುವರೆಯುತ್ತೇವೆ. ನೀವು ನಮಗೆ ನೀಡಿದ ವಿಶ್ವಾಸ ಜನರಿಗೆ ನೀಡಿದ ಶಕ್ತಿ.
■ ಡಿ.ಕೆ.ಶಿವಕುಮಾರ್, ಸಿಎಂ

ಇದು ಗುಪ್ತ ಮತದಾನ: ಬೇರೆ ಪಕ್ಷದ ಆಂತರಿಕ ವಿಚಾರ ಗೊತ್ತಿಲ್ಲ

ಅಡ್ಡ ಮತದಾನಕ್ಕಾಗಿ ಕುದುರೆ ವ್ಯಾಪಾರ ನಡೆದಿದೆ ಎಂಬುದಕ್ಕೆ ಪ್ರತಿಕ್ರಿಯೆ ನೀಡಿದ ಸಿಎಂ, ಇದರ ಬಗ್ಗೆ ನನಗೆ ಗೊತ್ತಿಲ್ಲ. ಮತ ಯಾರು ಹಾಕಿದ್ದಾರೆ ಎಂಬುದೂ ನನಗೆ ಗೊತ್ತಿಲ್ಲ. ಇಲ್ಲಿ ನಡೆದಿರುವುದು ಗುಪ್ತ ಮತದಾನ. ಯಾರು ಮತ ಹಾಕಿದ್ದಾರೆ ಎಂದು ಯಾರಿಗೆ ಗೊತ್ತು. ಆತ್ಮವಿಶ್ವಾಸದ ಮತ ಹಾಕಿದ್ದಾರೆ. ನಾನು ಯಾರ ಬಳಿಯೂ ಮಾತನಾಡಲು ಹೋಗಿಲ್ಲ, ಮತ ಕೇಳಲೂ ಹೋಗಿಲ್ಲ. ನಮ್ಮ ಪಕ್ಷದಿಂದ ಐದು ಅಭ್ಯರ್ಥಿಗಳು ನಿಂತಿದ್ದರು. ನಮ್ಮ ಶಾಸಕರ ಸಂಖ್ಯಾಬಲ ಎಷ್ಟಿತ್ತು ಎಂಬುದು ಮಾಧ್ಯಮಗಳಿಗೆ ತಿಳಿದಿತ್ತು. ಐದು ಜನ ಗೆಲ್ಲುತ್ತಾರೆ ಎನ್ನುವ ವಿಶ್ವಾಸವಿತ್ತು. ಅವರು ಗೆದ್ದಿದ್ದಾರೆ ಎಂದರು. ದಳ, ಬಿಜೆಪಿ ಸೇರಿದಂತೆ ಯಾವ ಪಕ್ಷದ ಆಂತರಿಕ ವಿಚಾರ ಏನಿದೆಯೋ ಎಂಬುದು ನನಗೆ ಏನೂ ಗೊತ್ತಿಲ್ಲ ಎಂದರು.

ದಾರಿ ಇಲ್ಲದವರಿಗೆ ದಾರಿ ತೋರಿಸಿದ್ದೇವೆ: ಕಾಂಗ್ರೆಸ್‌ನವರು ಸಹಕಾರ ಕೋರಿದ್ದಾರೆ ಎಂದು ಎಸ್.ಟಿ. ಸೋಮಶೇಖರ್ ಹೇಳಿದ್ದಾರೆ ಎನ್ನುವುದಕ್ಕೆ ಉತ್ತರಿಸಿದ ಸಿಎಂ, ಅವರನ್ನು ಉಚ್ಚಾಟನೆ ಮಾಡಿ ಕಳಿಸಿದ್ದಾರಲ್ಲವೇ? ನಮ್ಮ ಹತ್ತಿರ ಇರಬೇಡಿ ಎಂದು ಕಳಿಸಿದ್ದರು. ಹೀಗೆ ಕಳಿಸಿದವರನ್ನು ದಾರಿಯಲ್ಲಿಯೇ ಬಿಡಲು ಆಗುತ್ತದೆಯೇ? ನಾವು ದಾರಿ ಇಲ್ಲದವರಿಗೆ ದಾರಿ ತೋರಿಸುವ ಕೆಲಸ ಮಾಡಿದ್ದೇವೆ ಎಂದರು.

ಮಧ್ಯಪ್ರಾಚ್ಯ ಯುದ್ಧಕ್ಕೆ ವಿರಾಮ

ಪುಟ ೧➡ ಜಿ7 ಸಮ್ಮೇಳನದ ಬಳಿಕ ಫ್ರಾನ್ಸ್‌ನ ವರ್ಸೈಲೆಸ್ ಅರಮನೆಯಲ್ಲಿ ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರಾನ್ ಹಾಗೂ ಫ್ರಾನ್ಸ್ ಪ್ರಥಮ ಮಹಿಳೆ ಬ್ರಿಗಿಟ್ಟೆ ಮ್ಯಾಕ್ರಾನ್ ಬುಧವಾರ ತಡರಾತ್ರಿ ಆಯೋಜಿಸಿದ್ದ ಔತಣಕ್ಕೂ ಮುನ್ನ ಟ್ರಂಪ್ ಮಧ್ಯಂತರ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ. ಈ ವೇಳೆ ಅಮೆರಿಕ ಗೃಹ ಸಚಿವಾಲಯ ಕಾರ್ಯದರ್ಶಿ ಮಾರ್ಕೊ ರುಬಿಯೊ ಜತೆಗಿದ್ದರು. ಟ್ರಂಪ್ ಸಹಿ ಹಾಕುತ್ತಲೇ ಮ್ಯಾಕ್ರಾನ್, ಶಾಭಾಷ್ ಉತ್ತಮ ಕೆಲಸ ಮಾಡಿದ್ದೀರಿ ಎಂದು ಪ್ರತಿಕ್ರಿಯಿಸಿದ್ದಾರೆ.

ಮಧ್ಯಂತರ ಒಪ್ಪಂದಕ್ಕೆ ಇರಾನ್ ಅಧ್ಯಕ್ಷ ಪೆಜೆಶ್ಕಿಯನ್ ಬುಧವಾರ ಸಹಿ ಮಾಡಿದ್ದರೂ, ಇರಾನ್ ಅಧಿಕೃತ ಹೇಳಿಕೆಗಳನ್ನು ನೀಡಿರಲಿಲ್ಲ. ಶುಕ್ರವಾರ ಜಿನೀವಾದಲ್ಲಿ ಒಪ್ಪಂದದ ಸಹಿ ಹಾಕುವ ಕಾರ್ಯಕ್ರಮ ನಡೆಯಲಿದೆ.

ಒಪ್ಪಂದ ಉಲ್ಲಂಘಿಸಿದ ಲೆಬನಾನ್-ಇಸ್ರೇಲ್: ಲೆಬನಾನ್ ವಿಚಾರದಲ್ಲಿ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಜವಾಬ್ದಾರಿಯುತ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಟ್ರಂಪ್ ಟೀಕಿಸಿದ್ದರು. ಇದಲ್ಲದೆ, ಮಧ್ಯಂತರ ಒಪ್ಪಂದವನ್ನು ಉಲ್ಲಂಘಿಸಿ ಲೆಬನಾನ್ ಮೇಲೆ ಇಸ್ರೇಲ್ ದಾಳಿ ನಡೆಸಿದೆ. ದಾಳಿಗೆ ಮೂವರು ಲೆಬನಾನ್ ನಾಗರಿಕರು ಬಲಿಯಾಗಿದ್ದಾರೆ.

14 ಷರತ್ತುಗಳ ಒಪ್ಪಂದ

ಮಧ್ಯಂತರ ಒಪ್ಪಂದದಲ್ಲಿ 14 ಷರತ್ತುಗಳಿವೆ. ಮಧ್ಯಂತರ ಒಪ್ಪಂದ ಪ್ರಕಾರ, 60 ದಿನಗಳ ಕಾಲ ಇರಾನ್ ಶುಲ್ಕ ವಸೂಲಿ ಮಾಡದೆ ಹಾರ್ಮುಜ್ ತೆರೆಯಬೇಕು. ಅದೇ ರೀತಿ ಇಸ್ರೇಲ್ ಲೆಬನಾನ್ ಮೇಲಿನ ದಾಳಿ ನಿಲ್ಲಿಸಬೇಕು. 30 ದಿನಗಳೊಳಗೆ ಅಮೆರಿಕ ತನ್ನ ಸೇನೆ ಸಂಪೂರ್ಣ ಹಿಂಪಡೆಯಬೇಕು. ಇರಾನ್ 300 ಕೆ.ಜಿ. ಅಣು ಶೇಖರಣೆ ಬಳಸುವಂತಿಲ್ಲ ಮತ್ತು ಮುಂದಿನ 15 ವರ್ಷಗಳ ಕಾಲ ಶೇ.3.67ಕ್ಕಿಂತ ಅಧಿಕ ಯುರೇನಿಯಂ ಪುಷ್ಟೀಕರಿಸುವಂತಿಲ್ಲ.

ವರ್ಸೈಲೆಸ್‌ನಲ್ಲಿ ಐತಿಹಾಸಿಕ ಸಹಿ!: 1919ರ ಜೂ.28ರಂದು ಮೊದಲ ಮಹಾಯುದ್ಧದ ಶಾಂತಿ ಒಪ್ಪಂದವನ್ನು ವರ್ಸೈಲೆಸ್‌ನಲ್ಲಿ ಸಹಿ ಹಾಕಲಾಗಿತ್ತು. ಅಮೆರಿಕ-ಇರಾನ್ ಸೇರಿ ಹಲವು ಯುದ್ಧಗಳನ್ನು ಕೊನೆಗೊಳಿಸಲು ವರ್ಸೈಲೆಸ್‌ನಲ್ಲಿ ಶಾಂತಿ ಒಪ್ಪಂದಕ್ಕೆ ಸಹಿ ಹಾಕಲಾಗಿದೆ.

ತೈಲ ಬೆಲೆ ಭಾರೀ ಇಳಿಕೆ

ತಾತ್ಕಾಲಿಕ ಒಪ್ಪಂದ ಹಿನ್ನೆಲೆ ಜಾಗತಿಕ ಕಚ್ಚಾ ತೈಲ ಬೆಲೆ ಭಾರೀ ಇಳಿಕೆಯಾಗಿದೆ. ಬ್ರೆಂಟ್ ಕಚ್ಚಾ ತೈಲ ಪ್ರತಿ ಬ್ಯಾರೆಲ್‌ಗೆ 78 ಡಾಲರ್‌ನಂತೆ ಮಾರಾಟವಾಗಿದೆ. ಜಾಗತಿಕ ಷೇರು ಪೇಟೆ ಧನಾತ್ಮಕ ಟ್ರೆಂಡ್ ತೋರಿಸಿದೆ.

ಹಾರ್ಮುಜ್ ಶೀಘ್ರ ತೆರೆಯಲಿದೆ: ಪಾಕ್

ಅಮೆರಿಕ-ಇರಾನ್ ನಡುವಿನ ಮಧ್ಯಂತರ ಒಪ್ಪಂದಕ್ಕೆ ಖಾತರಿದಾರರಾಗಿ ಸಹಿ ಹಾಕಿದ ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್, ಹಾರ್ಮುಜ್ ಜಲಸಂಧಿಯನ್ನು ಶೀಘ್ರ ತೆರೆಯಲಾಗುವುದು ಎಂದು ಹೇಳಿದ್ದಾರೆ. ಇದೇ ಸಂದರ್ಭ ಅಧ್ಯಕ್ಷ ಟ್ರಂಪ್ ಮತ್ತು ಇರಾನ್ ಸರ್ವೋಚ್ಚ ನಾಯಕ ಮೊಜ್ತಬಾ ಖಮೇನಿ ಅವರಿಗೆ ಷರೀಫ್ ಕೃತಜ್ಞತೆ ಸಲ್ಲಿಸಿದ್ದಾರೆ.

ಇದೇ ಅಂತಿಮ ಒಪ್ಪಂದವಲ್ಲ. ಒಂದು ವೇಳೆ ಇರಾನ್ ಷರತ್ತುಗಳನ್ನು ಪಾಲಿಸದಿದ್ದರೆ ಅಥವಾ ನಮ್ಮ ನಿರೀಕ್ಷೆಯಂತೆ ನಡೆದುಕೊಳ್ಳದಿದ್ದರೆ ಮತ್ತೆ ಬಾಂಬ್ ದಾಳಿ ನಡೆಸುತ್ತೇವೆ.
■ ಡೊನಾಲ್ಡ್ ಟ್ರಂಪ್, ಅಮೆರಿಕ ಅಧ್ಯಕ್ಷ

ಕಾಂಗ್ರೆಸ್ 5, ಬಿಜೆಪಿ 2



ಆರ್. ರಘು ಕೌಟಿಲ್ಯ | ಲಿಂಗರಾಜ ಪಾಟೀಲ | ಬಿ.ಕೆ ಹರಿಪ್ರಸಾದ್ | ಪಿ.ವಿ. ಮೋಹನ್ | ಬಿ.ಎಸ್. ಶಿವಣ್ಣ | ತಿಪ್ಪಣ್ಣಪ್ಪ ಕಮಕನೂರ | ವಿನಯ್ ಕಾರ್ತಿಕ್

ಪುಟ ೧➡ ಬಿಜೆಪಿ ವಿಧಾನಸಭೆಯಲ್ಲಿ 62 ಸದಸ್ಯ ಬಲ ಹೊಂದಿದ್ದು, ತನ್ನ ಇಬ್ಬರು ಅಭ್ಯರ್ಥಿಗಳಿಗೆ ತಲಾ 30 ಮತಗಳ ಹಂಚಿಕೆ ಮಾಡಿತ್ತು. ಉಳಿದ ಎರಡು ಮತಗಳನ್ನು ಜೆಡಿಎಸ್ ಅಭ್ಯರ್ಥಿಗೆ ಹಾಕಲು ಸೂಚಿಸಲಾಗಿತ್ತು. ಆದರೆ, ಬಿಜೆಪಿಯ ಲಿಂಗರಾಜ್ ಪಾಟೀಲ್ ಅವರಿಗೆ ಹಂಚಿಕೆಯಾಗಿದ್ದಕ್ಕಿಂತ ಮೂರು ಮತಗಳು ಕಡಿಮೆ ಬಿದ್ದಿವೆ. ಜೆಡಿಎಸ್ 18 ಶಾಸಕರಿದ್ದರೂ ಪಕ್ಷದ ಅಭ್ಯರ್ಥಿಗೆ ಕೇವಲ 14 ಮತಗಳಷ್ಟೇ ಚಲಾವಣೆಯಾಗಿವೆ. ಇಲ್ಲಿ ಉಭಯ ಪಕ್ಷಗಳ ಶಾಸಕರು ಅಡ್ಡ ಮತದಾನ ಮಾಡಿರುವುದು ಸ್ಪಷ್ಟವಾಗಿದೆ. ಇದರಿಂದ ಎರಡನೇ ಪ್ರಾಶಸ್ತ್ಯದ ಮತಗಳೂ ಸೇರಿ 28 ಮತಗಳ ನಿರೀಕ್ಷೆಯಲ್ಲಿದ್ದ ಕಾಂಗ್ರೆಸ್‌ನ ಐದನೇ ಅಭ್ಯರ್ಥಿ ನಿರೀಕ್ಷೆ ಮೀರಿ 32 ಮೊದಲ ಪ್ರಾಶಸ್ತ್ಯದ ಮತಗಳನ್ನೇ ಪಡೆದುಕೊಂಡಿದ್ದಾರೆ.

ಬಿಜೆಪಿಯ ಒಂದು ಮತ ಅಸಿಂಧು: ಮತದಾನ ಪ್ರಕ್ರಿಯೆಯ ಕುರಿತು ತರಬೇತಿ, ಪ್ರಾತ್ಯಕ್ಷಿಕೆಯ ನಂತರವೂ ಬಿಜೆಪಿಯ ಶಾಸಕರೊಬ್ಬರ ಮತ ಅಸಿಂಧುವಾಗಿದೆ. ರಘು ಕೌಟಿಲ್ಯ ಅವರಿಗೆ 30 ಮತಗಳ ಹಂಚಿಕೆಯಾಗಿತ್ತು. ಆದರೆ, ಅವರಿಗೆ 29 ಮತಗಳಷ್ಟೇ ಬಿದ್ದಿವೆ. ಅವರ ಪಾಲಿನ ಒಂದು ಮತ ಅಸಿಂಧುವಾಗಿದೆ.

ಕರ್ನಾಟಕ ವಿಧಾನಸಭೆಯ ಒಟ್ಟು 224 ಸ್ಥಾನಗಳ ಪೈಕಿ ಸದ್ಯ 222 ಸದಸ್ಯರಿದ್ದಾರೆ. ಮಾಜಿ ಸಚಿವ ಡಿ.ಸುಧಾಕರ್ ನಿಧನ ಹಾಗೂ ಕಾಂಗ್ರೆಸ್‌ನ ವಿನಯ್ ಕುಲಕರ್ಣಿ ಅನರ್ಹತೆಯಿಂದ 2 ಸ್ಥಾನಗಳು ತೆರವಾಗಿದ್ದವು. ಅಭ್ಯರ್ಥಿಯ ಗೆಲುವಿಗೆ ಮೊದಲ ಪ್ರಾಶಸ್ತ್ಯದಲ್ಲಿ 28 ಮತಗಳ(27.63) ಅಗತ್ಯವಿತ್ತು.

ಬೆಳಗ್ಗೆ 9ರಿಂದ ಸಂಜೆ 4 ಗಂಟೆಯವರೆಗೆ ವಿಧಾನಸೌಧದ ಕೊಠಡಿ ಸಂಖ್ಯೆ 121ರಲ್ಲಿ ಮತದಾನ ನಿಗದಿಯಾಗಿತ್ತು. ಬಳಿಕ ಮತಪೆಟ್ಟಿಗೆಯನ್ನು ಸೀಲ್ ಮಾಡಲಾಯಿತು. ಸಂಜೆ 5.05ರಿಂದ ಮತ ಎಣಿಕೆ ಪ್ರಕ್ರಿಯೆ ಪ್ರಾರಂಭವಾಯಿತು. ಮೊದಲು ಮತಗಳ ಸಿಂಧುತ್ವವನ್ನು ಪರಿಶೀಲಿಸಿದಾಗ ಒಂದು ಮತ ಅಸಿಂಧುವಾಗಿರುವುದು ಪತ್ತೆಯಾಯಿತು. ತರುವಾಯ ಅಭ್ಯರ್ಥಿಗಳು ಪಡೆದಿರುವ ಮತಗಳ ಎಣಿಕೆ ಮಾಡಲಾಯಿತು.

ಕರ್ನಾಟಕ ವಿಧಾನಸಭೆ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ಅವರು ಚುನಾವಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದರು. ಚುನಾವಣಾ ಫಲಿತಾಂಶ ಘೋಷಿಸಿದ ಅವರು ಗೆಲುವು ಸಾಧಿಸಿದ ಅಭ್ಯರ್ಥಿಗಳಿಗೆ ಪ್ರಮಾಣಪತ್ರ ಹಸ್ತಾಂತರಿಸಿದರು.

ಬಂಧಿತರಿಗೆ ಪಾಕ್ ಉಗ್ರ ಸಂಪರ್ಕ

ಪುಟ ೧➡ ಮತ್ತೋರ್ವ ಆರೋಪಿಯನ್ನು ಗುರುವಾರ ಬಂಧಿಸಲಾಗಿದೆ.

ಕಿಟಕಿ ಒಡೆದು ಪರಾರಿ: ಕೋಟ್ವಾಲಿ ಪೊಲೀಸ್ ಠಾಣೆಯಲ್ಲಿ ವಿಚಾರಣೆ ನಡೆಯುತ್ತಿದ್ದ ವೇಳೆ ಸೈಫ್ ಅನ್ಸಾರಿ ಶೌಚಾಲಯಕ್ಕೆ ಹೋಗುವ ನೆಪದಲ್ಲಿ ಕಿಟಕಿ ಒಡೆದು ಪರಾರಿಯಾಗಿದ್ದ. ಸಿಸಿಟಿವಿ ದೃಶ್ಯಾವಳಿಗಳ ಆಧಾರದ ಮೇಲೆ ಪೊಲೀಸರು ಆತನನ್ನು ಪತ್ತೆಹಚ್ಚಿ ಚಾನ್ಹೋ ಪ್ರದೇಶದ ಟೋಲ್ ಪ್ಲಾಜಾ ಸಮೀಪ ಬಂಧಿಸಿದ್ದಾರೆ.

ಗುಂಡಿನ ಚಕಮಕಿ: ಬಂಧಿತನನ್ನು ವಾಪಸ್ ಕರೆತರುತ್ತಿದ್ದಾಗ ಆತ ಪೊಲೀಸ್ ಸಿಬ್ಬಂದಿಯಿಂದ ಶಸ್ತ್ರ ಕಸಿದುಕೊಂಡು 2-3 ಸುತ್ತು ಗುಂಡು ಹಾರಿಸಿದ್ದಾನೆ. ಪ್ರತಿಯಾಗಿ ಪೊಲೀಸರು ನಡೆಸಿದ ಗುಂಡಿನ ದಾಳಿಯಲ್ಲಿ ಆತನ ಕಾಲಿಗೆ ಗಾಯವಾಗಿದೆ.

ಬಿಜೆಪಿ ಆಕ್ರೋಶ: ಮಾಜಿ ಮುಖ್ಯಮಂತ್ರಿ ರಘುವರ್ ದಾಸ್ ಈ ದಾಳಿಯನ್ನು ಖಂಡಿಸಿದ್ದು, ಇದು ರಾಜ್ಯ ಸರ್ಕಾರದ ತುಷ್ಟೀಕರಣ ಹಾಗೂ ಮತಬ್ಯಾಂಕ್ ರಾಜಕೀಯದ ಪರಿಣಾಮ ಎಂದು ಆರೋಪಿಸಿದ್ದಾರೆ. ರಾಜ್ಯದ ಕಾನೂನು ಸುವ್ಯವಸ್ಥೆ ಬಗ್ಗೆ ಅವರು ತೀವ್ರ ಆತಂಕ ವ್ಯಕ್ತಪಡಿಸಿದ್ದಾರೆ.

ಆರೋಪಿಗಳ ಗುರುತು ಬಹಿರಂಗ ಪಡಿಸಿ: ವಿಹಿಂಪ

ಹೊಸದಿಲ್ಲಿ: ರಾಂಚಿಯಲ್ಲಿರುವ ಆರ್‌ಎಸ್‌ಎಸ್ ಕಚೇರಿಯ ಮೇಲೆ ನಡೆದ ಪೆಟ್ರೋಲ್ ಬಾಂಬ್ ದಾಳಿ ಪ್ರಕರಣದ ಆರೋಪಿಗಳ ಹೆಸರು ಕೂಡಲೇ ಬಹಿರಂಗಪಡಿಸಬೇಕು ಎಂದು ವಿಶ್ವ ಹಿಂದು ಪರಿಷತ್(ವಿಹಿಂಪ) ಗುರುವಾರ ಒತ್ತಾಯಿಸಿದೆ. ಈ ಘಟನೆಯು ಕಾಂಗ್ರೆಸ್‌ನ ಆರ್‌ಎಸ್‌ಎಸ್ ವಿರೋಧಿ ಭಾವನೆಯಿಂದ ಪ್ರೇರಿತವಾಗಿದೆಯೇ ಎಂಬ ವಿಚಾರದ ಬಗ್ಗೆಯೂ ತನಿಖೆ ನಡೆಸುವಂತೆ ವಿಹಿಂಪ ಕೋರಿದೆ. ಆರ್‌ಎಸ್‌ಎಸ್ ಕಚೇರಿ ಮೇಲೆ ದಾಳಿ ನಡೆದು 36 ಗಂಟೆಗಳು ಕಳೆದರೂ, ರಾಂಚಿ ಪೊಲೀಸರು ಇನ್ನೂ ಆರೋಪಿಗಳ ಗುರುತನ್ನು ಬಹಿರಂಗಪಡಿಸಿಲ್ಲ ಏಕೆ ಎಂದು ವಿಹಿಂಪ ರಾಷ್ಟ್ರೀಯ ವಕ್ತಾರ ವಿನೋದ್ ಬನ್ಸಾಲ್ ಹೇಳಿಕೆಯಲ್ಲಿ ಪ್ರಶ್ನಿಸಿದ್ದಾರೆ.

ತಂತ್ರಜ್ಞಾನ ಎಲ್ಲರಿಗೂ ತಲುಪಲಿ

ಪುಟ ೧➡ ಭಾರತವು ತಂತ್ರಜ್ಞಾನದ ಪ್ರಜಾಪ್ರಭುತ್ವೀಕರಣವನ್ನು ನಂಬುತ್ತದೆ ಎಂದು ಮೋದಿ ಹೇಳಿದರು.ಎಐ ಮಾನವ ಜೀವನವನ್ನು ಸುಧಾರಿಸಬೇಕು, ಅವಕಾಶಗಳನ್ನು ವಿಸ್ತರಿಸಬೇಕು, ಆರ್ಥಿಕ ಬೆಳವಣಿಗೆಗೆ ನೆರವಾಗಬೇಕು ಹಾಗೂ ಪರಿಸರ ಸಂರಕ್ಷಣೆಯಲ್ಲಿಯೂ ಪಾತ್ರವಹಿಸಬೇಕು ಎಂದು ಅವರು ಅಭಿಪ್ರಾಯಪಟ್ಟರು.

ಡಿಜಿಟಲ್ ಭಾರತಕ್ಕೆ ಜಾಗತಿಕ ಮೆಚ್ಚುಗೆ: ಕಳೆದ ಹತ್ತು ವರ್ಷಗಳಲ್ಲಿ ಭಾರತವು ತಂತ್ರಜ್ಞಾನ ಆಧಾರಿತ ವೇಗದ ಪರಿವರ್ತನೆಯನ್ನು ಕಂಡಿದೆ. ವಿಶ್ವದ ಅತಿದೊಡ್ಡ ಡಿಜಿಟಲ್ ಗುರುತಿನ ವ್ಯವಸ್ಥೆ, ಡಿಜಿಟಲ್ ಪಾವತಿ ವ್ಯವಸ್ಥೆ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಭಾರತ ಮಾದರಿಯಾಗಿದೆ ಎಂದರು.ಜಾಗತಿಕ ಡಿಜಿಟಲ್ ವಹಿವಾಟುಗಳ ಅರ್ಧಕ್ಕಿಂತ ಹೆಚ್ಚು ಭಾರತದಲ್ಲೇ ನಡೆಯುತ್ತಿವೆ. ಹಣಕಾಸು ಸೇವೆ, ಶಿಕ್ಷಣ, ಟೆಲಿಮೆಡಿಸಿನ್, ಕೃಷಿ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ತಂತ್ರಜ್ಞಾನವನ್ನು ದೊಡ್ಡ ಪ್ರಮಾಣದಲ್ಲಿ ಬಳಸಲಾಗುತ್ತಿದೆ ಎಂದು ಹೇಳಿದರು.

ಹೂಡಿಕೆದಾರರಿಗೆ ಆಹ್ವಾನ

ಭಾರತವು ಮುಕ್ತ ಸಮಾಜವಾಗಿದ್ದು, ವಿಶ್ವದ ಅತಿದೊಡ್ಡ ಪ್ರತಿಭಾ ಸಂಪನ್ಮೂಲವನ್ನು ಹೊಂದಿದೆ. ನಿಯಮಗಳನ್ನು ಸರಳಗೊಳಿಸಲಾಗಿದ್ದು, ಉದ್ಯಮ ಸ್ನೇಹಿ ವಾತಾವರಣ ನಿರ್ಮಿಸಲಾಗಿದೆ. 50 ಬಿಲಿಯನ್ ಡಾಲರ್‌ಗಿಂತ ಹೆಚ್ಚಿನ ಪ್ರೋತ್ಸಾಹಧನ ಯೋಜನೆಗಳ ಮೂಲಕ ಖಾಸಗಿ ಉದ್ಯಮಗಳಿಗೆ ಬೆಂಬಲ ನೀಡಲಾಗುತ್ತಿದೆ ಎಂದರು. ಸರ್ಕಾರ ಅವಕಾಶ ಕಲ್ಪಿಸುತ್ತದೆ, ಕೈಗಾರಿಕೆಗಳು ನಾವೀನ್ಯತೆ ತರುತ್ತವೆ, ಸ್ಟಾರ್ಟ್‌ಅಪ್‌ಗಳು ಹೊಸ ದಿಕ್ಕು ತೋರಿಸುತ್ತವೆ. ಜಾಗತಿಕ ಪಾಲುದಾರರು ನಮ್ಮೊಂದಿಗೆ ಬೆಳೆಯಬಹುದು. ಭಾರತದಲ್ಲಿ ಹೂಡಿಕೆ ಮಾಡಿ, ಎಲ್ಲರ ಅಭಿವೃದ್ಧಿಗೆ ಕೈಜೋಡಿಸಿ ಎಂದು ಪ್ರಧಾನಿ ಮೋದಿ ಕರೆ ನೀಡಿದರು.

ಅಡ್ಡ ಮತದಾನ ಬಗ್ಗೆ ಪಕ್ಷ ಪರಿಶೀಲನೆ: ಬಿವೈವಿ

ಬೆಂಗಳೂರು: ಇಂದು ನಡೆದ ವಿಧಾನ ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನವಾಗಿದ್ದರ ಬಗ್ಗೆ ಪಕ್ಷ ಪರಿಶೀಲನೆ ಮಾಡಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದ್ದಾರೆ.

ವಿಧಾನಪರಿಷತ್ ಚುನಾವಣೆಯಲ್ಲಿ ಗೆದ್ದ ಅಭ್ಯರ್ಥಿಗಳಿಗೆ ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಅಭಿನಂದಿಸಿ ಅವರು ಮಾಧ್ಯಮಗಳೊಂದಿಗೆ ಮಾತನಾಡಿದರು. ಬಿಜೆಪಿಯ ಅಭ್ಯರ್ಥಿಗಳಾದ ರಘು ಕೌಟಿಲ್ಯ ಹಾಗೂ ಲಿಂಗರಾಜ ಪಾಟೀಲ್ ಅವರು, ಜಯಶೀಲರಾಗಿದ್ದು ಅವರಿಗೆ ಅಭಿನಂದನೆ. ಲಿಂಗರಾಜ ಪಾಟೀಲ್ ಅವರ ಮೂರು ಮತಗಳು ಅಡ್ಡ ಮತದಾನ ಆಗಿವೆ. ರಘು ಅವರ ಮೂವತ್ತು ಮತಗಳಲ್ಲಿ ಒಂದು ಮತ ಅಸಿಂಧು ಆಗಿದೆ. ಇದನ್ನು ಯಾರು ಮಾಡಿದ್ದಾರೆ, ಯಾಕೆ ಮಾಡಿದ್ದಾರೆ ಎಂಬುದನ್ನು ಮುಂದೆ ಪರಿಶೀಲನೆ ನಡೆಸಲಾಗುವುದು ಹಾಗೂ ಸೂಕ್ತ ತೀರ್ಮಾನವನ್ನು ಪಕ್ಷ ಕೈಗೊಳ್ಳಲಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಶಾಸಕರಾದ ಹರೀಶ್ ಪೂಂಜ, ಮಹೇಶ್ ಟೆಂಗಿನಕಾಯಿ, ವಿಧಾನಪರಿಷತ್ ಸದಸ್ಯ ಕೇಶವ ಪ್ರಸಾದ್, ಮಾಜಿ ಸಂಸದ ಎಸ್. ಮುನಿಸ್ವಾಮಿ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ. ರಾಜೀವ್, ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್. ಹರೀಶ್, ಕೇಂದ್ರ ಜಿಲ್ಲಾಧ್ಯಕ್ಷ ಸಪ್ತಗಿರಿ ಗೌಡ ಉಪಸ್ಥಿತರಿದ್ದರು.

ಉದ್ಧವ್ ಶಿವಸೇನೆಗೆ ಮತ್ತೊಂದು ಆಘಾತ

ಪುಟ ೧➡ **ನಾಳೆ ಏಕನಾಥ್ ಶಿಂಧೆ ಭೇಟಿ:** ಶನಿವಾರ ಮತ್ತೆ ಏಕನಾಥ್ ಶಿಂಧೆ ಅವರನ್ನು ಭೇಟಿಯಾಗಲಿರುವ ಬಂಡಾಯ ಸಂಸದರು, ಸ್ಪೀಕರ್‌ಗೆ ಸಲ್ಲಿಸಿರುವ ಪತ್ರದ ವಿವರಗಳನ್ನು ಬಹಿರಂಗಪಡಿಸುವ ಸಾಧ್ಯತೆ ಇದೆ. ರಾಜಕೀಯ ವಲಯದಲ್ಲಿ ಅವರ ಪಕ್ಷಾಂತರಕ್ಕೆ ಶೀಘ್ರವೇ ಅಧಿಕೃತ ಮಾನ್ಯತೆ ಸಿಗಬಹುದು ಎಂಬ ಚರ್ಚೆ ನಡೆಯುತ್ತಿದೆ.

ಶೋಕಾಸ್ ನೋಟಿಸ್ ಜಾರಿ: ಇದಕ್ಕೆ ಪ್ರತಿಯಾಗಿ ಉದ್ಧವ್ ಠಾಕ್ರೆ ಬಣವು, ಆರು ಸಂಸದರಿಗೆ ಶೋಕಾಸ್ ನೋಟಿಸ್ ಜಾರಿ ಮಾಡಿದೆ. ಪಕ್ಷ ವಿರೋಧಿ ಚಟುವಟಿಕೆಯಲ್ಲಿ ತೊಡಗಿರುವ ಆರೋಪದ ಅನ್ವಯ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದೆ. ಅಲ್ಲದೆ, ಪಕ್ಷ ತೊರೆಯುವ ಹಾಗೂ ಆಸನ ಬದಲಾವಣೆ ಕುರಿತ ಅವರ ಬೇಡಿಕೆಗಳನ್ನು ತಿರಸ್ಕರಿಸುವಂತೆ ಸ್ಪೀಕರ್ ಓಂ ಬಿರ್ಲಾ ಅವರಿಗೆ ಮನವಿ ಮಾಡಲು ನಿರ್ಧರಿಸಿದೆ. ಪಕ್ಷದ ಸಭೆಗೆ ಹಾಜರಾಗುವಂತೆ ನೀಡಿದ್ದ ವಿಪ್ ಅನ್ನು ಆರು ಸಂಸದರು ನಿರ್ಲಕ್ಷಿಸಿದ ಪರಿಣಾಮ, ಠಾಕ್ರೆ ಬಣದ ಅಸಮಾಧಾನ ಮತ್ತಷ್ಟು ಹೆಚ್ಚಿದೆ. ಪ್ರಸ್ತುತ ಉದ್ಧವ್ ಠಾಕ್ರೆ ಬಣದ ಒಂಬತ್ತು ಲೋಕಸಭಾ ಸದಸ್ಯರ ಪೈಕಿ, ಸಭೆಗೆ ಕೇವಲ ಮೂವರು ಮಾತ್ರ ಹಾಜರಾಗಿದ್ದರು.

ಫಲವತ್ತಾದ ಭೂಮಿಯಲ್ಲಿ ಟೌನ್‌ಶಿಪ್ ಕೈಬಿಡಿ: ಸಂಸದ

• **ಕುಣಿಗಲ್:** ಬಿಡದಿ ಭಾಗದಲ್ಲಿ ಅಡಿಕೆ, ತೆಂಗು, ರೇಷ್ಮೆ ತೋಟಗಳಿದ್ದು, ಹೈನುಗಾರಿಕೆ ಪ್ರಮುಖ ಆಧಾರವಾಗಿದೆ. ಇಲ್ಲಿನ ರೈತರು ಪ್ರತಿ ತಿಂಗಳು 6 ಲಕ್ಷ ಲೀಟರ್ ಹಾಲು ಡೇರಿಗೆ ಹಾಕುತ್ತಿದ್ದು, ಹೈನುಗಾರಿಕೆಯಿಂದ 30 ಕೋಟಿ ರೂ. ಹಾಗೂ ರೇಷ್ಮೆಯಿಂದ 35 ಕೋಟಿ ರೂ. ವಾರ್ಷಿಕ ಆದಾಯ ಪಡೆಯುತ್ತಿದ್ದಾರೆ. ಇಂತಹ ಹಸಿರು ಭೂಮಿ ನಾಶಪಡಿಸುವುದು ಸರಿಯಲ್ಲ ಎಂದು ಸಂಸದ ಡಾ.ಸಿ.ಎನ್. ಮಂಜುನಾಥ್ ಹೇಳಿದರು.



ಕುಣಿಗಲ್ ತಾಲೂಕಿನ ಹುತ್ರಿದುರ್ಗ ಹೋಬಳಿಯ ಸೊಂದಲಗೆರೆ ಗ್ರಾಮದಲ್ಲಿ ಸಂಸದರ ಪ್ರದೇಶಾಭಿವೃದ್ಧಿ ಯೋಜನೆಯಲ್ಲಿ 5 ಲಕ್ಷ ವೆಚ್ಚದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಬಸ್ ತಂಗುದಾಣ ಉದ್ಘಾಟಿಸಿ ಅವರು ಮಾತನಾಡಿದರು. ಬಿಡದಿಯಲ್ಲಿ ಫಲವತ್ತಾದ ಕೃಷಿ ಭೂಮಿ ವಶಪಡಿಸಿಕೊಂಡು ಟೌನ್‌ಶಿಪ್ ಮಾಡಲು ಹೊರಟಿರುವುದಕ್ಕೆ ಸಂಸದರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಬೆಂಗಳೂರಿನ ಶಿವರಾಮ ಕಾರಂತ, ವಿಶ್ವೇಶ್ವರಯ್ಯ, ಕೆಂಪೇಗೌಡ ಲೇಔಟ್‌ಗಳಲ್ಲಿ ನಿವೇಶನಗಳು ಹಾಗೂ ಸುತ್ತಮುತ್ತ ಸುಮಾರು ಮೂರು ಲಕ್ಷ ಅಪಾರ್ಟ್‌ಮೆಂಟ್‌ಗಳು ಖಾಲಿ ಇವೆ. ಹಿಂದೆ ದೇವನಹಳ್ಳಿಯಲ್ಲಿ ಟೌನ್‌ಶಿಪ್ ಮಾಡಲು ಹೊರಟಾಗ ತೀವ್ರ ವಿರೋಧ ವ್ಯಕ್ತವಾಗಿದ್ದರಿಂದ ಆಗಿನ ಸಿಎಂ ಸಿದ್ದರಾಮಯ್ಯ ಕೈಬಿಟ್ಟಿದ್ದರು. ಬಿಡದಿಯಲ್ಲೂ ಮೊದಲು ಟೌನ್‌ಶಿಪ್‌ಗೆ ವಿರೋಧ ಬಂದಾಗ ಕುಮಾರಸ್ವಾಮಿ, ಯಡಿಯೂರಪ್ಪ, ಜಗದೀಶ್ ಶೆಟ್ಟರ್, ಸದಾನಂದ ಗೌಡರು ಯೋಜನೆಯನ್ನು ಕೈಬಿಟ್ಟಿದ್ದರು. ಫಲವತ್ತಾದ ಭೂಮಿಯಲ್ಲಿ ಟೌನ್‌ಶಿಪ್ ಮಾಡುವ ಅಧಿಸೂಚನೆಯನ್ನು ಕೈಬಿಡುವ ಮೂಲಕ ಈ ಭಾಗದ ರೈತರಿಗೆ ದೊಡ್ಡ ಕೊಡುಗೆ ನೀಡಿ ಎಂದು ಸಂಸದ ಡಾ. ಸಿ.ಎನ್. ಮಂಜುನಾಥ್ ಹೇಳಿದರು.



ಧಾರವಾಡ ಜಿಲ್ಲೆಯಲ್ಲಿ ಮಳೆಯಾಗದೆ ಬಿಸಿಲಿನ ಬೇಗೆಗೆ ಬಿತ್ತನೆ ಒಣಗುತ್ತಿರುವುದು.

ಕ್ರಸ್ಟ್‌ಗೇಟ್ ಲೋಕಾರ್ಪಣೆ ಸ್ಥಳ ಪರಿಶೀಲಿಸಿದ ಸಚಿವ

• **ಕೊಪ್ಪಳ:** ರಾಜ್ಯ ಜಲ ಸಂಪನ್ಮೂಲ ಸಚಿವ ರಾಮಲಿಂಗಾರೆಡ್ಡಿ ಅವರು ಪೂರ್ವ ನಿಗದಿಯಂತೆ ಜೂನ್ 18ರಂದು ಕೊಪ್ಪಳ ಜಿಲ್ಲೆಗೆ ಆಗಮಿಸಿ, ತುಂಗಭದ್ರಾ ಜಲಾಶಯಕ್ಕೆ ಹೊಸದಾಗಿ ಅಳವಡಿಸಿದ ಕ್ರಸ್ಟ್ ಗೇಟ್‌ಗಳ ಉದ್ಘಾಟನಾ ಕಾರ್ಯಕ್ರಮದ ಸ್ಥಳ ಪರಿಶೀಲಿಸಿದರು.



ಮುನಿರಾಬಾದ್ ಗ್ರಾಮದ ಹೈಸ್ಕೂಲ್ ಗ್ರೌಂಡ್ ಆವರಣದಲ್ಲಿ ವೇದಿಕೆ ನಿರ್ಮಾಣದ ಸ್ಥಳ ವೀಕ್ಷಣೆ ನಡೆಸಿ, ಸುಗಮ ಸಂಚಾರಕ್ಕೆ ಸೂಕ್ತವಾದ ರಸ್ತೆ, ಬ್ಯಾರಿಕೇಡ್ ಅಳವಡಿಕೆ ಸೇರಿದಂತೆ ನಾನಾ ಸಿದ್ಧತೆಗಳ ಬಗ್ಗೆ ಸೂಚನೆ ನೀಡಿದರು. ಟಿಬಿ ಡ್ಯಾಮ್ ಆವರಣದಿಂದ ಮುನಿರಾಬಾದ್ ಶಾಲಾ ಮೈದಾನಕ್ಕೆ ಬಂದು ಹೋಗಲು ಅನುಕೂಲವಾಗುವಂತೆ ಯಾವ ರಸ್ತೆ ಸೂಕ್ತ ಎಂಬುದರ ಬಗ್ಗೆ ನೋಡಿಕೊಳ್ಳಲು ಸೂಚಿಸಿದರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಮುಖ್ಯಮಂತ್ರಿಗಳು ಮತ್ತು ನಾವು ಕೇಂದ್ರದ ಜಲ ಸಂಪನ್ಮೂಲ ಸಚಿವರಿಗೆ ಭೇಟಿ ಮಾಡಿ ಮಹದಾಯಿ, ಮೇಕೆದಾಟು ಯೋಜನೆ ಸೇರಿದಂತೆ ರಾಜ್ಯದ ನಾನಾ ನೀರಾವರಿ ಯೋಜನೆಗಳ ಬಗ್ಗೆ ಚರ್ಚಿಸಿದ್ದೇವೆ. ಕಳೆದ ವರ್ಷ ತುಂಗಭದ್ರಾ ಡ್ಯಾಂನ ಗೇಟ್ ಕೊಚ್ಚಿ ಹೋದಾಗ 19ನೇ ಗೇಟ್ ಸೇರಿದಂತೆ ಬೇರೆಲ್ಲ ಗೇಟ್‌ಗಳನ್ನು ಬದಲಾಯಿಸಲು ನಿರ್ಣಯಿಸಿ ಆರಂಭಗೊಂಡ ಕಾಮಗಾರಿ ಈಗ ಪೂರ್ಣಗೊಂಡಿದೆ. ಇದಕ್ಕಾಗಿ 51 ಕೋಟಿ ರೂ. ಖರ್ಚಾಗಿದೆ. ಈ ಗೇಟ್‌ಗಳು 55ರಿಂದ 60 ವರ್ಷಗಳವರೆಗೆ ಬಾಳಿಕೆ ಬರುತ್ತವೆ ಎಂದು ತಿಳಿಸಿದರು. ಹೊಸ ಗೇಟ್‌ಗಳ ಲೋಕಾರ್ಪಣೆ ಸಮಾರಂಭಕ್ಕೆ ಕರ್ನಾಟಕ ಸೇರಿದಂತೆ ತೆಲಂಗಾಣ ಮತ್ತು ಆಂಧ್ರ ರಾಜ್ಯಗಳ ಮುಖ್ಯಮಂತ್ರಿಗಳು, ಸಚಿವರು, ಶಾಸಕರು ಆಗಮಿಸಲಿದ್ದಾರೆ.

ಕಿರುಸುದ್ದಿ

ದತ್ತಾಂಶ ಗೌಪ್ಯತೆಗೆ ಹೈಕೋರ್ಟ್ ನಿರ್ದೇಶನ

• **ಬೆಂಗಳೂರು:** ರಾಜ್ಯದಲ್ಲಿ ಜಾತಿಗಳ ಆರ್ಥಿಕ, ಸಾಮಾಜಿಕ ಸಮೀಕ್ಷೆ ನಡೆಸಿ ಹಿಂದುಳಿದ ವರ್ಗಗಳ ಆಯೋಗ ಸಲ್ಲಿಸಿರುವ ವರದಿಯನ್ನು ಮುಚ್ಚಿದ ಲಕೋಟೆಯಂತೆ ತೆರೆಯದಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.ಸಮೀಕ್ಷೆಯ ಸಿಂಧುತ್ವವನ್ನು ಪ್ರಶ್ನಿಸಿ ಕರ್ನಾಟಕ ರಾಜ್ಯ ಒಕ್ಕಲಿಗರ ಸಂಘ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸೇರಿದಂತೆ ಹಲವು ಸಂಘಟನೆಗಳು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಕ್ರು ಮತ್ತು ನ್ಯಾಯಮೂರ್ತಿ ಕೆ.ಎಸ್. ಹೇಮಲೇಖಾ ಅವರ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು. ಆಗ ಅರ್ಜಿದಾರರ ಪರ ವಕೀಲರು, ಹಿಂದುಳಿದ ವರ್ಗಗಳ ಆಯೋಗ ಸಮೀಕ್ಷಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ.

ಚನ್ನಕೇಶವ ಟೆಂಗರಿಕರ್ ತೀರ್ಪು ಕಾಯ್ದಿರಿಸಿದ ಹೈ

• **ಬೆಂಗಳೂರು:** ಬಿಜೆಪಿ ಮುಖಂಡ ಯೋಗೀಶ್ ಗೌಡ ಕೊಲೆ ಪ್ರಕರಣದಲ್ಲಿ ನಕಲಿ ಸಾಕ್ಷಿಗಳನ್ನು ಸೃಷ್ಟಿಸಿದ ಆಪಾದಿತ ಸಂಬಂಧ ಏಳು ವರ್ಷ ಜೈಲು ಶಿಕ್ಷೆಗೆ ಗುರಿಯಾಗಿರುವ ಅಮಾನತುಗೊಂಡಿರುವ ಪೊಲೀಸ್ ಇನ್ಸ್‌ಪೆಕ್ಟರ್ ಚನ್ನಕೇಶವ ಟೆಂಗರಿಕರ್ ಶಿಕ್ಷೆ ಅಮಾನತುಪಡಿಸಿ, ಜಾಮೀನು ಕೋರಿ ಸಲ್ಲಿಸಿರುವ ಅರ್ಜಿಯ ವಿಚಾರಣೆ ಪೂರ್ಣಗೊಳಿಸಿರುವ ಹೈಕೋರ್ಟ್ ಗುರುವಾರ ತೀರ್ಪು ಕಾಯ್ದಿರಿಸಿದೆ. ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ವಿಧಿಸಿರುವ ಶಿಕ್ಷೆಯನ್ನು ಅಮಾನತ್ತಿನಲ್ಲಿರಿಸಿ ಜಾಮೀನು ಮಂಜೂರು ಮಾಡುವಂತೆ ಕೋರಿ ಚನ್ನಕೇಶವ ಟೆಂಗರಿಕರ್ ಸಲ್ಲಿಸಿರುವ ಮೇಲ್ಮನವಿ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಮೊಹಮ್ಮದ್ ನವಾಜ್ ಮತ್ತು ಜಿ.ಬಸವರಾಜ ಅವರ ನೇತೃತ್ವದ ವಿಭಾಗೀಯ ಪೀಠ ನಡೆಸಿತು. ಟೆಂಗರಿಕರ್ ಪರ ಹಿರಿಯ ವಕೀಲ ಪಿ.ಪಿ ಹೆಗ್ಡೆ ಅವರು, ಪಿತೂರಿ ನಡೆಸಿದ ಹಾಗೂ ಸರಿಯಾಗಿ ತನಿಖೆ ನಡೆಸಿಲ್ಲ ಎಂಬ ಆರೋಪ ಟೆಂಗರಿಕರ್ ವಿರುದ್ಧವಿದೆ. ಅದಕ್ಕೆ ಐಪಿಸಿ ಸೆಕ್ಷನ್ 201 ಮತ್ತು 218 ಅಡಿ ಗರಿಷ್ಠ ಏಳು ವರ್ಷ ಶಿಕ್ಷೆ ವಿಧಿಸಲಾಗಿದೆ. ಇವು ಜಾಮೀನುರಹಿತ ಪ್ರಕರಣಗಳಾಗಿವೆ. ಆದ್ದರಿಂದ ಜಾಮೀನು ಮಂಜೂರು ಮಾಡಬೇಕು. ವಿಚಾರಣಾ ಹಂತದಲ್ಲೂ ಟೆಂಗರಿಕರ್ ಅವರಿಗೆ ಜಾಮೀನು ಮಂಜೂರಾಗಿತ್ತು ಎಂದರು.

ವರದಕ್ಷಿಣೆ: ಕುಕ್ಕರ್‌ನಲ್ಲಿ ಹೊಡೆದು ಪತ್ನಿ ಕೊಲೆ

• **ಕೋಲಾರ:** ವರದಕ್ಷಿಣೆ ತಂದಿಲ್ಲ ಎನ್ನುವ ಕಾರಣಕ್ಕೆ 2 ಮಕ್ಕಳ ತಾಯಿಯನ್ನು ತನ್ನ ಪತಿಯೇ ಕುಕ್ಕರ್‌ನಲ್ಲಿ ಹೊಡೆದು ಕೊಲೆ ಮಾಡಿರುವ ಘಟನೆ ಕೋಲಾರ ತಾಲೂಕಿನ ದೊಡ್ಡ ಹಸಾಳ ಗ್ರಾಮದಲ್ಲಿ ನಡೆದಿದೆ. ತಾಲೂಕಿನ ದೊಡ್ಡ ಹಸಾಳ ಗ್ರಾಮದಲ್ಲಿ ಈ ಘಟನೆ ನಡೆದಿದ್ದು, ಸಹನಾ(24) ಪತಿಯಿಂದಲೇ ದಾರುಣವಾಗಿ ಕೊಲೆಯಾದ ಪತ್ನಿಯಾಗಿದ್ದಾಳೆ. ಡ್ರೈವರ್ ಆಗಿದ್ದ ಮಂಜುನಾಥ್ ಮದುವೆಯಾದ ಕೆಲ ದಿನಗಳಲ್ಲೇ ಗಲಾಟೆ ಮಾಡಿ ಮದುವೆಗೆ ಲಕ್ಷಾಂತರ ರೂಪಾಯಿ ಖರ್ಚಾಗಿದೆ ಎಂದು 2 ಲಕ್ಷ ಹಣ ಕೇಳಿ ಪಡೆದಿದ್ದಾನೆ. ಇತ್ತೀಚೆಗೆ ಮನೆ ಕಟ್ಟೋದಕ್ಕೆ ಎಂದು 10 ಲಕ್ಷಕ್ಕಾಗಿ ಡಿಮ್ಯಾಂಡ್ ಮಾಡಿದ್ದಾನೆ. ಈ ಮಧ್ಯೆ ಪ್ರತಿನಿತ್ಯ ಪದೇ ಪದೇ ಮನೆಯಲ್ಲಿ ಗಲಾಟೆ ನಡೆಯುತ್ತಿತ್ತು. ಆದರೆ ನಿನ್ನೆ ಗಲಾಟೆ ವಿಕೋಪಕ್ಕೆ ತಿರುಗಿ ಕುಕ್ಕರ್‌ನಲ್ಲಿ ತಲೆಗೆ ಹೊಡೆದು ಕೊಲೆ ಮಾಡಿದ್ದಾನೆ.

ಮೇಕೆದಾಟು ಯೋಜನೆಯಿಂದ ಎರಡು ರಾಜ್ಯಗಳಿಗೂ ಹಿತ: ಸಿಎಂ

ತ.ನಾಡು ಜತೆ ಚರ್ಚೆಗೆ ಸಿದ್ಧ

• **ಬೆಂಗಳೂರು:** ಮೇಕೆದಾಟು ಯೋಜನೆಯ ವಿಚಾರವಾಗಿ ತಮಿಳುನಾಡು ಜತೆಗೆ ಯಾವಾಗ ಬೇಕಾದರೂ ಮಾತನಾಡಲು ಸಿದ್ಧನಿದ್ದೇನೆ ಎಂದು ಸಿಎಂ ಡಿ.ಕೆ ಶಿವಕುಮಾರ್ ತಿಳಿಸಿದರು. ಮೇಕೆದಾಟು ಯೋಜನೆ ದಕ್ಷಿಣ ಭಾರತದ ಹೃದಯದಂತ ಯೋಜನೆ. ಈ ಯೋಜನೆಯಲ್ಲಿ ಕರ್ನಾಟಕ ಹಾಗೂ ತಮಿಳುನಾಡಿನ ಹಿತ ಅಡಗಿದೆ ಎಂದು ಹೇಳಿದ್ದಾರೆ.





> ನಾವು ತಮಿಳುನಾಡಿನ ರೈತರ ಹಿತವನ್ನೂ ಕಾಪಾಡಬೇಕು. ಇದು ಸಮತೋಲಿತ ಜಲಾನಯನ. ಇಲ್ಲಿ ಒಂದೇ ಒಂದು ಬಕೆಟ್ ನೀರನ್ನೂ ನೀರಾವರಿಗೆ ಬಳಸುವುದಿಲ್ಲ. ಬೆಂಗಳೂರು ನಗರದ ಕುಡಿಯುವ ನೀರು ಪೂರೈಕೆಗೆ ಮಾತ್ರ ಬಳಸಲಾಗುವುದು.
> ■ ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ

ಎಲ್ಲಾ ಸಂಸದರ ಮೇಲೆ ವಿಶ್ವಾಸ: ಡಿಕೆಶಿ

ತಮಿಳುನಾಡಿನಲ್ಲಿ ನಿಮ್ಮ ಮೈತ್ರಿ ಇದೆ ಎಂದು ಕೇಳಿದಾಗ, ನಾವು ಅವರಿಗೆ ಏನು ಮನವಿ ಮಾಡಬೇಕೋ ಮನವಿ ಮಾಡುತ್ತೇವೆ. ಇಲ್ಲಿ ರಾಜಕಾರಣ ಏನಿಲ್ಲ. ಎರಡು ರಾಜ್ಯಗಳ ಜನರ ಹಿತ ಕಾಪಾಡಿಕೊಂಡು ಹೋಗೋಣ ಎಂದರು. ನಮ್ಮ ರಾಜ್ಯದಿಂದ ಆಯ್ಕೆಯಾಗಿರುವ ಕಾಂಗ್ರೆಸ್, ಬಿಜೆಪಿ, ದಳ ಎಲ್ಲಾ ಸಂಸದರು ಒಗ್ಗಟ್ಟಾಗಿ ನಮ್ಮ ರಾಜ್ಯದ ಹಿತ ಕಾಪಾಡುತ್ತಾರೆ ಎಂಬ ವಿಶ್ವಾಸ ನಮಗಿದೆ ಎಂದು ಸಿಎಂ ತಿಳಿಸಿದರು.

ವಿಧಾನಸೌಧದಲ್ಲಿ ಮಾಧ್ಯಮಗಳ ಜತೆಗೆ ಮಾತನಾಡಿದ ಅವರು, ಮೇಕೆದಾಟು ಕೇವಲ ನನ್ನ ಹೃದಯಕ್ಕೆ ಮಾತ್ರ ಹತ್ತಿರವಾಗಿಲ್ಲ. ಮೇಕೆದಾಟು ಯೋಜನೆ ಕರ್ನಾಟಕ ರಾಜ್ಯಕ್ಕಿಂತ ತಮಿಳುನಾಡಿಗೆ ಹೆಚ್ಚು ಅನುಕೂಲ ನೀಡಲಿದೆ. ತಮಿಳುನಾಡು ಪಾಲಿನ 177 ಟಿಎಂಸಿ ನೀರನ್ನು ಬಿಡಲು ನಾವು ಸಿದ್ಧವಾಗಿದ್ದೇವೆ. ಈ ಬಗ್ಗೆ ಸುಪ್ರೀಂ ಕೋರ್ಟ್ ಆದೇಶವೂ ಇದೆ. ಈ ಯೋಜನೆ ತೀರ್ಮಾನವನ್ನು ಕೇಂದ್ರ ಜಲ ಆಯೋಗ ಮಾಡಬೇಕು ಎಂದು ಕೋರ್ಟ್ ತಿಳಿಸಿದೆ ಎಂದರು.

ಬೆಂಗಳೂರಿನಲ್ಲಿ ಜನಸಂಖ್ಯೆ ಹೆಚ್ಚಾಗುತ್ತಿದ್ದು, ನಾವು ಕೃಷ್ಣಾದಿಂದ ನೀರನ್ನು ತರಲು ಸಾಧ್ಯವಿಲ್ಲ. ಹೀಗಾಗಿ ಕಾವೇರಿ ನಮ್ಮ ಮುಂದಿರುವ ಏಕೈಕ ಆಯ್ಕೆ ಎಂದು ತಿಳಿಸಿದರು. ತಮಿಳುನಾಡು, ಕರ್ನಾಟಕದವರು ಭಾರತೀಯರು. ನಾವು ಕಾವೇರಿ ನೀರು ಕುಡಿಯಬೇಕು. ತಮಿಳುನಾಡಿನಿಂದ ಇಲ್ಲಿಗೆ ಬಂದು ವೃತ್ತಿ ಮಾಡುತ್ತಿರುವ ಅನೇಕ ಜನರಿದ್ದಾರೆ. ಇಲ್ಲಿಂದ ಹೋಗಿ ಅಲ್ಲಿ ಕೆಲಸ ಮಾಡುತ್ತಿರುವವರೂ ಇದ್ದಾರೆ. ನಾವು ಅವರನ್ನು ಪ್ರತ್ಯೇಕಿಸುವುದಿಲ್ಲ. ಸಮತೋಲಿತ ಜಲಾನಯನ ನಿರ್ಮಾಣದಿಂದ ಕಷ್ಟ ಕಾಲದಲ್ಲಿ ತಮಿಳುನಾಡಿನ ಪಾಲಿನ ನೀರನ್ನು ಹರಿಸಲು ನೆರವಾಗುತ್ತದೆ. ಅತಿ ಕಡಿಮೆ ವೆಚ್ಚದಲ್ಲಿ ಯೋಜನೆ ಆಗುವ ವಿಶ್ವಾಸವಿದೆ ಎಂದು ತಿಳಿಸಿದರು.

ಕಳೆದ ವರ್ಷ 400ಕ್ಕೂ ಹೆಚ್ಚು ಟಿಎಂಸಿ ಹೆಚ್ಚುವರಿ ನೀರು ಸಮುದ್ರ ಸೇರಿದೆ. ಅವರು ಕೆಳ ಹಂತದಲ್ಲಿ ಸಾಕಷ್ಟು ಅಣೆಕಟ್ಟು ನಿರ್ಮಾಣ ಮಾಡುತ್ತಿದ್ದು, ನಾವು ಯಾವುದಕ್ಕೂ ಆಕ್ಷೇಪ ವ್ಯಕ್ತಪಡಿಸಿಲ್ಲ. ಅವರ ನೆಲದಲ್ಲಿ ಅವರು ನಿರ್ಮಿಸಿಕೊಳ್ಳುತ್ತಿದ್ದಾರೆ.

ಇದೇ ವಿಚಾರ ಸುಪ್ರೀಂ ಕೋರ್ಟ್‌ನಲ್ಲೂ ಚರ್ಚೆಯಾಗಿದೆ. ಈ ಯೋಜನೆಗೆ ನಾವು ಯಾವುದೇ ಆರ್ಥಿಕ ನೆರವಾಗಲಿ ಇತರೆ ವಿಚಾರವನ್ನು ಕೇಳುತ್ತಿಲ್ಲ. ಈ ಯೋಜನೆಯಿಂದ 400 ಮೆ.ವ್ಯಾಟ್ ವಿದ್ಯುತ್ ಉತ್ಪಾದನೆ ಮಾಡುವುದು ಇಂಧನ ಕ್ಷೇತ್ರದಲ್ಲಿ ನಮಗೆ ಅನುಕೂಲ ಮಾಡಿಕೊಡಲಿದೆ ಎಂದರು.

ತ.ನಾಡಿನ ರಾಜಕೀಯದಲ್ಲಿ ಹಸ್ತಕ್ಷೇಪವಿಲ್ಲ: ತಮಿಳುನಾಡಿನವರು ಕಳೆದ 40 ವರ್ಷಗಳಿಂದ ರಾಜಕೀಯ ಅಜೆಂಡಾ ಇಟ್ಟುಕೊಂಡಿದ್ದಾರೆ.

ಅವರ ರಾಜಕೀಯದಲ್ಲಿ ನಾನು ಹಸ್ತಕ್ಷೇಪ ಮಾಡುವುದಿಲ್ಲ. ಈ ವಿಚಾರದ ಬಗ್ಗೆ ನ್ಯಾಯಾಲಯ ನಿರ್ದೇಶನ ನೀಡಿದೆ.

ತಮಿಳುನಾಡಿನಲ್ಲಿ ರಾಜಕೀಯ ಉಳಿವಿಗಾಗಿ ಧ್ವನಿ ಎತ್ತುತ್ತಿದ್ದಾರೆ. ಸುಪ್ರೀಂ ಕೋರ್ಟ್ ತ್ರಿಸದಸ್ಯ ಪೀಠ ತೀರ್ಪು ಬಂದ ಬಳಿಕ ಮತ್ತೇನಿದೆ? ಕರ್ನಾಟಕ 177 ಟಿಎಂಸಿ ನೀರು ಬಿಡಬೇಕು ಎಂದು ನೀಡಿದ ನಿರ್ದೇಶನವನ್ನು ನಾವು ಒಪ್ಪಿಕೊಳ್ಳಲಿಲ್ಲವೇ ಎಂದರು.


ಕ್ಷೀರ ಭಾಗ್ಯ, ಉಪಾಹಾರ | ಅನುದಾನ ಬಿಡುಗಡೆ

ಅಕ್ರಮ ತಡೆಗೆ ಸೂಚನೆ

• **ಬೆಂಗಳೂರು:** ರಾಜ್ಯದಲ್ಲಿ ಜಾರಿಯಲ್ಲಿರುವ ಕ್ಷೀರ ಭಾಗ್ಯ ಮತ್ತು ಮಧ್ಯಾಹ್ನ ಉಪಾಹಾರ ಯೋಜನೆಯಲ್ಲಿ ಮೊದಲನೇ ತ್ರೈಮಾಸಿಕದ ವೆಚ್ಚವಾಗಿ 215.93 ಕೋಟಿ ರೂ. ಅನುದಾನ ಬಿಡುಗಡೆ ಮಾಡಿದೆ. ಜತೆಗೆ ಈ ಯೋಜನೆಯಲ್ಲಿ ನಕಲು, ವಿದ್ಯಾರ್ಥಿಗಳ ಹಾಜರಾತಿಯಲ್ಲಿ ಅಕ್ರಮ ಮುಂತಾದವನ್ನು ತಡೆಯಲು ಹಲವು ಕಟ್ಟುನಿಟ್ಟಿನ ಸೂಚನೆ ಶಾಲಾ ಶಿಕ್ಷಣ ಇಲಾಖೆ ನೀಡಿದೆ.

ಮಕ್ಕಳ ಮುಖ ಗುರುತಿನ ಹಾಜರಾತಿ ದಿನಕ್ಕೆ ಮೂರು ಬಾರಿ(ಬೆಳಗ್ಗೆ ಎರಡು ಬಾರಿ, ಮಧ್ಯಾಹ್ನ ಒಂದು ಬಾರಿ) ಪಡೆಯುವುದು ಕಡ್ಡಾಯಗೊಳಿಸಲಾಗಿದೆ.

ಒಂದು ವೇಳೆ ಮಕ್ಕಳ ಮುಖ ಗುರುತಿನ ಹಾಜರಾತಿಯನ್ನು ದಾಖಲಿಸದೇ ಇದ್ದರೆ ಶಾಲಾ ಮುಖ್ಯ ಶಿಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿ, ಉಪ ನಿರ್ದೇಶಕರು ಮತ್ತು ಮಧ್ಯಾಹ್ನ ಉಪಹಾರ ಯೋಜನೆಯ ಶಿಕ್ಷಣಾಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಲಾಗಿದೆ. ಇನ್ನು ಸ್ಯಾಟ್ಸ್‌ನಲ್ಲಿ ಮಕ್ಕಳ ಹಾಜರಾತಿಯನ್ನು ಘಟನೋತ್ತರವಾಗಿ ದಾಖಲಿಸುವುದನ್ನು ರದ್ದುಗೊಳಿಸಬೇಕು. ವಿದ್ಯಾರ್ಥಿಗಳ ಹಾಜರಾತಿಯನ್ನು ಹೆಚ್ಚಾಗಿ ದಾಖಲಿಸುವುದು, ಹಾಜರಾತಿಯನ್ನು ಘಟನೋತ್ತರವಾಗಿ ದಾಖಲಿಸುವುದನ್ನು ಹಣಕಾಸು ಅಕ್ರಮವೆಂದು ಪರಿಗಣಿಸಲಾಗುವುದು ಎಂದು ಎಚ್ಚರಿಕೆ



ನೀಡಲಾಗಿದೆ ಎಂದು ಇಲಾಖೆ ತಿಳಿಸಿದೆ.

ಮಧ್ಯಾಹ್ನದ ಊಟ, ಬಾಳೆಹಣ್ಣು ಮೊಟ್ಟೆ ಹಾಗೂ ಹಾಲು ಸೇವಿಸಿದ ಮತ್ತು ಸೇವಿಸದ ವಿದ್ಯಾರ್ಥಿಗಳನ್ನು ಸ್ಯಾಟ್ಸ್‌ನಲ್ಲಿ ನಮೂದಿಸುವುದು ಕಡ್ಡಾಯಗೊಳಿಸಲಾಗಿದೆ. ಮಕ್ಕಳಿಗೆ ಮೊಟ್ಟೆ ಅಥವಾ ಬಾಳೆ ಹಣ್ಣು ವಿತರಿಸುವ ಸಂದರ್ಭದಲ್ಲಿ ಪೋಷಕರ ಒಪ್ಪಿಗೆ ಪತ್ರ ಪಡೆಯುವುದು ಕಡ್ಡಾಯ. ಈ ಒಪ್ಪಿಗೆ ಪತ್ರವನ್ನು ಬದಲಾಯಿಸುವಂತಿಲ್ಲ. ಮೊಟ್ಟೆ ಕನಿಷ್ಠ 50 ಗ್ರಾಂ. ತೂಕವಿರಬೇಕು. ಎರಡು ಬಾಳೆಹಣ್ಣು ನೀಡಬೇಕು ಎಂದು ಸೂಚಿಸಲಾಗಿದೆ.

ಜತೆಗೆ ಮಕ್ಕಳಿಗೆ ಮೊಟ್ಟೆ ಹಾಗೂ ಬಾಳೆಹಣ್ಣಿನ ಪೋಷಕಾಂಶಗಳ ಪ್ರಯೋಜನ ಹಾಗೂ ಮೊಟ್ಟೆ ಮತ್ತು ಬಿಸಿ ಹಾಲು ಸೇವನೆಯ ಬಗ್ಗೆ ಮಕ್ಕಳಲ್ಲಿರಬಹುದಾದ ತಪ್ಪು ಕಲ್ಪನೆಗಳನ್ನು ಹೋಗಲಾಡಿಸಲು ಬೆಳಗ್ಗಿನ ಪ್ರಾರ್ಥನೆಯ ವೇಳೆ ಹತ್ತು ನಿಮಿಷಗಳ ಕಾಲ ಸೂಕ್ತ ವೈಜ್ಞಾನಿಕ ಮಾಹಿತಿ ನೀಡುವಂತೆ ಮುಖ್ಯ ಶಿಕ್ಷಕರಿಗೆ ಸೂಚಿಸುವಂತೆ ನಿರ್ದೇಶನ ನೀಡಬೇಕು ಎಂದು ಆಯುಕ್ತರಿಗೆ ಸೂಚಿಸಲಾಗಿದೆ.

ವಿಎಸ್‌ಕೆ ಮಾಧ್ಯಮ ಪ್ರಶಸ್ತಿ ಪುರಸ್ಕೃತರ ಪಟ್ಟಿ ಪ್ರಕಟ







• **ಬೆಂಗಳೂರು:** ವಿಶ್ವ ಸಂವಾದ ಕೇಂದ್ರ ಕರ್ನಾಟಕದಿಂದ ನೀಡಲಾಗುವ ವಾರ್ಷಿಕ ವಿಎಸ್‌ಕೆ ಮಾಧ್ಯಮ ಪ್ರಶಸ್ತಿ–2026ನೇ ಸಾಲಿನ ಪುರಸ್ಕೃತರ ಪಟ್ಟಿ ಪ್ರಕಟಿಸಲಾಗಿದೆ. ತಿ.ತಾ. ಶರ್ಮ ಪತ್ರಿಕೋದ್ಯಮ ಪ್ರಶಸ್ತಿಗೆ ವಿಜಯವಾಣಿ ಸಂಪಾದಕ ಕೆ.ಎನ್. ಚನ್ನೇಗೌಡ, ಬೆ.ಸು.ನಾ. ಮಲ್ಯ ಪತ್ರಿಕೋದ್ಯಮ ಪ್ರಶಸ್ತಿಗೆ ಅಡಿಕೆ ಪತ್ರಿಕೆ ಸಹಾಯಕ ಸಂಪಾದಕ ನಾ.ಕಾರಂತ ಪೆರಾಜೆ, ಎಂ.ವಿ.ಕಾಮತ್ ಪತ್ರಿಕೋದ್ಯಮ ಪ್ರಶಸ್ತಿಗೆ ಇಂಡಿಯಾ ಟುಡೇ ದಕ್ಷಿಣ ಭಾರತ ಆವೃತ್ತಿ ಸಂಪಾದಕ ನಾಗಾರ್ಜುನ್ ದ್ವಾರಕನಾಥ್, ಚಂದ್ರಶೇಖರ ಭಂಡಾರಿ ಪತ್ರಿಕೋದ್ಯಮ ಪ್ರಶಸ್ತಿಗೆ ಟಿವಿ–9 ಕನ್ನಡದ ಮುಖ್ಯ ನಿರ್ಮಾಪಕ ರಂಗನಾಥ್ ಭಾರದ್ವಾಜ್, ಹೊ.ವೆ. ಶೇಷಾದ್ರಿ ಅಂಕಣಕಾರ ಪ್ರಶಸ್ತಿ ಅಂಕಣಕಾರ ಡಾ.ಅರಕಲಗೂಡು ಸೂರ್ಯಪ್ರಕಾಶ್ ಹಾಗೂ ವಿಎಸ್‌ಕೆ ಡಿಜಿಟಲ್ ಮಾಧ್ಯಮ ಪ್ರಶಸ್ತಿಗೆ ಯೂಟ್ಯೂಬರ್ ರಶ್ಮಿ ಆರ್.ರಾವ್ (ರ್ಯಾಪಿಡ್ ರಶ್ಮಿ) ಆಯ್ಕೆಯಾಗಿದ್ದಾರೆ.

ವಿಎಸ್‌ಕೆ ಮಾಧ್ಯಮ ಪ್ರಶಸ್ತಿ ಪ್ರದಾನ ಸಮಾರಂಭವು ಜು.12 ಬೆಳಗ್ಗೆ 10.30ಕ್ಕೆ ಬಸವನಗುಡಿಯ ಬಿ.ಎಂ.ಎಸ್.ಇಂಜಿನಿಯರಿಂಗ್ ಕಾಲೇಜಿನ ಸಭಾಂಗಣದಲ್ಲಿ ನಡೆಯಲಿದೆ. ಪದ್ಮಭೂಷಣ ಪುರಸ್ಕೃತ ವಿದ್ವಾಂಸ ಶತಾವಧಾನಿ ಡಾ.ಆರ್. ಗಣೇಶ್ ಹಾಗೂ ವಿಶ್ವ ಸಂವಾದ ಕೇಂದ್ರ ಕರ್ನಾಟಕದ ನಿರ್ವಾಹಕ ವಿಶ್ವಸ್ಥರಾದ ಡಾ. ಎಂ.ಕೆ.ಶ್ರೀಧರನ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ತೇಜೋವಧೆ ಸಲ್ಲದು | ಇಂಥ ಕೆಲಸ ತಕ್ಷಣವೇ ನಿಲ್ಲಿಸಿ

ಮಟ್ಟಣ್ಣನವರ್‌ಗೆ ಹೈ ತಾಕೀತು

• **ಬೆಂಗಳೂರು:** ಧರ್ಮಸ್ಥಳ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ ಅವರ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ, ಪೋಸ್ಟ್ ಹಾಕಿದ ಗಿರೀಶ್ ಮಟ್ಟಣ್ಣನವರ್‌ಗೆ, ಸಾರ್ವಜನಿಕವಾಗಿ ತೇಜೋವಧೆ ಮಾಡುವುದು ಸಲ್ಲದು. ಇಂಥ ಕೆಲಸಗಳನ್ನು ತಕ್ಷಣವೇ ನಿಲ್ಲಿಸಿ ಎಂದು ಹೈಕೋರ್ಟ್ ತಾಕೀತು ಮಾಡಿದೆ.

ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಪೋಸ್ಟ್ ಹಾಕಿದ ಆರೋಪದಲ್ಲಿ ಧರ್ಮಸ್ಥಳ ಪೊಲೀಸ್



ಠಾಣೆಯಲ್ಲಿ ದಾಖಲಾಗಿರುವ ಪ್ರಕರಣ ರದ್ದು ಕೋರಿ ಗಿರೀಶ್ ಮಟ್ಟಣ್ಣನವರ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರ ಏಕಸದಸ್ಯ ಪೀಠ ವಿಚಾರಣೆ ನಡೆಸಿತು.

ಪೀಠವು ಗಿರೀಶ್ ಮಟ್ಟಣ್ಣನವರ್ ಅವರನ್ನು ತೀವ್ರ ತರಾಟೆಗೆ ತೆಗೆದುಕೊಂಡಿತಲ್ಲದೆ, ಸಾಮಾಜಿಕ ಜಾಲತಾಣಗಳಲ್ಲಿ ಇಂತಹ ಬೇಜವಾಬ್ದಾರಿಯುತ ಪ್ರವೃತ್ತಿಗಳನ್ನು ತಕ್ಷಣವೇ ನಿಲ್ಲಿಸಬೇಕು ಎಂದು ಮಟ್ಟಣ್ಣನವರ್‌ಗೆ ತಾಕೀತು ಮಾಡಿತು. ಜತೆಗೆ, ಈ ಕುರಿತು ಮುಂದಿನ ವಿಚಾರಣೆಯೊಳಗೆ ನ್ಯಾಯಾಲಯಕ್ಕೆ ಪ್ರಮಾಣಪತ್ರ ಸಲ್ಲಿಸಬೇಕು ಎಂದು ತಾಕೀತು ಮಾಡಿ ವಿಚಾರಣೆ ಜೂನ್ 22ಕ್ಕೆ ಮುಂದೂಡಿತು. ಮಟ್ಟಣ್ಣನವರ ಪರ ವಕೀಲ ರಂಗನಾಥ್ ರೆಡ್ಡಿ ವಾದ ಮಂಡಿಸಿ, ಪ್ರಕರಣದಲ್ಲಿ ಸಾರ್ವಜನಿಕ ಶಾಂತಿ ಭಂಗ ಉಂಟಾದ ಅಥವಾ ಗಲಭೆ ನಡೆದ ಯಾವುದೇ ನಿರ್ದಿಷ್ಟ

ಇದೆಲ್ಲ ನಿಮಗೇಕೆ ಬೇಕು? ಕೋರ್ಟ್ ತರಾಟೆ

ಗಿರೀಶ್ ಮಟ್ಟಣ್ಣವರ್ ಪೋಸ್ಟ್ ಮಾಡಿದ್ದಾರೆನ್ನಲಾದ ಚಿತ್ರವನ್ನು ಗಮನಿಸಿದ ಪೀಠವು ನಿಮಗೆ ಇದೆಲ್ಲ ಏಕೆ ಬೇಕು? ಇದರ ಅಗತ್ಯವೇನಿದೆ? ನೀವು ನಿಮ್ಮ ಅಭಿಪ್ರಾಯ ವ್ಯಕ್ತಪಡಿಸಿ, ವಿಮರ್ಶೆ ಮಾಡಿ. ಯಾವುದೇ ತೊಂದರೆಯಿಲ್ಲ. ಭಿನ್ನಾಭಿಪ್ರಾಯ ಪ್ರಜಾಪ್ರಭುತ್ವದ ಸಾರವಾಗಿರಬಹುದು. ಆದರೆ ಇಂತಹ ನಡೆ ಪ್ರಜಾಪ್ರಭುತ್ವದ ಸಾರವಲ್ಲ, ಇದು ಸರಿಯಲ್ಲ ಎಂದು ಹೇಳಿತು.

ಘಟನೆಯ ಉಲ್ಲೇಖವಿಲ್ಲ. ಕೇವಲ ಸಾರ್ವಜನಿಕ ಅಶಾಂತಿ ಸೃಷ್ಟಿಯಾಗಬಹುದು ಎಂಬ ಊಹೆಯ ಮೇಲೆ ಮೂರನೇ ವ್ಯಕ್ತಿಯೊಬ್ಬರು ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಲಾಗಿದೆ. ಹಳೆ ಪೋಸ್ಟ್‌ಗಳನ್ನೆಲ್ಲ ಹುಡುಕಿ ತಂದು ಈ ದೂರು ದಾಖಲಿಸಲಾಗಿದೆ. ಈ ಪ್ರಕಣದಲ್ಲಿ ಬಾಧಿತ ವ್ಯಕ್ತಿ ದೂರು ದಾಖಲಿಸಿಲ್ಲ ಎಂದು ಪೀಠಕ್ಕೆ ವಿವರಿಸಿದರು.

ರಾಜ್ಯ ಸರ್ಕಾರಿ ಅಭಿಯೋಜಕ ಬಿ.ಎನ್.ಜಗದೀಶ್ ಅವರು, ಆರೋಪಿ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದ ವಿವಾದಾತ್ಮಕ ಚಿತ್ರಗಳನ್ನು ನ್ಯಾಯಾಲಯದ ಗಮನಕ್ಕೆ ತಂದರಲ್ಲದೆ, ಕ್ರಿಮಿನಲ್ ಕಾನೂನನ್ನು ಜಾರಿಗೆ ತರಲು ಕೇವಲ ಸಂತ್ರಸ್ತರೇ ಆಗಬೇಕಿಲ್ಲ, ಯಾರು ಬೇಕಾದರೂ ದೂರು ನೀಡಬಹುದು ಎಂದು ಪ್ರತಿಪಾದಿಸಿದರು.

ಹಿಂದೂ ಯುವತಿ ಕರೆದೊಯ್ದ ಮುಸ್ಲಿಂ ಯುವಕನ ಬಂಧನ

• **ಭಟ್ಕಳ:** ಸೂಪರ್ ಮಾರ್ಕೆಟೊಂದರಲ್ಲಿ ಕೆಲಸಕ್ಕಿದ್ದ ಹಿಂದೂ ಯುವತಿಯೊಬ್ಬಳನ್ನು ಕಾರಿನಲ್ಲಿ ಕರೆದೊಯ್ದ ಮುಸ್ಲಿಂ ಯುವಕ ಶಾಹೀದ್ ಖಾನ್ ಎಂಬಾತನನ್ನು ಯುವತಿ ದೂರಿನ ಮೇರೆಗೆ ಪೊಲೀಸರು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ನ್ಯಾಯಾಂಗ ಬಂಧನ ವಿಧಿಸಿದೆ.

ಬುಧವಾರ ಬೆಳಗ್ಗೆ ಪಟ್ಟಣದ ಸೂಪರ್ ಮಾರ್ಕೆಟೊಂದರಲ್ಲಿ ಕೆಲಸ ಮಾಡುತ್ತಿದ್ದ ಮಾರುಕೇರಿ ಭಾಗದ ಹಿಂದೂ ಯುವತಿಯೊಬ್ಬಳನ್ನು ಅದೇ ಸೂಪರ್ ಮಾರ್ಕೆಟ್‌ನಲ್ಲಿ ಸೇಲ್ಸ್‌ಮೆನ್ ಆಗಿರುವ ಕಾರಗದ್ದೆ ಶಾಹೀದ್ ಖಾನ್ ಎಂಬಾತ ಕಾರಿನಲ್ಲಿ ಕರೆದೊಯ್ಯುವಾಗ ಹಿಂದೂ ಸಂಘಟನೆ ಕಾರ್ಯಕರ್ತರು ತಡೆದು ಪೊಲೀಸರಿಗೆ ಒಪ್ಪಿಸಿದ್ದರು. ಆದರೆ, ಪೊಲೀಸರು ಆರೋಪಿ ಮೇಲೆ ಮೊದಲು ಪ್ರಕರಣ ದಾಖಲಿಸುವುದನ್ನು ಬಿಟ್ಟು ಯುವತಿಯನ್ನು ರಕ್ಷಿಸಿದ ಹಿಂದೂ ಕಾರ್ಯಕರ್ತರಿಬ್ಬರ ಮೇಲೆ ಪ್ರಕರಣ ದಾಖಲಿಸಿಕೊಂಡಿದ್ದರು.


ಇದರಿಂದ ತೀವ್ರ ಆಕ್ರೋಶಗೊಂಡ ಬಿಜೆಪಿ ಮತ್ತು ಹಿಂದೂ ಸಂಘಟನೆ ಕಾರ್ಯಕರ್ತರು ಬುಧವಾರ ರಾತ್ರಿ ನಗರ ಪೊಲೀಸ್ ಠಾಣೆ ಮುಂದೆ ಧರಣಿ ನಡೆಸಿ ಆರೋಪಿಯನ್ನು ಬಂಧಿಸಬೇಕು ಮತ್ತು ಹಿಂದೂ ಕಾರ್ಯಕರ್ತರ ಮೇಲಿನ ಪ್ರಕರಣ ವಾಪಾಸ್ ಪಡೆಯಬೇಕು ಎಂದು ಆಗ್ರಹಿಸಿದ್ದರು. ಸ್ಥಳಕ್ಕೆ ಹೆಚ್ಚುವರಿ ಎಸ್ಪಿ ಕೃಷ್ಣಮೂರ್ತಿ ಆಗಮಿಸಿ ಪ್ರಕರಣ ಗುರುವಾರ ಇತ್ಯರ್ಥ ಪಡಿಸುವ ಭರವಸೆ ನೀಡಿದ್ದರಿಂದ ಪ್ರತಿಭಟನಾಕಾರರು ಧರಣಿ ಕೈಬಿಟ್ಟಿದ್ದರು.

ಶಿರಾಡಿ ಘಾಟಿಯಲ್ಲಿ ರೈಲು, ರಸ್ತೆಗೆ ಹೊಸ ಯೋಜನೆ: ಕ್ಯಾ. ಬ್ರಿಜೇಶ್ ಚೌಟ

ಸುರಂಗ ಹಳಿ ಪ್ರತ್ಯೇಕ ನಿರ್ಮಾಣ

• **ಪುತ್ತೂರು:** ಶಿರಾಡಿ ಘಾಟಿಯಲ್ಲಿ ರಸ್ತೆ ಸುರಂಗ ಮಾರ್ಗ ಮತ್ತು ರೈಲು ಸಂಚರಿಸುವ ಸುರಂಗ ಹಳಿ ಪ್ರತ್ಯೇಕವಾಗಿ ನಿರ್ಮಿಸಲು ನಿರ್ಧರಿಸಲಾಗಿದೆ ಎಂದು ಸಂಸದ ಕ್ಯಾ.ಬ್ರಿಜೇಶ್ ಚೌಟ ಹೇಳಿದ್ದಾರೆ.

ಗುರುವಾರ ಪುತ್ತೂರಿನಲ್ಲಿ ಮಾಧ್ಯಮಗಳ ಜತೆ ಮಾತನಾಡಿದ ಅವರು, ರಸ್ತೆ ಮತ್ತು ರೈಲು ಹಳಿ ಜಂಟಿಯಾಗಿ ನಿರ್ಮಿಸುವ



ಸಂಬಂಧ ರೈಲ್ವೆ ಮತ್ತು ಭೂಸಾರಿಗೆ ಇಲಾಖೆ ಜಂಟಿ ಸಮೀಕ್ಷೆ ನಡೆಸಿದ ಬಳಿಕ ಏಕ ಯೋಜನೆ ಕೈಬಿಟ್ಟು ಪ್ರತ್ಯೇಕ ಯೋಜನೆಗೆ ನಿರ್ಧರಿಸಲಾಗಿದೆ ಎಂದರು.

ಶಿರಾಡಿ ಘಾಟಿಯಲ್ಲಿ ಗ್ರೇಡಿಯೆಂಟ್ (ಇಳಿಜಾರು ಸಮತಟ್ಟು) 0–50ರ ಅನುಪಾತದಲ್ಲಿದೆ. ಸುರಂಗ ರೈಲು ಹಳಿ ನಿರ್ಮಿಸಲು ಇಳಿಜಾರು ಸಮತಟ್ಟು 0–10ರ ಅನುಪಾತದಲ್ಲಿ ಇರಬೇಕಾಗುತ್ತದೆ. 0–20ರ ಇಳಿಜಾರು ಸಮತಟ್ಟಿನಲ್ಲಿ ಸುರಂಗ ರಸ್ತೆ ನಿರ್ಮಿಸಲು ಸಾಧ್ಯವಿದೆ. ಎರಡರ ಜೋಡಣೆ (ಎಲೈನ್‌ಮೆಂಟ್) ಸಾಧ್ಯವಾಗದ ಕಾರಣ ಜಂಟಿ ಯೋಜನೆ ಕೈಬಿಡಲಾಗಿದೆ ಎಂದು ಹೇಳಿದರು.

ಸುರಂಗ ಹಳಿಯ ಹಾದಿಯಲ್ಲೇ ಸುರಂಗ ರಸ್ತೆ ನಿರ್ಮಿಸಿದರೆ ಘಾಟಿಯಲ್ಲಿ ಸುರಂಗದ ಉದ್ದ 88 ಕಿ.ಮೀ. ಆಗುತ್ತದೆ.

ಸುರಂಗ ರಸ್ತೆಯನ್ನು 1–50 ಇಳಿಜಾರು ಸಮತಟ್ಟು

> ಮಾಣಿ–ಸಂಪಾಜೆ ಚತುಷ್ಪಥ ಹೆದ್ದಾರಿ ನನ್ನ ಆದ್ಯತೆಯಲ್ಲಿದೆ. ಎನ್‌ಎಚ್ ಮತ್ತು ಎನ್‌ಎಚ್‌ಎಐ ಸೇರ್ಪಡೆ ವಿಚಾರದಲ್ಲಿ ಸ್ವಲ್ಪ ಗೊಂದಲವಿದೆ. ಇದು ಶೀಘ್ರ, ನಿವಾರಣೆಯಾಗಲಿದೆ. ಚತುಷ್ಪಥ ಸಂಬಂಧ ಒಂದು ಹಂತದ ಡಿಪಿಆರ್ ಆಗಿದೆ.
> ■ ಕ್ಯಾ.ಬ್ರಿಜೇಶ್ ಚೌಟ, ಸಂಸದ

ಅನುಪಾತದಲ್ಲಿ ಮಾಡಿದರೆ 38 ಕಿ.ಮೀ.ನಲ್ಲಿ ಸಾಧ್ಯವಾಗುತ್ತದೆ. 38 ಕಿ.ಮೀ. ಸುರಂಗ ರಸ್ತೆಯನ್ನು 88 ಕಿ.ಮೀ. ಉದ್ದಕ್ಕೆ ನಿರ್ಮಿಸುವುದು ಕಾರ್ಯಸಾಧ್ಯವೂ ಇಲ್ಲ. ಹೀಗಾಗಿ ಸುರಂಗ ರಸ್ತೆಗೆ ಭೂಸಾರಿಗೆ ಇಲಾಖೆಯವರು ಪ್ರತ್ಯೇಕ ಎಲೈನ್‌ಮೆಂಟ್ ನಕ್ಷೆ ತಯಾರಿಸಿ ಡಿಪಿಆರ್ ಮಾಡಲಿದ್ದಾರೆ. ರೈಲ್ವೆಯವರು ಮುಂದಿನ ದಿನಗಳಲ್ಲಿ ಪ್ರತ್ಯೇಕ ಲೊಕೇಶನ್ ಸರ್ವೆ ಮಾಡಿ ಡಿಪಿಆರ್ ಮಾಡಲಿದ್ದಾರೆ. ಒಟ್ಟು ಮಾಡಲು ಪ್ರಯತ್ನಿಸಿದ್ದೆವು. ಭೌಗೋಳಿಕತೆಯ ಕಾರಣದಿಂದ ಸಾಧ್ಯವಾಗಲಿಲ್ಲ.


ಮಳೆಗಾಲದ ಅಧಿವೇಶನದ ಸಂದರ್ಭ ಎರಡೂ ಇಲಾಖೆಗಳ ಕಾರ್ಯದರ್ಶಿ ಮತ್ತು ಸಚಿವರನ್ನು ಭೇಟಿ ಮಾಡಿ ಶಿರಾಡಿ ಘಾಟಿ ಸುರಂಗ ಯೋಜನೆ ಜಾರಿಗೆ ಒತ್ತಾಯಿಸಲಿದ್ದೇವೆ. ಇದರಲ್ಲಿ ಸುರಂಗ ರಸ್ತೆಯು ಮೊದಲು ಜಾರಿಯಾಗುವ ಸಾಧ್ಯತೆ ಇದೆ ಎಂದು ಸಂಸದರು ಹೇಳಿದರು.

ಮೇಜರ್ ಪಿ.ಮಣಿವಣ್ಣನ್‌ಗೆ ನಗರ ಭೂ ಸಾರಿಗೆ ಆಯುಕ್ತರ ಹೆಚ್ಚುವರಿ ಹೊಣೆ

14 ಐಎಎಸ್ ಅಧಿಕಾರಿಗಳ ವರ್ಗಾವಣೆ

• **ಬೆಂಗಳೂರು:** ರಾಜ್ಯ ಸರ್ಕಾರದಲ್ಲಿ ವರ್ಗಾವಣೆ ಪರ್ವ ಮತ್ತೆ ಮುಂದುವರಿದಿದೆ. ಗುರುವಾರ 14 ಐಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಆದೇಶ ಹೊರಡಿಸಲಾಗಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಮೇಜರ್ ಪಿ.ಮಣಿವಣ್ಣನ್ ಅವರಿಗೆ ನಗರ ಭೂ ಸಾರಿಗೆ ನಿರ್ದೇಶನಾಲಯದ ಆಯುಕ್ತರ ಹುದ್ದೆಯ ಹೆಚ್ಚುವರಿ ಹೊಣೆಗಾರಿಕೆ ವಹಿಸಲಾಗಿದೆ. ಹೊಸದಿಲ್ಲಿಯ ಕರ್ನಾಟಕ ಭವನದ ಪ್ರಾದೇಶಿಕ ಆಯುಕ್ತೆ ಇಮ್ಕೋಂಗ್ಲಾ ಜಮೀರ್ ಅವರನ್ನು ಕರ್ನಾಟಕ ಭವನದ ಕಾರ್ಯದರ್ಶಿ(ಸಂಯೋಜನೆ)ಯಾಗಿ ವರ್ಗಾವಣೆ ಮಾಡಲಾಗಿದೆ.



ಸ್ಥಳ ನಿಯುಕ್ತಿಯ ನಿರೀಕ್ಷೆಯಲ್ಲಿದ್ದ ಡಾ. ಪ್ರಸಾದ್ ಎನ್.ವಿ. ಅವರನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಕಾರ್ಯದರ್ಶಿಯಾಗಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿ ಸಮೀರ್ ಶುಕ್ಲಾ ಅವರನ್ನು ಕರ್ನಾಟಕ ಭವನದ ಪ್ರಾದೇಶಿಕ ಆಯುಕ್ತರನ್ನಾಗಿ ವರ್ಗಾವಣೆ ಮಾಡಲಾಗಿದೆ.

ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ಶಿವಕುಮಾರ್ ಕೆ.ಬಿ. ಅವರನ್ನು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕರಾಗಿ, ಕೆಟಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಡಾ.ರಾಮ್ ಪ್ರಸಾತ್ ಮನೋಹರ್ ವಿ. ಅವರನ್ನು ಪ್ರವಾಸೋದ್ಯಮ ಇಲಾಖೆಯ ಆಯುಕ್ತರಾಗಿ ವರ್ಗಾವಣೆ ಮಾಡಲಾಗಿದೆ. ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆ ಇಲಾಖೆಯ ನಿರ್ದೇಶಕ ಡಾ.ಸತೀಶ ಬಿ.ಸಿ. ಅವರನ್ನು ಕೃಷಿ ಇಲಾಖೆಯ ಆಯುಕ್ತರನ್ನಾಗಿ ವರ್ಗಾವಣೆ ಮಾಡಲಾಗಿದೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಕಾರ್ಯದರ್ಶಿ ತುಳಸಿ ಮದ್ದಿನೇನಿ ಅವರನ್ನು ಉನ್ನತ ಶಿಕ್ಷಣ ಇಲಾಖೆಯ ಕಾರ್ಯದರ್ಶಿಯಾಗಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿ(ಪಂಚಾಯತ್ ರಾಜ್) ರಣದೀಪ್ ಡಿ. ಅವರನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿಯಾಗಿ ವರ್ಗಾಯಿಸಲಾಗಿದೆ.

ಸ್ಥಳ ನಿಯುಕ್ತಿಯ ನಿರೀಕ್ಷೆಯಲ್ಲಿದ್ದ ಅಕ್ರಮ್ ಪಾಷ ಅವರನ್ನು ರಾಷ್ಟ್ರೀಯ ಆರೋಗ್ಯ ಮಿಷನ್ ಮತ್ತು ಆರೋಗ್ಯ ಆಯುಕ್ತಾಲಯದ ಯೋಜನಾ ನಿರ್ದೇಶಕರನ್ನಾಗಿ ನಿಯುಕ್ತಿ ಮಾಡಲಾಗಿದೆ. ಖಜಾನೆ ಇಲಾಖೆಯ ಆಯುಕ್ತ ರಘುನಂದನ್ ಮೂರ್ತಿ ಅವರನ್ನು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ವರ್ಗಾವಣೆ ಮಾಡಲಾಗಿದೆ. ಇದರ ಜೊತೆಗೆ ಖಜಾನೆ ಇಲಾಖೆಯ ಆಯುಕ್ತರ ಹುದ್ದೆಯ ಹೆಚ್ಚುವರಿ ಹೊಣೆಗಾರಿಕೆ ವಹಿಸಲಾಗಿದೆ.

ಸ್ಥಳ ನಿಯುಕ್ತಿಯ ನಿರೀಕ್ಷೆಯಲ್ಲಿದ್ದ ನಿತೀಶ್ ಕೆ. ಅವರನ್ನು ಪೌರಾಡಳಿತ ಇಲಾಖೆಯ ನಿರ್ದೇಶಕರಾಗಿ, ರಾಜ್ಯ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಜಂಟಿ ವ್ಯವಸ್ಥಾಪಕ ನಿರ್ದೇಶಕ ಗ್ಯಾನೇಂದ್ರ ಕುಮಾರ್ ಗಂಗವರ್ ಅವರನ್ನು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆ ಇಲಾಖೆಯ ನಿರ್ದೇಶಕರನ್ನಾಗಿ ವರ್ಗಾವಣೆ ಮಾಡಲಾಗಿದೆ.

ಬಾಗಲಕೋಟೆಯ ಕೃಷ್ಣಾ ಮೇಲ್ದಂಡೆ ಯೋಜನೆಯ ಆರ್ ಆ್ಯಂಡ್ ಆರ್ ಹಾಗೂ ಭೂ ಸ್ವಾಧೀನ ವಿಭಾಗದ ಪ್ರಧಾನ ವ್ಯವಸ್ಥಾಪಕ ಗಜಾನನ ಬಾಳೆ ಅವರನ್ನು ಬಾಗಲಕೋಟೆ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ವರ್ಗಾವಣೆ ಮಾಡಲಾಗಿದೆ. ಇದರೊಂದಿಗೆ ಕೃಷ್ಣಾ ಮೇಲ್ದಂಡೆ ಯೋಜನೆಯ ಆರ್ ಆ್ಯಂಡ್ ಆರ್ ಹಾಗೂ ಭೂ ಸ್ವಾಧೀನ ವಿಭಾಗದ ಪ್ರಧಾನ ವ್ಯವಸ್ಥಾಪಕ ಹುದ್ದೆಯ ಹೆಚ್ಚುವರಿ ಹೊಣೆಗಾರಿಕೆ ನೀಡಲಾಗಿದೆ.

ಸಂಪಾದಕೀಯ

ಸುಗಮ ಪರೀಕ್ಷೆಗಾಗಿ ನಿರ್ಬಂಧ ಅನಿವಾರ್ಯ

ದೇಶದ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯವನ್ನು ನಿರ್ಧರಿಸುವ ರಾಷ್ಟ್ರೀಯ ಅರ್ಹತಾ ಹಾಗೂ ಪ್ರವೇಶ ಪರೀಕ್ಷೆ (ನೀಟ್) ಇದೇ 21ರಂದು ನಡೆಯಲಿದ್ದು, ಪಾವಿತ್ರ್ಯ ಮತ್ತು ಪಾರದರ್ಶಕತೆಯನ್ನು ಕಾಪಾಡುವುದು ಸರ್ಕಾರದ ಮೊದಲ ಆದ್ಯತೆಯಾಗಿದೆ. ಈ ಹಿನ್ನೆಲೆಯಲ್ಲಿ ಟೆಲಿಗ್ರಾಂ ಆ್ಯಪ್ ಮೇಲೆ ತಾತ್ಕಾಲಿಕ ನಿರ್ಬಂಧ ಹೇರುವ ಕ್ರಮ ಚರ್ಚೆಗೆ ಗ್ರಾಸವಾಗಿದ್ದರೂ, ಅದರ ಹಿಂದಿನ ಉದ್ದೇಶವನ್ನು ಅರ್ಥಮಾಡಿಕೊಳ್ಳುವುದು ಅಗತ್ಯವಾಗಿದೆ. ಕಳೆದ ಕೆಲವು ವರ್ಷಗಳಲ್ಲಿ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ ಪ್ರಶ್ನೆಪತ್ರಿಕೆ ಸೋರಿಕೆ, ಅಕ್ರಮ ಮಾಹಿತಿ ವಿನಿಮಯ ಮತ್ತು ನಕಲು ಜಾಲಗಳ ಚಟುವಟಿಕೆಗಳಲ್ಲಿ ಸಾಮಾಜಿಕ ಜಾಲತಾಣಗಳ ದುರ್ಬಳಕೆ ನಡೆದಿರುವುದು ಬಹಿರಂಗವಾಗಿದೆ.



ಅದರಲ್ಲೂ ಟೆಲಿಗ್ರಾಂನ ಎನ್‌ಕ್ರಿಪ್ಟೆಡ್ ವ್ಯವಸ್ಥೆ ಹಾಗೂ ದೊಡ್ಡ ಪ್ರಮಾಣದ ಗುಂಪುಗಳನ್ನು ರಚಿಸುವ ಸೌಲಭ್ಯದಿಂದ ಅಕ್ರಮ ಚಟುವಟಿಕೆಗಳಿಗೆ ಅವಕಾಶ ದೊರೆಯುತ್ತಿದೆ ಎಂಬ ಆರೋಪಗಳು ಪದೇ ಪದೇ ಕೇಳಿಬಂದಿವೆ. ಪೈರೇಟೆಡ್ ವಿಷಯಗಳ ಹಂಚಿಕೆ, ಕಾನೂನುಬಾಹಿರ ಜಾಲಗಳ ಚಟುವಟಿಕೆ ಮತ್ತು ರಾಷ್ಟ್ರವಿರೋಧಿ ಶಕ್ತಿಗಳ ಸಂಪರ್ಕ ಸಾಧನವಾಗಿ ಬಳಕೆಯಾಗುತ್ತಿದೆ ಎಂಬ ಆತಂಕವನ್ನೂ ಕೇಂದ್ರ ಸರ್ಕಾರ ವ್ಯಕ್ತಪಡಿಸಿದೆ.

ಈ ವಿಷಯ ಇದೀಗ ನ್ಯಾಯಾಲಯದ ಪರಿಶೀಲನೆಯಲ್ಲಿದ್ದರೂ, ಪರೀಕ್ಷೆಯಂತಹ ಸೂಕ್ಷ್ಮ ಸಂದರ್ಭಗಳಲ್ಲಿ ಮುನ್ನೆಚ್ಚರಿಕೆಯ ಕ್ರಮಗಳಿಗೆ ಆದ್ಯತೆ ನೀಡುವುದು ತಪ್ಪಲ್ಲ. ಕೋಟ್ಯಂತರ ರೂಪಾಯಿ ವೆಚ್ಚ, ಲಕ್ಷಾಂತರ ವಿದ್ಯಾರ್ಥಿಗಳ ಪರಿಶ್ರಮ ಮತ್ತು ಪೋಷಕರ ನಿರೀಕ್ಷೆಗಳು ಒಂದೇ ಪರೀಕ್ಷೆಯೊಂದಿಗೆ ಜೋಡಿಕೊಂಡಿರುವಾಗ, ಯಾವುದೇ ಅಕ್ರಮಕ್ಕೆ ಅವಕಾಶ ನೀಡದಿರುವುದು ಆಡಳಿತದ ಹೊಣೆಗಾರಿಕೆಯಾಗಿದೆ. ವಾಸ್ತವವಾಗಿ, ತಂತ್ರಜ್ಞಾನವು ಸಮಾಜದ ಅಭಿವೃದ್ಧಿಗೆ ಎಷ್ಟು ನೆರವಾಗುತ್ತದೆಯೋ, ಅದೇ ಪ್ರಮಾಣದಲ್ಲಿ ಅದರ ದುರ್ಬಳಕೆಯ ಸಾಧ್ಯತೆಯೂ ಇರುತ್ತದೆ. ಟೆಲಿಗ್ರಾಂ ಸೇರಿದಂತೆ ಹಲವು ಡಿಜಿಟಲ್ ವೇದಿಕೆಗಳು ಜ್ಞಾನ ಹಂಚಿಕೆ, ವ್ಯವಹಾರ ಮತ್ತು ಸಂವಹನಕ್ಕೆ ನೆರವಾಗಿವೆ. ಆದರೆ ಕೆಲವು ದುಷ್ಕರ್ಮಿಗಳು ಅವುಗಳನ್ನು ಅಕ್ರಮ ಚಟುವಟಿಕೆಗಳಿಗೆ ಬಳಸಿಕೊಳ್ಳುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಇಂತಹ ಸಂದರ್ಭಗಳಲ್ಲಿ ಸರ್ಕಾರ ಕೈಕಟ್ಟಿ ಕುಳಿತುಕೊಳ್ಳಲು ಸಾಧ್ಯವಿಲ್ಲ. ಇತ್ತೀಚಿನ ವರ್ಷಗಳಲ್ಲಿ ದೇಶದ ಹಲವು ರಾಜ್ಯಗಳಲ್ಲಿ ನಡೆದ ಪರೀಕ್ಷಾ ಅಕ್ರಮಗಳು ಯುವಜನತೆ ವಿಶ್ವಾಸವನ್ನೇ ಕುಗ್ಗಿಸಿವೆ. ಪ್ರಾಮಾಣಿಕವಾಗಿ ಓದಿದ ವಿದ್ಯಾರ್ಥಿಗಳ ಅವಕಾಶವನ್ನು ಕಸಿದುಕೊಳ್ಳುವ ಪರೀಕ್ಷಾ ಮಾಫಿಯಾಗಳು ಆಧುನಿಕ ತಂತ್ರಜ್ಞಾನವನ್ನು ಬಳಸುತ್ತಿರುವಾಗ, ಸರ್ಕಾರವೂ ಅಷ್ಟೇ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಪರೀಕ್ಷೆ ಮುಗಿಯುವವರೆಗೆ ಕೆಲವು ನಿರ್ಬಂಧಗಳನ್ನು ವಿಧಿಸುವುದು ಅಸಾಮಾನ್ಯ ಕ್ರಮವಲ್ಲ. ಅದು ವ್ಯವಸ್ಥೆಯನ್ನು ರಕ್ಷಿಸುವ ಪ್ರಯತ್ನವಾಗಿದೆ. ಅದೇ ವೇಳೆ, ಸಾಮಾಜಿಕ ಜಾಲತಾಣ ಸಂಸ್ಥೆಗಳೂ ತಮ್ಮ ಜವಾಬ್ದಾರಿಯನ್ನು ಅರಿಯಬೇಕು. ತಮ್ಮ ವೇದಿಕೆಗಳಲ್ಲಿ ನಡೆಯುವ ಕಾನೂನುಬಾಹಿರ ಚಟುವಟಿಕೆ ತಡೆಯಲು ಪರಿಣಾಮಕಾರಿ ಮೇಲ್ವಿಚಾರಣೆ ಮತ್ತು ಸಹಕಾರವನ್ನು ನೀಡುವುದು ಅವರ ಕರ್ತವ್ಯವಾಗಿದೆ. ಕೇವಲ ವ್ಯವಹಾರಿಕ ಹಿತಾಸಕ್ತಿಗಿಂತ ಸಾಮಾಜಿಕ ಹೊಣೆಗಾರಿಕೆಗೆ ಆದ್ಯತೆ ನೀಡಿದಾಗ ಮಾತ್ರ ಡಿಜಿಟಲ್ ಪರಿಸರ ಸುರಕ್ಷಿತವಾಗಲು ಸಾಧ್ಯ.

ಆರೆಸ್ಸೆಸ್‌ಗೆ 100: ರೇಶ್ಮಿ ಆಯಿಷಾ ಏನು ಹೇಳ್ತಾರೆ?

ರೇಶ್ಮಿ ಆಯಿಷಾ ತಿರುವನಂತಪುರಂ ಕಿಮ್ಸ್ ಹೆಲ್ತ್ ಆಸ್ಪತ್ರೆಯ ಸಿಇಒ ಮತ್ತು ನಾಗರ ಕೊಯಿಲ್‌ನ ಅದೇ ಸಮೂಹದ ಆಸ್ಪತ್ರೆಯ ನಿರ್ದೇಶಕಿ. ಆಕೆ ಆರೆಸ್ಸೆಸ್ ಸಂಘಟನೆಯನ್ನು ತಾನು ಪರಿಭಾವಿಸಿದ ಬಗ್ಗೆ, ಆ ಸಂಘಟನೆಯ ಕುರಿತ ತನ್ನ ಒಳನೋಟಗಳನ್ನು ಸಾಮಾಜಿಕ ಜಾಲತಾಣದಲ್ಲಿ ದಾಖಲಿಸಿದ್ದಾರೆ. ಆರೆಸ್ಸೆಸ್ ಬಗ್ಗೆ ರೇಶ್ಮಿ ಆಯಿಷಾ ಹೇಳಿದ್ದೇನು? ಅವರ ಮಾತುಗಳಲ್ಲೇ ಕೇಳಿ...

ಮೊದಲು ನನಗೆ ಆರ್‌ಎಸ್‌ಎಸ್ ಬಗ್ಗೆ ಸ್ಪಷ್ಟವಾದ ತಿಳಿವಳಿಕೆ ಇರಲಿಲ್ಲ. ಅಲ್ಲಿ ಇಲ್ಲಿ ಕೇಳಲ್ಪಟ್ಟ ವದಂತಿಗಳೇ ನನ್ನ ತಲೆಯೊಳಗೆ ತುಂಬಿದ್ದವು. ಮುಸ್ಲಿಮರನ್ನು ಈ ದೇಶದಿಂದ ಒದ್ದೋಡಿಸುವುದೇ ಆರ್‌ಎಸ್‌ಎಸ್‌ನ ಗುಪ್ತ ಅಜೆಂಡ ಎಂದು ಹೇಳಲಾಗುತ್ತಿದ್ದ ವದಂತಿಯನ್ನೇ ನಾನು ನಂಬಿದ್ದೆ. ಹಾಗಾಗಿ ಇದು ನನ್ನನ್ನು ಭಯಗ್ರಸ್ಥಳನ್ನಾಗಿ ಮಾಡಿತ್ತು. ಆದರಿಂದಾಗಿ ನಾನು ಭಯ ಮತ್ತು ದ್ವೇಷದ ಮನೋಭಾವದಿಂದಲೇ ಆರ್‌ಎಸ್‌ಎಸ್ ಅನ್ನು ನೋಡುತ್ತಿದ್ದೆ.

ಹೀಗಿರುವಾಗ ತನ್ನ ಸ್ನೇಹಿತನೊಬ್ಬನಿಗೆ ಚಿಕಿತ್ಸೆ ಕೊಡಿಸಲೆಂದು ಒಬ್ಬ ಆರ್‌ಎಸ್‌ಎಸ್ ಕಾರ್ಯಕರ್ತರು ನಮ್ಮ ಆಸ್ಪತ್ರೆಗೆ ಬಂದಿದ್ದರು. ಅವರ ಹೆಸರು ಸಿ.ಬಾಬು. ತನ್ನ ಪರಿಚಯ ಮಾಡಿಕೊಂಡ ಅವರು, ತಾನೊಬ್ಬ ಆರ್‌ಎಸ್‌ಎಸ್‌ನ ಪ್ರಾಂತ ಮಟ್ಟದ ಕಾರ್ಯಕರ್ತ ಎಂದು ಹೇಳಿದರು. ಆರ್‌ಎಸ್‌ಎಸ್ ಅಂದರೇನೇ ಹೆದರಿಕೊಂಡಿದ್ದ ನನಗೆ ಈತನನ್ನು ನೋಡಿ ಇನ್ನೂ ಹೆದರಿಕೆಯಾಯಿತು. ಆದರೆ ಆ ವ್ಯಕ್ತಿ ಬಲು ಮೃದುವಾಗಿ, ವಿನಯಶಾಲಿಯಾಗಿ ಮಾತನಾಡಿದರು. ಆತನ ವೇಷ –ಕೇವಲ ಒಂದು ಮುಂಡು (ಕೇರಳ ದೋತಿ), ಒಂದು ಶರಟು ಮತ್ತು ಹೆಗಲಲ್ಲೊಂದು ಬಟ್ಟೆಯ ಬ್ಯಾಗು– ಅತ್ಯಂತ ಸರಳವಾಗಿತ್ತು. ಆದರೂ ಆತ ತಾನೊಬ್ಬ ಆರ್‌ಎಸ್‌ಎಸ್‌ನ ಪ್ರಾಂತ ಮಟ್ಟದ ಪದಾಧಿಕಾರಿ ಎಂದಾಗ ನನಗೇ ಅಚ್ಚರಿ! ಇಷ್ಟು ಸರಳ ವೇಷದಲ್ಲಿರುವ ಸಂಘಟನೆಯೊಂದರ ಮುಖಂಡನನ್ನು ನಾನು ಇದುವರೆಗೆ ನೋಡಿರಲಿಲ್ಲ.

ನನಗಂತೂ ಆಶ್ಚರ್ಯವೋ ಆಶ್ಚರ್ಯ. ನಾನು ಕಲ್ಪಿಸಿಕೊಂಡ ಆರೆಸ್ಸೆಸ್ ಇದಾಗಿರಲಿಲ್ಲ. ಆರ್‌ಎಸ್‌ಎಸ್ ನನ್ನಂತಹ ಮುಸ್ಲಿಮರನ್ನು ಪಾಕಿಸ್ತಾನಕ್ಕೆ ಓಡಿಸಲು ಬಯಸುತ್ತಿದೆಯೇ ಎಂದು ನಾನು ಆತನನ್ನು ಕೇಳಿದೆ. ಆತ ತಕ್ಷಣ ನಕ್ಕರು. ನನ್ನ ಈ ಪ್ರಶ್ನೆಗೆ ತಣ್ಣಗೆ ಉತ್ತರಿಸಿದರು: ಚೇಚೀ, (ಮಲಯಾಳದಲ್ಲಿ ಅಕ್ಕ ಎಂದರ್ಥ) ಆರ್‌ಎಸ್‌ಎಸ್ ಬಗ್ಗೆ ನಿಮಗೆ ಯಾರೋ ತಪ್ಪು ಮಾಹಿತಿ ನೀಡಿದ್ದಾರೆ. ನೀವೆಲ್ಲಾ ನಮ್ಮ ಸೋದರ –ಸೋದರಿಯರ ಸಮಾನ.





ಆತ ನನಗಿಂತ ವಯಸ್ಸಿನಲ್ಲಿ ಹಿರಿಯರು. ಹಾಗಾಗಿ ನನ್ನ ಹೆಸರು ಹಿಡಿದು ಕರೆಯುವಂತೆ ಕೋರಿದೆ. ಅದಕ್ಕೆ ಅವರ ಉತ್ತರ: ನಮ್ಮ ಸಂಘಟನೆ ಮಹಿಳೆಯರನ್ನು ಗೌರವಿಸುವುದನ್ನು ಕಲಿಸಿದೆ. ಹಾಗಾಗಿ ನಮಗಿಂತ ಕಿರಿಯ ಮಹಿಳೆಯರನ್ನೂ ನಾವು ಚೇಚೀ ಎಂದೇ ಸಂಬೋಧಿಸುತ್ತೇವೆ.

ಬಾಬು ಅವರ ಈ ಹೇಳಿಕೆ ನನ್ನಲ್ಲಿ ಇನ್ನಷ್ಟು ಕುತೂಹಲ ಹುಟ್ಟಿಸಿತು.

ಇದಾದ ಮೇಲೆ, ನಾನು ಆರ್‌ಎಸ್‌ಎಸ್ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ನನ್ನದೇ ಸಂಶೋಧನೆಗೆ ಮುಂದಾದೆ. ನಾನು ಹಲವಾರು ಆರ್‌ಎಸ್‌ಎಸ್ ಕಾರ್ಯಕರ್ತರನ್ನು ಭೇಟಿಯಾದೆ. ಆರ್‌ಎಸ್‌ಎಸ್‌ನ ಹಲವು ತರಬೇತಿ ಶಿಬಿರಗಳಿಗೂ ಹೋಗಿದ್ದೆ. ಅಲ್ಲಿ ಎಲ್ಲ ಕಡೆ ಪ್ರತಿಯೊಬ್ಬರೂ ಕೈಜೋಡಿಸಿ, ವಿನಮ್ರರಾಗಿ ನನ್ನನ್ನು ಚೇಚೀ ಎಂದು ಕರೆಯುತ್ತಾ, ಗೌರವದಿಂದ ನೋಡಿಕೊಂಡರು.

ತಿರುವನಂತಪುರಂನಲ್ಲಿರುವ ಆರ್‌ಎಸ್‌ಎಸ್ ಕಚೇರಿಗೆ ನಾನು ಮೊದಲು ಭೇಟಿ ಕೊಟ್ಟಾಗ ನನಗೆ ಒಂದು ರೀತಿ ಹೆದರಿಕೆಯಾಗಿತ್ತು. ಆದರೆ ಕ್ರಮೇಣ ಆ ಹೆದರಿಕೆ ಕರಗಿ ಹೋಯಿತು. ನನ್ನ ಸೋದರರನ್ನು ಭೇಟಿ ಮಾಡುವ ಒಬ್ಬ ಸೋದರಿಯಾಗಿ ನಾನು ಬದಲಾಗಿದ್ದೆ.

ಆರ್‌ಎಸ್‌ಎಸ್ ಯಾವುದೇ ಸದಸ್ಯತ್ವದ ಗೋಜಿಲ್ಲದ ಒಂದು ಸಂಘಟನೆ. ಒಬ್ಬ ವ್ಯಕ್ತಿ ತನ್ನ ಹೃದಯ ಪ್ರೀತಿಯಿಂದ ಆರೆಸ್ಸೆಸ್ ಸದಸ್ಯನಾಗಬಹುದು. ಬಹುಶಃ ಇಂತಹದೊಂದು ಸಂಘಟನೆ ಜಗತ್ತಿನಲ್ಲಿ ಇದೊಂದೇ ಆಗಿರಬಹುದು. ಅಂತೆಯೇ ಇದೊಂದು ಜಗತ್ತಿನ ಅತಿ ದೊಡ್ಡ ಸಂಘಟನೆ. ರಾಷ್ಟ್ರವನ್ನು ಪರಂ ವೈಭವಂ (ವೈಭವದ ಪರಾಕಾಷ್ಠೆಗೆ) ಗೊಳಿಸುವುದೇ ಸ್ವಯಂಸೇವಕರ ಏಕಮೇವ ಗುರಿ. ಭಾರತ ದೇಶ ಉನ್ನತವಾಗಿ ಅಭಿವೃದ್ಧಿ ಹೊಂದಿ, ಪರಮ ವೈಭವಶಾಲಿ ರಾಷ್ಟ್ರವಾಗಬೇಕೆಂಬುದು ಆರ್‌ಎಸ್‌ಎಸ್ ಹೆಬ್ಬಯಕೆ.

ಕ್ರಮೇಣ ನಾನು ಆರೆಸ್ಸೆಸ್‌ನ ಜಿಲ್ಲಾ, ವಿಭಾಗ ಮತ್ತು ಪ್ರಾಂತ ಮಟ್ಟದ ಹಿರಿಯ ಕಾರ್ಯಕರ್ತರು ಹಾಗೂ ಕಿರಿಯ ಕಾರ್ಯಕರ್ತರಿಗೆಲ್ಲ ಚೇಚಿಯಾಗಿ ಬಿಟ್ಟೆ. ಅಂಥವರ ಪೈಕಿ ಪಿ.ಪರಮೇಶ್ವರ್ ಜಿ, ಎಸ್. ಸೇತು ಮಾಧವನ್, ಪಿ.ಪಿ. ಮುಕುಂದನ್, ದಕ್ಷಿಣ ಕೇರಳ ಪ್ರಾಂತ ಪ್ರಚಾರಕ ಎಸ್. ಸುದರ್ಶನ್ ಜಿ ಮತ್ತು ಪೂಜ್ಯ ಸರಸಂಘಚಾಲಕರಾದ ಡಾ. ಮೋಹನ ಭಾಗವತ್ ಪ್ರಮುಖರು. ಆರ್‌ಎಸ್‌ಎಸ್ ಅಂದರೆ ನಿಜವಾಗಿ ಏನು ಎಂಬುದನ್ನು ಅಂಥವರಿಂದ ಅರಿತುಕೊಂಡೆ.

ಕಳೆದ ಹತ್ತು ವರ್ಷಗಳಿಂದ ನಾನು ಅವರಿಗೆಲ್ಲ ಒಬ್ಬ ಸೋದರಿಯಾಗಿರುವೆ. ಬುರ್ಖಾ ಧರಿಸದೆ ಅವರೊಂದಿಗೆ ನಾನು ಒಟ್ಟಿಗೆ ಸಹಜವಾಗಿ ಕುಳಿತು ಮಾತಾಡಬಲ್ಲೆ. ಅವರ ನಡವಳಿಕೆಯಿಂದ ನನಗೆ ಯಾವುದೇ ಬಗೆಯ ಅನಾನುಕೂಲತೆ ಆಗಿಲ್ಲ.

ಈ ಪ್ರಚಾರಕರೆಲ್ಲ ಧರಿಸುವ ಪಂಚೆ ಮತ್ತು ಶರ್ಟುಗಳು ಅವರದ್ದಲ್ಲ. ಬಹುಶಃ ಯಾರೋ ಉಡುಗೊರೆಯಾಗಿ ನೀಡಿದ್ದು ಇರಬೇಕು. ಅನೇಕ ಸಂದರ್ಭಗಳಲ್ಲಿ ಸಂಘದ ಪ್ರಚಾರಕರ ಬಳಿ ಸ್ವಂತದ ಆಹಾರ ಸೇವನೆಗೆ ಅಥವಾ ಚಹಾ ಕುಡಿಯಲು ಹಣವೇ ಇರುವುದಿಲ್ಲ.

ದೇಶದ ಒಳಿತಿಗಾಗಿ ಅವರೆಲ್ಲ ತಮ್ಮ ಸ್ವಂತದ ಸುಖವನ್ನು ತೊರೆದು, ದೇಶ ಸೇವೆಯನ್ನು ಅಪ್ಪಿಕೊಂಡಿದ್ದಾರೆ. ವಿಲಾಸಿ ಜೀವನ ಶೈಲಿ ಅವರದ್ದಲ್ಲ. ಅವರ ಬಳಿ ದುಬಾರಿ ವಾಹನಗಳು ಇಲ್ಲ. ತಮಗೆ ಲಭ್ಯವಿರುವ ಆಹಾರವನ್ನಷ್ಟೇ ಸೇವಿಸುತ್ತಾರೆ. ಬಸ್ ನಿಲ್ದಾಣಗಳಲ್ಲೋ ಅಥವಾ ರೈಲ್ವೆ ಬೋಗಿಗಳಲ್ಲೇ ತಮ್ಮ ನಿದ್ರೆ ಪೂರೈಸಿಕೊಳ್ಳುತ್ತಾರೆ.

ಪರಂ ವೈಭವಂ–ಈ ದೇಶದ ಪರಮೋಚ್ಚ ವೈಭವ ಹಾಗೂ ಘನತೆ ಸಾಧಿಸುವುದಕ್ಕಾಗಿ ಅವರೆಲ್ಲ ತಮ್ಮ ಬದುಕನ್ನು ಸಮರ್ಪಿಸಿದ್ದಾರೆ.

ನಮ್ಮ ಪ್ರಧಾನಿ ನರೇಂದ್ರ ಮೋದಿಯವರು ಕೂಡ ಅವರಂತೆಯೇ ಹಿಂದೆ ಪ್ರಚಾರಕರಾಗಿದ್ದರು ಎಂದು ನನಗೆ ಇತ್ತೀಚೆಗೆ ತಿಳಿಯಿತು.

(ಕನ್ನಡಕ್ಕೆ: ದು.ಗು.ಲಕ್ಷ್ಮಣ)

ಪಾಕ್ ತಂಡದ ಫೀಲ್ಡಿಂಗ್ ಮತ್ತು ಪಿಒಕೆ!

ಪೃಥ್ವಿರಾಜ್ ಕುಲಕರ್ಣಿ



ಅಹಂಕಾರದಿಂದ ಸಿಂಹಾಸನದ ಮೇಲೆ ಕೂತಿದ್ದ ರಾವಣನಿಗೆ ಲಂಕಾದ ಪ್ರಜೆಗಳು ಪ್ರಶ್ನೆಯೊಂದನ್ನಿಟ್ಟರು. ವಾನರ ಸೈನ್ಯವು ಲಂಕೆಯತ್ತ ಬರಲು ರಾಮ ಸೇತುವೆ ಕಟ್ಟಿದರಂತೆ. ಇನ್ನೂ ಭಯಾನಕ ವಿಚಾರವೆಂದರೆ ಕಲ್ಲಿನ ಮೇಲೆ ಜೈ ಶ್ರೀ ರಾಮ್ ಎಂದು ಬರೆದರೆ ಅದು ತೇಲುತ್ತದೆಯಂತೆ. ನಿಮ್ಮ ಶತ್ರು ಮಾಯಾವಿ... ನಮಗೆ ತುಂಬಾ ಭಯವಾಗುತ್ತಿದೆ, ನಮ್ಮ ಗತಿಯೇನು? ಎಂದು ಅಳಲು ತೋಡಿಕೊಂಡರು. ಆಗ ಗರ್ವದಿಂದ ಮೆರೆದ ರಾವಣ, ಆ ಕಾರ್ಯ ನಾನು ಮಾಡಬಲ್ಲೆ ಬನ್ನಿ ಎಂದು ಹೇಳುತ್ತಾ ಜನರನ್ನು ಸರೋವರದ ಹತ್ತಿರ ಕರೆದುಕೊಂಡು ಹೋದ. ಕಲ್ಲೊಂದರ ಮೇಲೆ ರಾವಣೇಶ್ವರ ಎಂದು ಬರೆದು ನೀರಿನಲ್ಲಿ ತೇಲಿ ಬಿಟ್ಟ. ಕಲ್ಲು ತೇಲಿತು. ಜನರು ನಿಟ್ಟುಸಿರುಬಿಟ್ಟರು. ನಮ್ಮ ದೊರೆಯೂ ಒಬ್ಬ ಮಾಯಾವಿ! ಅವರು ಭಯವನ್ನಲ್ಲೇ ಬಿಟ್ಟು ವಿಶ್ವಾಸವಂತರಾದರು. ಆದರೆ ಮನೆಗೆ ಬರುತ್ತಿದ್ದಂತೆ ಪತ್ನಿ ಮಂಡೋದರಿ ರಾವಣನಿಗೆ, ಸ್ವಾಮಿ ನೀವು ಕಲ್ಲು ತೇಲಿಸಿದ್ದು ಹೇಗೆ ಎಂಬ ಪ್ರಶ್ನೆಯನ್ನಿಟ್ಟಳು. ಅದಕ್ಕೆ ಉತ್ತರಿಸಿದ ರಾವಣ, ನಾನು ಕಲ್ಲಿನ ಮೇಲೆ ರಾವಣೇಶ್ವರ ಎಂದೇ ಬರೆದೆ. ಆದರೆ ಅದಕ್ಕೆ ನೀನು ಮುಳುಗಿದರೆ ಶ್ರೀರಾಮನ ಮೇಲೆ ಆಣೆ ಅಂದುಬಿಟ್ಟೆ ಎಂದು ಉತ್ತರಿಸಿದ. ರಾಕ್ಷಸ ರಾವಣ ಮತ್ತು ರಾಕ್ಷಸ ಮನಸ್ಥಿತಿ ಇರುವ ಪಾಕಿಸ್ತಾನಕ್ಕೆ ಯಾವುದೇ ವ್ಯತ್ಯಾಸ ಇಲ್ಲ. ಪಾಕ್ ಕತೆ ಕೂಡ ಹೀಗೆ ಆಗುತ್ತಿದೆ.

ಇತ್ತೀಚೆಗಷ್ಟೇ ಪಾಕಿಸ್ತಾನ ಅಲ್ಲಿನ ಇಸ್ಲಾಂಪುರಕ್ಕೆ ಕೃಷ್ಣ ನಗರ ಎಂಬ ಹೆಸರನ್ನು, ಮುಸ್ತಫಾಬಾದ್ ಎಂಬ ಊರಿಗೆ ಧರ್ಮಪುರ ಎಂದು, ಬಾಬ್ರಿ ಮಸೀದಿ ಚೌಕ್ ಅನ್ನು ಜೈನ್ ಮಂದಿರ್ ಎಂದೂ ಮತ್ತು ರೆಹಮಾನ್ ಗಾಲಿ ಅನ್ನು ರಾಮ್ ಗಾಲಿ ಎಂದು ಮರುನಾಮಕರಣ ಮಾಡಿತ್ತಲ್ಲದೆ ಇತಿಹಾಸದ ಬಗ್ಗೆ ನಮಗೆ ಗೌರವವಿದೆ, ಪಾಕಿಸ್ತಾನ ಜಾತ್ಯತೀತ ವ್ಯವಸ್ಥೆಯ ಮೇಲೆ ನಂಬಿಕೆ ಇಟ್ಟಿದೆ ಎಂದೆಲ್ಲಾ ಜಂಬ ಕಚ್ಚಿಕೊಂಡಿತ್ತು. ಆದರೆ ರಾವಣನಂತೆಯೇ ತಕ್ಷಣವೇ ತನ್ನ ಅಸಲು ಕಪಟ ರೂಪ ತೋರಿಸಿ ಪಿಒಕೆ ನಿರಾಶ್ರಿತರ ಮೇಲೆ ದಾಳಿ ನಡೆಸಿತು. ಆಡಳಿತ ವೈಫಲ್ಯದಿಂದಲೇ ಇಷ್ಟು ದಿನ ಜಗತ್ತಿನ ಜನರ ಬಾಯಿಯಲ್ಲಿರುವ ಪಾಕಿಸ್ತಾನಕ್ಕೆ ದಿನಕ್ಕೊಮ್ಮೆ ಮರ್ಯಾದೆ ಕಳೆದುಕೊಳ್ಳದಿದ್ದರೆ ಸಮಾಧಾನವೇ ಆಗುವುದಿಲ್ಲ. ಆಡಳಿತ ವಿಚಾರದಲ್ಲಿ ಹಿಟ್ಟಿನ ಭಿಕ್ಷೆ ಬೇಡುವ ಸ್ಥಿತಿಗೆ ಬಂದರೂ ನಾವು ಪೊಲೀಸರಿಂದ ದಾಳಿಗಳನ್ನು ಮಾಡಿಸಿ ಸಾಮಾನ್ಯ ಜನರನ್ನು ಹೆದರಿಸುವುದನ್ನು ಬಿಟ್ಟಿಲ್ಲ. ಬಾಂಬ್ ದಾಳಿ ಮಾಡಿಸುವುದು, ಭಯೋತ್ಪಾದಕರನ್ನು ಬೆಂಬಲಿಸುವುದನ್ನು ನಿಲ್ಲಿಸುವುದಿಲ್ಲ ಎಂಬ ಮಾತು ಮತ್ತೆ ಮತ್ತೆ ಸಾಬೀತು ಮಾಡುತ್ತಾ ಬರುತ್ತಿದೆ. ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ನಡೆದ ದಾಳಿಯೂ ಇದರ ಮತ್ತೊಂದು ಸ್ವರೂಪ.

ಕಪಟತನದಿಂದ ಕಬ್ಜ ಮಾಡಿಕೊಂಡಿರುವ ಪಿಒಕೆ ಪ್ರದೇಶಗಳಲ್ಲಿ ಪಾಕಿಸ್ತಾನ ಶಾಲೆಗಳನ್ನು ಕಟ್ಟಿಲ್ಲ, ಅಲ್ಲಿ ಆಸ್ಪತ್ರೆಗಳಿಲ್ಲ. ಹೋಗಲಿ ಕನಿಷ್ಠ ಪಕ್ಷ ಒಂದು ಬಸ್‌ಸ್ಟ್ಯಾಂಡ್ ಕೂಡ ಇಲ್ಲ. ಇದರ ವಿರುದ್ಧ ಅಲ್ಲಿನವರೇ ವಿರೋಧಿಸಿ ಭಾರತವನ್ನು ಹೊಗಳಿದ ವಿಚಾರ ಮೊದಲಿನಿಂದಲೂ ನಡೆಯುತ್ತಲೇ ಬಂದಿದೆ. ಈ ನಡುವೆ ಬೆಲೆ ಏರಿಕೆ ಮಾಡಿರುವ ಪಾಕಿಸ್ತಾನ, ಅಲ್ಲಿನ ಜನರ ಜೀವನವನ್ನು ಇನ್ನಷ್ಟು ಕಠಿಣಗೊಳಿಸಿದೆ. ಇದರ ವಿರುದ್ಧ ಜನರು ಹೋರಾಟಕ್ಕಿಳಿದಿದ್ದಾರೆ. ಇದೇ ವಿಷಯಕ್ಕೆ ಪೆಚ್ಚಾದ ಪಾಕಿಸ್ತಾನ ಪೊಲೀಸ್ ದಾಳಿಗಳನ್ನು ನಡೆಸಿ ಜನರ ಜೀವ ತೆಗೆದುಕೊಳ್ಳುತ್ತಿದೆ.

ಹಾಗೆ ನೋಡಿದರೆ, ಒಂದು ಕ್ರಿಕೆಟ್ ಪಂದ್ಯ ಗೆಲ್ಲಬೇಕಾದರೆ ತಂಡದ ಫೀಲ್ಡಿಂಗ್ ಎಷ್ಟೊಂದು ಮುಖ್ಯವೋ, ಆಡಳಿತ ವಿಚಾರದಲ್ಲಿ ಪ್ರತಿಯೊಂದು ಪ್ರದೇಶದ ಮೇಲೆ ಕಣ್ಣಿಟ್ಟು ಅಭಿವೃದ್ಧಿಸುವುದು ಅಷ್ಟೇ ಮುಖ್ಯ. ಆದರೆ ಪಾಕಿಸ್ತಾನ ಮೊದಲಿನಿಂದಲೂ ಎರಡರಲ್ಲೂ ಸತತ ವೈಫಲ್ಯ ಕಾಣುತ್ತಾ ಬಂದಿದೆ. ಪಾಕಿಸ್ತಾನ ಕ್ರಿಕೆಟ್ ತಂಡದ ಕಳಪೆ ಫೀಲ್ಡಿಂಗ್ ಅನ್ನು ಪಾಕಿಸ್ತಾನಿ ಕ್ರಿಕೆಟ್ ಅಭಿಮಾನಿಗಳೇ ಗೇಲಿ ಮಾಡುತ್ತಾರೆ. ಈಗ ಪಾಕಿಸ್ತಾನ ಆಡಳಿತವನ್ನೂ ಅಲ್ಲಿನ ಜನರೇ ಗೇಲಿ ಮಾಡುತ್ತಿದ್ದಾರೆ. ಕ್ಯಾಚ್ ಕೈಚೆಲ್ಲುವುದೆಂದರೆ ಚೆಂಡನ್ನು ಅನ್ನು ಹಿಡಿಯದಿರುವುದು. ಚೆಂಡು ಬರುವ ದಿಕ್ಕನ್ನು ತಪ್ಪಿಸಿಕೊಳ್ಳುವುದಾಗಿತ್ತು. ಪಾಕ್ ಕ್ರಿಕೆಟ್‌ನಲ್ಲಿ ಹೀಗೆ ಸುಲಭವಾಗಿ ಹಿಡಿಯಬಹುದಾದ ಚೆಂಡನ್ನು ನಿರ್ಣಾಯಕ ಸಂದರ್ಭಗಳಲ್ಲೇ ಕೈಬಿಟ್ಟ ಅನೇಕ ಉದಾಹರಣೆಗಳಿವೆ.



ಮೊದಲಿನಿಂದಲೂ ಪಾಕ್‌ನಲ್ಲಿ ರಾಜಕಾರಣಿಗಳೆಲ್ಲರೂ ಬಲೋಚಿಸ್ತಾನದ ಬಗ್ಗೆ ಮಾತನಾಡುತ್ತಾ, ಅಲ್ಲಿನ ಜನರಿಗೆ ಅನ್ಯಾಯವಾಗಿದೆ ಎಂದೂ, ಅಭಿವೃದ್ಧಿ ಮಾಡುತ್ತೇವೆ ಎಂದೂ ಹೇಳಿ ಮತ ಪಡೆಯುತ್ತಾರೆ. ಆದರೆ ಅಲ್ಲಿನ ಜನರನ್ನು ಕಂಡರೆ ಸರ್ಕಾರಕ್ಕೂ ಆಗಲ್ಲ, ಸೇನೆಗೂ ಆಗಲ್ಲ. ಅಲ್ಲಿನ ಜನರು ದಂಗೆದ್ದು ಪ್ರಶ್ನೆ ಕೇಳಿದಾಗ ಅವರ ಮೇಲೆ ಭಯೋತ್ಪಾದನಾ ದಾಳಿಗಳನ್ನು ಪಾಕಿಸ್ತಾನ ನಡೆಸಿತು.

ಕ್ರಿಕೆಟಿನಲ್ಲಿ ಇದು ಸಾಮಾನ್ಯವಾದರೂ ಪಾಕಿಸ್ತಾನಿಯರು ಕ್ಯಾಚ್ ಕೈಚೆಲ್ಲುವ ರೀತಿಗೆ ಹೊಸ ಪರಿಭಾಷೆಯನ್ನೇ ಬರೆದವರು! ಬೌಂಡರಿಯ ಬದಿಯಲ್ಲಿ ಬಾಲ್ ಮೇಲಿಂದ ಕೆಳಗೆ ಬರುವುದರಲ್ಲಿ ಇಬ್ಬರು ಫೀಲ್ಡರುಗಳು ಕ್ಯಾಚ್‌ಗಾಗಿ ಬರುವುದು. ಮೊದಲನೇ ಫೀಲ್ಡರ್ ಮುಂದಿನವನು ಹಿಡಿಯುತ್ತಾನೆ ಎಂದು ಬಿಟ್ಟರೆ ಇನ್ನೊಬ್ಬ ಮುಂದೆ ಬರುವವನು ಹಿಡಿಯುತ್ತಾನೆಂದು ಬಿಡುವುದು. ಬಾಲ್ ಬರುವಷ್ಟರಲ್ಲಿ ಇಬ್ಬರೂ ಎದುರು ಬದುರಾಗಿ ಒಬ್ಬರಿಗೊಬ್ಬರನ್ನು ನೋಡುತ್ತಾ ನಿಲ್ಲುವುದು. ಈ ಕ್ಷಣದಲ್ಲಿ ಪಾಕಿಸ್ತಾನಿ ಕ್ರಿಕೆಟಿಗರು ಏನು ಮಾಡಲು ಹೊರಟಿದ್ದಾರೆಂದೇ ತಿಳಿಯುವುದಿಲ್ಲ. ಇವತ್ತಿಗೂ ಆ ರೀತಿ ಯಾರು ಕ್ಯಾಚ್ ಬಿಡುತ್ತಾರೋ ಅವರಿಗೆ ಪಾಕಿಸ್ತಾನಿ ಅಭಿಮಾನಿಗಳೆಂದು ಗೇಲಿ ಮಾಡುವ ವಾಡಿಕೆಯಿದೆ. ಇದು ಒಂದು ಕಡೆ. ಆಡಳಿತ ವಿಚಾರಕ್ಕೆ ಬಂದರೆ ಗಡಿ ಭಾಗಗಳಲ್ಲಿ ಅಭಿವೃದ್ಧಿ ಪಡಿಸಿ ಜನರನ್ನು ಸೆಳೆಯಬೇಕೆ ಅಥವಾ ಅವರಿಗೆ ಭಯೋತ್ಪಾದನೆಯಿಂದಲೋ, ಪೊಲೀಸರಿಂದಲೋ ಹೆದರಿಸಿ ಬಾಯಿ ಮುಚ್ಚಿಸಬೇಕೆ ಎಂಬ ಗೊಂದಲ ಪಾಕ್‌ಗೆ ತನ್ನ ತಂಡದ ಆಟಗಾರರ ಕ್ರಿಕೆಟ್ ಫೀಲ್ಡಿಂಗಿನಂತೆ ಭಾಸವಾಗುತ್ತದೆ. ವಾಸ್ತವವಾಗಿ ಭಯೋತ್ಪಾನಾ ಚಟುವಟಿಕೆಗಳಿಗೆ ಉತ್ತೇಜಿಸುವುದು ಮತ್ತು ಅದಕ್ಕೆ ಬೇಕಾದ ಬೆಂಬಲ ಕೊಡುವುದು ಪಾಕಿಸ್ತಾನ ಸರ್ಕಾರ ಮತ್ತು ಅಲ್ಲಿನ ಸೇನೆಯ ಕೆಟ್ಟ ಚಾಳಿ.

ಯಾವುದೇ ವಿಚಾರದಲ್ಲಿ ಪಾಕಿಸ್ತಾನ ಸರ್ಕಾರದ ವೈಫಲ್ಯ ಕಂಡುಬಿಟ್ಟರೆ ಅಲ್ಲಿ ಭಯೋತ್ಪಾದಕರು ಸಕ್ರಿಯರಾಗುತ್ತಾರೆ. ಅದರ ವಿರುದ್ಧ ಹೋರಾಟಗಳು ನಡೆಯಲಾರಂಭಿಸಿದರೆ ಪೊಲೀಸರು ಪೌರುಷ ಪ್ರದರ್ಶಿಸುತ್ತಾರೆ. ಲಯರಿ ಪಟ್ಟಣಗಳಲ್ಲಿ ಗೂಂಡಾಗಿರಿ ಮಾಡುವ ಸಾಮಾನ್ಯ ಮನುಷ್ಯನೂ ಭಯೋತ್ಪಾದಕ ಹೇಳಿದಂತೆ ಕೇಳುತ್ತಾನೆ. ಇನ್ನು ಐಎಸ್‌ಐ ಅಂತೂ ಇದರಲ್ಲಿ ಎತ್ತಿದ ಕೈ. ಐಎಸ್‌ಐ ಕೆಲವೊಮ್ಮೆ ಪಾಕಿಸ್ತಾನ ಸರ್ಕಾರಕ್ಕಿಂತ ಹೆಚ್ಚಾಗಿ ಭಯೋತ್ಪಾದಕರಿಗಾಗಿ ಹೆಚ್ಚು ದುಡಿಯುತ್ತದೆ. ಹೀಗಾಗಿ ಪಾಕ್‌ನ ಸರ್ಕಾರವನ್ನು ಅಲ್ಲಿನ ಭಯೋತ್ಪಾದಕರು ನಡೆಸುತ್ತಾರೆಂದರೆ ತಪ್ಪಾಗಲ್ಲ. ಈ ನಿಟ್ಟಿನಲ್ಲಿ ಅಲ್ಲಿನ ಸರ್ಕಾರಕ್ಕೆ ಪಿಒಕೆ ಅಂಥ ಪ್ರದೇಶಗಳಲ್ಲಿ ಅಭಿವೃದ್ಧಿ ಮಾಡಲಾಗಲ್ಲ. ಭಯೋತ್ಪಾಕರೇ ದಂಗೆ ಮಾಡಿಸುತ್ತಾರೆ. ಇವೆಲ್ಲವನ್ನೂ ನೋಡಿದರೆ, ಪಾಕಿಸ್ತಾನದ ನಿರ್ವಹಣೆ ಮತ್ತು ಆಡಳಿತ ವೈಖರಿ ಅದೇ ದೇಶದ ಕ್ರಿಕೆಟ್ ತಂಡದ ಫೀಲ್ಡಿಂಗ್‌ನಂತೇ ದುರ್ಬಲವಾಗಿದೆ.

ಇತಿಹಾಸದಲ್ಲೂ ಇಂಥ ಘಟನೆಗಳು ನಡೆದಿವೆ. ಮೊದಲಿನಿಂದಲೂ ಪಾಕ್‌ನಲ್ಲಿ ರಾಜಕಾರಣಿಗಳೆಲ್ಲರೂ ಬಲೋಚಿಸ್ತಾನದ ಬಗ್ಗೆ ಮಾತನಾಡುತ್ತಾ, ಅಲ್ಲಿನ ಜನರಿಗೆ ಅನ್ಯಾಯವಾಗಿದೆ ಎಂದೂ, ಅಭಿವೃದ್ಧಿ ಮಾಡುತ್ತೇವೆ ಎಂದೂ ಹೇಳಿ ಮತ ಪಡೆಯುತ್ತಾರೆ. ಆದರೆ ಅಲ್ಲಿನ ಜನರನ್ನು ಕಂಡರೆ ಸರ್ಕಾರಕ್ಕೂ ಆಗಲ್ಲ, ಸೇನೆಗೂ ಆಗಲ್ಲ. ಅಲ್ಲಿನ ಜನರು ದಂಗೆದ್ದು ಪ್ರಶ್ನೆ ಕೇಳಿದಾಗ ಅವರ ಮೇಲೆ ಭಯೋತ್ಪಾದನಾ ದಾಳಿಗಳನ್ನು ಪಾಕಿಸ್ತಾನ ನಡೆಸಿತು. ಆದರೆ ಬಲೋಚಿಸ್ತಾನದಲ್ಲಿ ನಡೆಯುತ್ತಿರುವ ಹೋರಾಟಗಳು ಪಾಕ್‌ಗೆ ನುಂಗಲಾಗದ ತುತ್ತಾಗುತ್ತಿರುವಾಗಲೇ ಈಗ ಪಿಒಕೆಯನ್ನು ಎದುರಿಸಬೇಕಾದ ಪರಿಸ್ಥಿತಿ ಬಂದಿದೆ.

ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಕೇಳಿಬರುತ್ತಿರುವ ಆಜಾದಿ ಘೋಷಣೆ, ಹೋರಾಟ ಮತ್ತು ಅಲ್ಲಿನ ಜನರ ಪ್ರತಿರೋಧ ಪಾಕಿಸ್ತಾನಕ್ಕೆ ತೀವ್ರ ಆತಂಕ ತಂದಿದೆ. ಮಾಧ್ಯಮದ ಮುಂದೆ ಕಾಶ್ಮೀರಕ್ಕಾಗಿ ನಾವು ಜೀವವನ್ನೇ ಕೊಡುತ್ತೇವೆ ಎಂದೆಲ್ಲಾ ಹೇಳುವ ಪಾಕಿಸ್ತಾನ ಕಡೆ ಪಕ್ಷ ಪಿಒಕೆಯಲ್ಲಿ ಆಸ್ಪತ್ರೆಯನ್ನಾದರೂ ಮೊದಲು ಕಟ್ಟಲಿ. ಮುಜಫರಾಬಾದ್‌ನಲ್ಲಿ ಜನರ ಭೀಕರ ಪರಿಸ್ಥಿತಿ ಇಡೀ ವಿಶ್ವಕ್ಕೆ ಗೊತ್ತು. ಅದಲ್ಲದೆ ಮೀರ್‌ಪುರ್, ಬಾಲ್ಟಿಸ್ಥಾನದಲ್ಲೂ ಜನರ ಪಾಡು ಅತ್ಯಂತ ಹೀನಾಯವಾಗಿದೆ. ಮಕ್ಕಳಿಗೆ ಶಾಲೆಗಳಿಲ್ಲ, ಯುವಕರಿಗೆ ನೌಕರಿಯಿಲ್ಲ. ಗಿಲ್ಗಿಟ್–ಬಾಲ್ಟಿಸ್ತಾನದಲ್ಲೂ ಇದೇ ಪರಿಸ್ಥಿತಿ. ಹಾಗೆ ನೋಡಿದರೆ ಸಂಪೂರ್ಣ ಪಾಕಿಸ್ತಾನದ ಪರಿಸ್ಥಿತಿಯೇ ಹಾಗೇ ಇದೆ. ಆದರೆ ತೀರಾ ಇಸ್ಲಾಮಾಬಾದ್ ಹತ್ತಿರ ಇರುವ ಪಿಒಕೆ ಪ್ರದೇಶಗಳಲ್ಲಿ ಇಸ್ಲಾಮಾಬಾದ್‌ನಲ್ಲಿರುವ ಸೌಲಭ್ಯಗಳಿಲ್ಲ! ಕಡೆ ಪಕ್ಷ ಒಂದು ಬಸ್‌ಸ್ಟ್ಯಾಂಡ್ ಕೂಡ ಈ ಪ್ರದೇಶಗಳಲ್ಲಿ ನಿರ್ಮಿಸಲಾಗಿಲ್ಲ. ಈ ನಡುವೆ ದರ ಏರಿಕೆ ಜನರಿಗೆ ತೀರಾ ಬಿಸಿ ಮುಟ್ಟಿಸಿದೆ. ಇದೇ ಅವಸರದಲ್ಲಿ ದಂಗೆದ್ದ ಪಿಒಕೆ ಜನರು ಪಾಕಿಸ್ತಾನದಿಂದ ಬಿಡುಗಡೆಗೊಳ್ಳಲು ಕಾಯುತ್ತಿದ್ದಾರೆ. ಹತಾಶೆಗೊಳಗಾಗಿದ್ದಾರೆ. ಅಂಥ ಜನರನ್ನು ಪಾಕಿಸ್ತಾನ ಪೊಲೀಸರಿಂದ ಹೊಡೆಸುತ್ತಿದ್ದಾರೆ.

ಹಿಂದೆ ವೇದಿಕೆ ಮೇಲೆ ಹುಂಬನಂತೆ ಮಾತನಾಡುತ್ತಿದ್ದ ಆಸೀಂ ಮುನೀರ್ ದಂಗೆಕೋರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ಬಗ್ಗೆ ಹೇಳಿದ್ದ. ಅದರರ್ಥ ಪಿಒಕೆಯ ಸಾಮಾನ್ಯ ಜನರ ಜೀವ ಪಡೆಯುವುದು! ಪಾಕಿಸ್ತಾನದ ಆಡಳಿತ ವಿರುದ್ಧ ಮಾತನಾಡಿದವರೆಲ್ಲಾ ಪಾಕ್ ಪಾಲಿಗೆ ರಾ ಏಜಂಟ್‌ಗಳಾಗಿ ಬಿಡುತ್ತಾರೆ. ಆಡಳಿತ ಮಾಡಲಾಗದೆ ಹತಾಶಗೊಳ್ಳುವ ಪಾಕಿಸ್ತಾನ ಮೊದಲಿನಿಂದಲೂ ಭಯೋತ್ಪಾದಕ ದಾಳಿಗಳನ್ನು ಮಾಡುತ್ತಲೇ ಬಂದಿದೆ. ಈಗ ಪೊಲೀಸ್ ದಾಳಿ, ಹೆಸರು ಬೇರೆಯಾದರೂ ಕೆಲಸ ಒಂದೇ. ಜನಸಾಮಾನ್ಯರನ್ನು ಹೆದರಿಸುವುದು. ಇದರ ವಿರುದ್ಧ ಹೋರಾಟಗಳನ್ನು ಮಾಡಿರುವ ಸರ್ದಾರ್ ಅಮನ್ ಖಾನ್, ಶೋಕತ್ ನವಾಜ್ ಮಿರ್, ಓಮರ್ ನಝೀರ್, ಇಮ್ತಿಯಾಜ್ ಅಸ್ಲಂ, ಖ್ವಾಜಾ ಅರ್ಷದ್ ಅಂಥವರು ಪಾಕಿಸ್ತಾನಕ್ಕೆ ಧಮ್ಕಿ ಹಾಕುತ್ತಿದ್ದಾರೆ.

ತೀವ್ರ ಆತಂಕಕ್ಕೆ ಒಳಗಾದ ಪಾಕಿಸ್ತಾನ ದಾಳಿಗಿಳಿದಂತಿದೆ. ಅಸಲಿಗೆ ಇವರೆಲ್ಲಾ ಕೇಳಿದ್ದಾದರೂ ಏನು? ಶಾಲೆ ಕಟ್ಟಿಸಿ ಎಂದು ಕೇಳುವುದು ತಪ್ಪೇ? ಆಸ್ಪತ್ರೆಗಳಾಗಲಿ ಎಂದು ಕೇಳಿದರೆ ತಪ್ಪೇ? ಅಥವಾ ನಮಗೆ ಸ್ವಾತಂತ್ರ್ಯ ಬೇಕು ಎಂದು ಕೇಳಿದರೆ ತಪ್ಪೇ? ಸ್ವತಃ ಭಿಕ್ಷೆ ಬೇಡುವ ಪಾಕಿಸ್ತಾನಕ್ಕೆ ಇದೆಲ್ಲಾ ಪೂರೈಸುವುದು ಕಷ್ಟವಾದರೂ ಜನರನ್ನು ಸಾಯಿಸುವಷ್ಟು ಘೋರ ತಪ್ಪೇನು ಅಲ್ಲಿನ ಜನರು ಮಾಡಿರಲೇ ಇಲ್ಲ. ಅಸಲಿಯತ್ತಾಗಿ ಪಾಕಿಸ್ತಾನಕ್ಕೆ ಆಡಳಿತ ವಿಚಾರದಲ್ಲಿ ಗೊಂದಲಗಳಿವೆ. ಪಿಒಕೆಯಲ್ಲಿ ದಂಗೆ ಮಾಡಬೇಕೆ ಅಥವಾ ಅಲ್ಲಿನ ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕೆ ಎಂಬ ವಿಚಾರದಲ್ಲೇ ಅದಕ್ಕೆ ಗೊಂದಲಗಳಿವೆ. ಥೇಟ್ ಪಾಕ್ ತಂಡದ ಫೀಲ್ಡರ್‌ಗಳಂತೆ.

ಯಾವಾಗ ರೋಗಗಳು ಕಾಣಿಸುತ್ತವೆ?

ಅತ್ಯಂಬುಪಾನಾಂ ಕಠಿನಾಸನಾಂ ಚ ಧಾತುಕ್ಷಯೋ ವೇಗ ವಿಧಾರಣಾಂ ಚ ।
ದಿವಾಶಯೋ ಜಾಗರಣಾಂ ಚ ರಾತ್ರೌ ಷಡ್‌ಭಿರ್ ನರಾಣಾಂ ನಿವಸಂತಿ ರೋಗಾಃ ॥

- ಮಹಾಸುಭಾಷಿತ ಸಂಗ್ರಹ

ಹೆಚ್ಚಾಗಿ ನೀರು ಕುಡಿಯುವುದು, ಕಠಿಣವಾದ ಆಸನದಲ್ಲಿ ಕುಳಿತಿರುವುದು, ಧಾತು ಕ್ಷಯ, ವೇಗಗಳನ್ನು ತಡೆಯುವುದು, ಹಗಲು ಮಲಗುವುದು, ರಾತ್ರಿ ಎಚ್ಚರವಾಗಿರುವುದು– ಈ ಆರರಿಂದಾಗಿ ರೋಗಗಳು ಕಾಣಿಸಿಕೊಳ್ಳುತ್ತವೆ – ಎಂಬುದು ಶ್ಲೋಕಾರ್ಥ.

ಶ್ಲೋಕ ಸಾಗರ

ಡಾ. ಸೋಂದಾ ಭಾಸ್ಕರ ಭಟ್

ಶಾರೀರಿಕ ಪ್ರಕೃತಿ, ವಾತಾವರಣ, ಜನರ ಅಭ್ಯಾಸಗಳು, ಆಹಾರ ಪದ್ಧತಿಯಲ್ಲಿ ಏರುಪೇರು ಹೀಗೆ ಇನ್ನೂ ಅನೇಕ ಕಾರಣಗಳಿಂದಾಗಿ ರೋಗಗಳು ಕಾಣಿಸಿಕೊಳ್ಳುತ್ತವೆ. ಇತ್ತೀಚೆಗೆ ಮನುಷ್ಯನ ದುರಾಸೆ ಆರೋಗ್ಯದ ಆತಂಕಕ್ಕೆ ಇವುಗಳಿಂದಾಗಿಯೂ ರೋಗ ಬರುತ್ತದೆ. ಪ್ರಸ್ತುತ ಶ್ಲೋಕದಲ್ಲಿ ಅತಿಯಾಗಿ ನೀರು ಕುಡಿಯುವುದು, ಗಡುಸಾದ ಆಸನದಲ್ಲಿ ಕುಳಿತುಕೊಳ್ಳುವುದು, ಧಾತುಕ್ಷಯ, ವೇಗಗಳನ್ನು ತಡೆಯುವುದು, ಹಗಲು ನಿದ್ದೆ, ರಾತ್ರಿ ಜಾಗರಣ – ಹೀಗೆ ಆರು ಅಂಶಗಳನ್ನು ಗುರುತಿಸಿ ಇವುಗಳು ರೋಗಕ್ಕೆ ಕಾರಣವಾಗುತ್ತವೆ. ಇನ್ನೊಂದರ ಸುಭಾಷಿತ ರತ್ನ ಭಾಂಡಾಗಾರದಲ್ಲಿಯೂ ರೋಗಕ್ಕೆ ಕಾರಣವು ಯಾವುದು ಎಂದು ಹೇಳಲಾಗಿದೆ. ಮೇಲಿನ ಸುಭಾಷಿತದಲ್ಲಿ ಹೇಳಿರುವ ವಿಷಮಯವಾದ ಅನ್ನ ಎಂಬ ಅಂಶವನ್ನು ಅದರಲ್ಲಿ ಸೇರಿಸಲಾಗಿದೆ. ಹೆಚ್ಚಾಗಿ ನೀರು ಕುಡಿಯುವುದು ಒಳ್ಳೆಯದಲ್ಲ. ಇದರಿಂದ ಅನ್ನವು ಜೀರ್ಣವಾಗುವುದಿಲ್ಲ. ನೀರು ಕುಡಿಯದಿದ್ದರೂ ಅದೇ ದೋಷ. ಆದ್ದರಿಂದ ಜಠರಾಗ್ನಿಯನ್ನು ಹೆಚ್ಚಿಸುವುದಕ್ಕಾಗಿ ಆಗಾಗ ನೀರು ಕುಡಿಯುತ್ತಿರಬೇಕು ಎಂದು ಸುಭಾಷಿತಕಾರರು ಹೇಳುತ್ತಾರೆ. ತುಂಬಾ ಕಠಿಣವಾದ ಆಸನದಲ್ಲಿ ಕುಳಿತುಕೊಳ್ಳುವುದು, ಅತ್ಯಂತ ಮೃದುವಾದ ಸ್ಪಂಜಿನ ಆಸನದಲ್ಲಿ ಕುಳಿತುಕೊಳ್ಳುವುದೂ ಒಳ್ಳೆಯದಲ್ಲ. ಕುಳಿತುಕೊಳ್ಳುವಾಗಲೂ ಜಾಗ್ರತೆ ವಹಿಸಬೇಕು. ನಿರಂತರ ಧಾತು ಕ್ಷಯವಾಗುವುದು ಅನಾರೋಗ್ಯಕ್ಕೆ ಕಾರಣವಾಗುತ್ತದೆ. ಧಾತುಕ್ಷಯವಾಗದಂತೆ ಎಚ್ಚರ ವಹಿಸಬೇಕು. ವೇಗಧಾರಣಮ್ – ಎಂದರೆ ಮಲಮೂತ್ರಾದಿಗಳನ್ನು ಕಟ್ಟಿಕೊಳ್ಳುವುದು. ಕಾಲಕಾಲಕ್ಕೆ ಇವುಗಳ ವಿಸರ್ಜನೆಯಾಗಬೇಕು. ಇದು ಆರೋಗ್ಯದ ಲಕ್ಷಣ. ಇದರ ಹೊರತಾಗಿ ಮಲಬದ್ಧತೆ, ಮೂತ್ರಕಟ್ಟುವಿಕೆ ಇವು ಇನ್ನಷ್ಟು ರೋಗಕ್ಕೆ ಕಾರಣವಾಗುತ್ತದೆ. ಇದೇ ಶರೀರದಲ್ಲೇ ಬಲಿ ತೆಗೆದುಕೊಳ್ಳಬಹುದು. ಇವುಗಳನ್ನು ತಡೆಹಿಡಿಯುವುದು ಅಪಾಯಕ್ಕೆ ಕಾರಣವಾಗುತ್ತದೆ. ಆದ್ದರಿಂದ ಈ ಬಗ್ಗೆ ಎಚ್ಚರ ಸದಾ ಇರಬೇಕು.

ಹಗಲು ನಿದ್ದೆ ಮಾಡಬಾರದು. ರಾತ್ರಿ ಮಲಗಿ ನಿದ್ದೆ ಮಾಡಬೇಕು. ಇದು ಜಗದ ನಿಯಮ. ಹಗಲು ನಿದ್ದೆ ಯಾವಾಗಲೂ ಒಳ್ಳೆಯದಲ್ಲ. ರೋಗ ಬಂದಾಗ, ಮಕ್ಕಳು, ಮುದುಕರು ಹಗಲು ನಿದ್ದೆ ಮಾಡಬಹುದು. ಇದು ಅನಾರೋಗ್ಯದ, ದೌರ್ಬಲ್ಯದ ಲಕ್ಷಣ. ಆರೋಗ್ಯ ಸರಿ ಇದ್ದವರು ಹಗಲಿಗೆ ನಿದ್ದೆ ಮಾಡಬಾರದು. 'ದಿವಾ ಮಾ ಸ್ವಪ್ತಃ' ಇದು ಶಾಸ್ತ್ರ ವಾಕ್ಯ. ಇದು ಆರೋಗ್ಯದ ಲಕ್ಷಣ. ರಾತ್ರಿ ಚೆನ್ನಾಗಿ ನಿದ್ದೆ ಮಾಡಬೇಕು. ರಾತ್ರಿ ಇರುವುದೇ ನಿದ್ದೆ ಮಾಡುವುದಕ್ಕೆ. ಶಾರೀರಿಕ ಸುಸ್ತನ್ನು ದೂರ ಮಾಡುವುದಕ್ಕೆ ರಾತ್ರಿ ಸರಿಯಾಗಿ ನಿದ್ದೆ ಮಾಡದಿದ್ದರೆ ಬಗೆ ಬಗೆಯ ರೋಗಕ್ಕೆ ತುತ್ತಾಗಬೇಕಾಗುತ್ತದೆ. ರಾತ್ರಿಯ ನಿದ್ದೆ ಆರೋಗ್ಯದ ಲಕ್ಷಣ. ರಾತ್ರಿ ಪಾಳಿ, ರಾತ್ರಿಯೂ ಕೆಲಸ ಮಾಡುವುದು ಆರೋಗ್ಯಕ್ಕೆಂದೂ ಒಳ್ಳೆಯದಲ್ಲ. ಇಂದಿನ ಐಟಿ, ಬಿಟಿ ಯುಗದಲ್ಲಿ ಹಗಲು ರಾತ್ರಿಯಾಗಿದೆ, ರಾತ್ರಿ ಹಗಲಾಗಿದೆ. ಕೆಲಸ ಮಾಡುವ ಸಮಯವೇ ವ್ಯತ್ಯಾಸವಾಗಿ ಸಮಾಜದ ಸ್ವಾಸ್ಥ್ಯವೇ ಏರುಪೇರಾಗುತ್ತಿದೆ. ಇವುಗಳನ್ನೆಲ್ಲಾ ಗಮನದಲ್ಲಿರಿಸಿಕೊಂಡು ಶ್ಲೋಕ ಸಂದೇಶವನ್ನೂ ಅನುಸರಿಸಿದರೆ ಸ್ವಸ್ಥ ಜೀವನ ನಡೆಸಬಹುದು.


ಎಲ್ಲಾ ಪಕ್ಷಗಳು ರೆಸಾರ್ಟ್ ಸಂಸ್ಕೃತಿಗೆ ಕೊನೆ ಹಾಡಲಿ

ಸುರೇಶ್ ಕುಮಾರ್. ಎಸ್



ನಿನ್ನೆ ನಾನು ಕರ್ನಾಟಕ ರಾಜ್ಯ ವಿಧಾನ ಪರಿಷತ್ತಿಗೆ ಕರ್ನಾಟಕ ರಾಜ್ಯ ವಿಧಾನಸಭೆಯಿಂದ ಆಯ್ಕೆ ಮಾಡುವ ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಂಡು ಹೊರ ಬಂದೆ. ಒಟ್ಟು ಏಳು ಸ್ಥಾನಗಳಿಗೆ 8 ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ. ಸಹಜವಾಗಿ ಎಲ್ಲಾ ಪಕ್ಷಗಳು ಈ ಚುನಾವಣೆಗಳಲ್ಲಿ ಮತ ಚಲಾಯಿಸುವ ಕ್ರಮ ಕುರಿತು ವ್ಹಿಪ್ (Whip) ನೀಡುವುದು ನಡೆದುಕೊಂಡು ಬಂದಿರುವ ಪದ್ಧತಿ. ಅದೇ ರೀತಿ ನಮ್ಮ ಪಕ್ಷದಲ್ಲೂ ನೀಡಿರುವ ವ್ಹಿಪ್ ಅನುಸಾರವಾಗಿ ನಾವೆಲ್ಲರೂ ಮತ ಚಲಾಯಿಸಿದ್ದೇವೆ.

ವಿಧಾನಸಭಾ ಸದಸ್ಯನಾಗಿ ನಾನು ಅದೆಷ್ಟೋ ಚುನಾವಣೆಗಳಲ್ಲಿ ವಿಧಾನ ಪರಿಷತ್ತಿಗೆ, ರಾಜ್ಯಸಭೆಗೆ ಮತ್ತು ರಾಷ್ಟ್ರಪತಿ ಸ್ಥಾನಕ್ಕೆ ಮತವನ್ನು ಚಲಾಯಿಸಿದ್ದೇನೆ. ಇದೊಂದು ನನಗೆ ದೊರಕಿರುವ ಅಪೂರ್ವ ಅವಕಾಶ ಎಂದುಕೊಂಡು ಪ್ರತಿ ಬಾರಿ ಸಂತಸದಿಂದ ಮತ ಚಲಾಯಿಸಿದ್ದೇನೆ. ಮತ ಚಲಾಯಿಸುವ ಮೊದಲ ಮತದಾರರಲ್ಲಿ ನಾನೂ ಒಬ್ಬನಾಗಿರುತ್ತೇನೆ. ಈ ರೀತಿ ವಿಧಾನ ಪರಿಷತ್ತಿನ ಚುನಾವಣೆ ನಡೆಯುತ್ತಿರುವಾಗ ನನ್ನ ಮನಸ್ಸಿಗೆ ಬಂದ ಒಂದು ವಿಚಾರವನ್ನು ಹಂಚಿಕೊಳ್ಳಬೇಕೆಂದು ಅನಿಸಿದೆ.



ಈ ಚುನಾವಣೆಗಳಲ್ಲಿ ಮತ ಚಲಾಯಿಸುವವರೆಲ್ಲರೂ ವಿಧಾನ ಸಭೆಯ ಸದಸ್ಯರು. ಬೇರೆ ಬೇರೆ ಪಕ್ಷದ ಚಿನ್ಹೆ ಅಡಿ ಆಯ್ಕೆಯಾಗಿ ಬಂದಿರುವ ಸದಸ್ಯರು. ಆಯಾ ಪಕ್ಷಗಳ ಕಾರ್ಯಕರ್ತರು ಬಹಳ ಪರಿಶ್ರಮಪಟ್ಟು ಇವರುಗಳನ್ನು ಗೆಲ್ಲಿಸಿರುತ್ತಾರೆ. ಈ ಚುನಾವಣಾ ಸಂದರ್ಭದಲ್ಲಿ ವಿಧಾನಸಭಾ ಸದಸ್ಯರನ್ನು ರಾಜಕೀಯ ಪಕ್ಷಗಳು ರೆಸಾರ್ಟ್‌ಗಳಿಗೆ ಕರೆದುಕೊಂಡು ಹೋಗಿ ಎರಡು ದಿನಗಳ ಕಾಲ ಅವರ ಮೇಲೆ ಕಣ್ಗಾವಲು ವ್ಯವಸ್ಥೆ ಮಾಡುವುದು ಎಷ್ಟರಮಟ್ಟಿಗೆ ಸರಿ? ನನಗೆ ನೆನಪಿರುವಂತೆ, ನಮ್ಮ ರಾಜ್ಯದಲ್ಲಿ ಈ ರೆಸಾರ್ಟ್ ಸಂಸ್ಕೃತಿ ಪ್ರಾರಂಭವಾಗಿದ್ದು ದಿವಂಗತ ಎನ್.ಟಿ ರಾಮರಾವ್ ಅವರ ತೆಲುಗು ದೇಶಂ ಪಕ್ಷದ ಮೇಲೆ ಅಂದಿನ ಕೇಂದ್ರದ ಆಳುವ ಪಕ್ಷದ ವಕ್ರಗಣ್ಣು ಬಿದ್ದು, ಆ ಸರ್ಕಾರವನ್ನು ವಜಾ ಮಾಡಿದ ಹಿನ್ನೆಲೆಯಲ್ಲಿ. ತೆಲುಗು ದೇಶಂ ಪಕ್ಷದ ಶಾಸಕರನ್ನು ನಮ್ಮ ರಾಜ್ಯದ ರೆಸಾರ್ಟ್‌ಗೆ ಕರೆದುಕೊಂಡ ಬಂದ 1983ರ ವಿದ್ಯಮಾನ ನನ್ನ ನೆನಪಿನಲ್ಲಿದೆ. ಅದಾದ ಮೇಲೆ ಹಲವಾರು ಸಂದರ್ಭದಲ್ಲಿ ಎಲ್ಲಾ ಪಕ್ಷಗಳು ತಮ್ಮ ತಮ್ಮ ಶಾಸಕರನ್ನು ರೆಸಾರ್ಟ್ ಸಂಸ್ಕೃತಿಗೆ ಒಳಪಡಿಸಿರುವುದು ಇತಿಹಾಸದ ಒಂದು ಭಾಗ.

ಪ್ರತಿಯೊಂದು ಪಕ್ಷಕ್ಕೂ ತನ್ನ ಶಾಸಕರ ಬಗ್ಗೆ ವಿಶ್ವಾಸವಿರಬೇಕು, ನಂಬಿಕೆ ಇರಬೇಕು. ಅದೇ ರೀತಿ ಶಾಸಕರಿಗೂ ತಮ್ಮ ತಮ್ಮ ಪಕ್ಷದ ಬಗ್ಗೆ ಹೆಮ್ಮೆ ಮತ್ತು ಗೌರವ ಹಾಗೂ ಶ್ರದ್ಧೆ ಇರಬೇಕು. ಹೀಗಿರುವಾಗ ಶಾಸಕರು ಖರೀದಿಗೆ ಒಳಪಡುತ್ತಾರೆ ಅಥವಾ ಅವರನ್ನು ಬೇರೆ ಪಕ್ಷದವರು ಅಪಹರಿಸಬಹುದು ಅಥವಾ ವಿವಿಧ ರೀತಿಯ ಆಮಿಷಗಳಿಗೆ ಅವರನ್ನು ಒಳ ಮಾಡಬಹುದು ಎಂಬ ಅಪನಂಬಿಕೆ ಪ್ರಜಾಪ್ರಭುತ್ವದ ಮೂಲ ಸಿದ್ಧಾಂತಕ್ಕೆ ಒಂದು ಕಳಂಕ.

Free & Fair Elections–ನ್ಯಾಯಯುತ ಮತ್ತು ಮುಕ್ತ ಚುನಾವಣೆಗಳು ಪ್ರಜಾತಂತ್ರದ ವ್ಯವಸ್ಥೆಯ ಮೂಲಸತ್ವ. ಹಾಗಿರುವಾಗ ಶಾಸಕರನ್ನು ಒಂದು ರೀತಿ ಒಟ್ಟು ಹಾಕಿ ಅವರ ಮೇಲೆ ನಿಗಾ ಇಡಬೇಕಾದ ಪರಿಸ್ಥಿತಿ ಬರುವುದು ರಾಜಕೀಯ ವ್ಯವಸ್ಥೆಗೆ ಭೂಷಣವಲ್ಲ. ಇದನ್ನು ರಾಜಕೀಯ ಪಕ್ಷಗಳು ಮತ್ತು ಶಾಸಕರು ಇಬ್ಬರು ಬಹಳ ಗಂಭೀರವಾಗಿ ಅವಲೋಕಿಸಬೇಕಿದೆ. ವಿಧಾನಸಭಾ ಸದಸ್ಯರನ್ನೇ ಈ ರೀತಿ ಚುನಾವಣಾ ಹಿನ್ನೆಲೆಯಲ್ಲಿ ಯಾವುದೋ ಆತಂಕದಿಂದ ಅಥವಾ ಭಯದಿಂದ, ಅವರ ಮೇಲೆ ಸಂಪೂರ್ಣ ನಂಬಿಕೆ ಇಡದೆ ಆಯಾ ಪಕ್ಷಗಳು ರೆಸಾರ್ಟ್‌ಗಳಿಗೆ ಅಥವಾ ಇನ್ನ್ಯಾವುದೋ ಸ್ಥಳಕ್ಕೆ ಕರೆದೊಯ್ಯುವುದು ದೇಶದ ಚುನಾವಣೆಗಳ ಸಾಮಾನ್ಯ ಮತದಾರನ ಮೇಲೆ ಯಾವ ಪರಿಣಾಮ ಬೀರಬಹುದು ಎಂಬುದನ್ನು ನಾವೆಲ್ಲರೂ ಪಕ್ಷ ಭೇದ ಮರೆತು ಗಂಭೀರವಾಗಿ ಚಿಂತನೆ ನಡೆಸಬೇಕಿದೆ. ರೆಸಾರ್ಟ್ ಸಂಸ್ಕೃತಿಗೆ ಕೊನೆಹಾಡಬೇಕೆಂಬ ಸಾಮಾನ್ಯ ಕನಿಷ್ಠ ಒಪ್ಪಂದಕ್ಕೆ ಎಲ್ಲಾ ರಾಜಕೀಯ ಪಕ್ಷಗಳು ಬರಬೇಕಿದೆ.

ಕಿರುಸುದ್ದಿ

ಜೂನ್ 21: ಅಂತಾರಾಷ್ಟ್ರೀಯ ಯೋಗ ದಿನಾಚರಣೆ

ಮಂಗಳೂರು: ಜಿಲ್ಲಾಡಳಿತ, ಆಯುಷ್ ಇಲಾಖೆ, ಆಯುಷ್ ಕಾಲೇಜುಗಳು, ಯೋಗ ಸಂಘಟನೆಗಳು, ಸ್ಕೌಟ್ಸ್ ಮತ್ತು ಗೈಡ್ಸ್ ಸಂಘಟನೆಗಳ ಸಹಯೋಗದೊಂದಿಗೆ ಜೂನ್ 21ರಂದು ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ನಗರದ ಪುರಭವನದಲ್ಲಿ ಬೆಳಿಗ್ಗೆ 8 ಗಂಟೆಗೆ ಆಯೋಜಿಸಲಾಗಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು.ಟಿ. ಖಾದರ್ ಫರೀದ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಉಪಸ್ಥಿತರಿರಲಿದ್ದಾರೆ. ಶಾಸಕ ಡಿ. ವೇದವ್ಯಾಸ ಕಾಮತ್ ಅಧ್ಯಕ್ಷತೆ ವಹಿಸಲಿದ್ದಾರೆ. ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಜಿಲ್ಲಾ ಆಯುಷ್ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೂ. 22: ಉದ್ಯೋಗ ಮೇಳ

ಮಂಗಳೂರು: ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಆಯುಕ್ತಾಲಯದ ನಿರ್ದೇಶನದಂತೆ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ (ಪುರುಷ) ಮಂಗಳೂರು ವತಿಯಿಂದ ಜೂನ್ 22 ರಂದು ಬೆಳಿಗ್ಗೆ 10 ಗಂಟೆಯಿಂದ ಮಂಗಳೂರು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ (ಮಹಿಳಾ)ಯಲ್ಲಿ ಉದ್ಯೋಗ ಹಾಗೂ ಅಪ್ರೆಂಟಿಷಿಪ್ ಮೇಳವನ್ನು ಆಯೋಜಿಸಲಾಗಿದೆ. ದ. ಕ. ಜಿಲ್ಲಾ ವ್ಯಾಪ್ತಿಗೆ ಒಳಪಡುವ ವಿವಿಧ ಉದ್ಯಮ ಸಂಸ್ಥೆಗಳು ತಮ್ಮ ಸಂಸ್ಥೆಯಲ್ಲಿ ಖಾಲಿರುವ ಪೋಸ್ಟ್ ಹಾಗೂ ಅಪ್ರೆಂಟಿಷಿಪ್ ತರಬೇತಿ ಸ್ಥಾನಗಳನ್ನು ಭರ್ತಿಗೊಳಿಸಲು ಭಾಗವಹಿಸುತ್ತಿರುವುದರಿಂದ ಐ.ಟಿ.ಐ ಉತ್ತೀರ್ಣ ಹಾಗೂ ಅಂತಿಮ ವರ್ಷದ ಐ.ಟಿ.ಐ.ನಲ್ಲಿ ತರಬೇತಿ ಪಡೆಯುತ್ತಿರುವ ಅಭ್ಯರ್ಥಿಗಳು ದಾಖಲಾತಿಗಳೊಂದಿಗೆ ಭಾಗವಹಿಸಬಹುದೆಂದು ಸಂಸ್ಥೆಯ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಬದಿಯಡ್ಕ: ಕಾಸರಗೋಡು ಜಿಲ್ಲಾ ಮೊಗೇರ ಸಂಘದ ವತಿಯಿಂದ ಪ್ರತಿಭಾ ಪುರಸ್ಕಾರಕ್ಕೆ ಸ್ವಜಾತಿ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. 2025–26ನೇ ವರ್ಷದ ಹತ್ತನೇ ತರಗತಿ ಹಾಗೂ ಪ್ಲಸ್ ಟು ಪರೀಕ್ಷೆಯಲ್ಲಿ ಎಲ್ಲಾ ವಿಷಯಗಳಲ್ಲಿ ಎ ಪ್ಲಸ್ ಅಂಕ ಪಡೆದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಬಿಳಿ ಹಾಳೆಯಲ್ಲಿ ತಯಾರಿಸಿದ ಅರ್ಜಿಯೊಂದಿಗೆ ಅಂಕ ಪಟ್ಟಿ, ಜಾತಿ ಪ್ರಮಾಣ ಪತ್ರ, ಆಧಾರ್ ಕಾರ್ಡ್, ಒಂದು ಪಾಸ್‌ಪೋರ್ಟ್ ಅಳತೆಯ ಫೋಟೋವನ್ನು ಜೂ.27ರ ಸಂಜೆ 5 ಗಂಟೆಯ ಒಳಗೆ ಸಂಘದ ಕಚೇರಿಗೆ ತಲುಪುವಂತೆ ಕಳುಹಿಸಬೇಕು. ಅಧ್ಯಕ್ಷರು/ ಕಾರ್ಯದರ್ಶಿ, ಕಾಸರಗೋಡು ಜಿಲ್ಲಾ ಮೊಗೇರ ಸಂಘ, ಹೊಸಂಗಡಿ, ಮಂಜೇಶ್ವರ, ಕಚೇರಿ ಮೇಲಿನ ಪೇಟೆ ಬದಿಯಡ್ಕ, ಅಂಚೆ – ಪೆರಡಾಲ 671551, ಮೊಬೈಲ್: 9846956992 ಅಥವಾ 9746562213 ಸಂಪರ್ಕಿಸಬಹುದು.

ಮಾದಕವಸ್ತು ಸೇವನೆ: ಐದು ಮಂದಿಯ ಬಂಧನ

ಮಂಗಳೂರು: ಮಂಗಳೂರು ನಗರ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ಮಾದಕವಸ್ತು ಸೇವನೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿ 5 ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ. ನಗರದ ಬಿಜೈ ಕೆಎಸ್‌ಆರ್‌ಟಿಸಿ ಬಳಿ ಮಾದಕವಸ್ತು ಸೇವಿಸಿದ್ದ ಕುಲಶೇಖರದ ಸಂದೀಪ್ ಡೇರೆಲ್ ಡಿಸೋಜ (29) ಎಂಬಾತನನ್ನು ಬರ್ಕೆ ಪೊಲೀಸರು ವಶಕ್ಕೆ ಪಡೆದು ಆಸ್ಪತ್ರೆಗೆ ಕರೆದೊಯ್ದು ತಪಾಸಣೆ ನಡೆಸಿದಾಗ ಮಾದಕವಸ್ತು ಸೇವನೆ ಮಾಡಿರುವುದು ದೃಢಪಟ್ಟಿದೆ. ಉಳ್ಳಾಲ ತಾಲೂಕು ಬೆಳ್ಮ ಗ್ರಾಮದ ದೇರಳಕಟ್ಟೆಯಲ್ಲಿ ಮಾದಕವಸ್ತು ಸೇವನೆ ಮಾಡಿ ನಶೆಯಲ್ಲಿದ್ದ ಮುಹಾರ್ಝ್ ಎಂ. (21) ಎಂಬಾತನನ್ನು ಕೊಣಾಜೆ ಪೊಲೀಸರು ವಶಕ್ಕೆ ಪಡೆದು ವೈದ್ಯಕೀಯ ತಪಾಸಣೆ ನಡೆಸಿದಾಗ ಮಾದಕವಸ್ತು ಸೇವನೆ ಮಾಡಿರುವುದು ದೃಢಪಟ್ಟಿದೆ. ಮಾದಕ ವಸ್ತು ಸೇವನೆ ಮಾಡಿ ಮಂಗಳೂರು ನಗರದ ಗ್ರೀನ್‌ಪಾರ್ಕ್ ಬಳಿ ನಶೆಯಲ್ಲಿದ್ದ ಕಕ್ಕೆಬೆಟ್ಟು ನಿವಾಸಿ ಸುಶಾನ್ ಕೆ. (35) ಎಂಬಾತನನ್ನು ಬಂದರು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ. ಕೋಟೆಕಾರು ಬೀರಿ ಜಂಕ್ಷನ್ ಬಳಿ ಪನೀರ್‌ರೋಡ್ ನಿವಾಸಿ ಕಾಸಿಂ ಯಾನೆ ಕುಂಞಿಮೋನು (44) ಎಂಬಾತ ನಶೆಯಲ್ಲಿದ್ದು, ಆತನನ್ನು ಉಳ್ಳಾಲ ಪೊಲೀಸರು ವಶಕ್ಕೆ ಪಡೆದು ವೈದ್ಯಕೀಯ ತಪಾಸಣೆ ನಡೆಸಿದಾಗ ಮಾದಕವಸ್ತು ಸೇವನೆ ಮಾಡಿರುವುದು ದೃಢಪಟ್ಟಿದೆ. ಕುಳಾಯಿ ಮರಿನಾ ವಾಟರ್ ಫ್ರಂಟ್‌ಗೆ ಹೋಗುವ ರಸ್ತೆಯಲ್ಲಿ ಅನುಮಾನಾಸ್ಪದವಾಗಿ ವರ್ತಿಸುತ್ತಿದ್ದ ಆರ್ಕುಳ ನಿವಾಸಿ ಮೊಹಮ್ಮದ್ ಸೈಫುಲ್ಲಾ (36) ಎಂಬಾತನನ್ನು ಸುರತ್ಕಲ್ ಪೊಲೀಸರು ವಶಕ್ಕೆ ಪಡೆದು ವೈದ್ಯಕೀಯ ತಪಾಸಣೆ ನಡೆಸಿದಾಗ ಮಾದಕವಸ್ತು ಸೇವನೆ ಮಾಡಿರುವುದು ದೃಢಪಟ್ಟಿದೆ.



ಭಾರತೀಯ ಸೇನೆಗೆ ಅಗ್ನಿವೀರನಾಗಿ ಆಯ್ಕೆಗೊಂಡ ತುಳುನಾಡ್ ಫ್ರೆಂಡ್ಸ್ ತೂಂಬಡ್ಕ ಇದರ ಸದಸ್ಯ ವಿಜಿತ್ ಕುಮಾರ್ ರೈ ಅವರನ್ನು ಕ್ಲಬ್‌ನ ವತಿಯಿಂದ ಅಭಿನಂದಿಸಲಾಯಿತು. ಕ್ಲಬ್‌ನ ಅಧ್ಯಕ್ಷ ದಯಾನಂದ ತೂಂಬಡ್ಕ, ಕಾರ್ಯದರ್ಶಿ ರವಿಚಂದ್ರ ಭರಣ್ಯ ಹಾಗೂ ಕ್ಲಬ್‌ನ ಸದಸ್ಯರು ಉಪಸ್ಥಿತರಿದ್ದರು.

ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕ ಶಶಿಧರ ಸೂಚನೆ

ಹೋಂಸ್ಟೇಗಳಲ್ಲಿ ಗ್ಯಾಸ್ ಗೀಸರ್ ಬಳಕೆ ನಿಷಿದ್ಧ

ಮಡಿಕೇರಿ: ಹೋಂ–ಸ್ಟೇಗಳಲ್ಲಿ ಗ್ಯಾಸ್ ಗೀಸರ್ ಬಳಸುವಂತಿಲ್ಲ ಎಂದು ಈಗಾಗಲೇ ತಿಳಿಸಿದ್ದರೂ, ಹಲವು ಹೋಂ–ಸ್ಟೇಗಳಲ್ಲಿ ಗ್ಯಾಸ್ ಗೀಸರ್ ಬಳಕೆಯಲ್ಲಿರುವುದು ಕಂಡು ಬಂದಿದೆ. ಗ್ಯಾಸ್ ಗೀಸರ್ ಬಳಕೆಯಿಂದ ಅನಾಹುತಗಳು ಸಂಭವಿಸಿದಲ್ಲಿ ಹೋಂ–ಸ್ಟೇ ಮಾಲಕರೇ ನೇರ ಹೊಣೆಗಾರರಾಗಿರುತ್ತಾರೆ ಎಂದು ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕ ಶಶಿಧರ ಅವರು ತಿಳಿಸಿದ್ದಾರೆ.



ಕೊಡಗು ಜಿಲ್ಲೆಯಲ್ಲಿ ಹೋಂ–ಸ್ಟೇ ನಡೆಸುವ ಮಾಲಕರು ಕಡ್ಡಾಯವಾಗಿ ಪ್ರವಾಸೋದ್ಯಮ ಇಲಾಖೆಯಲ್ಲಿ ನಿಯಮಾನುಸಾರ ಹೋಂ–ಸ್ಟೇ ನೋಂದಣಿ ಮಾಡಿಕೊಳ್ಳಲು ಸರ್ಕಾರದ ಪ್ರವಾಸೋದ್ಯಮ ನೀತಿ ಹಾಗೂ ಮಾರ್ಗಸೂಚಿಗಳಿಗೆ ಬದ್ಧರಿದ್ದಲ್ಲಿ ಪೊಲೀಸ್ ಇಲಾಖೆ ಹಾಗೂ ಸ್ಥಳೀಯ ಸಂಸ್ಥೆಗಳ ನಿರಾಕ್ಷೇಪಣಾ ಪತ್ರಗಳನ್ನು ಪಡೆದುಕೊಂಡಿರುವ ಮಾಲಕರಿಗೆ ಪ್ರವಾಸೋದ್ಯಮ ಇಲಾಖೆಯಿಂದ 5 ವರ್ಷದ ಅವಧಿಗೆ ಪರವಾನಗಿ ನೀಡಲಾಗುತ್ತದೆ.

ಹೋಂ–ಸ್ಟೇ ನಡೆಸುವ ಮಾಲಕರು ಪ್ರವಾಸಿಗರ ಮನೋರಂಜನೆಗಾಗಿ ಹೋಂ–ಸ್ಟೇಗಳಲ್ಲಿ ಈಜುಕೊಳ, ಜಿಪ್‌ಲೈನ್, ಕಾಯಾಕಿಂಗ್ ಮತ್ತು ಇತರೆ ಸಾಹಸ ಚಟುವಟಿಕೆ ಅಳವಡಿಸಿಕೊಂಡಿದ್ದು, ಈ ಚಟುವಟಿಕೆಗಳನ್ನು ನಡೆಸುವ ಸಂಬಂಧ ಸರಿಯಾದ ಮಾರ್ಗಸೂಚಿ ಅನುಸರಿಸುವುದು ಹಾಗೂ ಸಂಬಂಧಪಟ್ಟ ಇಲಾಖೆಗಳಿಂದ ನಿರಾಕ್ಷೇಪಣಾ ಪತ್ರ ಪಡೆಯುವುದು ಕಡ್ಡಾಯ. ಇವುಗಳಿಂದ ಪ್ರವಾಸಿಗರಿಗೆ ತೊಂದರೆಗಳು ಉಂಟಾದಲ್ಲಿ ಮಾಲಕರೇ ನೇರ ಹೊಣೆಗಾರರಾಗುತ್ತಾರೆ ಎಂದೂ ಅವರು ಎಚ್ಚರಿಸಿದ್ದಾರೆ.

ಇಲಾಖೆಯು ನೀಡುವ ಮಾರ್ಗಸೂಚಿಗಳನ್ನು ಪಾಲಿಸುವುದರೊಂದಿಗೆ ಪ್ರವಾಸಿಗರಿಗೆ ಕೊಡಗು ಜಿಲ್ಲೆಯ ಪ್ರವಾಸವನ್ನು ಸ್ಮರಣೀಯವಾಗಿಸಲು ಸಹಕರಿಸುವಂತೆ ಶಶಿಧರ ಅವರು ಕೋರಿದ್ದಾರೆ.

ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸಭೆಯಲ್ಲಿ ಕೊಡಗು ಜಿಲ್ಲಾಧಿಕಾರಿ ಸೂಚನೆ

ಮಳೆಗಾಲದಲ್ಲಿ ಅಪಘಾತ ತಡೆಗೆ ಕ್ರಮ ವಹಿಸಿ

ಮಡಿಕೇರಿ: ಮಳೆಗಾಲದ ಅವಧಿಯಲ್ಲಿ ರಸ್ತೆ ಅಪಘಾತ ತಡೆಯಲು ರಸ್ತೆ ಸುರಕ್ಷತಾ ನಿಯಮಗಳನ್ನು ಅನುಸರಿಸುವುದರೊಂದಿಗೆ ಸುಗಮ ಸಂಚಾರಕ್ಕೆ ಅಗತ್ಯ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಅವರು ನಿರ್ದೇಶನ ನೀಡಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ 'ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸಭೆ'ಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಭೆಯಲ್ಲಿ ಈ ಹಿಂದೆ ನಡೆದ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳ ಅನುಷ್ಠಾನ ಕುರಿತಂತೆ ಸಂಬಂಧಪಟ್ಟ ಇಲಾಖೆಯವರು ತೆಗೆದುಕೊಂಡ ಕ್ರಮಗಳ ಬಗ್ಗೆ ಚರ್ಚಿಸಲಾಯಿತು.

ಈ ಸಂದರ್ಭ ಮಾತನಾಡಿದ ರಾಷ್ಟ್ರೀಯ ಹೆದ್ದಾರಿ ಉಪ–ವಿಭಾಗದ ಸಹಾಯಕ ಇಂಜಿನಿಯರ್ ಎಂ.ಹನುಮಂತ ಅವರು ಸಂಪಾಜೆಯಿಂದ–ಕುಶಾಲನಗರ ರಾಷ್ಟ್ರೀಯ ಹೆದ್ದಾರಿಯಲ್ಲಿ ಎಚ್ಚರಿಕೆಯ ಬೋರ್ಡ್ ಅಳವಡಿಸಲು ಮುಂದಾಗಿರುವುದಾಗಿ ತಿಳಿಸಿದರು.

ಜಿಲ್ಲಾಧಿಕಾರಿ ಸೋಮಶೇಖರ್ ಅವರು ಮಾತನಾಡಿ, ಈಗಾಗಲೇ ಎಚ್ಚರಿಕೆಯ ಬೋರ್ಡ್‌ಗಳನ್ನು ಅಳವಡಿಸಿರುವ ದಿನಾಂಕ, ಜಿಯೋ ಕೋ–ಆರ್ಡಿನೇಟ್ಸ್ ಬಗ್ಗೆ ಮಾಹಿತಿಯನ್ನು ಒದಗಿಸಲು ಹಾಗೂ ಅಗತ್ಯವಿರುವ ಜಾಗದಲ್ಲಿ ರಾಷ್ಟ್ರೀಯ ಹೆದ್ದಾರಿ ಹಾಗೂ ಪೊಲೀಸ್ ಇಲಾಖೆಯವರು ಜಂಟಿ





ಕಾರ್ಯಾಚರಣೆ ನಡೆಸಿ ರಸ್ತೆ ಸುರಕ್ಷತೆಯ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ಮಡಿಕೇರಿ–ಕಾಟಕೇರಿ ರಸ್ತೆಯಲ್ಲಿ ಅಪಘಾತ ವಲಯಗಳು ಹೆಚ್ಚಿದ್ದು, ವಾಹನ ಸವಾರರಿಗೆ ಸಮಸ್ಯೆ ಎದುರಾಗಲಿದೆ. ಆದ್ದರಿಂದ ಕ್ಯಾಟ್‌ಐಸ್ ಸ್ಟಿಕ್ಕರ್, ಬಿಳಿ ರೇಡಿಯಂ ಸ್ಟಿಕ್ಕರ್‌ಗಳನ್ನು ಅಳವಡಿಸುವ ಮೂಲಕ ಸಾರ್ವಜನಿಕರ ಹಿತಾಸಕ್ತಿ ಕಾಪಾಡುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸಲಹೆ ನೀಡಿದರು.

ಮಡಿಕೇರಿ–ಕುಶಾಲನಗರ ರಾಷ್ಟ್ರೀಯ ಹೆದ್ದಾರಿಯ ಕೆದಕಲ್ ಭದ್ರಕಾಳಿ ದೇವಸ್ಥಾನ ಹತ್ತಿರ ಪ್ರವಾಸಿಗರು ರಸ್ತೆಯ ಎರಡೂ ಬದಿ ವಾಹನ ನಿಲುಗಡೆ ಮಾಡುವುದರಿಂದ ತಿರುವಿನಲ್ಲಿ ರಸ್ತೆಯ ಅಗಲ ಕಿರಿದಾಗಿ ವಾಹನ ಚಲಾಯಿಸಲು ಚಾಲಕರಿಗೆ ಕಷ್ಟಕರವಾಗಿ ಅಪಘಾತಗಳು ಉಂಟಾಗುತ್ತಿರುವುದು ಕಂಡುಬಂದಿದೆ. ಆದ್ದರಿಂದ ಆ ತಿರುವಿನಲ್ಲಿ ರಸ್ತೆಯ ಎರಡೂ ಬದಿಯಲ್ಲಿ ನೋ ಪಾರ್ಕಿಂಗ್ ಬೋರ್ಡ್ ಅಳವಡಿಸಿ ವಾಹನ ನಿಲುಗಡೆ ಮಾಡದಿರುವಂತೆ ಕ್ರಮ ವಹಿಸಬೇಕಿದೆ ಎಂದು ರಾಷ್ಟ್ರೀಯ ಹೆದ್ದಾರಿ ವಿಭಾಗದ ಇಂಜಿನಿಯರ್ ಅವರು ಕೋರಿದರು.

ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಎಂಜಿನಿಯರ್ ಕೆ.ಟಿ.ಪ್ರಭು ಅವರು ಮಾತನಾಡಿ, ಗೋಣಿಕೊಪ್ಪ ಪಟ್ಟಣ ಮುಖ್ಯರಸ್ತೆ ಹಾಗೂ ಬೈಪಾಸ್ ರಸ್ತೆಯಲ್ಲಿ ವಾಹನ ದಟ್ಟಣೆ ಹಾಗೂ ಅಪಘಾತ ಪ್ರಕರಣ ಹೆಚ್ಚಾಗಿದ್ದು, ಪಟ್ಟಣದ ಮುಖ್ಯ ರಸ್ತೆಯಲ್ಲಿ ವಾಹನಗಳ ಏಕಮುಖ ಸಂಚಾರ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ. ಪಟ್ಟಣದ ಪಾಲಿಬೆಟ್ಟ ರಸ್ತೆಯಲ್ಲಿ ಕೆಲವೊಂದು ನಿರ್ಬಂಧ ವಿಧಿಸಿ ವಾಹನಗಳ ಪಾರ್ಕಿಂಗ್ ವ್ಯವಸ್ಥೆಗೆ ತಾತ್ಕಾಲಿಕವಾಗಿ ಮೂರು ತಿಂಗಳವರೆಗೆ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

> ಜಿಲ್ಲೆಯಲ್ಲಿ ಅಪಘಾತ ವಲಯಗಳನ್ನು ಗುರುತಿಸಿ, ಇಂತಹ ಸ್ಥಳಗಳಲ್ಲಿ ಸೂಕ್ತ ರಸ್ತೆ ಸುರಕ್ಷತಾ ಕ್ರಮ ವಹಿಸಬೇಕು. ಅಪಘಾತ ಸಂಭವಿಸುವ ರಸ್ತೆಗಳಲ್ಲಿ ಸಂಚಾರ ಚಿಹ್ನೆ ಹಾಗೂ ರಸ್ತೆ ಗುರುತು ಫಲಕ ಅಳವಡಿಸಬೇಕು. ಅವಶ್ಯವಿದ್ದೆಡೆ ಬ್ಯಾರಿಕೇಡ್ ಸೇರಿದಂತೆ ಸುರಕ್ಷತಾ ಕ್ರಮವಹಿಸಿ ರಸ್ತೆ ನಿಯಮಗಳ ಪಾಲನೆಯಾಗುವಂತೆ ನೋಡಿಕೊಳ್ಳಬೇಕು
>
> ■ ಎಸ್.ಜೆ.ಸೋಮಶೇಖರ್, ಜಿಲ್ಲಾಧಿಕಾರಿ

ಪಾರ್ಕಿಂಗ್ ನಿಷೇಧ

ವೀರಾಜಪೇಟೆ ಪಟ್ಟಣದಲ್ಲಿ ವಾಹನಗಳ ಸಂಚಾರ ಮತ್ತು ನಿಲುಗಡೆ ವ್ಯವಸ್ಥೆಗೆ ಸಂಬಂಧಿಸಿದಂತೆ ಪಟ್ಟಣದ ಮೂರ್ನಾಡು ಜಂಕ್ಷನ್‌ನಿಂದ ದೊಡ್ಡಟ್ಟಿ ಚೌಕಿವರೆಗೆ ದ್ವಿಮುಖ ಸಂಚಾರ ವ್ಯವಸ್ಥೆ ಮಾಡಿ ಪಾರ್ಕಿಂಗ್ ನಿಷೇಧಿಸುವುದರಿಂದ ಗೋಣಿಕೊಪ್ಪದ ಕಡೆಗೆ ತೆರಳುವ ವಾಹನಗಳು ಮತ್ತು ಗೋಣಿಕೊಪ್ಪದಿಂದ ಮಡಿಕೇರಿ ಕಡೆಗೆ ತೆರಳುವ ವಾಹನಗಳ ಸುಗಮ ಸಂಚಾರಕ್ಕೆ ಅವಕಾಶವಾಗುತ್ತದೆ. ಹಾಗೆಯೇ ಗಡಿಯಾರ ಕಂಬದಿಂದ ಬದ್ರಿಯಾ ಜಂಕ್ಷನ್‌ವರೆಗೆ ದ್ವಿಮುಖ ಸಂಚಾರಕ್ಕೆ ಅವಕಾಶವಾಗುವುದರಿಂದ ಹಾಗೂ ಪಾರ್ಕಿಂಗ್ ವ್ಯವಸ್ಥೆ ನಿಷೇಧಿಸುವುದರಿಂದ ಪೆರುಂಬಾಡಿ, ಮೀನುಪೇಟೆ, ಆರ್ಜಿ, ಬೇಟೋಳಿ ಕಡೆಗಳಿಂದ ತೆರಳಲು ಅವಕಾಶವಾಗುವುದರಿಂದ ವಾಹನಗಳ ಸುಗಮ ಸಂಚಾರಕ್ಕೆ ತಾತ್ಕಾಲಿಕವಾಗಿ ಮೂರು ತಿಂಗಳವರೆಗೆ ದ್ವಿಮುಖ ಸಂಚಾರ ನಿಯಮ ಜಾರಿಗೊಳಿಸಿ, ಪಾರ್ಕಿಂಗ್ ನಿಷೇಧಿಸಲಾಗಿದೆ ಎಂದು ಕೆ.ಟಿ.ಪ್ರಭು ಹೇಳಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಎನ್. ಬಿಂದುಮಣಿ ಅವರು ಮಾತನಾಡಿ, ನಗರದ ಅರಣ್ಯ ಭವನದ ರಸ್ತೆಯ ಎರಡು ಬದಿಗಳಲ್ಲಿ ಪ್ರವಾಸಿ ವಾಹನಗಳು ಪಾರ್ಕಿಂಗ್ ಮಾಡುತ್ತಿದ್ದು, ವಾಹನ ಸಂಚಾರಕ್ಕೆ ಸಮಸ್ಯೆ ಎದುರಾಗುತ್ತಿದೆ. ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಹಾಗೆಯೇ ರಸ್ತೆಗಳಲ್ಲಿ ಅಳವಡಿಸಲಾದ ರೇಡಿಯಂ ಸ್ಟಿಕ್ಕರ್‌ಗಳು ಹಳೆಯದಾಗಿದ್ದು, ಅವುಗಳನ್ನು ಬದಲಾಯಿಸುವಂತೆ ಅಥವಾ ಸ್ವಚ್ಛಗೊಳಿಸಲು ಕ್ರಮ ಕೈಗೊಳ್ಳುವಂತೆ ತಿಳಿಸಿದರು.

ಪ್ರಾದೇಶಿಕ ಸಾರಿಗೆ ಅಧಿಕಾರಿ ಎಸ್.ಟಿ.ಸತೀಶ್, ಉಪ ಅರಣ್ಯ ಸಂರಕ್ಷಣಾಧಿಕಾರಿ ವಿ.ಜಿ.ಸುನಿಲ್, ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸದಸ್ಯರಾದ ವಿ.ಬಿ.ಸಜಿತ್, ಕೆ.ಸತ್ಯನಾರಾಯಣ, ಡಾ.ಕೆ. ಎಂ.ಸತೀಶ್ ಕುಮಾರ್, ರಾಮಚಂದ್ ದರ್ಶನ್, ಡಿ.ಎಂ.ಗಿರೀಶ್ ಇತರರು ಇದ್ದರು.

ಸುಳ್ಯ: ಶ್ರೀ ಧರ್ಮಸ್ಥಳ ಶೌರ್ಯ ವಿಪತ್ತು ನಿರ್ವಹಣಾ ಘಟಕದ ಕೋರ್ ಕಮಿಟಿ ಸಭೆ



ಸುಳ್ಯ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆದ ಸುಳ್ಯದ ಬಿ.ಸಿ. ಟ್ರಸ್ಟ್ ಆಶ್ರಯದಲ್ಲಿ ಧರ್ಮಸ್ಥಳ ಶೌರ್ಯ ವಿಪತ್ತು ನಿರ್ವಹಣಾ ಘಟಕದ ವಾರ್ಷಿಕ ಕೋರ್ ಕಮಿಟಿ ಸಭೆ ಸುಳ್ಯ ಯೋಜನಾ ಕಚೇರಿಯಲ್ಲಿ ಮಂಗಳವಾರ ನಡೆಯಿತು.

ಶ್ರೀ ಧರ್ಮಸ್ಥಳ ಶೌರ್ಯ ವಿಪತ್ತು ನಿರ್ವಹಣಾ ವಿಭಾಗದ ಯೋಜನಾಧಿಕಾರಿ ಜಯವಂತ್ ಪಟಗಾರ್ ಕಾರ್ಯಕ್ರಮವನ್ನು ಉದ್ಘಾಟಿಸಿ ಶೌರ್ಯ ಕಾರ್ಯಕ್ರಮದ ಧ್ಯೇಯೋದ್ದೇಶಗಳನ್ನು ವಿವರಿಸಿ ಸುಳ್ಯ ತಾಲೂಕಿನ ಶೌರ್ಯ ಘಟಕಗಳ ಮಾಸಿಕ ಸಭೆ ಶ್ರಮದಾನ ಹಾಗೂ ಘಟಕ ಬಲವರ್ಧನೆ ಕುರಿತು ಮಾಹಿತಿ ನೀಡಿದರು.

ತಾಲೂಕು ಯೋಜನಾಧಿಕಾರಿ ಮಾಧವ ಗೌಡ ಪ್ರಸ್ತಾವಿಸಿ, 2025–26ನೇ ಸಾಲಿನಲ್ಲಿ ಶೌರ್ಯ ಘಟಕದ ಮೂಲಕ ಹಲವು ಸಮಾಜಮುಖಿ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆದಿದ್ದು ಇದೇ ಉತ್ಸಾಹವನ್ನು ಮುಂದುವರೆಸಿಕೊಂಡು 2026–27ನೇ ಸಾಲಿನಲ್ಲಿ ಇನ್ನಷ್ಟು ಸೇವಾ ಕಾರ್ಯ ಗಳನ್ನು ಕೈಗೊಳ್ಳಬೇಕು ಎಂದು ಹೇಳಿದರು.

ತುರ್ತು ಸ್ಪಂದನಾ ಘಟಕ

ಈ ಸಂದರ್ಭ ತಾಲೂಕಿನ ಶೌರ್ಯ ವಿಪತ್ತು ನಿರ್ವಹಣಾ ಚಟುವಟಿಕೆಗಳನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ 25 ಸದಸ್ಯರ ತುರ್ತು ಸ್ಪಂದನಾ ಘಟಕವನ್ನು ರಚಿಸಲಾಯಿತು.

ಸಭೆಯಲ್ಲಿ ಕರಾವಳಿ ಪ್ರಾದೇಶಿಕ ವಿಭಾಗದ ಜನಜಾಗೃತಿ ವೇದಿಕೆಯ ಮೇಲ್ವಿಚಾರಕ ನಿತೇಶ್ ಕೆ. ಉಪಸ್ಥಿತರಿದ್ದರು. ಘಟಕ ಪ್ರತಿನಿಧಿ ರಮೇಶ್ ಸ್ವಾಗತಿಸಿ, ಸಂಯೋಜಕ ಹರಿಶ್ಚಂದ್ರ ವಂದಿಸಿದರು.

ಎಐ ಮೂಲಕ ನಿರ್ಮಾಣಗೊಂಡ 'ಅದಿತಿ' ಚಲನಚಿತ್ರ ಬಿಡುಗಡೆ



ಮಂಗಳೂರು: ಕಾದಂಬರಿಕಾರ ಪಿ.ವಿ. ಪ್ರದೀಪ್ ಕುಮಾರ್ ಅವರ ಕಲ್ಪನೆ ಹಾಗೂ ಸಾರಥ್ಯದಲ್ಲಿ ಮೂಡಿಬಂದಿರುವ 'ಅದಿತಿ' ಚಲನಚಿತ್ರ ನಗರದಲ್ಲಿ ಪ್ರೆಸ್‌ಕ್ಲಬ್‌ನಲ್ಲಿ ಬುಧವಾರ ಬಿಡುಗಡೆಗೊಂಡಿತು.

ಚಲನಚಿತ್ರ ಬಿಡುಗಡೆಗೊಳಿಸಿ ಮಾತನಾಡಿದ ಮಂಗಳೂರು ಪ್ರೆಸ್ ಕ್ಲಬ್ ಅಧ್ಯಕ್ಷ ಪಿ.ಬಿ. ಹರೀಶ್ ರೈ, ಕಾದಂಬರಿಕಾರರಾದ ಪಿ.ವಿ. ಪ್ರದೀಪ್ ಕುಮಾರ್ ಅವರು ಎಐ ಮೂಲಕ ಮೊದಲ ಟೆಲಿಚಿತ್ರ ನಿರ್ಮಿಸಿರುವುದು ಶ್ಲಾಘನೀಯ. ಆ ಮೂಲಕ ಅವರು ಹೊಸ ಸಾಹಸ ಮಾಡಿದ್ದಾರೆ. ಎಐ ಮೂಲಕ ನಿರ್ಮಾಣಗೊಂಡಿರುವ ಅದಿತಿ ಚಿತ್ರ ಯಶಸ್ವಿಯಾಗಲಿ. ಕನ್ನಡ ಚಿತ್ರರಂಗದಲ್ಲಿ ಪ್ರದೀಪ್ ಕುಮಾರ್ ಯಶಸ್ಸು ಪಡೆಯಲಿ ಎಂದರು.

ಪಿ.ವಿ. ಪ್ರದೀಪ್ ಕುಮಾರ್ ಮಾತನಾಡಿ, ಅದಿತಿ ಕಾದಂಬರಿ ಆಧಾರಿತವಾಗಿ 'ನಾರಿ ಮುನಿದರೆ ಸಾಮ್ರಾಜ್ಯವೇ ಧೂಳಿಪಟ' ಎಂಬ ಟ್ಯಾಗ್‌ಲೈನ್‌ನೊಂದಿಗೆ ಈ ಚಿತ್ರ ನಿರ್ಮಾಣಗೊಂಡಿದೆ. ಚಿತ್ರದ ಕಥೆ, ಚಿತ್ರಕಥೆ, ಸಂಭಾಷಣೆ, ನಿರ್ದೇಶನ ನನ್ನದೇ ಆಗಿದೆ. ಚಿತ್ರದಲ್ಲಿನ ಎಲ್ಲ ಪಾತ್ರಧಾರಿಗಳು ಎಐ ಸೃಷ್ಟಿಯಾಗಿದೆ. 45 ನಿಮಿಷ ಅವಧಿಯ ಈ ಚಿತ್ರವನ್ನು ಮುಂದಕ್ಕೆ ವಿವಿಧೆಡೆ ಪ್ರದರ್ಶಿಸುವ ಯೋಚನೆಯಿದೆ ಎಂದರು.

ದ.ಕ. ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ರಾಜೇಶ್ ಪೂಜಾರಿ, ಚಿತ್ರದ ನಿರ್ಮಾಪಕಿ ಸುನೀತಾ ಪ್ರದೀಪ್ ಕುಮಾರ್ ಉಪಸ್ಥಿತರಿದ್ದರು. ರೇಮಂಡ್ ಡಿಕುನ್ಹ ತಾಕೋಡೆ ಕಾರ್ಯಕ್ರಮ ನಿರೂಪಿಸಿದರು.

ಸುರತ್ಕಲ್ ಕೊಂಕಣ ರೈಲ್ವೆ ನಿಲ್ದಾಣಕ್ಕೆ ಸಂಸದ ಕ್ಯಾ. ಬ್ರಿಜೇಶ್ ಚೌಟ ಭೇಟಿ



ಸುರತ್ಕಲ್: ಕೇಂದ್ರ ಸರಕಾರದ ಅನುದಾನದಿಂದ ನಡೆಯುತ್ತಿರುವ ಅಭಿವೃದ್ಧಿ ಕಾರ್ಯಗಳನ್ನು ವೀಕ್ಷಿಸಲು ದಕ್ಷಿಣ ಕನ್ನಡ ಸಂಸದ ಕ್ಯಾ. ಬ್ರಿಜೇಶ್ ಚೌಟ ಸುರತ್ಕಲ್ ಕೊಂಕಣ ರೈಲ್ವೆ ನಿಲ್ದಾಣಕ್ಕೆ ಮಂಗಳವಾರ ಭೇಟಿ ನೀಡಿದರು.

ಈ ಸಂದರ್ಭದಲ್ಲಿ ಬಿಜೆಪಿ ಪ್ರಮುಖರಾದ ರಾಜೇಶ್ ಕೊಟ್ಟಾರಿ, ತಿಲಕ್ ರಾಜ್ ಕೃಷ್ಣಾಪುರ, ದಿನಕರ್ ಇಡ್ಯಾ, ಪುಷ್ಪರಾಜ್ ಮುಕ್ಕ, ಅಶೋಕ್ ಶೆಟ್ಟಿ ತಡಂಬೈಲ್, ಜಯಂತ್ ಸಾಲ್ಯಾನ್, ಸುಲತಾ, ಸಂದೇಶ್ ಎಂ., ಅಶೋಕ್ ಅಗರಮೇಲು, ನಿಕಟಪೂರ್ವ ಮನಪಾ ಸದಸ್ಯರಾದ ಶ್ವೇತಾ ಪೂಜಾರಿ, ಸರಿತಾ ಶಶಿಧರ್ ಉಪಸ್ಥಿತರಿದ್ದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಂಸದ ಚೌಟ, 'ಹಲವಾರು ವರ್ಷಗಳಿಂದ ಬೇಡಿಕೆಯಿದ್ದ ರೈಲ್ವೆ ನಿಲ್ದಾಣದಲ್ಲಿ ಮೇಲ್ಛಾವಣಿ ಹಾಗೂ ನಿಲ್ದಾಣದ ಫ್ಲೋರಿಂಗ್ ವ್ಯವಸ್ಥೆಯನ್ನು ಸುಸಜ್ಜಿತಗೊಳಿಸುವ ಕೆಲಸ ಪೂರ್ಣಗೊಂಡಿದೆ. ಎರಡು ವರ್ಷಗಳ ಹಿಂದೆ ಶಾಸಕ ಡಾ. ಭರತ್ ಶೆಟ್ಟಿ ಅವರ ಜೊತೆಯಾಗಿ ಭೂಮಿ ಪೂಜೆ ಮಾಡಿದ್ದೆವು. ಎರಡು ಕೋಟಿ ಹತ್ತು ಲಕ್ಷದ ಐವತ್ತು ಸಾವಿರ ರೂ. ವೆಚ್ಚದಲ್ಲಿ ಕಾಮಗಾರಿ ನಡೆದಿದೆ' ಎಂದರು.

'ಅಭಿವೃದ್ಧಿಯ ದೃಷ್ಟಿಯಿಂದ ಇನ್ನಷ್ಟು ಯೋಜನೆಗಳು ಕಾರ್ಯಗತ ಆಗಬೇಕಾಗಿದೆ. ಇದಕ್ಕಾಗಿ ಕೊಂಕಣ ರೈಲ್ವೆಯನ್ನು ಭಾರತೀಯ ರೈಲ್ವೆಯೊಂದಿಗೆ ವಿಲೀನಗೊಳಿಸಿದರೆ ಹೆಚ್ಚಿನ ಅಭಿವೃದ್ಧಿ ಸಾಧ್ಯ. ಈ ನಿಟ್ಟಿನಲ್ಲಿ ರೈಲ್ವೆ ಸಚಿವರನ್ನು ಭೇಟಿ ಮಾಡಿ ಪ್ರಸ್ತಾವನೆ ಸಲ್ಲಿಸಿದ್ದೇನೆ. ಬಜೆಟ್ ಪೂರಕ ಚರ್ಚೆಯಲ್ಲೂ ಧ್ವನಿ ಎತ್ತಿದ್ದೇನೆ. ಆದರೆ ಕೊಂಕಣ ರೈಲ್ವೆ ನಿಗಮದಲ್ಲಿ ಎರಡು–ಮೂರು ರಾಜ್ಯಗಳು ಜೊತೆಯಾಗಿರುವುದರಿಂದ ವಿಲೀನಕ್ಕೆ ವಿಳಂಬವಾಗುತ್ತಿದೆ' ಎಂದು ಸ್ಪಷ್ಟಪಡಿಸಿದರು. 'ಇದರೊಂದಿಗೆ ರೈಲ್ವೆ ಹಳಿಯನ್ನು ಮಾಡಂಗವರಿಗೆ ಡಬ್ಲಿಂಗ್ ಮಾಡಲು ಹೆಚ್ಚಿನ ಒತ್ತು ನೀಡಿದ್ದೇನೆ. ಅಧಿಕಾರಿಗಳೊಂದಿಗೆ ಚರ್ಚಿಸಿ ಪ್ರಯಾಣಿಕರಿಗೆ ಮೂಲಸೌಕರ್ಯ ಒದಗಿಸಲು ಇನ್ನೂ ಹೆಚ್ಚಿನ ಒತ್ತು ನೀಡಲಾಗುವುದು' ಎಂದರು.

ಯಕ್ಷಗಾನ ಕಲಾವಿದರ ಔನ್ನತ್ಯಕ್ಕೆ ಉಡುಪಿ ಕಲಾರಂಗದ ಸಾರ್ಥಕ ಪ್ರಯತ್ನ

ಜ್ಞಾನವನ್ನು ವೃದ್ಧಿಸಿಕೊಳ್ಳುವಲ್ಲಿ ಅಂತ್ಯವೆಂಬುದಿಲ್ಲ. ಜೀವನದುದ್ದಕ್ಕೂ ಅಧ್ಯಯನ ನಿರತನಾಗಿ ಅವಿರತ ಪ್ರಯತ್ನದಿಂದ ಎಷ್ಟನ್ನೂ ಸಾಧಿಸಬಹುದು. ನನಗೆ ಎಲ್ಲವೂ ತಿಳಿದಿದೆ ಅಥವಾ ನನ್ನಷ್ಟು ತಿಳಿದವನು ಅನ್ಯರಿಲ್ಲ ಎಂಬ ಭಾವನೆ ಬಂದಲ್ಲಿ ಆತನ ಜ್ಞಾನದ ಬೆಳವಣಿಗೆ ಅಲ್ಲಿಗೆ ನಿಂತಂತೆಯೇ ಸರಿ.

ಯಕ್ಷಗಾನ ಕಲಾವಿದರು ಸಾಮಾನ್ಯವಾಗಿ ಪುರಾಣ, ಇತಿಹಾಸಗಳ ಬಗ್ಗೆ ಸಾಕಷ್ಟು ತಿಳಿದುಕೊಂಡಿರುತ್ತಾರೆ. ರಂಗದಲ್ಲಿ ಪಾತ್ರ ಮಾಡಿ ಸಾಫಲ್ಯವನ್ನು ಕಂಡುಕೊಂಡಲು ನವರಸಗಳಲ್ಲೂ ಪ್ರಾವೀಣ್ಯ ಸಾಧಿಸಿದವರಿದ್ದಾರೆ. ಬಹು ಮಂದಿ ಅಭಿಮಾನಿಗಳನ್ನು ಹೊಂದಿದ ಹೆಮ್ಮೆಯೂ ಅನೇಕ ಕಲಾವಿದರಲ್ಲಿದೆ. ಒಳ್ಳೆಯ ವಿಚಾರಗಳು ಎಲ್ಲಿಂದಲೇ ಬರಲಿ, ಅವುಗಳಲ್ಲೊಂದಿಷ್ಟನ್ನು ತನ್ನ ಮನದ ಬುಟ್ಟಿಯಲ್ಲಿ ಹಾಕಿಕೊಂಡರೆ ಇನ್ನಷ್ಟು ಸಾಧನೆಯ ಮೆಟ್ಟಿಲೇರಿದಂತೆ.

ಈ ನಿಟ್ಟಿನಲ್ಲಿ "ಕಲೆ–ಶಿಕ್ಷಣ–ಸಮಾಜ" ಎಂಬ ಲಾಂಛನವನ್ನು ಹೊತ್ತ ಉಡುಪಿಯ ಕಲಾರಂಗ ಕಲಾವಿದರಿಗಾಗಿಯೇ ಐವೈಸಿ ಸಭಾಂಗಣದಲ್ಲಿ ಇತ್ತೀಚೆಗೆ ಏರ್ಪಡಿಸಿದ 'ವೃತ್ತಿ ಕಲಾವಿದರ ಮಾರ್ಗದರ್ಶಿ ಶಿಬಿರ'ವು ಕಲಾವಿದರು, ಪ್ರೇಕ್ಷಕರು ಮಾತ್ರವಲ್ಲ ಅನೇಕ ಗಣ್ಯರ ಮನಗೆದ್ದಿರುವುದು ಸ್ಪಷ್ಟ. ಪ್ರತಿ ವರ್ಷ ಈ ಶಿಬಿರವು ಏರ್ಪಟ್ಟರೂ ಅದರ ವೈಶಿಷ್ಟ್ಯ ವರ್ಣನಾತೀತ. ಮಾಹಿತಿ ಇಲ್ಲದೆ ಸಂಶಯದಿಂದಲೇ ಶಿಬಿರಕ್ಕೆ ಸೇರಿದ ಶಿಬಿರಾರ್ಥಿಗಳಲ್ಲಿ ಶಿಬಿರದ ಮುಕ್ತಾಯದ ಹೊತ್ತಿಗೆ 'ಇಷ್ಟು ಬೇಗ ಮುಕ್ತಾಯವಾಯಿತಲ್ಲ!' ಎಂದು ಉದ್ಗಾರ ತೆಗೆದವರೇ ಬಹಳ ಮಂದಿ.

ನಾಲ್ಕು ದಿನಗಳ ಶಿಬಿರ ಕೇವಲ ಒಂದು ಕಾರ್ಯಕ್ರಮವಲ್ಲ, ಇದು ಕತ್ತಲೆಯಲ್ಲಿ ದಾರಿ ಹುಡುಕುತ್ತಿದ್ದ ಯುವ ಕಲಾವಿದನಿಗೆ ಕೈಹಿಡಿದು ಬೆಳಕಿನೆಡೆಗೆ ನಡೆಸಿದ ಯಾತ್ರೆ, ಇಂತಹ ಶಿಬಿರಗಳು ವರ್ಷಕ್ಕೊಮ್ಮೆ ಆಗಲೇಬೇಕು, ಕಲಾವಿದರುಗಳು ಪ್ರಯೋಜನವನ್ನು ಪಡೆಯಲೇಬೇಕು, ಯಕ್ಷಗಾನ ಉಳಿಯಲು ವೇದಿಕೆ ಬೇಕು, ಪ್ರೇಕ್ಷಕರು ಬೇಕು, ಜೊತೆಗೆ ಅದನ್ನು ಪ್ರೀತಿಯಿಂದ ಕಲಿಸುವ ಸಂಸ್ಥೆ ಬೇಕು. ಈ ಮೂರನ್ನೂ ಸಮತೋಲನದಲ್ಲಿ ನಡೆಸುತ್ತಿರುವ ಕಲಾರಂಗಕ್ಕೆ ಅಭಿನಂದನೆಗಳು ಎನ್ನುತ್ತಾರೆ ಅಮೃತೇಶ್ವರಿ ಮೇಳದ ಕಲಾವಿದ ಶಿವಮೂರ್ತಿ ರಾವ್.

24 ಅಭ್ಯರ್ಥಿಗಳು ಪಾಲ್ಗೊಂಡ ಶಿಬಿರದಲ್ಲಿ 27 ಮಂದಿ ಸಂಪನ್ಮೂಲ ವ್ಯಕ್ತಿಗಳು! ಡಾ. ಅನ್ನಪೂರ್ಣ ಆಚಾರ್ಯ, ಕೃಷ್ಣಮೂರ್ತಿ ಕವತ್ತಾರ್, ಡಾ. ಪ್ರಭಾಕರ ಜೋಷಿ, ಗುರು ಬನ್ನಂಜೆ ಸಂಜೀವ ಸುವರ್ಣ, ದಿವಾಕರ ಹೆಗಡೆ, ಡಾ. ಜಿ.ಎಸ್ .ಭಟ್, ಎಚ್.ಸುಜಯೀಂದ್ರ ಹಂದೆ, ರಾಧಾಕೃಷ್ಣ ಕಲ್ಚಾರ್, ವಾಸುದೇವ ರಂಗಾ ಭಟ್, ಡಾ. ಶಾಂತಾರಾಮ ಪ್ರಭು, ಡಾ. ರಾಘವೇಂದ್ರ ರಾವ್,



ದೇವೇಂದ್ರ ಬೆಳೆಯೂರು, ಕೃತಿ ಪುರಪ್ಪೆಮನೆ, ಡಾ. ಶ್ರುತಕೀರ್ತಿರಾಜ್, ಎ.ಪಿ.ಪಾಠಕ್, ಮುಂಡಾಡಿ ಬಸವ, ಪವನ್ ಕಿರಣ್‌ಕೆರೆ, ಡಾ. ಪಾದೆಕಲ್ಲು ವಿಷ್ಣು ಭಟ್, ಕೊಂಡದಕುಳಿ ರಾಮಚಂದ್ರ ಹೆಗಡೆ, ಪ್ರೊ. ಎಂ.ಎಲ್.ಸಾಮಗ, ರೋಹಿಣಿ ಉದಯ್, ಡಿ.ಎಸ್. ಶ್ರೀಧರ್, ಹರಿನಾರಾಯಣ ಅಸ್ರಣ್ಣ, ಹಾದಿಗಲ್ಲು ಲಕ್ಷ್ಮೀನಾರಾಯಣ ಭಟ್, ಜೀವನ್‌ರಾಂ ಸುಳ್ಯ ಮೊದಲಾದವರು ಪಾಲ್ಗೊಂಡು ಆಂಗಿಕ, ಆಹಾರ್ಯ, ವಾಚಿಕ, ಸಾತ್ವಿಕ ಅಂಶಗಳನ್ನೊಳಗೊಂಡಂತೆ ಸಾಕಷ್ಟು ಮಾಹಿತಿಗಳನ್ನು ಶಿಬಿರಾರ್ಥಿಗಳಿಗೆ ಧಾರೆ ಎರೆದರು. ಎಲ್ಲರೂ ಪ್ರಶಂಸನಾರ್ಹರೇ ಆಗಿದ್ದರೂ ಸ್ಥಳದ ಅಭಾವದಿಂದ ಕೆಲವು ಮಂದಿಯ ಬೋಧನೆಗಳನ್ನಷ್ಟೇ ಇಲ್ಲಿ ದಾಖಲಿಸುತ್ತಿದ್ದೇನೆ.

ಮೊದಲ ದಿನ ಹೆಸರಾಂತ ಅರ್ಥಧಾರಿ ಡಾ. ಜೋಷಿಯವರು ರಾಮ–ರಾವಣ; ಭೀಷ್ಮ–ಅಂಬೆ, ಕರ್ಣ–ಪರಶುರಾಮ ಮೊದಲಾದ ಸಂಭಾಷಣೆ ಸನ್ನಿವೇಶಗಳಲ್ಲಿ ಎಲ್ಲೆಲ್ಲಿ ಹೇಗೆ ಮೂಡಿಬರಬೇಕೆಂದು ವಿವರಿಸಿ, ಶಿಬಿರಾರ್ಥಿಗಳ ಪ್ರಶ್ನೆಗಳಿಗೂ ತೃಪ್ತಿಕರವಾಗಿ ಉತ್ತರಿಸಿ ಸಂಶಯಗಳನ್ನು ನಿವಾರಿಸಿದರು.

ಕಲಾವಿದರು ದುಡಿಮೆಗೆ ಒತ್ತು ನೀಡಿ ಒಂದೇ ದಿನ 2–3 ಕಡೆ ಪ್ರದರ್ಶನಗಳನ್ನು ಒಪ್ಪಿಕೊಳ್ಳುವ ಧಾವಂತಕ್ಕೆ ಬೀಳಬೇಡಿ, ನಿಮ್ಮ ಆರೋಗ್ಯದ ಬಗ್ಗೆ ಆದ್ಯತೆ ನೀಡಿ, ಆರೋಗ್ಯವಿದ್ದಲ್ಲಿ ಮಾತ್ರ ನಿರಂತರ ದುಡಿಮೆ ಸಾಧ್ಯ, ರಂಗದಲ್ಲಿ ವೈಯಕ್ತಿಕ ವಿಚಾರ ನುಸುಳದಂತೆ ನೋಡಿ ಪಾತ್ರೋಚಿತ ವಿಚಾರದಲ್ಲಿ ಮಾತನಾಡಿ ಎಂಬ ಕಿವಿಮಾತು ಕೊಂಡದಕುಳಿಯವರಿಂದ.

ಹಿಮ್ಮೇಳದ ರಾಗ–ತಾಳ, ಶ್ರುತಿಜ್ಞಾತನದ ಬಗ್ಗೆ ತಿಳಿಸುತ್ತಾ ಸ್ವತಃ ಹಾಡಿ ತೋರಿಸಿದರು ಪಾಠಕ್. ಗಣಪತಿ ಭಟ್ಟರು ಏಳು ಸ್ವರಗಳ ಬಗ್ಗೆ ವಿವರಿಸುತ್ತಾ, ಕಲ್ಯಾಣಿ, ಶಂಕರಾಭರಣ ರಾಗಗಳನ್ನು ಹಾಡಿ ಶಿಬಿರಾರ್ಥಿಗಳ ಜ್ಞಾನ ತೃಷೆಯನ್ನು ತಣಿಸಿದರು.

ರೋಹಿಣಿ ಅವರು ರಂಗಕ್ಕೆ ಸ್ತ್ರೀವೇಷ ಪ್ರವೇಶದಲ್ಲಿ ಮುದ್ರೆ– ಹಸ್ತ, ನಾಟ್ಯಶಾಸ್ತ್ರ, ಹಸ್ತದ ಜೊತೆ ಮುಖಭಾವದ ಅಗತ್ಯ, ಸಮುದ್ರದ ಅಲೆ, ನದಿನೀರಿನ ಹರಿವು, ಮಂದಮಾರುತ, ನವರಸ ಭಾವಗಳು, ಸನ್ನಿವೇಶಕ್ಕೆ ಸರಿಯಾಗಿ ಮುಖಭಾವ ಮೊದಲಾದ ಸಂದರ್ಭಗಳನ್ನು ಅಭಿನಯಿಸುವ ಮೂಲಕ ಮನದಟ್ಟುಮಾಡಿದರು. 'ಮರಾಣಪಾತ್ರ–ಪೌರಾಣಿಕ ಪ್ರಜ್ಞೆ' ವಿಷಯದಲ್ಲಿ ಯಕ್ಷಗಾನ ಪಾತ್ರಧಾರಿಗಳಲ್ಲಿ ಒಳ್ಳೆಯ ವಿಚಾರಗಳನ್ನು ಜನಮಾನಸಕ್ಕೆ ತಲುಪಿಸುವ ಮನೋಭಾವ ಕಲಾವಿದರಲ್ಲಿ ಇರಬೇಕು ಎಂದು ಹಿರಿಯರಾದ ಅಸ್ರಣ್ಣರು ಹಿತನುಡಿದರು.

ಕಾಲಮಿತಿಯ ಸಂವಾದದಲ್ಲಿ ಪ್ರತ್ಯುತ್ಪನ್ನಮತಿ ಇರಬೇಕು, ಔಚಿತ್ಯಪ್ರಜ್ಞೆ ಬೇಕು, ಸತತ ಚಿಂತನೆಗೆ ತೊಡಗಿ, ಸಾಧಾರಣ ವಾದದ್ದನ್ನು ಅಸಾಧಾರಣವಾಗಿಸುವುದು, ಆ ಕ್ಷಣ ಸರಿ–ತಪ್ಪು ಯಾವುದು ಎಂಬ ವಿವೇಚನೆ ಇರಲಿ ಎಂದು ಕನಿಷ್ಠ ಅವಧಿಯಲ್ಲಿ ಗರಿಷ್ಠ ಅಭಿಮಾನಿಗಳನ್ನು ಹೊಂದಿದ ಕಲಾವಿದ ರಂಗ ಭಟ್ ಮನಸೆಳೆದರು.

'ವಾದ–ಸಂವಾದದ ಔಚಿತ್ಯ'ದ ಬಗ್ಗೆ ಮಾತನಾಡಿದ ಕಲ್ಚಾರ್ ಮಾತಿನ ಔಚಿತ್ಯ ಪ್ರಜ್ಞೆ ಕಲಾವಿದನಿಗಿರಬೇಕು, ವಾದ–ಪ್ರತಿವಾದ ವಿಕೋಪಕ್ಕೆ ಹೋಗುವಲ್ಲಿ ಎಚ್ಚರಬೇಕು, ದೃಷ್ಟಾಂತಗಳನ್ನು ಆಯ್ದುಕೊಳ್ಳುವಾಗ ಸನ್ನಿವೇಶವು ಹಿಂದೆ ನಡೆದಿದೆಯೇ ಎಂಬ ಬಗ್ಗೆ ತಿಳುವಳಿಕೆ ಇಲ್ಲದಿದ್ದಲ್ಲಿ ಆಭಾಸವಾಗುತ್ತದೆ ಎಂದು ಎಚ್ಚರಿಸಿದರು.

ಸಮಾರೋಪದಂದು ಡಾ. ಚಂದ್ರಶೇಖರ ದಾಮ್ಲೆಯವರಿಗೆ ಹೊರನಾಡು ಅನ್ನಪೂರ್ಣೇಶ್ವರೀ ದೇವಳದ ಧರ್ಮದರ್ಶಿ ಡಾ. ಜಿ.ಭೀಮೇಶ್ವರ ಜೋಶಿ ತಲ್ಲೂರು ಕನಕಾ ಅಣ್ಣಯ್ಯ ಪ್ರಶಸ್ತಿಯನ್ನು ಪ್ರದಾನ ಮಾಡಿದರು. ಹಿರಿಯ ವಿದ್ವಾಂಸ ಡಾ. ಬಿ.ಎ.ವಿವೇಕ ರೈ ಪುರಸ್ಕೃತರಿಗೆ ಶುಭಹಾರೈಸಿದರು. ಅಕಾಡೆಮಿ ಅಧ್ಯಕ್ಷ ತಲ್ಲೂರು ಶಿವರಾಮ ಶೆಟ್ಟಿ ಉಪಸ್ಥಿತರಿದ್ದರು. ಪ್ರೊ. ಪವನ್ ಕಿರಣಕೆರೆ ನಿರ್ದೇಶಿಸಿದ ಶಿಬಿರವನ್ನು ಕಲಾರಂಗದ ಅಧ್ಯಕ್ಷ ಗಂಗಾಧರ ರಾವ್ ಪ್ರಾಯೋಜಿಸಿದ್ದರು. ಸಂಸ್ಥೆಯ ಕಾರ್ಯದರ್ಶಿ ಮುರಳಿ ಕಡೆಕಾರ್, ಪ್ರೊ. ನಾರಾಯಣ ಎಂ.ಹೆಗಡೆ ಮೊದಲಾದ ಕಾರ್ಯಕರ್ತರ ತಂಡದ ಪರಿಶ್ರಮ ನಿಜಕ್ಕೂ ಅಭಿನಂದನಾರ್ಹ.

ಎನ್.ರಾಮ ಭಟ್

13 ವರ್ಷಗಳಿಂದ ತಲೆಮರೆಸಿಕೊಂಡಿದ್ದ ಕುಖ್ಯಾತ ವಾರೆಂಟ್ ಆರೋಪಿ ಬಂಧನ

ಉಡುಪಿ: ಮಲ್ಪೆ ಹಾಗೂ ಕಾಪು ವ್ಯಾಪ್ತಿಯ ದೇವಸ್ಥಾನಗಳಲ್ಲಿ ಕಳವು ಕೃತ್ಯ ನಡೆಸಿ, ಸುಮಾರು 13 ವರ್ಷಗಳಿಂದ ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸಿಕೊಂಡಿದ್ದ ವಾರೆಂಟ್ ಆರೋಪಿಯನ್ನು ಮಲ್ಪೆ ಪೊಲೀಸರು ಹಾಸನದ ಚನ್ನರಾಯಪಟ್ಟಣದಲ್ಲಿ ಗುರುವಾರ ಮುಂಜಾನೆ ಸಿನಿಮೀಯ ಶೈಲಿಯಲ್ಲಿ ದಸ್ತಗಿರಿ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ.



ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲೂಕಿನ ಬಿಡಗನಹಳ್ಳಿ ಗ್ರಾಮದ ನಿವಾಸಿ ಮಧು ಆಲಿಯಾಸ್ ಉಮೇಶ್ ಬಂಧಿತ ಆರೋಪಿ. ಈತನ ವಿರುದ್ಧ ಉಡುಪಿ ಜಿಲ್ಲೆಯ ಮಲ್ಪೆ ಪೊಲೀಸ್ ಠಾಣೆಯಲ್ಲಿ ಒಂದು ದೇವಸ್ಥಾನ ಕಳವು ಪ್ರಕರಣ, ಕಾಪು ಪೊಲೀಸ್ ಠಾಣೆಯಲ್ಲಿ ಮತ್ತೊಂದು ದೇವಸ್ಥಾನ ಕಳವು ಪ್ರಕರಣ ಹಾಗೂ ಬೆಂಗಳೂರು ನಗರದಲ್ಲಿ ಎರಡು ಹಳೆ ಪ್ರಕರಣಗಳು ಸೇರಿದಂತೆ ಒಟ್ಟು ನಾಲ್ಕು ಗಂಭೀರ ಪ್ರಕರಣಗಳು ದಾಖಲಾಗಿದ್ದವು.

ಮಲ್ಪೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 2013ರಲ್ಲಿ ನಡೆದಿದ್ದ ಕಳವು ಪ್ರಕರಣಕ್ಕೆ ಸಂಬಂಧಿಸಿದಂತೆ ಈತ ಉಡುಪಿಯ ಸಿಜೆಎಂ ನ್ಯಾಯಾಲಯಕ್ಕೆಹಾಜರಾಗದೆಕಳೆದ 13 ವರ್ಷಗಳಿಂದ ಪೊಲೀಸರಿಗೂ ಸಿಗದೆ ತಲೆಮರೆಸಿಕೊಂಡಿದ್ದನು.

ಮಲ್ಪೆ ಠಾಣಾ ವಾರೆಂಟ್ ಸಿಬ್ಬಂದಿಗಳಾದ ಹೆಡ್ ಕಾನ್ಸ್‌ಟೇಬಲ್ ವಿಶ್ವನಾಥ್ ಹೆಚ್. ಮತ್ತು ಪೊಲೀಸ್ ಕಾನ್ಸ್‌ಟೇಬಲ್ ಮೆಹಬೂಬ್ ರಫಿ ಅವರು ಖಚಿತ ಮಾಹಿತಿ ಮೇರೆಗೆ ಜೂನ್ 18ರಂದು ಮುಂಜಾನೆ 6 ಗಂಟೆಗೆ ಹಾಸನದ ಚನ್ನರಾಯಪಟ್ಟಣದ ಬಳಿ ಆರೋಪಿಯನ್ನು ಅಡ್ಡಗಟ್ಟಿ ಯಶಸ್ವಿಯಾಗಿ ದಸ್ತಗಿರಿ ಮಾಡಿದ್ದಾರೆ. ಬಂಧಿತ ಆರೋಪಿಯನ್ನು ನ್ಯಾಯಾಲಯಕ್ಕೆಹಾಜರುಪಡಿಸಿದ್ದು, ಜೂನ್ 29ರ ವರೆಗೆ ನ್ಯಾಯಾಂಗ ಬಂಧನ ವಿಧಿಸಿದೆ. ಆರೋಪಿಯನ್ನು ಹಿರಿಯಡ್ಕದ ಜಿಲ್ಲಾ ಕಾರಾಗೃಹಕ್ಕೆ ಒಪ್ಪಿಸಲಾಗಿದೆ.

ಮಾದಕ ವಸ್ತುಗಳ ಸೇವನೆ: ಐದು ಮಂದಿ ಬಂಧನ

ಮಂಗಳೂರು: ಮಂಗಳೂರು ನಗರದಲ್ಲಿ ಮಾದಕ ಸೇವನೆ ಮತ್ತು ಮಾರಾಟ ಪ್ರಕರಣಗಳು ಹೆಚ್ಚುತ್ತಿರುವುದು ಆತಂಕಕಾರಿಯಾಗಿದೆ. ನಿತ್ಯ ಒಂದಲ್ಲಾ ಒಂದು ಪ್ರಕರಣಗಳು ಠಾಣೆಗಳಲ್ಲಿ ದಾಖಲಾಗುತ್ತಲೇ ಇವೆ.

ಮಂಗಳೂರು ನಗರ ಕಮಿಷನರೇಟ್ ವ್ಯಾಪ್ತಿಯ ವಿವಿಧ ಠಾಣೆಗಳ ವ್ಯಾಪ್ತಿಯಲ್ಲಿ ಮಾದಕ ವಸ್ತು ಸೇವನೆ ಪ್ರಕರಣಕ್ಕೆ ಸಂಬಂಧಿಸಿ ಐದು ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ.

ಪದವು ಗ್ರಾಮದ ಮುಗ್ರೋಡಿ ಮನೆಯ ಪ್ರಸ್ತುತ ಮೂಡುಶೆಡ್ಡೆ ಶಿವನಗರದಲ್ಲಿ ವಾಸವಾಗಿರುವ ಆಕಾಶ್ (30) ಎಂಬಾತನನ್ನು ಅನುಮಾನದ ಮೇಲೆ ಕದ್ರಿ ಪೊಲೀಸರು ಠಾಣೆಗೆ ಕರೆಸಿದಾಗ ಆತ ಮಾದಕ ವಸ್ತು ಸೇವಿಸಿದಂತೆ ಕಂಡು ಬಂದಿದ್ದಾನೆ. ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದಾಗ ಮಾದಕ ವಸ್ತು ಸೇವನೆ ಮಾಡಿರುವುದು ದೃಢಪಟ್ಟಿದೆ.

ಕೋಣಾಜೆ ಗ್ರಾಮದ ಅಸೈಗೋಳಿ ಮೈದಾನದ ಬಳಿ ಮಾದಕ ವಸ್ತುಸೇವನೆಯ ನಶೆಯಲ್ಲಿದ್ದ ಕೊಣಾಜೆ ಮೊಡಿಜೇರ ದಡಸ್ ಸೈಟ್‌ನ ಸುಮಂತ್ ಶೆಟ್ಟಿ (27) ಎಂಬಾತನನ್ನು ಕೊಣಾಜೆ ಪೊಲೀಸರು ಬಂಧಿಸಿದ್ದಾರೆ. ಬೆಳ್ಮ ಗ್ರಾಮದ ದೇರಳಕಟ್ಟೆಯ ಗ್ರೀನ್ ಗ್ರೌಂಡ್ ಬಳಿ ಕುಂಪಲ ಆಶ್ರಯ ಕಾಲನಿಯ ವಿಕ್ರಮ್ (23), ಕುರ್ನಾಡು ಗ್ರಾಮದ ಮುಡಿಪು ಮೈದಾನದ ಬಳಿ ಮಂಚಿ ಗ್ರಾಮ ಕುಕ್ಕಾಜೆಯ ಕೆ.ಎಂ. ಬಿಲಾಲ್ (30) ಎಂಬಾತನನ್ನು ಬಂಧಿಸಿದ್ದಾರೆ. ವೈದ್ಯಕೀಯ ಪರೀಕ್ಷೆಯಲ್ಲಿ ಆರೋಪಿಗಳು ಮಾದಕ ವಸ್ತು ಸೇವನೆ ದೃಢಪಟ್ಟಿದೆ.

ಜೋಕಟ್ಟೆ ರೈಲ್ವೆ ಟ್ರ್ಯಾಕ್ ಬಳಿ ಮಾದಕ ವಸ್ತು ಸೇವನೆ ಮಾಡಿ ಅದರ ನಶೆಯಲ್ಲಿ ಜೋಕಟ್ಟೆ ನಿವಾಸಿ ಮೊಹಮ್ಮದ್ ಸಾದಿಕ್ (37) ಎಂಬಾತನನ್ನು ಪಣಂಬೂರು ಪೊಲೀಸರು ಬಂಧಿಸಿದ್ದಾರೆ. ವಿಚಾರಣೆ ವೇಳೆ ಮಾದಕ ವಸ್ತು ಸೇವನೆ ಮಾಡಿರುವುದಾಗಿ ಒಪ್ಪಿಕೊಂಡಿದ್ದು, ವೈದ್ಯಕೀಯ ಪರೀಕ್ಷೆಯಲ್ಲಿ ಮಾದಕ ವಸ್ತು ಸೇವನೆ ದೃಢಪಟ್ಟಿದೆ. ಆರೋಪಿಗಳ ವಿರುದ್ಧ ಎನ್ ಡಿಪಿಎಸ್ ಕಾಯ್ದೆಯಲ್ಲಿ ಪ್ರಕರಣ ದಾಖಲಾಗಿದೆ.

ಪೆಸ್ಟ್ ಕಂಟ್ರೋಲ್ ಗೋಡೌನ್‌ನಲ್ಲಿ ಆತ್ಮಹತ್ಯೆ

ಉಡುಪಿ: ಪೆಸ್ಟ್ ಕಂಟ್ರೋಲ್ ಸಂಸ್ಥೆಯೊಂದರಲ್ಲಿ ಕೆಲಸ ಮಾಡಿಕೊಂಡಿದ್ದ ವ್ಯಕ್ತಿಯೊಬ್ಬರು ಜೀವನದಲ್ಲಿ ಜಿಗುಪ್ಸೆಗೊಂಡು ತಾವು ಕೆಲಸ ಮಾಡುತ್ತಿದ್ದ ಗೋಡೌನ್‌ನಲ್ಲೇ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ಶಿವಳ್ಳಿ ಗ್ರಾಮದಲ್ಲಿ ನಡೆದಿದೆ. ಆತ್ರಾಡಿ ಗ್ರಾಮದ ನಿವಾಸಿ ಆರುಣ್ ಶೆಟ್ಟಿಗಾರ್ (40) ಆತ್ಮಹತ್ಯೆ ಮಾಡಿಕೊಂಡ ವ್ಯಕ್ತಿ. ಆರುಣ್ ಶೆಟ್ಟಿಗಾರ್ ಅವರು ಉಡುಪಿ ತಾಲೂಕಿನ ಶಿವಳ್ಳಿ ಗ್ರಾಮದಲ್ಲಿರುವ ಪೆಸ್ಟ್ ಕಂಟ್ರೋಲ್ ಸಂಸ್ಥೆಯಲ್ಲಿ ನೌಕರರಾಗಿದ್ದರು. ವೈಯಕ್ತಿಕ ಕಾರಣದಿಂದ ಮನನೊಂದಿದ್ದ ಅವರು, ಜೂನ್ 16ರ ರಾತ್ರಿ 8 ಗಂಟೆಯಿಂದ ಜೂನ್ 17ರ ಬೆಳಿಗ್ಗೆ 10 ಗಂಟೆಯ ಮಧ್ಯದ ಅವಧಿಯಲ್ಲಿ ಪೆಸ್ಟ್ ಕಂಟ್ರೋಲ್‌ನ ಗೋಡೌನ್‌ನಲ್ಲಿದ್ದ ಫ್ಯಾನಿಗೆ ಟವಲ್ ನೇಣು ಬಿಗಿದುಕೊಂಡಿದ್ದಾರೆ. ಈ ಬಗ್ಗೆ ಮೃತರ ಅಕ್ಕ ಲೋಲಾಕ್ಷಿ ಶೆಟ್ಟಿಗಾರ್ ನೀಡಿದ ದೂರಿನಂತೆ ಮಣಿಪಾಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಓಮ್ನಿ ಡಿಕ್ಕಿ: ಮಹಿಳೆ ಸಾವು

ಕುಂದಾಪುರ : ಕುಂದಾಪುರ ತಾಲೂಕಿನ ಬೀಜಾಡಿ ಗ್ರಾಮದ ಅರಸರ ಬೆಟ್ಟು ಕ್ರಾಸ್ ಬಳಿ ರಸ್ತೆಯಲ್ಲಿ ಕುಂಭಾಶಿ ಕಡೆಯಿಂದ ಕೋಟೇಶ್ವರ ರಥಬೀದಿ ಕಡೆಗೆ ಹೋಗುತ್ತಿದ್ದ ಓಮ್ನಿ ಕಾರು ಅದೇ ದಿಕ್ಕಿನಲ್ಲಿ ರಸ್ತೆಯ ಎಡಬದಿಯಲ್ಲಿ ನಡೆದುಕೊಂಡು ಬರುತ್ತಿದ್ದ ಗೋಪಾಡಿ ಗ್ರಾಮದ ಚಂದ್ರಮತಿ (78) ಎಂಬವರಿಗೆ ಹಿಂದಿನಿಂದ ಡಿಕ್ಕಿ ಹೊಡೆದ ಪರಿಣಾಮ ಚಂದ್ರಮತಿ ಗಂಭೀರವಾಗಿ ಗಾಯಗೊಂಡಿದ್ದರು. ಕೂಡಲೇ ಅವರನ್ನು ಚಿಕಿತ್ಸೆ ಬಗ್ಗೆ ಕೋಟೇಶ್ವರದ ಖಾಸಗಿ ಆಸ್ಪತ್ರೆಗೆ ಕರೆದುಕೊಂಡು ಹೋದಲ್ಲಿ ವೈದ್ಯರು ಪರೀಕ್ಷಿಸಿ ಚಂದ್ರಮತಿ ಮೃತಪಟ್ಟಿರುವುದಾಗಿ ತಿಳಿಸಿದ್ದಾರೆ.

ಪ್ಲಸ್ ಟು ವಿದ್ಯಾರ್ಥಿ ಆತ್ಮಹತ್ಯೆ

ಮುಳ್ಳೇರಿಯ: ಆಡೂರು ಪಾಂಡಿ ಬಳಿಯ ಬೆಳ್ಳಚ್ಚೇರಿ ನಿವಾಸಿ, ಪ್ಲಸ್ ಟು ವಿದ್ಯಾರ್ಥಿಯಾಗಿದ್ದ ಗೋಕುಲ್ (17) ನೇಣು ಬಿಗಿದು ಆತ್ಮಹತ್ಯೆಗೈದ ಬಗ್ಗೆ ವರದಿಯಾಗಿದೆ. ಪಾಂಡಿ ಸರಕಾರಿ ಹೈಯರ್ ಸೆಕೆಂಡರಿ ಶಾಲೆಯ ವಿದ್ಯಾರ್ಥಿಯಾಗಿದ್ದ ಆತ ಮಂಗಳವಾರ ರಾತ್ರಿ ಮನೆಯ ಬೆಡ್‌ರೂಮ್‌ನಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದರು. ಕೂಡಲೇ ಆಸ್ಪತ್ರೆಗೆ ತಲುಪಿಸಿದರೂ ಜೀವ ರಕ್ಷಿಸಲಾಗಲಿಲ್ಲ. ಮೃತರು ತಂದೆ ಶಶಿ, ತಾಯಿ ಧನ್ಯಾ, ಸಹೋದರಿ ಗೋಪಿಕಾ ಅವರನ್ನು ಅಗಲಿದ್ದಾರೆ. ಘಟನೆ ಬಗ್ಗೆ ಆದೂರು ಪೊಲೀಸರು ಕೇಸು ದಾಖಲಿಸಿಕೊಂಡಿದ್ದಾರೆ.

ಅಪಘಾತ ಗಾಯಾಳು ಸಾವು

ಕುಂದಾಪುರ: ಕೂಲಿ ಕೆಲಸ ಮಾಡಿಕೊಂಡಿದ್ದ ಹಟ್ಟಿಯಂಗಡಿ ಗ್ರಾಮದ ಕರ್ಕಿಗುಡ್ಡೆ ನಿವಾಸಿ ದಿನೇಶ (38) ಎಂಬವರು ಜ.4ರಂದು ಬೈಕಿನಲ್ಲಿ ಕೋಟೇಶ್ವರ ಕಡೆಯಿಂದ ಕುಂದಾಪುರ ಕಡೆಗೆ ರಾ.ಹೆ 66 ರಲ್ಲಿ ಕಾರು ಡಿಕ್ಕಿ ಹೊಡೆದ ಪರಿಣಾಮ ದಿನೇಶ ಗಂಭೀರವಾಗಿ ಗಾಯಗೊಂಡಿದ್ದರು. ಅವರಿಗೆ ಉಡುಪಿ ಆದರ್ಶ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿತ್ತು. ಈ ಬಗ್ಗೆ ಕುಂದಾಪುರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿ ನ್ಯಾಯಾಲಯದಲ್ಲಿ ಪ್ರಕರಣ ಮುಕ್ತಾಯಗೊಂಡಿತ್ತು. ನಂತರದ ದಿನಗಳಲ್ಲಿ ದಿನೇಶ ಅವರ ಆರೋಗ್ಯದಲ್ಲಿ ಏರುಪೇರು ಉಂಟಾಗಿ ಜೂ.12ರಂದು ಉಡುಪಿ ಆದರ್ಶ ಆಸ್ಪತ್ರೆಗೆ ದಾಖಲಿಸಿ ತಲೆಗೆ ಚಿಪ್ಪು ಅಳವಡಿಸಿಕೊಂಡು ಜೂ.16ರಂದು ಮನೆಗೆ ಕರೆದುಕೊಂಡು ಬಂದಿದ್ದು, ಜೂ.17ರಂದು ಮನೆಯಲ್ಲಿ ದಿನೇಶ ಮೃತಪಟ್ಟಿದ್ದಾರೆ. ಕುಂದಾಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪುತ್ತೂರು ಮಾರುಕಟ್ಟೆ ಧಾರಣೆ

18-06-2026 ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	420 - 470
ಚೋಲ್ ಅಡಿಕೆ	525 - 550
ಡಬಲ್ ಚೋಲ್	525 - 550
ಹೊಸ ಪಠೋರ	335 - 385
ಹಳೆ ಪಠೋರ	335 - 385
ಹೊಸ ಉಳ್ಳಿ	140 - 285
ಹಳೆ ಉಳ್ಳಿ	130 - 285
ಹೊಸ ಕೋಕಾ	315 - 335
ಹಳೆ ಕೋಕಾ	315 - 335
ಹೊಸ ಕರಿಗೋಟು	245 - 275
ಹಳೆ ಕರಿಗೋಟು	245 - 275
ಹಸಿ ಕೊಕ್ಕೋ	70 - 100
ಒಣ ಕೊಕ್ಕೋ	270 - 320

ಕಾಳುಮೆಣಸು ಧಾರಣೆ

ಕಾಳುಮೆಣಸು	450 - 665

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	271.00
ಆರ್‌ಎಸ್‌ಎಸ್ 2	224.00
ಸ್ಕ್ರಾಪ್ 1	156.00
ಸ್ಕ್ರಾಪ್ 2	145.00

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಸುಳ್ಯ, ದ.ಕ. ಇವರ ನ್ಯಾಯಾಲಯದಲ್ಲಿ
ಕ್ರಿಮಿನಲ್ ಎಂ.ಸಿ. ನಂಬ್ರ : 04/2026
ರವಿಶಂಕರ, ಬಿನ್. ದಿ. ಚೆನ್ನ ನ್ಯಾಕ
ಕುಳ್ಳಾಜೆ ಮನೆ,
ಕೂತ್ಕುಂಜ ಗ್ರಾಮ ಮತ್ತು ಅಂಚೆ,
ಸುಳ್ಯ ತಾಲೂಕು, ದ.ಕ.
ಮತ್ತು ಇತರರು
...ಅರ್ಜಿದಾರರು
ಮತ್ತು
ತಹಶೀಲ್ದಾರರು, ಸುಳ್ಯ ದ.ಕ.
...ಎದ್ರಿದಾರರು

ಸಾರ್ವಜನಿಕ ನೋಟಿಸು

ಈ ಮೇಲಿನ ಪ್ರಕರಣದಲ್ಲಿ ಒಂದರಿಂದ ನಾಲ್ಕನೇ ಅರ್ಜಿದಾರರ ಸಹೋದರ ವ ಐದನೇ ಅರ್ಜಿದಾರರ ಮಗ **ವಸಂತ** ಬಿನ್ ದಿ। ಚೆನ್ನ ನ್ಯಾಕ, ಕುಳ್ಳಾಜೆ ಮನೆ, ಕೂತ್ಕುಂಜ ಗ್ರಾಮ ಮತ್ತು ಅಂಚೆ, ಸುಳ್ಯ ತಾಲೂಕು, ದ.ಕ. ಇವರು **ದಿನಾಂಕ 09-05-2022** ರಂದು ಕುಳ್ಳಾಜೆ ಮನೆ, ಕೂತ್ಕುಂಜ ಗ್ರಾಮ, ಸುಳ್ಯ ತಾಲೂಕು, ದ.ಕ. ಎಂಬಲ್ಲಿ ಮೃತಪಟ್ಟ ಬಗ್ಗೆ ಮರಣ ದೃಢಪತ್ರವನ್ನು ದಾಖಲಿಸಿ ನೀಡುವಂತೆ ನಿವೃತ್ತಿ ಕೋರಿ ಈ ನ್ಯಾಯಾಲಯದಲ್ಲಿ ಅರ್ಜಿಯನ್ನು ದಾಖಲಿಸಿದ್ದು, ಈ ಅರ್ಜಿಯ ಬಗ್ಗೆ ಬೇರೆ ಯಾರದಾದರೂ ತಕರಾರು ಯಾ ಆಕ್ಷೇಪಣೆಗಳಿದ್ದಲ್ಲಿ ಈ ನ್ಯಾಯಾಲಯಕ್ಕೆ **ದಿನಾಂಕ:04-07-2026** ರಂದು **ಪೂರ್ವಾಹ್ನ ಗಂಟೆ 11.00ಕ್ಕೆ** ಖುದ್ದು ಯಾ ವಕೀಲರ ಮೂಲಕ ಹಾಜರಾಗಿ ತಮ್ಮ ತಕರಾರನ್ನು ಸಲ್ಲಿಸತಕ್ಕದ್ದು, ಇಲ್ಲದಿದ್ದಲ್ಲಿ ಈ ಪ್ರಕರಣದಲ್ಲಿ ಇತರ ಯಾರದೇ ಆಗಲೀ ಯಾವುದೇ ಆಕ್ಷೇಪಗಳಿರುವುದಿಲ್ಲವೆಂದು ತೀರ್ಮಾನಿಸಿ ಮುಂದಿನ ಆದೇಶ ಮಾಡಲಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

2026ನೇ ಇಸವಿ ಜೂನ್ ತಿಂಗಳ ದಿನಾಂಕ 18 ರಂದು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

(ನ್ಯಾಯಾಲಯದ ಆದೇಶದ ಮೇರೆಗೆ)
ಸಹಿ/- Chief Ministerial Officer
Court of Civil Judge & J.M.F.C., Sullia- 574327, D.K.
ಸಹಿ/- Jagadeesha Huderi, Advocate , Sullia, D.K.
ಅರ್ಜಿದಾರರ ಪರ ವಕೀಲರು

IN THE COURT OF SENIOR CIVIL JUDGE AND JMFC BANTWAL
CRL M.C: 136/2026

Between:
1. Smt. Shambhavi
Aged 61 Years
W/o. Chandrahasa Shetty
D/o. Kunhanna Shetty
And Smt. Vitamma
R/at, 21-250/1, Nagthimar House, Panemangalore Village Bondala, Bantwal-574231.
2. Mr. Seetharama Kunhanna Shetty
Aged 60 Years
S/o. Kunhanna Shetty
And Smt. Vitamma
R/at, 202, Madhav Kunj CHS A-4, Mangeshi Sahara, Near Chatri Bunglow, Chikanghar, Kalyan West Thane, Maharashtra-421301
3. Smt. Kusumavathi
Aged 55 Years
W/o. Vishwanatha Shetty
D/o. Kunhanna Shetty
And Smt. Vitamma
R/at, Kaniyooru, Borukatte, Belthangady Taluk-574217
4. Smt. Rajeevi
D/o. Mahabala Shetty And Gowri
Aged 61 Years,
R/at, 21/238, Bondala Anthara Guthu House, Shambhoor Post, Panemangalore Village, Bantwal Taluk-574231
5. Smt. Vasanthi
W/o. Nagesh Shetty
D/o. Mahabala Shetty and Gowri
Aged 60 Years
R/at. Sedi House, Nidle Post And Village Belthangady Taluk-574216.
6. Smt. Ambika
W/o. Sathish Shetty
D/o. Mahabala Shetty and Gowri
Aged 54 Years R/at, 20-31, Kumara Kripa T. C. Road, Ullal Bail, Ullal Taluk-575020.
7. Mr. Balakrishna Shetty
S/o. Mahabala Shetty and Gowri
Aged 52 Years
R/at, 21/238, Bondala Anthara Guthu House, Shambhoor Post, Panemangalore Village, Bantwal Taluk-574231
...Petitioners
And
THE REGISTRAR OF BIRTH & DEATHS TOWN MUNICIPAL BANTWAL
...Respondent

CITATION NOTICE

Whereas the above named petitioners have made an application to this Court seeking direction to enter the death event of the Grandmother of the petitioners **Sitha @ Sithakka** in the death register maintained by the Respondent and that the above case stands posted to at **07/08/2026 11:00 A.M.** before the above court of hearing. Be it known that persons desiring to oppose the same should file their objections if any in the said court on the said date and time, failing which the matter will be heard and determined. The case is posted on **07.08.2026** at **11:00 A.M.** for hearing before the grant of Death Certificate.

Given under my hand and seal of the court on this 12th day of June 2026.

(BY ORDER OF THE COURT)
Sd/- Chief Ministerial Officer
Sr Civil Judge & J.M.F.C. Bantwal, D.K.
Sd/- Advocate for Petitioners

ಬೆಂಗಳೂರು ದಕ್ಷಿಣ ನಗರ ಪಾಲಿಕೆ
ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರವರ ಕಛೇರಿ,
ಬೊಮ್ಮನಹಳ್ಳಿ ವಲಯ-2, ಬೆಂಗಳೂರು-560 068.

ಸಂಖ್ಯೆ: ಬೆಂದನಪಾ(ಬೊಮ್ಮ)/ಟೆಂಡರ್/ಪ್ರೋ/02/2026-27 ದಿನಾಂಕ: 18-06-2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ಐಎಫ್‌ಟಿ) (ದ್ವಿ ಲಕೋಟೆ ಪದ್ಧತಿ)
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ವೆಬ್‌ಸೈಟ್ https://kppp.karnataka.gov.in

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಬೊಮ್ಮನಹಳ್ಳಿ ವಲಯ, (ಈ ದಾಖಲಾತಿಗಳಲ್ಲಿ ಉದ್ಯೋಗದಾತರು ಎಂದು ಓದಲಾಗಿದೆ) ರವರು ಕೆಟಿಪಿಪಿ ನಿಯಮಗಳು 2000ರ ಅನುಸಾರವಾಗಿ ಕಾರ್ಮಿಕ ಇಲಾಖೆಯಡಿಯಲ್ಲಿ ನೋಂದಾಯಿತರಾಗಿರುವ ಅರ್ಹ ಮತ್ತು ಅನುಭವಿ ವ್ಯಕ್ತಿಗಳು / ಏಜೆನ್ಸಿಗಳು / ಸಂಸ್ಥೆಗಳಿಂದ (ಈ ದಾಖಲಾತಿಗಳಲ್ಲಿ ಗುತ್ತಿಗೆದಾರರೆಂದು ಓದಲಾಗಿದೆ) ಉದ್ಯಾನವನಗಳ ಭೂದೃಶ್ಯ ಅಭಿವೃದ್ಧಿಗಾಗಿ ಟೆಂಡರ್‌ನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು / ವರ್ಗ
1.	ಬೊಮ್ಮನಹಳ್ಳಿ ವಲಯ ಉದ್ಯಾನವನಗಳಲ್ಲಿ ಭೂದೃಶ್ಯ ಅಭಿವೃದ್ಧಿ ಮತ್ತು ಬೋರ್‌ವೆಲ್ ಸೌಲಭ್ಯ ಸೇರಿದಂತೆ ಇತರ ಸಿವಿಲ್ ಕಾಮಗಾರಿಗಳು (ಇತರೆ) ಅಂದಾಜು ವೆಚ್ಚ (ಲಕ್ಷ ರೂಗಳಲ್ಲಿ): 200.00, ಇಎಂಡಿ (ರೂಗಳಲ್ಲಿ): 3,00,000/-

ಟೆಂಡರ್‌ನ ಕಾರ್ಯಸೂಚಿ: 1. ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕೆಪಿಪಿ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡುವ **ದಿನಾಂಕ: 19-06-2026 ರಿಂದ. 2.** ಪೂರ್ವ ಬಿಡ್ ಸಭೆಯ **ದಿನಾಂಕ: 20-06-2026** ರ ಬೆಳಗ್ಗೆ **11:30 ಗಂಟೆಗೆ** ನಡೆಸಲಾಗುವುದು. **3.** ಟೆಂಡರ್ ಕೊನೆಯ **ದಿನಾಂಕ: 25-06-2026ರ ಸಂಜೆ 4:00 ಗಂಟೆಗೆ. 4.** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 29-06-2026 ರ ಸಂಜೆ 4.30 ಗಂಟೆಗೆ. 5.** ಆರ್ಥಿಕ ಬಿಡ್ ತೆರೆಯುವ ದಿನಾಂಕ ತಾಂತ್ರಿಕ ಬಿಡ್ ಅನುಮೋದನೆಯ ನಂತರ.

ಸಹಿ/- ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು,
ಬೊಮ್ಮನಹಳ್ಳಿ ವಲಯ, ಬೆಂದನಪಾ.

ಕರ್ನಾಟಕ ಸರ್ಕಾರ
ಪ್ರವಾಸೋದ್ಯಮ ಇಲಾಖೆ
ಉಪನಿರ್ದೇಶಕರ ಕಚೇರಿ, ಕೊಠಡಿ ಸಂಖ್ಯೆ:205, 2ನೇ ಮಹಡಿ "ಪ್ರಜಾಸೌಧ", ದಕ್ಷಿಣ ಕನ್ನಡ ಜಿಲ್ಲಾ ಆಡಳಿತ ಕೇಂದ್ರ, ಪಡೀಲು, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ-575007
E-mail: adtourismmangalore@gmail.com ದೂರವಾಣಿ: 0824-2453926
ಸಂ: ಪ್ರಇ/ಉನಿಕ/ದಕಜಿ/ಮಂ/42/2026-27 ದಿನಾಂಕ: 18-06-2026

ಪ್ರಕಟಣೆ

ಉಪ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಮಂಗಳೂರು ಕಚೇರಿಗೆ ದಿನನಿತ್ಯದ ಕರ್ತವ್ಯ ನಿರ್ವಹಣೆಗಾಗಿ ಕಂಪ್ಯೂಟರ್, ಪ್ರಿಂಟರ್ ಅವಶ್ಯಕತೆಯಿರುವುದರಿಂದ ಈ ಕೆಳಗಿನ ವಿವರಗಳಂತೆ ಉಪಕರಣಗಳನ್ನು ಸರಬರಾಜು ಮಾಡಲು ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ.

Sl No	Particulars: Items Name	Particulars: Company/Model/Features	Qty
1	Commercial Desktop	Intel Core 15 Processor 16GB RAM, 512 GB SSD, Keyboard and mouse No operating system 19.5" Monitor 3 Year hardware warranty	3 No's
2	Windows 11	Professional OEM Pack	3 No's
3	Epson EcoTank L6460	A4 ink Tank wifi ADFColour inktank Printer	1 No

ಆಸಕ್ತ ಸಂಸ್ಥೆಗಳು ದರಪಟ್ಟಿಗಳನ್ನು, ದಿನಾಂಕ: 19.06.2026 ರಿಂದ 25.06.2026 ರ ವರೆಗೆ ಕಛೇರಿ ಸಮಯದಲ್ಲಿ ಸಲ್ಲಿಸಬಹುದಾಗಿರುತ್ತದೆ.

ಸಹಿ/- ಉಪ ನಿರ್ದೇಶಕರು,
ಪ್ರವಾಸೋದ್ಯಮ ಇಲಾಖೆ,
ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ

DIPR/DK/KSMCA/391/ 26-27 dt. 18.06.2026

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಕೃಭಾಜನಿನಿ,
ಆಣೆಕಟ್ಟು ಸುರಕ್ಷತಾ ಘಟಕ-2, ಆಲಮಟ್ಟಿ. ದೂರವಾಣಿ: 08426-281027.
ಇ-ಮೇಲ್: dam_division@rediffmail.com
ಸಂ:ಕೃಭಾಜನಿನಿ/ಆಸುಘ-2ಆ/ಪಿಬಿ-1/2026-27/580
ದಿನಾಂಕ:17.06.2026

ಅಲ್ಪಾವಧಿ ಸಂಕ್ಷಿಪ್ತ ಟೆಂಡರ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ. ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಆಣೆಕಟ್ಟು ಸುರಕ್ಷತಾ ಘಟಕ-2, ಆಲಮಟ್ಟಿ, ತಾ: ನಿಡಗುಂದಿ ಇವರು ಅರ್ಹ ಗುತ್ತಿಗೆದಾರರಿಗೆ ಇಂಡೆಂಟ್ ಸಂಖ್ಯೆಗಳು Percentage basis from the eligible contractors for the work indents of **Two Cover** – (1) I .No. 2796– 125.99 Lakhs (2) I. No. 2795—195.00 Lakhs ಕೆ.ಟಿ.ಪಿ.ಟಿ. ನಿಯಮಗಳನ್ವಯ, ಅರ್ಹ ಬಿಡ್ಡುದಾರರುಗಳಿಂದ ಟೆಂಡರ್ ಅಹ್ವಾನಿಸಿದ್ದು, ಗುತ್ತಿಗೆದಾರರುಗಳು ಭದ್ರತಾ ಠೇವಣಿಯನ್ನು ಇ-cash ನಲ್ಲಿ ತುಂಬಿ ತಮ್ಮ ಬಿಡ್ಡುಗಳನ್ನು ಭರ್ತಿಗೊಳಿಸಿದ ಟೆಂಡರನ್ನು ಸಲ್ಲಿಸುವದು.

1. ಟೆಂಡರ ಡಾಕುಮೆಂಟ್ಸಗಳನ್ನು ವೆಬ್‌ಸೈಟನಲ್ಲಿ ನೋಡಿಕೊಳ್ಳುವ / ಡೌನಲೋಡ್ ಮಾಡಿಕೊಳ್ಳುವ ದಿನಾಂಕ ಹಾಗೂ ಸ್ವಿಕರಿಸುವ ಕೊನೆಯ ದಿನಾಂಕ: **18.06.2026** ರಿಂದ **06.07.2026** ಸಾಯಂಕಾಲ 5.00 ಘಂಟೆಯವರೆಗೆ.
2. ಪೂರ್ವಭಾವಿ ಸಭೆ **:24.06.2026 ಮುಂಜಾನೆ 11.00 ಘಂಟೆಗೆ.**
3. ತಾಂತ್ರಿಕ ಬಿಡ್ ತೆರೆಯುವ ದಿನಾಂಕ (Two Cover): **08.07.2026 ಮುಂಜಾನೆ 11.00 ಘಂಟೆಗೆ.**
4. ಆರ್ಥಿಕ ಬಿಡ್ ತೆರೆಯುವ ದಿನಾಂಕ (Two Cover): **13.07.2026 ಮುಂಜಾನೆ 11.00 ಘಂಟೆಗೆ.**

ಟೆಂಡರಗೆ ಸಂಬಂಧಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ ಉಳಿದಂತೆ ಟೆಂಡರನಲ್ಲಿ ಯಾವುದೇ ಬದಲಾವಣೆಗಳನ್ನು ಈ ವೆಬ್‌ಸೈಟನ್ನು ಸಂಪರ್ಕಿಸಿ ಪಡೆಯಬಹುದು. kppp.karnataka.gov.in ಸಂಪರ್ಕಿಸಬೇಕಾದ ಕಛೇರಿ ದೂರವಾಣಿ ಸಂಖ್ಯೆ: 08426-281027.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಆಣೆಕಟ್ಟು ಸುರಕ್ಷತಾ ಘಟಕ-2,
ಆಲಮಟ್ಟಿ.

ವಾಸಾಸಂಇ/ವಿಜಯಪುರ/160/ಕೆಎಸ್‌ಎಂಸಿಎ/2026-27

ಕಳೆದು ಹೋಗಿದೆ

ಬೆಂಗಳೂರು ಶಹರಿನ 3ನೇ ಕ್ರಾಸ್, ಎ.ಪಿ.ಸಿ. ಲೇಅವುಟ್, ಲೇಕ್ ಶೋರ್ ಗಾರ್ಡ್ ಹತ್ತಿರ, ಕಿಂಡ್ಲು ಎಂಬಲ್ಲಿ "ಅನುಗ್ರಹ" ಮನೆಯಲ್ಲಿರುವ ಮೋನಪ್ಪ ನಾಯ್ಕ ಎಸ್.ರವರ ಪತ್ನಿ ಜಾನಕಿ ಆದ ನಾನು ಈ ಮೂಲಕ ವಾಕ್ಯ ಪ್ರಮಾಣ ಮಾಡಿ ನುಡಿಯುವುದೇನೆಂದರೆ, ನಾನು ಮೇಲೆ ಕಾಣಿಸಿದ ವಿಳಾಸದಲ್ಲಿ ವಾಸ್ತವ್ಯದಲ್ಲಿರುವುದಾಗಿದೆ.

ಪುತ್ತೂರು ತಾಲೂಕು ನರಿಮೊಗ್ರು ಗ್ರಾಮದ ಸ ನಂ: 218/3ಬಿ1ಎ(ಪಿ1) 1.98, 225/1ಎ1(ಪಿ) 0.65, 40/5 1.19 ಎಕ್ರೆ ಅಸ್ತಿಗಳ ಕುರಿತು ದಿ. ಮ್ಯಾಲಪ್ಪ ಸುವರ್ಣ ಇವರ ಮಗನಾದ ಸೀತಾರಾಮ ಸುವರ್ಣ ಇವರು ದಿನಾಂಕ: 29/4/2003 ರಂದು ಪುತ್ತೂರಿನ ನೋಟರಿಯವರಾದ ಬಿ. ನಿರ್ಮಲ್ ಕುಮಾರ್ ಇವರ ಸಮಕ್ಷಮ ನೋಟರಿಯಲ್ ರಿ. ನಂ: 1508/2003ನೇಗೆ ಅವನ ಸಹೋದರನಾದ ವೇದನಾಥ ಸುವರ್ಣ ಇವರಿಗೆ ಜನರಲ್ ಪವರ್ ಅಫ್ ಎಟಾರ್ನಿಯನ್ನು ಬರಕೊಟ್ಟಿರುತ್ತಿದ್ದರು. ಸದ್ರಿ ಅಧಿಕಾರ ಪತ್ರದ ಪ್ರಕಾರ ಸದ್ರಿ ಆಸ್ತಿಗಳಲ್ಲಿ ಸೀತಾರಾಮ ಸುವರ್ಣ ಇವರಿಗೆ ಇರುವ ಹಿಸೆ ಹಕ್ಕನ್ನು ಅವರು ದಿನಾಂಕ: 26/3/2003 ರಲ್ಲು ನೋಂದಣಿ ನಂ:1269/2003-04ನೇಗೆ ವೀಣಾ ಇವರಿಗೆ ಖುಲಾಸು ಪಡಿಸಿಕೊಟ್ಟಿರುತ್ತಾರೆ.

ಆ ನಂತರ ಸದ್ರಿ ಆಸ್ತಿಯ ಪೈಕಿ ಸ.ನಂ: 218/3ಬಿ1ಎ4 ಪೈಕಿ 0.04.50 ಮತ್ತು 225/1ಎ ಪೈಕಿ 0.05.50 ಎಕ್ರೆ ಆಸ್ತಿಯನ್ನು ನಾನು ದಿನಾಂಕ:5/5/2011 ರಂದು ನೋಂದಣಿ ನಂ:453/2011-12ನೇಗೆ ಖಂಡಿತ ಕ್ರಯಕ್ಕೆ ಪಡಕೊಂಡಿರುತ್ತೇನೆ.

ಪ್ರಕೃತ ಮೇಲೆ ಕಾಣಿಸಿದಂತೆ ಸೀತಾರಾಮ ಸುವರ್ಣ ಇವರು ಅವರ ಸಹೋದರನಾದ ವೇದನಾಥ ಸುವರ್ಣ ಇವರಿಗೆ ಬರಕೊಟ್ಟ ಜನರಲ್ ಪವರ್ ಅಫ್ ಎಟಾರ್ನಿಯು ಕಳೆದು ಹೋಗಿರುತ್ತದೆ. ಸದ್ರಿ ಅಧಿಕಾರ ಪತ್ರವು ನನ್ನಲ್ಲಿ ಲಭ್ಯವಿರುವುದಿಲ್ಲ ವಾಗಿ ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸಹಿ/- ಜಾನಕಿ

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಯಾದಗಿರ.
ಕಾರ್ಯಪಾಲಕ ಅಭಿಯಂತರರ ಕಛೇರಿ,
ಪಂಚಾಯತ ರಾಜ್ ಇಂಜಿನೀಯರಿಂಗ್, ವಿಭಾಗ,
ಎನ್.ವಿ.ಎಮ್. ಹೋಟೆಲ್ ಎದರುಗಡೆ, ಸ್ಟೇಷನ್ ರಸ್ತೆ, ಯಾದಗಿರಿ-585202.

ಸಂಖ್ಯೆ:ಕಾಪಾಅ/ಪಂರಾಇಂ/ವಿಯಾ/ಕೆಕೆಆರ್‌ಡಿಬಿ&ರಾಗ್ರಾಸ್ವಅಯೋ/2026-27/ 517 ದಿನಾಂಕ: 18.06.2026

ಸಂಕ್ಷಿಪ್ತ ಟೆಂಡರ ಪ್ರಕಟಣೆ (ಅಲ್ಪಾವಧಿ) KW-1, 2 & 3
(ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

1) ಕಾಮಗಾರಿಗಳ ವಿವರ.:(1) ಸುರಪುರ ತಾಲೂಕಿನ ಮಾಲಗತ್ತಿ ಗ್ರಾಮದಲ್ಲಿ ಗ್ರಾಮ ಪಂಚಾಯತ್ ಕಟ್ಟಡ ನಿರ್ಮಾಣ. RDPR/2026-27/BD/WORK_INDENT26371/CALL-2 Other (2) ಶಹಾಪೂರ ತಾಲ್ಲೂಕಿನ ಶಿರವಾಳ ಗ್ರಾಮದ ಗ್ರಾಮ ಪಂಚಾಯತ ಕಟ್ಟಡ ನಿರ್ಮಾಣ. RDPR/2026-27/BD/WORK_INDENT26515/CALL-2 SC Bidders Only (3)ಹುಣಸಗಿ ತಾಲ್ಲೂಕಿನ ಜಂಗಿನಗಡ್ಡಿ ಗ್ರಾಮದ ಅಂಗನವಾಡಿ-02 ಕಟ್ಟಡ ನಿರ್ಮಾಣ. RDPR/2025-26/BD/WORK _INDENT 25129CALL-2 Other (4) ಸುರುಪೂರ ತಾಲೂಕಿನ ಗೌಡಗೇರಾ ಗ್ರಾಮದ ಪ್ರೌಢ ಶಾಲೆಗೆ ಕಂಪೌಂಡ್ ಗೋಡೆ ನಿರ್ಮಾಣ. (UDISE Code: 29330806702) RDPR/2026-27/BD/WORK_INDENT27410Other **2) ಲೆಕ್ಕ ಶೀರ್ಷಿಕೆ:** 2025-26ನೇ ಕೆ.ಕೆ.ಆರ್.ಡಿ.ಬಿ. ಯೋಜನೆ ಮತ್ತು ರಾಷ್ಟ್ರೀಯ ಗ್ರಾಮ ಸ್ವರಾಜ್ ಅಭಿಯಾನ ಯೋಜನೆ **3) ಟೆಂಡರಿಗಿಟ್ಟ ಅಂದಾಜು ಮೊತ್ತ:** ಕನಿಷ್ಠ 9.00 ಮತ್ತು ಗರಿಷ್ಠ ರೂ. 65.00 ಲಕ್ಷ **4) ಗುತ್ತಿಗೆದಾರರ ದರ್ಜೆ:** 4ನೇ ಮತ್ತು 3ನೇ ದರ್ಜೆ ಮೇಲ್ಪಟ್ಟು **5) ಟೆಂಡರ ಫಾರಂ ಪಡೆಯಲು ಕೊನೆಯ ದಿನಾಂಕ:**20.06.2026 ರಿಂದ 01.07.2026 ಸಾಯಂಕಾಲ 4:00 ಗಂಟೆವರೆಗೆ **6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ:** ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿದಂತೆ (ಅರ್ಜಿ ಶುಲ್ಕು ಹಿಂದಿರುಗಿಸಲಾಗುವುದಿಲ್ಲಾ) **7) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ:** 01.07.2026 ಸಾಯಂಕಾಲ 4:00 ಗಂಟೆವರೆಗೆ **8) ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್ (ಕೆ.ಡಬ್ಲ್ಯೂ- 3):** 03.07.2026 ಬೆಳಿಗ್ಗೆ 9:00 ನಂತರ **9) ಟೆಂಡರ ತೆರೆಯುವ ದಿನಾಂಕ ಆರ್ಥಿಕ ಬಿಡ್ (ಕೆ.ಡಬ್ಲ್ಯೂ- 1 & 2):** 03.07.2026 ಬೆಳಿಗ್ಗೆ 9.00 ನಂತರ **10) ಟೆಂಡರ ತೆರೆಯುವ ದಿನಾಂಕ ಆರ್ಥಿಕ ಬಿಡ್ (ಕೆ.ಡಬ್ಲ್ಯೂ- 3):**10.07.2026 ಬೆಳಿಗ್ಗೆ 11:00 ನಂತರ **11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ (ಕಛೇರಿ ಅವಧಿಯಲ್ಲಿ):** ಕಾರ್ಯಪಾಲಕ ಅಭಿಯಂತರವರ ಕಛೇರಿ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಎನ್.ವಿ.ಎಮ್. ಹೋಟೆಲ್ ಎದರುಗಡೆ, ಸ್ಟೇಷನ್ ರಸ್ತೆ, ಯಾದಗಿರಿ-585202 **12) ಅಂತರಜಾಲ ತಾಣದ ವಿಳಾಸ:** https://kppp.karnataka.gov.in

ಸೂಚನೆ :- ಟೆಂಡರರಿಗೆ ಸಂಬಂದಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ https://kppp.karnataka.gov.in/ ವೆಬ್‌ಸೈಟ್‌ನಲ್ಲಿ ಪಡೆಯಬಹುದು (ರಜಾದಿನಗಳು ಹೊರತುಪಡಿಸಿ).

ಸಹಿ/- ಕಾರ್ಯಪಾಲಕ ಇಂಜಿನೀಯರರು,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ.

ವಾ.ಸಾ.ಸಂ.ಇ/ಯಾದಗಿರಿ/117/ಕೆ.ಎಸ್.ಎಂ.ಸಿ&ಎ/2026-27

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ವಿದ್ಯುತ್ ಭವನ, ನಿಗಮ ಕಛೇರಿ, ಗೋಪನಕೊಪ್ಪ, ಹುಬ್ಬಳ್ಳಿ
Tel / Fax No : (0836) 2322771 / 2324307
Website : https://hescom.karnataka.gov.in
e-mail : seeit@hescom.co.in CIN : U31401KA2002SGC030437
No. HESCOM/SEE(IT&MT)/IT1/CCTV/760/2026-27/cys-2783
Dated : 18-06-2026

ಟೆಂಡರ ಪ್ರಕಟಣೆ (ಇ-ಪ್ರೋಕ್ಯೂರ್‌ಮೆಂಟ್ ಮೂಲಕ ಮಾತ್ರ)

ಅಧೀಕ್ಷಕ ಇಂಜಿನೀಯರ್ (ವಿ), ಐಟಿ&ಎಮ್‌ಟಿ, ನಿಗಮ ಕಛೇರಿ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ ರವರಿಂದ ಈ ಕೆಳಕಂಡ ಅಲ್ಪಾವಧಿ ಟೆಂಡರ್ ಅನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ.

ಕ್ರ. ಸಂ.	ಬಿಡ್ ಇಂಡೆಂಟ್ ಸಂಖ್ಯೆ	ಟೆಂಡರ್ ವಿವರಗಳು
1	HESCOM/ 2026-27/ SE0754	ಹೆಸ್ಕಾಂನ ವಿದ್ಯುತ್ ಭವನ ನಿಗಮ ಕಚೇರಿ, ಗೋಪನಕೊಪ್ಪ, ಹುಬ್ಬಳ್ಳಿ ಇಲ್ಲಿಗೆ ಸಿಸಿಟಿವಿ ಕ್ಯಾಮೆರಾಗಳ ಪೂರೈಕೆ, ಸ್ಥಾಪನೆ, ಸಂರಚನೆ ಮತ್ತು ನಿರ್ವಹಣೆ.
2	HESCOM/ 2026-27/ SE0755	ಹೆಸ್ಕಾಂನ ಎಲ್ಲಾ ವಿಭಾಗೀಯ ಉಗ್ರಾಣ ಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳ ಪೂರೈಕೆ, ಸ್ಥಾಪನೆ, ಸಂರಚನೆ ಮತ್ತು ನಿರ್ವಹಣೆ.

ಸದರಿ ಟೆಂಡರದ ಪೂರ್ಣ ವಿವರಗಳನ್ನು ವೆಬ್‌ಸೈಟ್, www.kppp.karnataka.gov.in ರಲ್ಲಿ on or after **18.06.2026** ಪಡೆಯಬಹುದು.

ಸಹಿ/- ಅಧೀಕ್ಷಕ ಅಭಿಯಂತರರು(ವಿ) (ಐಟಿ&ಎಮ್‌ಟಿ) ಹೆಸ್ಕಾಂ, ಹುಬ್ಬಳ್ಳಿ

ವಾಸಾಸಂಇ/ಧಾ/325/ಕೆಎಸ್‌ಎಂಸಿಎ/2026-27

ಪುರಸಭಾ ಕಾರ್ಯಾಲಯ
ಕುಂದಾಪುರ -576 201, ಉಡುಪಿ ಜಿಲ್ಲೆ
Ph: 08254-230410(O), E-Mail: itstaff_ulb_kundapur@yahoo.co.in.
ಕು.ಪು.ಸ/.ವಿ/ಸೇವೆ-ದುರಸ್ತಿ/112/2025-26 ದಿನಾಂಕ: 17.06.2026

:ಕೊಟೇಶನ್ ಪ್ರಕಟಣೆ:

ಕುಂದಾಪುರ ಪುರಸಭೆಯ ಈ ಕೆಳಕಾಣಿಸಿದ ವಿಷಯಗಳಿಗೆ ಸಂಬಂಧಿಸಿದಂತೆ ಕೊಟೇಶನ್‌ಗಳನ್ನು ಆಹ್ವಾನಿಸಲಾಗಿದ್ದು, ಈ ಬಗ್ಗೆ ಆಸಕ್ತ ಅರ್ಹ ಸೇವಾ ಸರಬರಾಜುದಾರರು/ಏಜೆನ್ಸಿಯವರು ದರ ನಮೂದಿಸಿ ಮೊಹರು ಮಾಡಿದ ಕೊಟೇಶನ್‌ಗಳನ್ನು **ದಿ:30.06.2026 ಪೂರ್ವಾಹ್ನ 4.00 ಘಂಟೆಯ** ಒಳಗಾಗಿ ಈ ಕಚೇರಿಗೆ ಸಲ್ಲಿಸತಕ್ಕದ್ದು. ಸಲ್ಲಿಕೆಯಾದ ಕೊಟೇಶನ್‌ಗಳನ್ನು **ದಿ:30.06.2026 ಪೂರ್ವಾಹ್ನ 4.30 ಘಂಟೆಗೆ** ಸರಿಯಾಗಿ ತೆರೆಯಲಾಗುವುದು. ಸದ್ರಿ ಕೊಟೇಶನ್‌ಗೆ ಸಂಬಂಧಿಸಿದ ಹೆಚ್ಚಿನ ವಿವರಗಳಿಗಾಗಿ ಹಾಗೂ ಷರತ್ತುಗಳಿಗೆ ಈ ಕಚೇರಿಯ ಆರೋಗ್ಯ ವಿಭಾಗವನ್ನು ಕಚೇರಿಯ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ.

ಕ್ರ.ಸಂ.	ವಿವರ
01	ಕುಂದಾಪುರ ಪುರಸಭಾ ವ್ಯಾಪ್ತಿಯ ಚರ್ಚ್ ರಸ್ತೆಯ ಚಿನ್ಮಯಿ ಆಸ್ಪತ್ರೆ ಹತ್ತಿರ ರಸ್ತೆಯಲ್ಲಿ ಉಂಟಾಗಿರುವ ಹಂಪ್ಸ್‌ನ್ನು ತೆರವುಗೊಳಿಸಿ ಇಂಟರ್‌ಲಾಕ್ ಅಳವಡಿಸುವ ಕಾಮಗಾರಿ
02	ಕುಂದಾಪುರ ಪುರಸಭಾ ವ್ಯಾಪ್ತಿಯ ಮದ್ದುಗುಡ್ಡೆಯ ಕಾನ್ವೆಂಟ್ ರಸ್ತೆಯ ಸಂತೋಷ್ ರವರ ಮನೆಯಿಂದ ಶರತ್ ರವರ ಮನೆಯವರೆಗೆ ಮಳೆಯಿಂದ ಹಾನಿಯಾಗಿರುವ ರಸ್ತೆಯ ತುರ್ತು ದುರಸ್ತಿ ಕೈಗೊಳ್ಳುವ ಕುರಿತು
03	ಕುಂದಾಪುರ ಪುರಸಭಾ ವ್ಯಾಪ್ತಿಯ ಕಾಲೇಜ್ ರಸ್ತೆಯ ಡಾ.ಬಿ.ಆರ್ ಅಂಬೇಡ್ಕರ್ ಭವನಕ್ಕೆ ಸಿಸಿ ಕ್ಯಾಮರ ಅಳವಡಿಸುವ ಕಾಮಗಾರಿ
04	ಕುಂದಾಪುರ ಪುರಸಭೆಗೆ 2026-27 ಸಾಲಿಗೆ ನೈರ್ಮಲ್ಯ ಕೆಲಸ ಕಾರ್ಯಗಳಿಗೆ ಅವಶ್ಯವಿರುವ ಬ್ಲೀಚಿಂಗ್ ಪೌಡರ್ ಹಾಗೂ ಪಿನಾಯಿಲ್‌ನ್ನು ಒದಗಿಸುವ ಕುರಿತು
05	ಕುಂದಾಪುರ ಪುರಸಭೆಯ ಹಳೆ ಕೋಟೆಯಲ್ಲಿರುವ ABC ಕೇಂದ್ರಕ್ಕೆ ಇಲೆಕ್ಟ್ರಿಕಲ್ ವಯರಿಂಗ್ ಮಾಡಿಸುವ ಕುರಿತು
06	ಕುಂದಾಪುರ ಪುರಸಭಾ ವ್ಯಾಪ್ತಿಯ ಸಾರ್ವಜನಿಕ ಸ್ಥಳಗಳಲ್ಲಿ ಟ್ವಿನ್‌ಬಿನ್‌ಗಳನ್ನು ಸರಬರಾಜು ಮಾಡಿ ಅಳವಡಿಸುವ ಕುರಿತು
07	ಕಂದಾವರದ ಮೆಟೀರಿಯಲ್ ರಿಕವರಿ ಫೆಸಿಲಿಟಿ (MRF) ಘಟಕಕ್ಕೆ ಫ್ಯಾನ್ ಸರಬರಾಜು ಮತ್ತು ಅಳವಡಿಕೆ ಕುರಿತು

ಸಹಿ/- ಆಡಳಿತಾಧಿಕಾರಿ, ಪುರಸಭೆ, ಕುಂದಾಪುರ
ಸಹಿ/- ಮುಖ್ಯಾಧಿಕಾರಿ, ಪುರಸಭೆ, ಕುಂದಾಪುರ

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಕಾರುಣ್ಯ ಪ್ಲಸ್ (ನಂ.KN-628) ಡ್ರಾ ಜೂನ್ 18ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
PW 519786 (PUNALUR)

Consolation Prize Rs.5,000/-
PN 519786 PO 519786 PP 519786 PR 519786
PS 519786 PT 519786 PU 519786 PV 519786
PX 519786 PY 519786 PZ 519786

2nd Prize Rs.30,00,000/- [30 Lakhs]
PR 842469 (KATTAPPANA)

3rd Prize Rs.5,00,000/- [5 Lakhs]
PY 935794 (PATTAMBI

FOR THE TICKETS ENDING WITH THE FOLLOWING NUMBERS

4th Prize Rs.5,000/-
0101 0215 0686 0872 2618 3733 3761 4207 4251 4769
5090 5227 5746 6648 6979 8061 8586 8951 8966

5th Prize Rs.2,000/-
0026 2245 3279 4218 7575 9544

6th Prize Rs.1,000/-
0565 0974 1240 1337 2114 2551 2619 3008 3253 3297
4210 4262 4837 6887 7164 7194 8216 8387 8545 8628
8651 8819 9299 9453 9542

7th Prize Rs.500/-
0038 0423 0699 0707 1251 1499 1503 1767 2243 2311
2430 2490 2511 2515 2517 2710 2763 2810 2976 2979
3602 3965 3975 4106 4145 4458 4684 4749 4927 5132
5171 5182 5283 5343 5421 5733 5789 6021 6035 6249
6310 6457 6621 6656 6812 6865 6941 7019 7250 7422
7578 7838 7970 8000 8104 8146 8223 8280 8380 8409
8466 8788 8871 8940 8987 9055 9215 9247 9471 9505
9530 9547 9558 9718 9799 9876

8th Prize Rs.200/-
0179 0197 0421 0453 0671 0724 0798 0851 0922 0926
0955 1183 1318 1350 1452 1458 1459 1547 1568 1655
1768 2106 2125 2240 2386 2580 2591 2625 2681 2701
2900 2933 3011 3106 3169 3225 3267 3276 3302 3337
3344 3452 3526 3565 3585 3950 4112 4270 4956 5245
5544 5595 5770 5913 5976 6067 6094 6235 6571 6588
6765 6772 7229 7240 7401 7484 7515 7542 7877 8060
8299 8314 8482 8741 8931 9096 9163 9222 9363 9498
9502 9580 9632 9845

9th Prize Rs.100/-
0010 0103 0154 0214 0244 0324 0326 0439 0503 0842
0871 0873 0886 0890 1048 1059 1116 1121 1235 1246
1254 1367 1493 1608 1626 1638 1660 1718 1816 1929
1948 1960 1968 2031 2161 2185 2213 2221 2283 2327
2363 2633 2661 2761 2800 2814 2927 2951 2965 2998
3009 3161 3281 3284 3376 3381 3421 3478 3636 3640
3648 3758 3806 3847 3852 3864 3911 3968 4082 4127
4299 4468 4480 4502 4703 4774 4777 4802 5055 5075
5088 5103 5222 5244 5296 5402 5517 5605 5627 5651
5783 5866 6091 6125 6181 6268 6429 6430 6436 6442
6453 6486 6537 6564 6676 6737 6744 6863 6918 6958
6960 6976 6997 7064 7067 7124 7165 7174 7256 7264
7393 7439 7506 7807 7820 7860 7907 7956 8066 8083
8112 8170 8485 8503 8525 8531 8686 8860 8950 9098
9139 9146 9174 9220 9228 9245 9272 9339 9374 9414
9565 9751 9755 9802 9837 9899

ಕಿರುಸುದ್ದಿ

ಕೊಲೆ ಬೆದರಿಕೆ ಆರೋಪಿಗೆ ಜಾಮೀನು ನಿರಾಕರಣೆ

ಮಂಗಳೂರು: ಹಣದ ಬೇಡಿಕೆ ಇಟ್ಟು ಕೊಡದಿದ್ದರೆ ಕೊಲೆ ಮಾಡುವುದಾಗಿ ಬೆದರಿಕೆಯೊಡ್ಡಿದ ಪ್ರಕರಣದ ಆರೋಪಿಗೆ ನಗರದ 6ನೇ ಜೆ.ಎಂ.ಎಫ್.ಸಿ ನ್ಯಾಯಾಲಯ ಜಾಮೀನು ನಿರಾಕರಿಸಿದೆ. ರೋಷನ್ ಕಿಣಿ ಎಂಬಾತ ಜಾಮೀನು ನಿರಾಕರಿಸಲ್ಪಟ್ಟ ಆರೋಪಿ. ರೋಷನ್ ಕಿಣಿ ಮತ್ತು ಇತರರ ವಿರುದ್ಧ ಮೇ 25ರಂದು ಬರ್ಕೆ ಠಾಣೆಯಲ್ಲಿ ಹಲ್ಲೆ ಪ್ರಕರಣ ದಾಖಲಾಗಿತ್ತು. ಆರೋಪಿಗಳು ಬಿಜೈ ಕಾಪಿಕಾಡ್ ನ ಪ್ರಿತೇಶ್ ಎನ್. ಕುಮಾರ್ ಎಂಬವರ ಸ್ಕೂಟರನ್ನು ಅಡ್ಡಗಟ್ಟಿ ತಡೆದು ನಿಲ್ಲಿಸಿ, ಅವಾಚ್ಯ ಶಬ್ದಗಳಿಂದ ಬೈದು ಹಣವನ್ನು ತರುವಂತೆ ಬೇಡಿಕೆ ಇಟ್ಟಿದ್ದರು. ಹಣ ಕೊಡದಿದ್ದರೆ ಕೊಲೆ ಮಾಡುವುದಾಗಿ ಬೆದರಿಕೆ ಒಡ್ಡಿದ್ದರು. ಪ್ರಕರಣದಲ್ಲಿ ಪ್ರಮುಖ ಆರೋಪಿಯಾದ ರೋಷನ್ ಕಿಣಿ 6ನೇ ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಜಾಮೀನು ನೀಡುವಂತೆ ಅರ್ಜಿ ಸಲ್ಲಿಸಿದ್ದ. ಜಾಮೀನು ಅರ್ಜಿಗೆ ಆಕ್ಷೇಪಣೆ ಸಲ್ಲಿಸಿ ವಾದ ಮಂಡಿಸಿದ ಸಹಾಯಕ ಸರಕಾರಿ ಅಭಿಯೋಜಕಿ ಅಶ್ವಿತಾ ಅಮೀನ್, ಆರೋಪಿ ರೋಷನ್ ಕಿಣಿ ವಿರುದ್ಧ ಕ್ರಿಮಿನಲ್ ಪ್ರಕರಣಗಳು ದಾಖಲಾಗಿರುವ ಬಗ್ಗೆ ಹಾಗೂ ಆತನ ಮೇಲಿನ ಈ ಹಿಂದಿನ ಪ್ರಕರಣಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿರುವುದನ್ನು ನ್ಯಾಯಾಲಯದ ಗಮನಕ್ಕೆ ತಂದಿದ್ದಾರೆ. ಇತ್ತೀಚೆಗೆ ಸುಪ್ರೀಂ ಕೋರ್ಟ್ ನೀಡಿದ ತೀರ್ಪನ್ನು ಉಲ್ಲೇಖಿಸಿ ಜಾಮೀನು ನೀಡದಂತೆ ಮನವಿ ಮಾಡಿದ್ದಾರೆ. ವಾದ ಪ್ರತಿವಾದವನ್ನು ಆಲಿಸಿದ ನ್ಯಾಯಾಧೀಶರಾದ ಶಶಿಕಲಾ ಜಿ. ಅವರು ಜಾಮೀನು ಅರ್ಜಿಯನ್ನು ವಜಾಗೊಳಿಸಿ ಆದೇಶ ಹೊರಡಿಸಿ, ಆರೋಪಿಗೆ ನ್ಯಾಯಾಂಗ ಬಂಧನವನ್ನು ವಿಧಿಸಿದ್ದಾರೆ.

ರದ್ದಾದ ಪತ್ರಿಕೆಗಳ ಶೀರ್ಷಿಕೆಗಳ ಮರುಸ್ಥಾಪನೆ: ದಂಡ ಪಾವತಿಗೆ ಜೂ. 30 ಕೊನೆಯ ದಿನ

ಮಂಗಳೂರು : ವಾರ್ಷಿಕ ವರದಿಗಳನ್ನು ಸಲ್ಲಿಸದ ಕಾರಣಕ್ಕಾಗಿ ರದ್ದಾಗಿರುವ ಪತ್ರಿಕೆಗಳ ಶೀರ್ಷಿಕೆಗಳನ್ನು ಮರುಸ್ಥಾಪಿಸಲು ಭಾರತ ಸರ್ಕಾರದ ಪತ್ರಿಕೆಗಳ ಪ್ರೆಸ್ ರಿಜಿಸ್ಟ್ರಾರ್ ಜನರಲ್ ಕಚೇರಿಯು ಪ್ರಕಾಶಕರಿಗೆ ಕೊನೆಯ ಅವಕಾಶವನ್ನು ನೀಡಿದೆ. ಪ್ರೆಸ್ ಮತ್ತು ರಿಜಿಸ್ಟ್ರೇಷನ್ ಆಫ್ ಪಿರಿಯಾಡಿಕಲ್ಸ್ ಕಾಯ್ದೆ, 2023 ರ ನಿಯಮಗಳನ್ನು ಪಾಲಿಸದ ಕಾರಣಕ್ಕಾಗಿ ಹಲವು ಪತ್ರಿಕೆಗಳ ಶೀರ್ಷಿಕೆಗಳನ್ನು ರದ್ದುಗೊಳಿಸಲಾಗಿತ್ತು. ಈ ಕುರಿತು ಪ್ರಕಾಶಕರು ಮತ್ತು ಪಾಲುದಾರರಿಂದ ಬಂದ ಮನವಿಗಳನ್ನು ಪುರಸ್ಕರಿಸಿ, ಇಲಾಖೆಯು ಈ ಅಂತಿಮ ಅವಕಾಶವನ್ನು ಕಲ್ಪಿಸಿದೆ. ಬಾಕಿ ಇರುವ ದಂಡವನ್ನು ಪಾವತಿಸಲು ಮತ್ತು ವಾರ್ಷಿಕ ವರದಿಯನ್ನು ಸಲ್ಲಿಸಲು ಜೂನ್ 30 ಕೊನೆಯ ದಿನ. ರದ್ದಾದ ಪಟ್ಟಿಯಿಂದ ಶೀರ್ಷಿಕೆಯನ್ನು ತೆಗೆದುಹಾಕಲು, ಪ್ರಕಾಶಕರು ಬಾಕಿ ಇರುವ ದಂಡವನ್ನು ಪಾವತಿಸ ಬೇಕು ಮತ್ತು 2024-25 ರ ಆರ್ಥಿಕ ವರ್ಷದ ವಾರ್ಷಿಕ ವರದಿಯನ್ನು ಪ್ರೆಸ್ ಸೇವಾ ಪೋರ್ಟಲ್ ಮೂಲಕ ಕಡ್ಡಾಯವಾಗಿ ಸಲ್ಲಿಸಬೇಕು. ಜೂನ್ 30ರ ನಂತರ ಯಾವುದೇ ಕಾರಣಕ್ಕೂ ಕಾಲಾವಕಾಶವನ್ನು ವಿಸ್ತರಿಸಲಾಗುವುದಿಲ್ಲ. ಈ ಗಡುವಿನೊಳಗೆ ದಂಡ ಪಾವತಿಸದಿದ್ದರೆ ಶೀರ್ಷಿಕೆಗಳನ್ನು ಶಾಶ್ವತವಾಗಿ ರದ್ದುಗೊಳಿಸಲಾಗುವುದು ಮತ್ತು ಈ ಬಗ್ಗೆ ಯಾವುದೇ ಮೇಲ್ಮನವಿಗಳನ್ನು ಸ್ವೀಕರಿಸಲಾಗುವುದಿಲ್ಲ ಎಂದು ಉಪ ಪ್ರೆಸ್ ರಿಜಿಸ್ಟ್ರಾರ್ ಜನರಲ್ ರತ್ನಾಕರ್ ಪಾಮುಲ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬ್ಯಾನರ್‌ಗಳ ತೆರವಿಗೆ ಸೂಚನೆ

ಕಾಸರಗೋಡು: ವಿಶ್ವಕಪ್ ಫುಟ್ಬಾಲ್‌ಗೆ ಸಂಬಂಧಿಸಿದಂತೆ ಸಾರ್ವಜನಿಕ ಸ್ಥಳಗಳಲ್ಲಿ ಹಾಕಲಾಗಿರುವ ಬ್ಯಾನರ್‌ಗಳು, ಫ್ಲೆಕ್ಸ್‌ಗಳು ಮತ್ತು ಬೋರ್ಡ್‌ಗಳನ್ನು ಮೂರು ದಿನಗಳಲ್ಲಿ ತೆಗೆದುಹಾಕಬೇಕು. ಇಲ್ಲದಿದ್ದರೆ ಪಂಚಾಯತ್ ತನ್ನದೇ ಖರ್ಚಿನಲ್ಲಿ ಅವುಗಳನ್ನು ತೆರವುಗೊಳಿಸುತ್ತದೆ. ಈ ನಿಟ್ಟಿನಲ್ಲಿ ತಗಲುವ ಶುಲ್ಕವನ್ನು ಸಂಬಂಧಪಟ್ಟವರಿಗೆ ವಿಧಿಸಲಾಗುತ್ತದೆ ಎಂದು ಕೋಡೋಂಬೇಳೂರು ಗ್ರಾಮ ಪಂಚಾಯತ್ ಕಾರ್ಯದರ್ಶಿ ತಿಳಿಸಿದ್ದಾರೆ.

ಕೇಂದ್ರ ಸರಕಾರದಿಂದ ರಸ್ತೆ ಅಭಿವೃದ್ಧಿಗೆ ರೂ. 57 ಕೋಟಿ : ಕ್ಯಾ. ಚೌಟ

ಜಿಲ್ಲೆಯ ಎಲ್ಲಾ ಕ್ಷೇತ್ರಗಳಿಗೂ ಹಂಚಿಕೆ



ಉಪ್ಪಿನಂಗಡಿ: ಕೇಂದ್ರ ಸರ್ಕಾರದ ರಸ್ತೆ ಅಭಿವೃದ್ಧಿ ನಿಧಿಯಿಂದ (ಸಿ.ಆರ್.ಐ.ಎಫ್.) ದ.ಕ. ಜಿಲ್ಲೆಯ ರಸ್ತೆ ಅಭಿವೃದ್ಧಿ ಸಲುವಾಗಿ ರೂ. 57 ಕೋಟಿ ರೂಪಾಯಿ ಅನುದಾನ ಬಂದಿದ್ದು, ಇದನ್ನು ಜಿಲ್ಲೆಯ ಎಲ್ಲಾ ವಿಧಾನ ಸಭಾ ಕ್ಷೇತ್ರಗಳಿಗೆ ಹಂಚಿಕೆ ಮಾಡಲಾಗುವುದು ಎಂದು ದ.ಕ. ಜಿಲ್ಲಾ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಹೇಳಿದರು.

ಅವರು ಜೂ. 18ರಂದು ಉಪ್ಪಿನಂಗಡಿ ಗ್ರಾಮದ ನಂದಿನಿನಗರದಲ್ಲಿ 5 ಲಕ್ಷ ರೂಪಾಯಿ ಅನುದಾನದಲ್ಲಿ ನಿರ್ಮಿಸಲಾದ ಕಾಂಕ್ರೀಟ್ ರಸ್ತೆಯನ್ನು ಉದ್ಘಾಟಿಸಿ ಮಾತನಾಡಿದರು.

ಸಿಆರ್.ಐ.ಎಫ್. ಫಂಡ್ ಅಲ್ಲದೆ ಮಳೆಹಾನಿ ನಿಧಿಯಲ್ಲಿ 80 ಕೋಟಿ ಅನುದಾನ ಬಂದಿದ್ದು, ಇವೆರಡನ್ನೂ ಬಳಸಿಕೊಂಡು ಜಿಲ್ಲೆಯ ಲೋಕೋಪಯೋಗಿ ರಸ್ತೆಗೆ ಮತ್ತು ಜಿಲ್ಲಾ ಮುಖ್ಯ ರಸ್ತೆ ಅಭಿವೃದ್ಧಿಗೆ ಬಳಸಿಕೊಳ್ಳಲಾಗುವುದು ಎಂದರು.

ಪ್ರಸಕ್ತ ರಾಜ್ಯದ ಕಾಂಗ್ರೆಸ್ ಸರಕಾರ ಆರ್ಥಿಕ ಸಮಸ್ಯೆಗೆ ಸಿಲುಕಿದ್ದು, ಅಭಿವೃದ್ಧಿ ಕಾರ್ಯಗಳಿಗೆ ಅನುದಾನವಿಲ್ಲದಂತಾಗಿದೆ. ಮಾತ್ರವಲ್ಲದೆ ಸಿದ್ದರಾಮಯ್ಯ ಸರಕಾರ ದ.ಕ ಜಿಲ್ಲೆಯನ್ನು ಸಂಪೂರ್ಣ ಕಡೆಗಣಿಸಿದ್ದು, ಡಿ.ಕೆ. ಶಿವಕುಮಾರ್ ನೇತೃತ್ವದ ಹೊಸ ಸರಕಾರವಾದರೂ ಜಿಲ್ಲೆಯ ಅಭಿವೃದ್ಧಿಗೆ ಸೂಕ್ತ ಅನುದಾನವನ್ನು ಬಿಡುಗಡೆಗೊಳಿಸಲಿ ಎಂದು ಹಾರೈಸಿದರು.

ಈ ಹಿಂದಿನ ಬಿಜೆಪಿ ಸರಕಾರದ ಅವಧಿಯಲ್ಲಿ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ಕನಿಷ್ಠ 2000 ಕೋಟಿ ಅನುದಾನವನ್ನು ಒದಗಿಸಿರುವುದನ್ನು ನೆನಪಿಸಿದ ಅವರು, ಕಾಂಗ್ರೆಸ್ ಸರಕಾರ ಅಭಿವೃದ್ಧಿ ಕಾರ್ಯವನ್ನು ಮರೆತಂತಿದೆ ಎಂದರು.

ಹಿರಿಯ ಬಿಜೆಪಿ ನಾಯಕಿ ರಾಧಾ ಮೋನಪ್ಪ ಅವರಿಂದ ಕಾಂಕ್ರೀಟೀಕರಣಗೊಂಡ ರಸ್ತೆಯನ್ನು ಉದ್ಘಾಟಿಸಿದ ಸಂಸದರ ನಡೆ ಗಮನ ಸೆಳೆಯಿತು. ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಸಂಜೀವ ಮಟಂದೂರು, ಉಪ್ಪಿನಂಗಡಿ ಸಹಕಾರಿ ಸಂಘದ ಅಧ್ಯಕ್ಷ ಸುನಿಲ್ ಕುಮಾರ್ ದಡ್ಡು, ಬಿಜೆಪಿ ಮುಖಂಡರಾದ ಸುರೇಶ್ ಅತ್ರಮಜಲು, ರಾಮಚಂದ್ರ ಮಣಿಯಾಣಿ, ವಿದ್ಯಾಧರ ಜೈನ್ , ಪ್ರಸನ್ನ ದರ್ಬೆ, ಎನ್. ಉಮೇಶ್ ಶೆಣೈ, ಶಶಿಕಲಾ ಭಾಸ್ಕರ್, ನಿತಿನ್, ಸದಾನಂದ ಶೆಟ್ಟಿ, ಮುಕುಂದ ಬಜತ್ತೂರು, ಉಷಾ ಮುಳಿಯ, ಚಂದ್ರಾವತಿ, ಲಕ್ಷ್ಮೀಶ, ದಯಾನಂದ ಸರೋಳಿ, ನಾರಾಯಣ, ಕೃಷ್ಣಪ್ಪ, ಸದಾನಂದ ನೆಕ್ಕಿಲಾಡಿ, ದಯಾನಂದ ಶೆಟ್ಟಿ ಉಜಿರೆಮಾರ್, ಹರಿಪ್ರಸಾದ್ ಯಾದವ್, ಮೋಹನ್ ಪಕ್ಕಳ, ಪುರುಷೋತ್ತಮ ಮುಂಗ್ಲಿಮನೆ, ಚಂದ್ರಶೇಖರ್ ಬಪ್ಪಳಿಗೆ, ರಾಮಚಂದ್ರ ಪೂಜಾರಿ, ಲಕ್ಷ್ಮಣ ಬೆಳ್ಳಿಪ್ಪಾಡಿ, ಹರಿರಾಮಚಂದ್ರ, ಹೊನ್ನಪ್ಪ, ಪ್ರಕಾಶ್ ರೈ ಬೆಳ್ಳಿಪಾಡಿ, ಕಿರಣ್, ಅಕ್ಷಯ್, ಬಿ.ಕೆ. ಆನಂದ ಮತ್ತಿತರರು ಉಪಸ್ಥಿತರಿದ್ದರು.

ಜೂ.21: ಬೇಕಲಕೋಟೆಗೆ ಉಚಿತ ಪ್ರವೇಶ

ಕಾಸರಗೋಡು: ಅಂತಾರಾಷ್ಟ್ರೀಯ ಯೋಗ ದಿನವಾದ ಜೂ.21ರಂದು ಮಧ್ಯಾಹ್ನ 12 ಗಂಟೆಯವರೆಗೆ ಬೇಕಲಕೋಟೆಗೆ ಪ್ರವೇಶ ಉಚಿತವಾಗಿದೆ. ಬೇಕಲಕೋಟೆಯಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಬೆಳಗ್ಗೆ 6 ಗಂಟೆಗೆ ಉದುಮ ಶಾಸಕ ಕೆ.ನೀಲಕಂಠನ್ ಉದ್ಘಾಟಿಸಲಿದ್ದಾರೆ. ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್, ಪದ್ಮಶ್ರೀ ಪುರಸ್ಕೃ ತ ಸತ್ಯನಾರಾಯಣ ಬೆಳೇರಿ ಮತ್ತು ಇತರರು ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ.

ಅನಾರೋಗ್ಯ: ವ್ಯಕ್ತಿ ಆತ್ಮಹತ್ಯೆ

ಕುಂದಾಪುರ : ಗಂಟಲು ಕ್ಯಾನ್ಸರ್ ಸಮಸ್ಯೆಯಿಂದ ಬಳಲುತ್ತಿದ್ದ ಕರ್ಕುಂಜೆ ಗ್ರಾಮದ ರಾಮ ಪೂಜಾರಿ (51) ಎಂಬವರು ಮನೆಯ ಹಿಂದುಗಡೆ ಇರುವ ಮರಕ್ಕೆ ಕುತ್ತಿಗೆಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕಳೆದ 2 ತಿಂಗಳಿನಿಂದ ಮಣಿಪಾಲ ಕೆ.ಎಂ.ಸಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಇವರು ಜೂ.17ರಂದು ರಾತ್ರಿ ಮನೆಯಲ್ಲಿ ಊಟ ಮಾಡಿ ಮಲಗಿದ್ದರು. ಕುಂದಾಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆರೋಗ್ಯ ಉಚಿತ ಸೇವೆ

ಕಾಸರಗೋಡು: ವಿದ್ಯಾನಗರ ಸಿವಿಲ್ ಸ್ಟೇಷನ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ರಕ್ಷಣಾ ಕಚೇರಿಯಲ್ಲಿ ಮಾನಸಿಕ ಆರೋಗ್ಯ ತಜ್ಞರ ಉಚಿತ ಸೇವೆಗಳು ದೊರಕುತ್ತವೆ. ಜೂ.20ರಂದು ಲಭ್ಯವಿರುವ ಈ ಸೇವೆಯ ಆಗತ್ಯವಿರುವವರು ಜೂ.19ರೊಳಗೆ 8281999065 ಅಥವಾ 9847000302 ಕರೆ ಮಾಡಿ ನೋಂದಾಯಿಸಿಕೊಳ್ಳಬೇಕು.

ಮೂವರು ಮುಖಂಡರು ಬಿಜೆಪಿ ಸೇರ್ಪಡೆ



ಕುಂದಾಪುರ: ಕುಂದಾಪುರ ವಿಧಾನಸಭಾ ಕ್ಷೇತ್ರದ ಕುಂಭಾಶಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಮೂವರು ಮುಖಂಡರು ಬಿಜೆಪಿ ಕುಂದಾಪುರ ಮಂಡಲ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಿಜೆಪಿಗೆ ಸೇರ್ಪಡೆಯಾದರು.

ಕುಂಭಾಶಿ ಗ್ರಾಪಂ ಮಾಜಿ ಸದಸ್ಯೆ ರಾಧಾದಾಸ್ ಅವರ ಪುತ್ರ ಅರ್ಜುನ ದಾಸ್, ಪ್ರಜ್ವಲ್ ಪೂಜಾರಿ ಹೆಗ್ಗೂರು ಬೆಟ್ಟು, ಕೆ.ಎಸ್. ನರಸಿಂಹ ಕೊರವಡಿ ಅವರು ಬಿಜೆಪಿ ಕುಂದಾಪುರ ಮಂಡಲ ಕ್ಷೇತ್ರ ಅಧ್ಯಕ್ಷ ಸುರೇಶ್ ಶೆಟ್ಟಿ ಗೋಪಾಡಿ ಹಾಗೂ ಕುಂದಾಪುರ ಶಾಸಕ ಎ.ಕಿರಣ್ ಕುಮಾರ್ ಕೊಡ್ಗಿ ಅವರ ಉಪಸ್ಥಿತಿಯಲ್ಲಿ ಬಿಜೆಪಿಗೆ ಸೇರ್ಪಡೆಯಾದರು.

ಕುಂದಾಪುರ ಮಂಡಲ ನಿಕಟ ಪೂರ್ವ ಅಧ್ಯಕ್ಷ ಶಂಕರ ಅಂಕದಕಟ್ಟೆ, ಪ್ರಧಾನ ಕಾರ್ಯದರ್ಶಿಗಳಾದ ಸತೀಶ್ ಪೂಜಾರಿ ವಕ್ವಾಡಿ, ಸುಧೀರ್ ಕೆ.ಎಸ್., ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಕಾಡೂರು ಸುರೇಶ್ ಶೆಟ್ಟಿ, ಕಾರ್ಯದರ್ಶಿ ಸದಾನಂದ ಬಳ್ಕೂರು, ಮಂಡಲ ಉಪಾಧ್ಯಕ್ಷ ಪ್ರಕಾಶ್ ಜಿ. ಪೂಜಾರಿ ಬೀಜಾಡಿ, ರಾಜೇಶ್ ಕಾವೇರಿ, ಸಂಪತ್ ಕುಮಾರ್ ಶೆಟ್ಟಿ ಶಾನಾಡಿ, ಶ್ವೇತಾ ಶ್ರೀನಿಧಿ ಉಪಾಧ್ಯಾಯ, ಮಂಜುನಾಥ್ ಕಾಮತ್, ಕುಂಭಾಶಿ ಶಕ್ತಿ ಕೇಂದ್ರ ಅಧ್ಯಕ್ಷ ಮಹೇಶ್ ಶೆಣೈ, ಕಾರ್ಯದರ್ಶಿ ಯೋಗೀಶ್ ಕೊರವಾಡಿ, ರಾಘವೇಂದ್ರ ಮೊಗವೀರ ಕೊರವಾಡಿ ಹಾಗೂ ಕುಂಭಾಶಿ ಭಾಗದ ಪ್ರಮುಖರು, ಕಾರ್ಯಕರ್ತರು ಉಪಸ್ಥಿತರಿದ್ದರು.

ಜೂ. 20: ವಿವೇಕಾನಂದ ಸ್ವಾಯತ್ತ ಕಾಲೇಜಿನ ಪದವಿ ಫಲಿತಾಂಶ ಪ್ರಕಟ

ಪುತ್ತೂರು: ವಿವೇಕಾನಂದ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ (ಸ್ವಾಯತ್ತ) ಇದರ 2025-26ನೇ ಶೈಕ್ಷಣಿಕ ಸಾಲಿನ ಮೇ/ಜೂನ್ 2026ರ ಪದವಿ ಸೆಮಿಸ್ಟರ್ ಪರೀಕ್ಷೆಗಳ ಫಲಿತಾಂಶವನ್ನು ಜೂ. 20 ರಂದು ಪ್ರಕಟಿಸಲಾಗುವುದು.

ಬಿ.ಎ., ಬಿ.ಎಸ್‌ಸಿ., ಬಿ.ಕಾಂ., ಬಿ.ಬಿ.ಎ. ಹಾಗೂ ಬಿ.ಸಿ.ಎ. ವಿಭಾಗಗಳ ವಿದ್ಯಾರ್ಥಿಗಳ ಫಲಿತಾಂಶಗಳನ್ನು ವಿದ್ಯಾರ್ಥಿಗಳು ಯುಯುಸಿಎಂಎಸ್ (ಗಗಆಒಖ) ಪೋರ್ಟಲ್‌ನಲ್ಲಿ ವೀಕ್ಷಿಸಬಹುದಾಗಿದೆ. ವಿದ್ಯಾರ್ಥಿಗಳು ತಮ್ಮ ನೋಂದಣಿ ಸಂಖ್ಯೆಯ ಮೂಲಕ ಫಲಿತಾಂಶ ಪರಿಶೀಲಿಸಬಹುದು ಎಂದು ಮಹಾವಿದ್ಯಾಲಯದ ಪ್ರಾಂಶುಪಾಲ ಪ್ರೊ. ಶ್ರೀಕೃಷ್ಣ ಗಣರಾಜ ಭಟ್ ಹಾಗೂ ಪರೀಕ್ಷಾಂಗ ವಿಭಾಗದ ಕುಲಸಚಿವ ಪ್ರಕಾಶ್ ಕುಮಾರ್ ಪಿ. ಅವರು ಜಂಟಿಯಾಗಿ ಕಾಲೇಜಿನ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿವೇಕಾನಂದ ಕಾಲೇಜು ಕ್ಯಾಂಪಸ್ ರೈಲ್ವೇ ಸೇತುವೆ ರಸ್ತೆ ಸರಿಪಡಿಸಲು ಎಂಪಿಗೆ ಮನವಿ



ಪುತ್ತೂರು: ನೆಹರೂನಗರದಲ್ಲಿರುವ ವಿವೇಕಾನಂದ ಕಾಲೇಜು ಕ್ಯಾಂಪಸ್‌ಗೆ ಸಂಪರ್ಕಿಸುವ ರೈಲ್ವೇ ಸೇತುವೆ ರಸ್ತೆಯ ಗುಂಡಿಗಳನ್ನು ಸರಿಪಡಿಸಿ ಡಾಮರೀಕರಣಗೊಳಿಸಲು ಕ್ರಮ ಕೈಗೊಳ್ಳುವಂತೆ ದ.ಕ. ಸಂಸದ ಕ್ಯಾ. ಬ್ರಿಜೇಶ್ ಚೌಟ ಅವರಿಗೆ ವಿವೇಕಾನಂದ ವಿದ್ಯಾವರ್ಧಕ ಸಂಘದಿಂದ ಮನವಿ ಸಲ್ಲಿಸಲಾಗಿದೆ.

ವಿವೇಕಾನಂದ ವಿದ್ಯಾವರ್ಧಕ ಸಂಘ ಪುತ್ತೂರು ಇದರ ವಿವಿಧ ಶಿಕ್ಷಣ ಸಂಸ್ಥೆಗಳಿರುವ ವಿವೇಕಾನಂದ ಕ್ಯಾಂಪಸ್‌ಗೆ ಸಂಪರ್ಕ ಕಲ್ಪಿಸುವ ರೈಲ್ವೇ ಸಂಕದ ರಸ್ತೆಯು ಪ್ರಸ್ತುತ ಹದಗೆಟ್ಟಿದ್ದು, ಹಲವೆಡೆ ದೊಡ್ಡ ಗುಂಡಿಗಳು ಉಂಟಾಗಿವೆ. ಈ ರಸ್ತೆಯಲ್ಲಿ ಪ್ರತಿದಿನ ಸಾವಿರಾರು ವಿದ್ಯಾರ್ಥಿಗಳು, ಶಿಕ್ಷಕರು, ಸಿಬ್ಬಂದಿ ಹಾಗೂ ಸಾರ್ವಜನಿಕರು ಬಳಸುತ್ತಿದ್ದು, ರಸ್ತೆ ಹದಗೆಟ್ಟಿರುವುದರಿಂದ ಸಂಚಾರಕ್ಕೆ ತೀವ್ರ ತೊಂದರೆಯಾಗುತ್ತಿದೆ.

ಈ ರಸ್ತೆಯು ಮಳೆಗಾಲದಲ್ಲಿ ರಸ್ತೆಯ ಗುಂಡಿಗಳಲ್ಲಿ ನೀರು ನಿಂತು ಅಪಘಾತಗಳ ಸಂಭವ ಹೆಚ್ಚಾಗಿದ್ದು, ಶಾಲಾ ಹಾಗೂ ಕಾಲೇಜು ವಿದ್ಯಾರ್ಥಿಗಳ ಸುರಕ್ಷತೆಯ ದೃಷ್ಟಿಯಿಂದ ಕೂಡಲೇ ರಸ್ತೆ ದುರಸ್ತಿ ಕಾರ್ಯ ಕೈಗೊಳ್ಳುವುದು ಅತ್ಯಗತ್ಯವಾಗಿದೆ. ಆದ್ದರಿಂದ, ರಸ್ತೆಯಲ್ಲಿರುವ ಗುಂಡಿಗಳನ್ನು ತುರ್ತಾಗಿ ಮುಚ್ಚಿಸಿ, ಸಂಪೂರ್ಣ ರಸ್ತೆಯನ್ನು ಡಾಮರೀಕರಣಗೊಳಿಸಿ ಸುಗಮ ಹಾಗೂ ಸುರಕ್ಷಿತ ಸಂಚಾರಕ್ಕೆ ಅನುಕೂಲವಾಗುವಂತೆ ಆಗತ್ಯ ಕ್ರಮ ಕೈಗೊಳ್ಳಬೇಕು ಎಂದು ವಿವೇಕಾನಂದ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಡಾ. ಕೆ.ಎಂ. ಕೃಷ್ಣ ಭಟ್ ಅವರು ಮನವಿ ನೀಡಿದ್ದಾರೆ.

ಜೂ. 21ರಂದು ಅಂತಾರಾಷ್ಟ್ರೀಯ ಯೋಗ ದಿನಾಚರಣೆ

ಉಡುಪಿ : ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆಯುಷ್ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಸ್ಕೌಟ್ಸ್ – ಗೈಡ್ಸ್, ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ವಿವಿಧ ಯೋಗ ಸಂಸ್ಥೆಗಳ ಸಹಯೋಗದೊಂದಿಗೆ 12 ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮವು ಜೂನ್ 21 ರಂದು ಬೆಳಗ್ಗೆ 7 ಗಂಟೆಗೆ ನಗರದ ಅಜ್ಜರಕಾಡು ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಲಿದೆ.



ಕಾ ಯ ರ್ ್ ಕ್ ್ರ ವ್ ಂ ವ್ ನ್ ್ನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ಯು.ಟಿ. ಖಾದರ್ ಉದ್ಘಾಟಿಸಲಿದ್ದು, ಶಾಸಕ ಯಶ್‌ಪಾಲ್ ಎ. ಸುವರ್ಣ ಅಧ್ಯಕ್ಷತೆ ವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಸಂಸದರಾದ ಕೋಟ ಶ್ರೀನಿವಾಸ ಪೂಜಾರಿ ಹಾಗೂ ಬಿ.ವೈ. ರಾಘವೇಂದ್ರ, ಮಂಗಳೂರು ಕರಾವಳಿ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಂ.ಎ ಗಫೂರ್, ಶ್ರೀ ನಾರಾಯಣ ಗುರು ಅಭಿವೃದ್ಧಿ ನಿಗಮದ ಅಧ್ಯಕ್ಷ ಮಂಜನಾಥ ಪೂಜಾರಿ, ಶಾಸಕರುಗಳಾದ ವಿ. ಸುನಿಲ್ ಕುಮಾರ್, ಗುರುರಾಜ್ ಶೆಟ್ಟಿ ಗಂಟಿಹೊಳೆ, ಎ. ಕಿರಣ್ ಕುಮಾರ್ ಕೊಡ್ಗಿ ಹಾಗೂ ಗುರ್ಮೆ ಸುರೇಶ್ ಶೆಟ್ಟಿ, ವಿಧಾನಪರಿಷತ್ ಶಾಸಕರುಗಳಾದ ಎಸ್.ಎಲ್. ಭೋಜೇಗೌಡ, ಮಂಜುನಾಥ್ ಭಂಡಾರಿ, ಡಾ. ಧನಂಜಯ ಸರ್ಜಿ ಹಾಗೂ ಕಿಶೋರ್ ಕುಮಾರ್ ಪುತ್ತೂರು, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನಕರ ಹೇರೂರು, ಉಡುಪಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಅಶೋಕ್ ಕುಮಾರ್ ಕೊಡವೂರು, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ರೋಹಿಣಿ ಸಿಂಧೂರಿ ದಾಸರಿ, ಆಯುಷ್ ನಿರ್ದೇಶನಾಲಯದ ಆಯುಕ್ತ ಸುನಿಲ್ ಪನ್ವಾರ್, ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರತೀಕ್ ಬಾಯಲ್, ಜಿಲ್ಲಾ ಪೊಲೀಸ್ ಅಧೀಕ್ಷಕ ಹರಿರಾಂ ಶಂಕರ್ ಹಾಗೂ ಮತ್ತಿತರರು ಭಾಗವಹಿಸಲಿದ್ದಾರೆ.

ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಆಯುಷ್ ವೈದ್ಯಕೀಯ ಚಿಕಿತ್ಸಾ ಪದ್ಧತಿಯ ಭಾಗವಾದ ಯೋಗಾಭ್ಯಾಸದಲ್ಲಿ ಭಾಗವಹಿಸಿ 'ಅಂತಾರಾಷ್ಟ್ರೀಯ ಯೋಗ ದಿನಾಚರಣೆ' ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಸಹಕರಿಸುವಂತೆ ಜಿಲ್ಲಾ ಆಯುಷ್ ಅಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ಕಿರು ಸುದ್ದಿ






ರಾಜ್ಯ ವಿಧಾನಸಭೆಯಿಂದ ವಿಧಾನ ಪರಿಷತ್‌ಗೆ ಗುರುವಾರ ನಡೆದ ಚುನಾವಣೆಯಲ್ಲಿ ಮಂಗಳೂರು ನಗರ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಡಿ. ವೇದವ್ಯಾಸ ಕಾಮತ್ ಮತ್ತು ಮಂಗಳೂರು ನಗರ ಉತ್ತರ ವಿಧಾನಸಭಾ ಕ್ಷೇತ್ರದ ಶಾಸಕ ಡಾ.ವೈ. ಭರತ್ ಶೆಟ್ಟಿ ಅವರು ಮತದಾನ ಮಾಡಿದರು.

ಬ್ಲ್ಯಾಕ್‌ಮೇಲ್ ಪ್ರಕರಣ: ಆರೋಪಿಗಳಿಗೆ ಜಾಮೀನು

ಮಂಗಳೂರು : ಮಂಗಳೂರಿನ ಉದ್ಯಮಿಯೊಬ್ಬರಿಗೆ ಸಲಿಂಗಕಾಮಕ್ಕೆ ಸಂಬಂಧಿಸಿದ ವೀಡಿಯೊವನ್ನು ಮುಂದಿಟ್ಟು ಬ್ಲ್ಯಾಕ್‌ಮೇಲ್ ಮಾಡಿ ರೂ.2.77 ಕೋಟಿ ಹಣ ವಸೂಲಿ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ, ಉದ್ಯಮಿಯ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ನಿಜಾಮ್ ಹಾಗೂ ಜಿತೇಶ್‌ಗೆ ನ್ಯಾಯಾಲಯಾಲ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ. ಬ್ಲ್ಯಾಕ್‌ಮೇಲ್ ಪ್ರಕರಣವು ಉರ್ವ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಉದ್ಯಮಿ ನೀಡಿದ ದೂರಿನ ಆಧಾರದ ಮೇಲೆ ಪೊಲೀಸರು ನಿಜಾಮ್ ಮತ್ತು ಇಬ್ರಾಹಿಂ ಮತ್ತು ಜಿತೇಶ್ ಅವರನ್ನು ಬಂಧಿಸಿಸಿ ಪ್ರಧಾನ ಸಿಜೆಎಂ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿತ್ತು. ವಿಚಾರಣೆ ನಡೆಸಿದ ನ್ಯಾಯಾಲಯ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿತ್ತು. ಪ್ರಸ್ತುತ, ಆರೋಪಿಗಳ ಪರವಾಗಿ ಮಂಡಿಸಲಾದ ವಾದಗಳನ್ನು ಪರಿಗಣಿಸಿದ ನ್ಯಾಯಾಲಯವು ಇಬ್ಬರು ಆರೋಪಿಗಳಿಗೆ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ. ಆರೋಪಿ ನಿಜಾಮ್ ಮತ್ತು ಇಬ್ರಾಹಿಂ ಪರವಾಗಿ ನ್ಯಾಯವಾದಿ ಜೀಷನ್ ಆಲಿ ಸುರತ್ಕಲ್, ಯುವ ನ್ಯಾಯವಾದಿ ತಾಜುದ್ದೀನ್ ಹಾಗೂ ಆರೋಪಿ ಜಿತೇಶ್ ಪರವಾಗಿ ನ್ಯಾಯವಾದಿ ವಿಕ್ರಂ ವಾದ ಮಂಡಿಸಿದ್ದರು.

ನಿಧನ ಸುದ್ದಿ

ವಜ್ರಕುಮಾರ ಕರ್ಣಂತಾಯ ಬಲ್ಲಾಳ್



ಮಂಗಳೂರು: ಕೊಳೂರು ಬೀಡಿನ ಅರಸರಾದ ವಜ್ರಕುಮಾರ ಕರ್ಣಂತಾಯ ಬಲ್ಲಾಳ್ (80) ಗುರುವಾರ ಸ್ವಗೃಹದಲ್ಲಿ ನಿಧನರಾದರು. ಅವರು ಪತ್ನಿ ಹಾಗೂ ಇಬ್ಬರು ಪುತ್ರರನ್ನು ಅಗಲಿದ್ದಾರೆ. ಕಾವೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನ, ಅರ್ಕಿವೊಡಲು ಶ್ರೀ ವಿಷ್ಣುಮೂರ್ತಿ ದೇವಸ್ಥಾನ ಸಹಿತ ಹಲವಾರು ದೇವಸ್ಥಾನಗಳ ಜೀರ್ಣೋದ್ಧಾರ, ಬ್ರಹ್ಮಕಲಶೋತ್ಸವ ಸಮಿತಿಯ ಗೌರವಾಧ್ಯಕ್ಷರಾಗಿ, ಆಡಳಿತ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು.

ಭಾಗೀರಥಿ



ಪುತ್ತೂರು: ಪುತ್ತೂರು ವಾಣಿ ಪ್ರಿಂಟರ್ಸ್ ಮಾಲಕರಾಗಿದ್ದ ಬೊಳುವಾರು ನಿವಾಸಿ, ದಿ.ನಾರಾಯಣ ಮಣಿಯಾಣಿ ಅವರ ಪತ್ನಿ ಭಾಗೀರಥಿ (81) ಅವರು ಜೂ.17 ರ ತಡ ರಾತ್ರಿ ಗಂ.12.15ಕ್ಕೆ ನಿಧನರಾಗಿದ್ದಾರೆ. ಬೊಳುವಾರು ನಿವಾಸಿಯಾಗಿದ್ದ ಭಾಗೀರಥಿ ಅವರು ಅನಾರೋಗ್ಯದಿಂದ ಪುತ್ತೂರು ಆದರ್ಶ ಆಸ್ಪತ್ರೆಯಲ್ಲಿ ದಾಖಲಾಗಿದ್ದರು. ಚಿಕಿತ್ಸೆಗೆ ಸ್ಪಂದಿಸದೆ ಅವರು ನಿಧನರಾಗಿದ್ದರೆ. ಮೃತರು ಪುತ್ರರಾದ ಪತ್ರಕರ್ತ ಪ್ರವೀಣ್ ಕುಮಾರ್ ಬೊಳುವಾರು, ವಾಣಿ ಪ್ರಿಂಟರ್ಸ್ ಸಂಸ್ಥೆಯನ್ನು ಮುನ್ನಡೆಸುತ್ತಿರುವ ನೀಲಂತ್, ಪುತ್ರಿ ಬೆಂಗಳೂರಿನಲ್ಲಿರುವ ಡಾ.ವಾಣಿ ಅವರನ್ನು ಅಗಲಿದ್ದಾರೆ. ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದರು. ಮಾಜಿ ಶಾಸಕ ಸಂಜೀವ ಮಠಂದೂರು, ಅರುಣ್ ಕುಮಾರ್ ಪುತ್ತಿಲ, ರಾಜೇಶ್ ಬನ್ನೂರು, ಯು. ಲೋಕೇಶ್ ಹೆಗ್ಡೆ ಮೊದಲಾದವರು ಮನೆಗೆ ಆಗಮಿಸಿ ಸಂತಾಪ ಸೂಚಿಸಿದ್ದಾರೆ.

ಮಾಧವ ಗಟ್ಟಿ ಪಿಲಿಯೂರು



ಮಂಜೇಶ್ವರ: ವರ್ಕಾಡಿ ಕೊಟಟ್ಟಜೆಯ ಮಾಧವ ಗಟ್ಟಿ ಪಿಲಿಯೂರು (62) ಅಸೌಖ್ಯದಿಂದ ಸೋಮವಾರ ನಿಧನ ಹೊಂದಿದರು. ಕೃಷಿಕರಾಗಿದ್ದ ಅವರು ಗಟ್ಟಿ ಸಮಾಜದ ವರ್ಕಾಡಿ ಮಾಗಣೆಯ ಗುರಿಕ್ಕಾರರಾಗಿದ್ದರು. ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಕ್ರಿಯರಾಗಿದ್ದು, ಉತ್ತಮ ನಾಟಕ ಕಲಾವಿದರಾಗಿದ್ದರು. ಹಲವು ನಾಟಕಗಳಲ್ಲಿ ಅವರು ನಿರ್ವಹಿಸಿದ ಹಾಸ್ಯ ಪಾತ್ರಗಳು ಅಪಾರ ಜನಮನ್ನಣೆ ಗಳಿಸಿದ್ದವು. ಮೃತರು ಪತ್ನಿ ಉಮಾ, ಮಕ್ಕಳಾದ ಅಕ್ಷತಾ, ಅಕ್ಷಯ್ ಅವರನ್ನು ಅಗಲಿದ್ದಾರೆ.

ಪುರುಷೋತ್ತಮನ್



ಕಾಸರಗೋಡು: ನಗರದ ಹಳೆ ಬಸ್ ನಿಲ್ದಾಣ ಬಳಿಯ ಆಶಾ ಹೋಟೇಲ್ ಮಾಲಕರಾಗಿದ್ದ ಪುರುಷೋತ್ತಮನ್ (85) ನಿಧನ ಹೊಂದಿದರು. ಅವರು ನುಳ್ಳಿಪ್ಪಾಡಿ ತಳಂಗರೆ ಕ್ಲಸ್ಟರ್ ಸೌಪರ್ಣಿಕ ನಿವಾಸಿದಲ್ಲಿ ವಾಸವಾಗಿದ್ದರು. ಮೃತರು ಪತ್ನಿ ಲಲಿತಾ, ಮಕ್ಕಳಾದ ಉಮೇಶ್, ದಿನೇಶ್, ಆಶಾ ಅವರನ್ನು ಅಗಲಿದ್ದಾರೆ.



ರಾಷ್ಟ್ರೀಯ ಪಂಚಾಯತ್ ಪುರಸ್ಕಾರ ಪ್ರಶಸ್ತಿ ಪಡೆದ ಸಾಣುರು ಗ್ರಾಮ ಪಂಚಾಯತ್‌ನ ಅಭಿವೃದ್ಧಿ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿರುವ ವಿಶ್ವನಾಥ್ ಅವರನ್ನು ಯುವ ಭೋವಿ ಡುಪಿ ಜಿಲ್ಲಾ ವತಿಯಿಂದ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಉಡುಪಿ ಜಿಲ್ಲಾ ಪದಾಧಿಕಾರಿಗಳಾದ ಆನಂದ್ ಕುಂಜರುಗಿರಿ, ಸಂದೇಶ್ ಪೆರ್ಡೂರು, ಲೋಹಿತ್ ಪರ್ಕಳ, ಚೇತನ್ ಬಿಆರ್ ಪರ್ಕಳ, ಕಿರಣ್ ಬಿಆರ್ ಪರ್ಕಳ ಉಪಸ್ಥಿತರಿದ್ದರು.

ಮಾನವೀಯ ಸ್ನೇಹಿತರ ಒಕ್ಕೂಟದಿಂದ 3 ಲಕ್ಷ ಮೌಲ್ಯದ ಸವಲತ್ತು ವಿತರಣೆ

ಮಡಿಕೇರಿ: ಮಾನವೀಯ ಸ್ನೇಹಿತರ ಒಕ್ಕೂಟದ ವತಿಯಿಂದ ಜೀವನ ಸಂಕಷ್ಟದಲ್ಲಿರುವವರು, ವಿದ್ಯಾರ್ಥಿಗಳು, ವಿಶೇಷಚೇತನರು ಸೇರಿದಂತೆ 70 ಮಂದಿಗೆ ರೂ. 3 ಲಕ್ಷ ಮೌಲ್ಯದ ಸವಲತ್ತು ವಿತರಿಸಲಾಯಿತು.

ಆದಾಯ ಮಾರ್ಗವಿಲ್ಲದೆ ಬಲುಕಷ್ಟ ಸ್ಥಿತಿಯಲ್ಲಿ ಬದುಕು ಸಾಗಿಸುತ್ತಿದ್ದ ಕುಟುಂಬಗಳಿಗೆ ಉತ್ತಮ ದರ್ಜೆಯ ಆಹಾರದ ಕಿಟ್, ಅನಾರೋಗ್ಯದಿಂದ ಬಳಲುತ್ತಿದ್ದವರ ಮಂದಿಯ ಚಿಕಿತ್ಸೆಗೆ ತಲಾ 5 ಸಾವಿರ ರೂಪಾಯಿ ಹಾಗೂ ವಿದ್ಯೆ ಕಲಿಯುವ ಕಷ್ಟದ ಕುಟುಂಬದಮಕ್ಕಳಿಗೆ ಪಠ್ಯ ಪರಿಕರ ಸೇರಿದಂತೆ ಒಟ್ಟು 70 ಮಂದಿಗೆ ರೂ 3 ಲಕ್ಷ ವೆಚ್ಚದಲ್ಲಿ ಸವಲತ್ತುಗಳನ್ನು ವಿತರಿಸಲಾಯಿತು.

ಮಡಿಕೇರಿ ನಗರಸಭೆಯ ಮಾಜಿ ಅಧ್ಯಕ್ಷ ಹೆಚ್.ಎಂ. ನಂದ ಕುಮಾರ್ ಕಾರುಣ್ಯ ಕಾರ್ಯಕ್ರಮ ಉದ್ಘಾಟಿಸಿದರು.

ಪತ್ರಕರ್ತ ಅನಿಲ್ ಎಚ್.ಟಿ., ಆಂಧ್ರಪ್ರದೇಶದ ಶ್ರೀ ಸತ್ಯಸಾಯಿ ವಿಶ್ವವಿದ್ಯಾನಿಲಯದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿರುವ ಡಾ, ಮುಸ್ತಫ ಮಾದಾಪುರ, ಮಾನವೀಯ ಸ್ನೇಹಿತರ ಒಕ್ಕೂಟದ ವಕ್ತಾರ ಶಶಿಕುಮಾರ್ ಚೆಟ್ಟಳ್ಳಿ, ಒಕ್ಕೂಟದ ಸ್ಥಾಪಕ ಅಡ್ಮಿನ್ ಅನಿಲ್ ರೈ, ಸದಸ್ಯರಾದ ಚೆಟ್ರಂಡ ಲೀಲಾ ಮೇದಪ್ಪ, ಅಸ್ಮತ್ ಮಡಿಕೇರಿ, ಮಂಗಳೂರಿನ ಉದ್ಯಮಿ ಅಮಿತ್ ಡಿಸೋಜಾ ಮೊದಲಾದವರು ಉಪಸ್ಥಿತರಿದ್ದರು. ಮಡಿಕೇರಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷೆ ಕಡ್ಲೇರ ತುಳಸಿ ಮೋಹನ್ ಅವರ ಧ್ಯೇಯ ಗೀತೆಯೊಂದಿಗೆ ಪ್ರಾರಂಭಗೊಂಡ ಸಮಾರಂಭದಲ್ಲಿ ಒಕ್ಕೂಟದ ವಕ್ತಾರ, ಪತ್ರಕರ್ತ ಎಂ. ಇ ಮಹಮದ್ ವರದಿ ವಾಚಿಸಿದರು. ಒಕ್ಕೂಟದ ಇಂದಿರಾ ಎ.ಎಚ್. ಸ್ವಾಗತಿಸಿ, ಒಕ್ಕೂಟದ ಪೊನ್ನಂಪೇಟ ಪ್ರತಿನಿಧಿ ಟಿ. ಆರ್. ವಿನೋದ್ ವಂದಿಸಿ, ಬಾಳೆಯಡ ದಿವ್ಯಾ ಮಂದಪ್ಪ ಕಾರ್ಯಕ್ರಮ ನಿರೂಪಿಸಿದರು. ಅಡ್ಮಿನ್‌ಗಳಾದ ಕವಿತಾ ರಮೇಶ್ ಲೀಲಾವತಿ, ಕವಿತಾ ರಮೇಶ್, ನಿಯಾಜ್ ಸುಂಟಿಕೊಪ್ಪ, ಕೆ ಎಸ್ ಅನಿಲ್ ಕುಮಾರ್, ಹನೀಫ್ ಸೋನ, ದಶರಥ, ಚೀರಂಡಚಂಗಪ್ಪ, ಅಗ್ನಿ ಚೆನ್ನನಾಯಕ ಉಪಸ್ಥಿತರಿದ್ದರು.

ಎಂಎಸ್‌ಇಜೆಡ್‌ಗೆ ಭೂಮಿ ತ್ಯಾಗ ಮಾಡಿದ ಕುಟುಂಬಗಳಿಗೆ ಸಿಗದ ನ್ಯಾಯ

ರಾಷ್ಟ್ರಪತಿ ಭವನದಿಂದ ಕ್ರಮಕ್ಕೆ ಸೂಚನೆ

ಮಂಗಳೂರು: ಮಂಗಳೂರು ವಿಶೇಷ ಆರ್ಥಿಕ ವಲಯ (ಎಂಎಸ್‌ಇಜೆಡ್) ಯೋಜನೆಗಾಗಿ ಭೂಮಿ ತ್ಯಾಗ ಮಾಡಿದ ಕುಟುಂಬಗಳಿಗೆ ಇದುವರೆಗೂ ಉದ್ಯೋಗ ಸಿಗದ ಹಿನ್ನೆಲೆಯಲ್ಲಿ ಸೂಕ್ತ ಕ್ರಮ ಕೈಗೊಳ್ಳುವಂತೆ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯಕ್ಕೆ ರಾಷ್ಟ್ರಪತಿ ಭವನ ಪತ್ರ ರವಾನಿಸಿದೆ.

ಪುನರ್ವಸತಿ ಮತ್ತು ಪುನರ್ ಸ್ಥಾಪನೆ (ಆರ್ ಆ್ಯಂಡ್ ಆರ್) ಆದೇಶಗಳಡಿ ಯೋಜನಾ ಸ್ಥಳಾಂತರಿತ ಕುಟುಂಬಗಳಿಗೆ ಉದ್ಯೋಗ ಒದಗಿಸುವ ಭರವಸೆ ನೀಡಲಾಗಿತ್ತು.

ಜೀವನೋಪಾಯದ ಏಕೈಕ ಮೂಲವಾಗಿದ್ದ ಭೂಮಿಯನ್ನು ಕೈಗಾರಿಕಾ ಅಭಿವೃದ್ಧಿಗಾಗಿ ಸರ್ಕಾರಕ್ಕೆ ನೀಡಿದ ಕುಟುಂಬಗಳು ಇಂದು ಉದ್ಯೋಗದ ಭರವಸೆಯ ಅನುಷ್ಠಾನಕ್ಕಾಗಿ ವಿವಿಧ ಸರ್ಕಾರಿ ಕಚೇರಿಗಳ ಬಾಗಿಲು ತಟ್ಟುವ ಪರಿಸ್ಥಿತಿಗೆ ತಲುಪಿವೆ.

ಎಂಎಸ್‌ಇಜೆಡ್ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇತರೆ ಸಾರ್ವಜನಿಕ ವಲಯದ ಸಂಸ್ಥೆಗಳಾದ ಎಂಆರ್‌ಪಿಎಲ್, ಐಎಸ್‌ಪಿಆರ್‌ಎಲ್ ಹಾಗೂ ಒಎಂಪಿಎಲ್ ಸಂಸ್ಥೆಗಳು ಕರ್ನಾಟಕ ಸರ್ಕಾರದ ಪುನರ್ವಸತಿ ಮತ್ತು ಪುನರ್ ಸ್ಥಾಪನೆ ಆದೇಶಗಳ ಆಶಯಕ್ಕೆ ಅನುಗುಣವಾಗಿ ಯೋಜನಾ ಸ್ಥಳಾಂತರಿತ ಕುಟುಂಬಗಳಿಗೆ ಉದ್ಯೋಗಾವಕಾಶ ಒದಗಿಸಿವೆ. ಆದರೆ ಅದೇ ಎಂಎಸ್‌ಇಜೆಡ್ ಯೋಜನೆಯಡಿ ಭೂಮಿ ಕಳೆದುಕೊಂಡು ಜಿಎಂಪಿಎಲ್ ಸಂಬಂಧಿಸಿದ ಯೋಜನಾ ಸ್ಥಳಾಂತರಿತ ಕುಟುಂಬಗಳ ಉದ್ಯೋಗದ ವಿಷಯ ಇನ್ನೂ ಇತ್ಯರ್ಥವಾಗಿಲ್ಲ. ಒಂದೇ ಯೋಜನೆಯಡಿ ಭೂಮಿ ತ್ಯಾಗ ಮಾಡಿದ



ಕುಟುಂಬಗಳ ನಡುವೆ ಸಮಾನ ಅವಕಾಶ ಮತ್ತು ಸಮಾನ ಪರಿಗಣನೆ ದೊರಕಬೇಕೆಂಬ ನಿರೀಕ್ಷೆಯನ್ನು ಕುಟುಂಬಗಳು ವ್ಯಕ್ತಪಡಿಸಿವೆ.

ಎಂಎಸ್‌ಇಜೆಡ್ ಯೋಜನೆಗಾಗಿ ಭೂಮಿ ಕಳೆದುಕೊಂಡ ಕುಟುಂಬಗಳ ಪುನರ್ವಸತಿ ಮತ್ತು ಉದ್ಯೋಗದ ವಿಷಯದಲ್ಲಿ ಎಲ್ಲ ಅರ್ಹ ಕುಟುಂಬಗಳಿಗೂ ಸಮಾನ ಅವಕಾಶ ಮತ್ತು ನ್ಯಾಯಯುತ ಪರಿಗಣನೆ ದೊರಕಬೇಕಾಗಿದೆ. ಆದರೆ ಜಿಎಂಪಿಎಲ್‌ಗೆ ಸಂಬಂಧಿಸಿದ ಕುಟುಂಬಗಳ ಬೇಡಿಕೆಗಳು ಇನ್ನೂ ಬಾಕಿ ಉಳಿದಿರುವುದು ಅಸಮಾಧಾನಕ್ಕೆ ಕಾರಣವಾಗಿದೆ ಎಂದು ಯೋಜನಾ ಸ್ಥಳಾಂತರಿತ ಕುಟುಂಬಗಳ ಪ್ರತಿನಿಧಿಗಳು ತಿಳಿಸಿದ್ದಾರೆ.

ಈ ಕುರಿತು ಜಿಲ್ಲಾಡಳಿತ, ವಿವಿಧ ಕೇಂದ್ರ ಸರ್ಕಾರಿ ಇಲಾಖೆಗಳು, ಪ್ರಧಾನಮಂತ್ರಿ ಕಚೇರಿ ಹಾಗೂ ಇತರ ಪ್ರಾಧಿಕಾರಗಳಿಗೆ ಮನವಿಗಳನ್ನು ಸಲ್ಲಿಸಲಾಗಿತ್ತು. ಅದರ ಭಾಗವಾಗಿ ರಾಷ್ಟ್ರಪತಿಗೆ ಸಲ್ಲಿಸಲಾದ ಮನವಿಯನ್ನು ರಾಷ್ಟ್ರಪತಿ ಭವನವು ಪರಿಶೀಲಿಸಿ, ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯಕ್ಕೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.

ರಾಷ್ಟ್ರಪತಿ ಭವನವು ತನ್ನ ಪತ್ರದಲ್ಲಿ, ಮನವಿಯ ಕುರಿತು ಕೈಗೊಳ್ಳುವ ಕ್ರಮವನ್ನು ಮನವಿದಾರರಿಗೆ ನೇರವಾಗಿ ತಿಳಿಸುವಂತೆ ಸೂಚಿಸಿದೆ.

ಅದೇ ರೀತಿ, ಪ್ರಧಾನಮಂತ್ರಿ ಕಚೇರಿಯೂ ಈ ವಿಷಯವನ್ನು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯಕ್ಕೆ ರವಾನಿಸಿದೆ.

ರಾಷ್ಟ್ರಪತಿ ಭವನ ಮತ್ತು ಪ್ರಧಾನಮಂತ್ರಿ ಕಚೇರಿಯಿಂದ ರವಾನಿಸಲಾದ ಮನವಿಗಳ ಕುರಿತು ಎಂಒಪಿಎನ್‌ಜಿ ಇದುವರೆಗೆ ಯಾವ ಕ್ರಮ ಕೈಗೊಂಡಿದೆ? ಈ ವಿಷಯಕ್ಕೆ ಸಂಬಂಧಿಸಿದಂತೆ ಎಂಒಪಿಎನ್‌ಜಿಗೆ ಯಾವುದೇ ವರದಿ ಅಥವಾ ಉತ್ತರ ಸಲ್ಲಿಸಲ್ಪಟ್ಟಿದೆಯೇ? ಯೋಜನಾ ಸ್ಥಳಾಂತರಿತ ಕುಟುಂಬಗಳ ಉದ್ಯೋಗ ಬೇಡಿಕೆಯನ್ನು ಇತ್ಯರ್ಥಗೊಳಿಸಲು ಸಂಬಂಧಿತ ಅಧಿಕಾರಿಗಳು ಯಾವ ಕ್ರಮಗಳನ್ನು ಕೈಗೊಳ್ಳಲಿದ್ದಾರೆ? ರಾಷ್ಟ್ರಪತಿ ಭವನದ ಸೂಚನೆಯಂತೆ ಮನವಿದಾರರಿಗೆ ಕ್ರಮದ ವಿವರಗಳನ್ನು ಯಾವಾಗ ತಿಳಿಸಲಾಗುವುದು? ಎಂದು ಯೋಜನಾ ಸ್ಥಳಾಂತರಿತ ಕುಟುಂಬಗಳು ಪ್ರಶ್ನಿಸಿವೆ.

'ಭೂಮಿ ಕೊಟ್ಟವರಿಗೆ ಉದ್ಯೋಗ ಎಲ್ಲಿದೆ?' ಎಂಬ ಪ್ರಶ್ನೆಯನ್ನು ಯೋಜನಾ ಸ್ಥಳಾಂತರಿತ ಕುಟುಂಬಗಳು ಮತ್ತೆ ಮುಂದಿಟ್ಟಿದ್ದು, ಅಭಿವೃದ್ಧಿಯ ಹೆಸರಿನಲ್ಲಿ ಭೂಮಿ ತ್ಯಾಗ ಮಾಡಿದ ಕುಟುಂಬಗಳಿಗೆ ನ್ಯಾಯ, ಪಾರದರ್ಶಕತೆ ಮತ್ತು ಸಮಾನ ಅವಕಾಶ ದೊರಕಬೇಕು ಎಂದು ಆಗ್ರಹಿಸಿವೆ.

ಯೋಜನಾ ಅಭಿವೃದ್ಧಿಗಾಗಿ ತಮ್ಮ ಜೀವನೋಪಾಯದ ಭೂಮಿಯನ್ನು ಸರ್ಕಾರಕ್ಕೆ ಒಪ್ಪಿಸಿದ ಕುಟುಂಬಗಳ ಪುನರ್ವಸತಿ ಮತ್ತು ಉದ್ಯೋಗ ಹಕ್ಕಿನ ಪ್ರಶ್ನೆಗೆ ಶೀಘ್ರ ಪರಿಹಾರ ದೊರಕಬೇಕೆಂಬುದು ಕುಟುಂಬಗಳ ಒತ್ತಾಯವಾಗಿದೆ.

'ಪತ್ರ ರವಾನೆ

ಎಂಎಸ್‌ಇಜೆಡ್‌ಗಾಗಿ ಕೃಷಿ ಭೂಮಿಯನ್ನು ಸರ್ಕಾರ ಸ್ವಾಧೀನಪಡಿಸಿಕೊಂಡಿದ್ದು, ಯೋಜನೆಗಾಗಿ ಭೂಮಿ ತ್ಯಾಗ ಮಾಡಿದ ಕುಟುಂಬಗಳಿಗೆ ಇದುವರೆಗೂ ಉದ್ಯೋಗ ಸಿಗದ ಹಿನ್ನೆಲೆಯಲ್ಲಿ ಸೂಕ್ತ ಕ್ರಮ ಕೈಗೊಳ್ಳುವಂತೆ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯಕ್ಕೆ ರಾಷ್ಟ್ರಪತಿ ಭವನ ಪತ್ರ ರವಾನಿಸಿದೆ.

ಅವಯವ ದಂಧೆ ಪ್ರಕರಣ: ಮುಖ್ಯ ಸೂತ್ರಧಾರನ ಮನೆಗೆ ಇ.ಡಿ. ದಾಳಿ

ಕಾಸರಗೋಡು: ಕೇರಳವನ್ನು ಕೇಂದ್ರೀಕರಿಸಿ ನಡೆಯುತ್ತಿರುವ ಅಕ್ರಮ ಅವಯವ ಅವ್ಯವಹಾರ ದಂಧೆಯ ಪ್ರಧಾನ ಸೂತ್ರಧಾರನಾಗಿರುವ ಕಾಸರಗೋಡು ನಿವಾಸಿ ಮುಹಮ್ಮದ್ ನಜೀಬ್ ಕಲ್ಲಟ್ರ ಎಂಬಾತನ ಕಳನಾಡು ಮನೆ ಸಹಿತ ರಾಜ್ಯದ ವಿವಿಧೆಡೆಗಳಲ್ಲಿ ಗುರುವಾರ ಇ.ಡಿ. ನೇತೃತ್ವದಲ್ಲಿ ವ್ಯಾಪಕ ದಾಳಿ ನಡೆದಿದೆ.

ಎರ್ನಾಕುಳಂ, ಕೊಲ್ಲಂ ಮೊದಲಾದ ಜಿಲ್ಲೆಗಳ ಕೆಲವು ಆಸ್ಪತ್ರೆಗಳು ಮತ್ತು ಇನ್ನಿತರ ಕೇಂದ್ರಗಳಲ್ಲಿ ಬೆಳಗ್ಗೆಯಿಂದ ಏಕಕಾಲದಲ್ಲಿ ಇ.ಡಿ. ನೇತೃತ್ವದಲ್ಲಿ ದಾಳಿ ನಡೆಸಿ ತಪಾಸಣೆ ಕೈಗೊಳ್ಳಲಾಗಿದೆ. ಇದು ಅಂತಾರಾಷ್ಟ್ರೀಯ ಅವಯವ ಸಾಗಾಟ ದಂಧೆಯಾಗಿದೆ ಎಂದು ಇ.ಡಿ. ಅಧಿಕಾರಿಗಳು ನಡೆಸಿದ ತನಿಖೆಯಲ್ಲಿ ತಿಳಿದುಬಂದಿದೆ. ಅವಯವ ದಾನಕ್ಕೆ ಮುಂದಾಗುವವರಿಗೆ 5 ಲಕ್ಷದಿಂದ 10 ಲಕ್ಷ ರೂ. ತನಕ ನೀಡಿ ಅವರಿಂದ ಅವಯವಗಳನ್ನು ಪಡೆದ ಬಳಿಕ ಅವುಗಳನ್ನು 20ರಿಂದ 50 ಲಕ್ಷ ರೂ.ವರೆಗೆ ಮಾರಾಟ ಮಾಡುವುದು ಈ ದಂಧೆಯ ಪ್ರಧಾನ ಕೃತ್ಯವಾಗಿದೆ ಎಂದು ತನಿಖೆಯಲ್ಲಿ ಸ್ಪಷ್ಟಗೊಂಡಿದೆ. ಇದಕ್ಕೆ ಸಂಬಂಧಿಸಿ ಇನ್ನಷ್ಟು ಮಾಹಿತಿಗಳ ಸಂಗ್ರಹಕ್ಕಾಗಿ ಇ.ಡಿ. ಅಧಿಕಾರಿಗಳು ದಂಧೆಯ ಪ್ರಧಾನ ಸೂತ್ರಧಾರ ಮುಹಮ್ಮದ್ ನಜೀಬ್‌ನ ಮನೆ ಮತ್ತು ಮೇಲ್ಪರಂಬದಲ್ಲಿರುವ ಆತನ ಪ್ರಧಾನ ವ್ಯವಹಾರ ಕೇಂದ್ರವಾದ ಕಂಪ್ಯೂಟರ್ ಸೆಂಟರ್‌ಗೂ ದಾಳಿ ನಡೆಸಿದ್ದಾರೆ.

ದ.ಕ. ಜಿ.ಪಂ. ಸರಕಾರಿ ಟಿಟಿಐ ಹಿರಿಯ ಪ್ರಾಥಮಿಕ ಶಾಲೆ

4 ನೂತನ ಕೊಠಡಿಗಳ ಉದ್ಘಾಟನೆ



ಮಂಗಳೂರು: ಬಲ್ಮಠದಲ್ಲಿರುವ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಸರಕಾರಿ ಟಿ.ಟಿ.ಐ. ಹಿರಿಯ ಪ್ರಾಥಮಿಕ ಶಾಲೆಯಲ್ಲಿ 55.60 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣಗೊಂಡಿರುವ 4 ನೂತನ ಶಾಲಾ ಕೊಠಡಿಗಳ ಉದ್ಘಾಟನೆ ನೆರವೇರಿತು.

ಶಾಲಾ ಕೊಠಡಿಗಳನ್ನು ಉದ್ಘಾಟಿಸಿ ಮಾತನಾಡಿದ ಶಾಸಕ ವೇದವ್ಯಾಸ ಕಾಮತ್, ಶಾಲೆಯ ಅಭಿವೃದ್ಧಿ ಸಮಿತಿ, ಹಳೆ ವಿದ್ಯಾರ್ಥಿಗಳ ಸಂಘ, ಮುಖ್ಯೋಪಾಧ್ಯಾಯರು ಮತ್ತು ಶಿಕ್ಷಕ ವೃಂದದವರ ಪ್ರಯತ್ನದ ಫಲವಾಗಿ ನಾಲ್ಕು ಕೊಠಡಿಗಳು ಲಭಿಸಿವೆ. ಮುಂದಿನ ವರ್ಷಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಳವಾಗಿ ಈ ಶಾಲೆ ಉಳಿಸುವಂತಾಗಬೇಕು. ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಳವಾದರೆ ಇನ್ನಷ್ಟು ಮೂಲ ಸೌಲಭ್ಯಗಳನ್ನು ಒದಗಿಸಲು ಪ್ರಯತ್ನಿಸುತ್ತೇನೆ ಎಂದರು.

ಸರಕಾರಿ ಶಾಲೆಗಳಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ ಜನರ ಕಷ್ಟ ಸುಖಗಳ ಬಗ್ಗೆ ಹೆಚ್ಚಿನ ಅರಿವು ಇರುತ್ತದೆ. ಶಿಕ್ಷಕರು ಚೆನ್ನಾಗಿ ಕಲಿಸುತ್ತಿದ್ದು, ಮಕ್ಕಳು ಒಳ್ಳೆಯ ರೀತಿಯಲ್ಲಿ ಕಲಿತು ಉತ್ತಮ ಪ್ರಜೆಗಳಾಗಬೇಕು ಎಂದರು.

ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಕದ್ರಿ ನವನೀತ ಶೆಟ್ಟಿ ಮಾತನಾಡಿ, ಒಂದೊಮ್ಮೆ ಮುಚ್ಚುಗಡೆಯ ಅಂಚಿನಲ್ಲಿದ್ದ ಈ ಶಾಲೆಯಲ್ಲಿ ಅಭಿವೃದ್ಧಿ ಸಮಿತಿ, ಹಳೆ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಪ್ರಯತ್ನದ ಫಲವಾಗಿ ಪ್ರಸ್ತುತ ವಿದ್ಯಾರ್ಥಿಗಳ ಸಂಖ್ಯೆ 80ಕ್ಕೇರಿದೆ. ಈಗ ಕಟ್ಟಡಗಳು ಲಭ್ಯವಾಗಿವೆ. ಮುಂದಿನ ವರ್ಷ ಮಕ್ಕಳ ಸಂಖ್ಯೆ 100ರ ಗಡಿ ದಾಟಿಸುವ ಗುರಿ ಹೊಂದಲಾಗಿದೆ ಎಂದರು.

ಮುಖ್ಯೋಪಾಧ್ಯಾಯಿನಿ ಶಶಿಕಲಾ, ಹೈಸ್ಕೂಲ್ ಮುಖ್ಯೋಪಾಧ್ಯಾಯಿನಿ ಶರ್ಮಿಳಾ ಶೆಟ್ಟಿ, ಎಸ್.ಡಿ.ಎಂ.ಸಿ. ಅಧ್ಯಕ್ಷ ಶೇಕಬ್ಬ, ಮಂಗಳೂರು ಉತ್ತರ ವಲಯ ಅಧಿಕಾರಿ ನಾಗರಾಜ್, ಸಿ.ಆರ್.ಪಿ. ಪ್ರಸಾದ್ ಕುಮಾರ್, ಪ.ಪೂ.ಕಾಲೇಜಿನ ಪ್ರಾಂಶುಪಾಲೆ ವನಿತಾ ದೇವಾಡಿಗ ಅತಿಥಿಗಳಾಗಿದ್ದರು. ವಿದ್ಯಾರ್ಥಿಗಳು, ಶಿಕ್ಷಕ ವೃಂದದವರು, ಪೋಷಕರು ಭಾಗವಹಿಸಿದ್ದರು.

ಇದೇ ಸಂದರ್ಭದಲ್ಲಿ ಶಾಲಾ ಹಳೆ ವಿದ್ಯಾರ್ಥಿ ಸಂಘದ ವತಿಯಿಂದ ಸಮವಸ್ತ್ರ, ಕಲಿಕೋಪಕರಣಗಳ ವಿತರಣೆ ಮಾಡಲಾಯಿತು.

ರಾಘವೇಶ್ವರ ಭಾರತೀ ಶ್ರೀಗಳಿಂದ 'ಅನ್ನಬ್ರಹ್ಮ ಚಾತುರ್ಮಾಸ್ಯ'ದ ಆಮಂತ್ರಣ ಲೋಕಾರ್ಪಣೆ

ಗೋಕರ್ಣ: ಅನ್ನವನ್ನು ದೇವರೆಂದು ಪರಿಭಾವಿಸುವ ಪರಂಪರೆ ಸನಾತನ ಭಾರತದ್ದು. ಆಹಾರ ಇಹದಲ್ಲಿ ಮನುಷ್ಯನ ಸರ್ವಾಂಗೀಣ ಸಮೃದ್ಧಿಗೆ ಕಾರಣಮಾತ್ರವಲ್ಲದೇ, ಪರದಲ್ಲಿ ಉತ್ತಮ ಗತಿ ಪ್ರಾಪ್ತಿಗೂ ಕಾರಣ ಎಂದು ಶ್ರೀ ರಾಮಚಂದ್ರಾಪುರ ಮಠದ ಜಗದ್ಗುರು ಶಂಕರಾಚಾರ್ಯ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳು ಹೇಳಿದರು.

ಅವರು ಇಲ್ಲಿನ ಅಶೋಕೆಯ ಮೂಲ ಮಠದಲ್ಲಿ 'ಅನ್ನಬ್ರಹ್ಮ ಚಾತುರ್ಮಾಸ್ಯ'ದ ಆಹ್ವಾನ ಪತ್ರಿಕೆ ಲೋಕಾರ್ಪಣೆಗೊಳಿಸಿ ಮಾತನಾಡಿದರು.

ಅನ್ನವನ್ನು ವ್ಯರ್ಥ ಮಾಡಬಾರದು. ಇಂದು ಶ್ರೀಮಂತಿಕೆ ಹೆಚ್ಚಾದಷ್ಟು ಅನ್ನವನ್ನು ವ್ಯರ್ಥ ಮಾಡುವ ದುರಾಚಾರ ಹೆಚ್ಚಾಗುತ್ತಿದೆ. ಇವೆಲ್ಲವುಗಳ ಹಿನ್ನೆಲೆಯಲ್ಲಿ ಆಹಾರದ ಕುರಿತಾದ ಜನಜಾಗೃತಿ ಮೂಡಿಸುವ ಕಾರ್ಯ ಇಲ್ಲಿ ನಡೆಯಲಿದೆ ಎಂದರು.

ಪ್ರಾಣಿ ಪಕ್ಷಿಗಳು ಹೆಚ್ಚಿನ ಸಮಯವನ್ನು ಆಹಾರ ಹೊಡುಕಿಕೊಂಡೇ ಜೀವನ ನಡೆಸುವುದನ್ನು ನೋಡುತ್ತೇವೆ. ಆದರೆ, ಅವು ಸರಿಯಾದ ಆಹಾರವನ್ನು ಮಾತ್ರ ಸ್ವೀಕರಿಸುವುದನ್ನು ಕಾಣುತ್ತೇವೆ. ಆದರೆ, ಮನುಷ್ಯ ಹಾಗಲ್ಲ. ಯೋಗ್ಯವಲ್ಲದ ಆಹಾರವನ್ನು ಹೇಗೆ ಹೇಗೋ ಸ್ವೀಕರಿಸುತ್ತಿರುವ ಪ್ರವೃತ್ತಿಯನ್ನು ನೋಡುತ್ತಿದ್ದೇವೆ. ಆಹಾರ ಜೀವನದ ಬಹುಮುಖ್ಯ ಅಂಗವಾಗಿದ್ದು, ಇಂದು ಆಹಾರದ ಹಿನ್ನೆಲೆ ಆಹಾರದ ತಯಾರಿ, ಸೇವನೆಗೆ ಸಮರ್ಪಕ ಪ್ರಾಮುಖ್ಯತೆ ನೀಡದೇ ಇರುವುದು ವಿಷಾದಕರ ಎಂದರು.



ಈ ವೇಳೆ ಶ್ರೀಮಠದ ಪ್ರಶಾಸನಾಧಿಕಾರಿ ಸಂತೋಷ್ ಹೆಗಡೆ, ವಿತ್ತಾಧ್ಯಕ್ಷ ಗಣೇಶ್ ಜೆ.ಎಲ್, ಹವ್ಯಕ ಮಹಾಮಂಡಲದ ಅಧ್ಯಕ್ಷ ಹರಿಪ್ರಸಾದ್ ಪೆರಿಯಾಪು, ಡಿ.ಡಿ ಶರ್ಮಾ, ಪ್ರದೀಪ್ ನಾಯಕ್, ಮಹೇಶ್ ಶೆಟ್ಟಿ, ಆರ್.ಎಸ್ ಹೆಗಡೆ ಹರಗಿ, ಮಂಜುನಾಥ ಸುವರ್ಣಗದ್ದೆ, ಪ್ರವೀಣ್ ಭೀಮನಕೋಣೆ, ಚಾತುರ್ಮಾಸ್ಯದ ಪ್ರಧಾನ ಸಂಯೋಜಕ ಚಂದನ್ ಶಾಸ್ತ್ರೀ ಸೇರಿದಂತೆ ಚಾತುರ್ಮಾಸ್ಯದ ಸಂಯೋಜಕರು ಹಾಗೂ ಎಲ್ಲಾ ಭಾಗಗಳ ಪ್ರಮುಖರು ಉಪಸ್ಥಿತರಿದ್ದರು.

ಅನ್ನಬ್ರಹ್ಮ ಚಾತುರ್ಮಾಸ್ಯ ವಿಶೇಷ

ಗೋಕರ್ಣದ ಅಶೋಕೆಯ ಪರಿಸರದಲ್ಲಿ ಈ ವರ್ಷದ ಚಾತುರ್ಮಾಸ್ಯ ನಡೆಯುತ್ತಿದ್ದು, ಜು.29ರಿಂದ ಸೆ.26ರ ವರೆಗೆ ಆಹಾರದ ಕುರಿತಾದ ಜಾಗೃತಿಯ 'ಅನ್ನಬ್ರಹ್ಮ ಚಾತುರ್ಮಾಸ್ಯ' ನಡೆಯಲಿದೆ. ಭೋಜನವೆಂಬ ತಪಸ್ಸು, ಆಹಾರ ಯಾವಾಗ ಸ್ವೀಕರಿಸಿದರೆ ಹಿತ, ಜಲಪಾನದ ನಿಯಮಗಳು, ಆಹಾರದ ಉದ್ದೇಶ, ಉಪವಾಸ, ಭೋಜನದ ಬಳಿಕ ಪಾಲಿಸಬೇಕಾದ ನಿಯಮಗಳು, ಭೋಜನ ಪಾತ್ರೆಗಳು ಸೇರಿದಂತೆ ಅನೇಕ ವಿಶಿಷ್ಟ ಪ್ರವಚನ ಮಾಲಿಕೆಗಳನ್ನು ಶ್ರೀಗಳು ಅನುಗ್ರಹಿಸಲಿದ್ದಾರೆ.

ಮಂಗಳೂರಿನ ಬಿಜೈ ನ್ಯೂರೋಡ್, ಬಟ್ಟಗುಡ್ಡೆ, ಕದ್ರಿ, ಚಿಲಿಂಬಿ ಸಹಿತ ಕೆಲವು ಕಡೆ ಕುಡಿಯಲು ಯೋಗ್ಯವಲ್ಲದ ನೀರು ಸರಬರಾಜು

ಪಾಲಿಕೆ ಬೇಜವಾಬ್ದಾರಿಗೆ ಶಾಸಕ ಕಾಮತ್ ತೀವ್ರ ಆಕ್ರೋಶ

ಮಂಗಳೂರು: ನಗರದ ಬಿಜೈ ನ್ಯೂರೋಡ್, ಬಟ್ಟಗುಡ್ಡೆ, ಕದ್ರಿ, ಚಿಲಿಂಬಿ ಸೇರಿದಂತೆ ಕೆಲವು ಭಾಗಗಳಲ್ಲಿ ಕುಡಿಯಲು ಯೋಗ್ಯವಲ್ಲದ ನೀರು ಸರಬರಾಜು ಆಗಿರುವುದರಿಂದ ಹಲವು ಸಾರ್ವಜನಿಕರ ಆರೋಗ್ಯದಲ್ಲಿ ಸಮಸ್ಯೆ ಕಂಡು



ಬಂದಿದ್ದು, ಶಾಸಕ ವೇದವ್ಯಾಸ ಕಾಮತ್ ಅವರು ರಾಜ್ಯ ಕಾಂಗ್ರೆಸ್ ನೇತೃತ್ವದ ಪಾಲಿಕೆಯ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಪ್ರದೇಶಗಳ ಬಹುತೇಕ ಮನೆ ಹಾಗೂ ಅಪಾರ್ಟ್‌ಮೆಂಟ್‌ಗಳಿಗೆ, ನೀಲಿ ಬಣ್ಣದಿಂದ ಕೂಡಿದ ವಾಸನೆ ಮಿಶ್ರಿತ ನೀರು ಸರಬರಾಜಾಗಿದೆ ಎಂದು ಸ್ಥಳೀಯ ನಿವಾಸಿಗಳು ದೂರಿದ್ದಾರೆ. ಈ ನೀರನ್ನು ಸೇವಿಸಿದ ಸ್ಥಳೀಯರಿಗೆ ವಾಂತಿ, ಜ್ವರ, ಭೇದಿ, ಸಹಿಸಲು ಆಗದ ಸುಸ್ತು ಸೇರಿದಂತೆ ಆರೋಗ್ಯದಲ್ಲಿ ತೀವ್ರ ಸಮಸ್ಯೆಯಾಗಿದೆ. ಪಂಪ್‌ವೆಲ್ ಬಯೋಟೆಕ್ ಲ್ಯಾಬೋರೇಟರಿ ಹಾಗೂ ಬಿಜೈ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಾಡಿದ ಪರೀಕ್ಷೆಯ ನಂತರ ಈ ನೀರು ಕುಡಿಯಲು ಯೋಗ್ಯ ಅಲ್ಲವೇ ಅಲ್ಲ ಎಂಬ ವರದಿ ಬಂದಿರುವುದು ಮತ್ತಷ್ಟು ಜನರ ಆತಂಕಕ್ಕೆ ಕಾರಣವಾಗಿದೆ. ಅಲ್ಲದೇ ಯಾವುದೇ ಕಾರಣಕ್ಕೂ ಮಾಧ್ಯಮಗಳಿಗೆ ಈ ಬಗ್ಗೆ ಮಾಹಿತಿ ಸಿಗದಂತೆ ಅಧಿಕಾರಿಗಳು ಪ್ರಯತ್ನಿಸಿದ್ದು ಯಾಕೆ ಎಂದು ಶಾಸಕರು ಕಳವಳ ವ್ಯಕ್ತಪಡಿಸಿದ್ದಾರೆ.

ರಾಜ್ಯದ ಆರೋಗ್ಯ ಸಚಿವರು ನಮ್ಮದೇ ಜಿಲ್ಲೆಯವರಾಗಿದ್ದರೂ ಕೂಡಾ ನಮ್ಮ ಜನರಿಗೆ ಆರೋಗ್ಯದ ಬಗ್ಗೆ ಗ್ಯಾರಂಟಿ ಒದಗಿಸಲು ಸಾಧ್ಯವಾಗಿಲ್ಲದಿರುವುದು ದುರಂತ. ಸದ್ಯ ಪಾಲಿಕೆಯಲ್ಲಿ ಯಾವುದೇ ಜನಪ್ರತಿನಿಧಿಗಳು ಇಲ್ಲದೇ ಆಡಳಿತಾಧಿಕಾರಿ ಮೂಲಕ ರಾಜ್ಯ ಕಾಂಗ್ರೆಸ್ ಸರ್ಕಾರವೇ ಆಡಳಿತ ನಡೆಸುತ್ತಿದೆ. ಹಾಗಿರುವಾಗ ಜನರ ಸಮಸ್ಯೆ ಕೇಳುವವರೇ ಇಲ್ಲವಾಗಿದೆ. ಸರ್ಕಾರದ, ಪಾಲಿಕೆಯ ಬೇಜವಾಬ್ದಾರಿಗೆ ಜನರು ತೊಂದರೆ ಅನುಭವಿಸುವುದನ್ನು ಯಾವುದೇ ಕಾರಣಕ್ಕೂ ಒಪ್ಪಲು ಸಾಧ್ಯವಿಲ್ಲ. ಕೂಡಲೇ ಇದರ ಹಿಂದಿನ ಕಾರಣ ಪತ್ತೆ ಹಚ್ಚಿ ಸೂಕ್ತ ಕ್ರಮ ಕೈಗೊಳ್ಳಬೇಕು. ಜನರು ಈಗಾಗಲೇ ತಮ್ಮ ಮನೆಯ, ಅಪಾರ್ಟ್‌ಮೆಂಟ್‌ಗಳ ನೀರಿನ ಟ್ಯಾಂಕ್‌ನ ಕಲುಷಿತ ನೀರನ್ನು ಚೆಲ್ಲಿದ್ದು, ಕೂಡಲೇ ಅವರಿಗೆ ಶುದ್ಧ ನೀರು ಪೂರೈಕೆಗೆ ಕ್ರಮ ಕೈಗೊಳ್ಳಬೇಕು ಎಂದು ಇದೇ ವೇಳೆ ಶಾಸಕರು ಆಗ್ರಹಿಸಿದ್ದಾರೆ.

ಸ್ಥಳೀಯರಿಗೆ ಆರೋಗ್ಯ ಸಮಸ್ಯೆ

ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ.31 ಬಿಜೈನ ಬಿಜೈ, ಬಟ್ಟಗುಡ್ಡೆ, ಬಿಜೈ ನ್ಯೂರೋಡ್ ಕದ್ರಿ ಪ್ರದೇಶಗಳಲ್ಲಿ ಕಳೆದ ಕೆಲ ಸಮಯದಿಂದ ಕಲುಷಿತ ನೀರು ಪೂರೈಕೆಯಾಗಿ ಸ್ಥಳೀಯರಿಗೆ ಆರೋಗ್ಯ ಸಮಸ್ಯೆ ಉಂಟಾಗಿದೆ.

ಕುಡಿಯುವ ನೀರಿನ ಪೈಪ್‌ಲೈನ್ ಜತೆಯಲ್ಲೇ ಒಳಚರಂಡಿ ಪೈಪ್‌ಲೈನ್ ಹಾದು ಹೋಗುತ್ತಿರುವ ಕಾರಣ ಪಾಲಿಕೆ ಅಧಿಕಾರಿಗಳ ನಿರ್ಲಕ್ಷ್ಯದಿಂದ ಕುಡಿಯುವ ನೀರು ಕಲುಷಿತಗೊಂಡು ಜನಸಾಮಾನ್ಯರ ಆರೋಗ್ಯದಲ್ಲಿ ಏರುಪೇರು ಉಂಟಾಗಿದೆ ಎಂಬ ಆರೋಪ ಸ್ಥಳೀಯರಿಂದ ವ್ಯಕ್ತವಾಗಿದೆ.

ಕಳೆದ ಹಲವು ಸಮಯದಿಂದ ಕಲುಷಿತ ನೀರು ಸೇವನೆಯಿಂದಾಗಿ ಬಿಜೈ ಪ್ರದೇಶದ ಹಲವರಿಗೆ ವಾಂತಿ ಬೇಧಿ ಸೇರಿದಂತೆ ಆರೋಗ್ಯ ಸಮಸ್ಯೆ ಕಾಣಿಸಿಕೊಂಡಿದೆ. ಪ್ರಯೋಗಾಲಯದ ವರದಿಯಂತೆ ನೀರು ಕುಡಿಯಲು ಯೋಗ್ಯವಾಗಿಲ್ಲ ಎಂಬ ವರದಿ ಬಂದಿರುವ ಹಿನ್ನೆಲೆಯಲ್ಲಿ ಈ ಪ್ರದೇಶದ ಜನರು ಕುಡಿಯುವ ನೀರನ್ನು ಖರೀದಿಸಿ ಬಳಸುವಂತಾಗಿದೆ. ಕಾಮಗಾರಿಯ ಸಂದರ್ಭ ನೀರಿನ ಪೈಪ್‌ಲೈನ್ ಒಡೆದು ಅದರಲ್ಲಿ ಮಳೆಯ ಮಣ್ಣು ಮಿಶ್ರಿತ ನೀರು ಸೇರಿರುವ ಅಥವಾ ಒಳಚರಂಡಿ ನೀರು ಸೇರ್ಪಡೆಯಾಗಿರುವ ಬಗ್ಗೆ ಸ್ಥಳೀಯರು ಅನುಮಾನ ವ್ಯಕ್ತಪಡಿಸಿದ್ದಾರೆ.

ಪಾಲಿಕೆ ಅಧಿಕಾರಿಗಳು ನೀರಿನ ಮಾದರಿಯನ್ನು ಪ್ರಯೋಗಾಲಯಕ್ಕೆ ಕಳುಹಿಸಿದ್ದು ನೀರು ಕುಡಿಯಲು ಯೋಗ್ಯವಾಗಿಲ್ಲ ಎಂಬ ವರದಿಯ ಹಿನ್ನೆಲೆಯಲ್ಲಿ, ನೀರು ಪೂರೈಕೆಯ ಟ್ಯಾಂಕ್ ಸ್ವಚ್ಛಗೊಳಿಸಿ ಸರಿಪಡಿಸಲಾಗಿದೆ ಎಂದು ಪಾಲಿಕೆ ಅಧಿಕಾರಿಗಳು ತಿಳಿಸಿದ್ದಾರೆ.

ಮಳೆಗಾಲದ ಆರಂಭ ಹಾಗೂ ನಗರದ ವಿವಿಧೆಡೆ ರಸ್ತೆ ಕಾಮಗಾರಿಗಳು ನಡೆಯುತ್ತಿರುವ ಹಿನ್ನೆಲೆಯಲ್ಲಿ ಪೈಪ್‌ಲೈನ್‌ಗಳಿಗೆ ತೊಂದರೆ ಉಂಟಾಗಿ ಕಲುಷಿತ ನೀರು ಪೂರೈಕೆಯಾಗಿರುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ಅಭಿಪ್ರಾಯ ಪಟ್ಟಿದ್ದಾರೆ.

ಸದ್ಯ ಈ ಪ್ರದೇಶದ ಟ್ಯಾಂಕ್ ಸ್ವಚ್ಛಗೊಳಿಸಿ ಕುಡಿಯುವ ನೀರಿನ ಪೂರೈಕೆಯಲ್ಲಾಗಿದ್ದ ವ್ಯತ್ಯಯವನ್ನು ಸರಿಪಡಿಸಲಾಗಿದೆ ಎಂದು ಪಾಲಿಕೆಯ ಕುಡಿಯುವ ನೀರು ಸರಬರಾಜು ವಿಭಾಗದ ಅಧಿಕಾರಿಗಳು ತಿಳಿಸಿದ್ದಾರೆ.

ಶುಕ್ರವಾರದ ಪಂದ್ಯಗಳು
- ಮೆಕ್ಸಿಕೋ-ದ. ಕೊರಿಯಾ (ಬೆಳಗ್ಗೆ 6:30)
- ಆಸ್ಟ್ರೇಲಿಯಾ-ಅಮೆರಿಕ.(ಮಧ್ಯರಾತ್ರಿ 12:30)
- ಸ್ಕಾಟ್ಲೆಂಡ್-ಮೊರೊಕ್ಕೊ (ಮಧ್ಯರಾತ್ರಿ 3:30)

ಕಿರುಸುದ್ದಿ

ಹಾಕಿ: ಜರ್ಮನ್ನರ ಮಣಿಸಿದ ಭಾರತ

ರೋತೆರ್‌ಡ್ಯಾಮ್(ನೆದರ್ಲೆಂಡ್ಸ್): ಮಿಡಲ್ ಫೀಲ್ಡರ್ ಮನ್‌ಪ್ರೀತ್ ಸಿಂಗ್ ಅವರ ಕರಾರುವಾಕ್ ಪ್ರದರ್ಶನದ ನೆರವಿನಿಂದಾಗಿ ವಿಶ್ವ ಚಾಂಪಿಯನ್ ಜರ್ಮನಿ ತಂಡವನ್ನು ಮಣಿಸಿರುವ ಭಾರತ ಪುರುಷರ ಹಾಕಿ ತಂಡವು ಪ್ರೋ ಲೀಗ್ ಪಂದ್ಯಾವಳಿಯನ್ನು ಬಲವಾಗಿ ಶುರು ಮಾಡಿದೆ. ಕಳೆದ ಕೂಟದಲ್ಲಿ ಭಾರೀ ಹಿನ್ನಡೆ ಅನುಭವಿಸಿರುವ ಭಾರತ ಈ ಬಾರಿ ಮೊದಲ ಪಂದ್ಯದಲ್ಲೇ ಜರ್ಮನಿ ತಂಡವನ್ನು ಎದುರಿಸಿತ್ತು. ಮನ್‌ಪ್ರೀತ್ ಅವರ ದ್ವಿಗೋಲು ಪ್ರದರ್ಶನದ ಬಲದೊಂದಿಗೆ 3-1ರಿಂದ ಸೋಲಿಸಿ ಗಮನ ಸೆಳೆದಿದೆ. ಮೈದಾನಕ್ಕಿಳಿದ ತಕ್ಷಣವೇ ಭಾರತ ಪರ ಅತಿ ಹೆಚ್ಚು ಪಂದ್ಯವಾಡಿದ ದಾಖಲೆಯನ್ನು ಮಾಡಿದ ಮನ್‌ಪ್ರೀತ್ ಸಿಂಗ್, ಮೊದಲನೇ ಗೋಲು ಗಳಿಸಿ ಮುನ್ನಡೆ ತಂದರು. 412 ಪಂದ್ಯಗಳ ದಿಲೀಪ್ ಟಿರ್ಕಿ ಅವರ ದಾಖಲೆ ಅಳಿಸಿದ ಅವರು, ಏಳನೇ ನಿಮಿಷಲ್ಲೇ ಗೋಲು ಗಳಿಸಿದರು. ಭಾರತದ ಮುನ್ನಡೆಯನ್ನು ಶಿಲಾನಂದ ಅವರು 13ನೇ ನಿಮಿಷದ ವೇಳೆ 2ಕ್ಕೆ ವಿಸ್ತರಿಸಿದರು. ಇಷ್ಟಕ್ಕೆ ಭಾರತದ ಪ್ರಾಬಲ್ಯ ನಿಲ್ಲಲಿಲ್ಲ. 35ನೇ ನಿಮಿಷದಲ್ಲಿ ನೀಲಕಂಠ ಶರ್ಮ ಮತ್ತೊಂದು ಗೋಲು ಗಳಿಸಿದರು. ಜರ್ಮನ್ ಪರ ರಾಫೆಲ್ 45ನೇ ನಿಮಷಕ್ಕೆ ಗೋಲು ಗಳಿಸಿ ಅಂತರ ಕುಗ್ಗಿಸಿದರು.

ಏಷ್ಯನ್ ಗೇಮ್ಸ್‌ಗಿಲ್ಲ ಮನಿಕಾ ಬಾತ್ರಾ!

ಹೊಸದಿಲ್ಲಿ: ಜಪಾನ್‌ನ ಐಚಿ ಮತ್ತು ನಗೋಯಾದಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್‌ಗೆ ಭಾರತದ ಅನುಭವಿ ಟೇಬಲ್ ಟೆನಿಸ್ ಆಟಗಾರ್ತಿ ಮನಿಕಾ ಬಾತ್ರಾ ಅವರನ್ನು ಕೈಬಿಡಲಾಗಿದೆ. ಸೆಪ್ಟೆಂಬರ್‌ನಲ್ಲಿ ಶುರುವಾಗಲಿರುವ ಮಹಾಕೂಟಕ್ಕೆ ಟೇಬಲ್ ಟೆನಿಸ್ ತಂಡವನ್ನು ಪ್ರಕಟಿಸಲಾಯಿತು. ತಮ್ಮ ಅನುಭವದ ಮೂಲಕವೇ ಖ್ಯಾತಿ ಪಡೆದಿದ್ದ ಮನಿಕಾ ಬಾತ್ರಾ ಮಾನದಂಡ ಕ್ರಮಗಳಗ ಕಾರಣದಿಂದಾಗಿ ತಂಡದಲ್ಲಿ ಸೇರಿಸಲಾಗಿಲ್ಲ ಎಂಬ ಮಾಹಿತಿ ಹೊರಬಂದಿದೆ. ವಿಶ್ವ ಮತ್ತು ರಾಷ್ಟ್ರೀಯ ಶ್ರೇಯಾಂಕಗಳ ಆಧಾರದ ಮೇಲೆ ವಸ್ತುನಿಷ್ಠ ಮಾನದಂಡಗಳನ್ನು ಅನುಸರಿಸುವ ಮೂಲಕ, ಫೆಡರೇಶನ್ ವಿಸ್ತೃತ ಅವಧಿಯಲ್ಲಿ ಸ್ಥಿರತೆ ಮತ್ತು ಕಾರ್ಯಕ್ಷಮತೆಗೆ ಪ್ರತಿಫಲ ನೀಡಿದೆ. ಪುರುಷರು ಮತ್ತು ಮಹಿಳೆಯರಿಬ್ಬರಿಗೂ ಮೀಸಲು ಆಟಗಾರರನ್ನು ಸೇರಿಸುವುದರಿಂದ ಕ್ರೀಡಾಕೂಟದ ಮೊದಲು ಯಾವುದೇ ಅನಿರೀಕ್ಷಿತ ಸಂದರ್ಭಗಳಿಗೆ ತಂಡವು ಸಿದ್ಧವಾಗಿದೆ ಎಂದು ಖಚಿತಪಡಿಸುತ್ತದೆ ಎಂದು ಟಿಟಿ ಸಂಸ್ಥೆ ಹೇಳಿಕೆ ತಿಳಿಸಿದೆ. ಫೆಡರೇಶನ್‌ನ ಆಯ್ಕೆ ನೀತಿಯಡಿಯಲ್ಲಿ, ಏಳು ಪ್ರಮುಖ ದೇಶೀಯ ಕಾರ್ಯಕ್ರಮಗಳಲ್ಲಿನ ಪ್ರದರ್ಶನಗಳಿಂದ ಸಂಗ್ರಹಿಸಲಾದ ರಾಷ್ಟ್ರೀಯ ಶ್ರೇಯಾಂಕಗಳು ಮಾರ್ಕ್ಯೂ ಅಂತಾರಾಷ್ಟ್ರೀಯ ಸ್ಪರ್ಧೆಗಳಿಗೆ ಆಯ್ಕೆಯ ಕಡ್ಡಾಯ ಅಂಶವಾಗಿದೆ. ಪ್ರಸ್ತುತ ವಿಶ್ವದಲ್ಲಿ 51 ನೇ ಸ್ಥಾನದಲ್ಲಿರುವ ಮಣಿಕಾ, ಹಿಂದಿನ ಋತುವಿನಲ್ಲಿ ಯಾವುದೇ ದೇಶೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸದ ಕಾರಣ, ಭಾರತದ ಎರಡನೇ ಅತ್ಯುನ್ನತ ಶ್ರೇಯಾಂಕಿತ ಮಹಿಳೆಯಾಗಿದ್ದರೂ ಅವರು ಮಾನದಂಡಗಳ ಅಡಿಯಲ್ಲಿ ಅನರ್ಹರಾದರು.

ಬಾಕ್ಸಿಂಗ್: ಮೀನಾಕ್ಷಿ ಕ್ವಾರ್ಟರ್‌ಗೆ

ಹೊಸದಿಲ್ಲಿ: ಚೀನಾದಲ್ಲಿ ನಡೆಯುತ್ತಿರುವ ಬಾಕ್ಸಿಂಗ್ ವಿಶ್ವಕಪ್ ಹಂತ 2ರಲ್ಲಿ ಭಾರತದ ಬಾಕ್ಸರ್ ಮೀನಾಕ್ಷಿ ವಿಜಯಶಾಲಿಯಾಗಿ ಹೊರಹೊಮ್ಮಿದರು, ತಮ್ಮ ತೂಕ ವಿಭಾಗದಲ್ಲಿ ಕ್ವಾರ್ಟರ್ ಫೈನಲ್‌ಗೆ ಮುನ್ನಡೆದರು. ಮಹಿಳಾ 51 ಕೆಜಿ ವಿಭಾಗದಲ್ಲಿ ಸ್ಪರ್ಧಿಸುತ್ತಿರುವ 48 ಕೆಜಿ ವಿಶ್ವ ಚಾಂಪಿಯನ್ ಮತ್ತು ಆ ವಿಭಾಗದಲ್ಲಿ ಪ್ರಸ್ತುತ ವಿಶ್ವದ ನಂ. 1 ಆಗಿರುವ ಮೀನಾಕ್ಷಿ, ಈಗ ಒಲಿಂಪಿಕ್ 51 ಕೆಜಿ ತೂಕ ವರ್ಗಕ್ಕೆ ಪರಿವರ್ತನೆಗೊಂಡಿದ್ದು, ಪೋಲೆಂಡ್‌ನ ನಟಾಲಿಯಾ ಕುಕ್ಜೆವ್‌ಸ್ಕಾ ವಿರುದ್ಧ 5-0 ಸರ್ವಾನುಮತದ ನಿರ್ಣಯದ ಗೆಲುವು ಸಾಧಿಸಿ ಸ್ಪರ್ಧೆಯಲ್ಲಿ ಮುನ್ನಡೆದರು. ನಾಲ್ಕನೇ ದಿನದಂದು ನಡೆದ ಇನ್ನೊಂದು ಸ್ಪರ್ಧೆಯಲ್ಲಿ, ಅಭಿನಾಶ್ ಜಮ್ವಾಲ್ (65 ಕೆಜಿ) ಕಿರ್ಗಿಸ್ತಾನ್‌ನ ಮಿರ್ಜೋಖಿದ್ ಇಮಾಮ್ನಜರೋವ್ ವಿರುದ್ಧ 0-5 ಅಂತರದಿಂದ ಸೋತ ನಂತರ ಹೊರನಡೆದರು. ಪಂದ್ಯಾವಳಿಯಲ್ಲಿ ಇಲ್ಲಿಯವರೆಗೆ, ಐದು ಭಾರತೀಯ ಬಾಕ್ಸರ್‌ಗಳು ಕ್ವಾರ್ಟರ್ ಫೈನಲ್‌ಗೆ ಮುನ್ನಡೆದಿದ್ದಾರೆ. ನಿಖಿಲ್ (55 ಕೆಜಿ), ದೀಪಕ್ (70 ಕೆಜಿ), ಮೀನಾಕ್ಷಿ (51 ಕೆಜಿ), ಪ್ರಾಚಿ (57 ಕೆಜಿ), ಮತ್ತು ಸನೆಹ್ (65 ಕೆಜಿ). ಜ್ಯೋತಿ (48 ಕೆಜಿ) ಮತ್ತು ಜುಗ್ನೂ (85 ಕೆಜಿ) ಈಗಾಗಲೇ ಸೆಮಿಫೈನಲ್‌ಗೆ ಮುನ್ನಡೆಯುವ ಮೂಲಕ ದೇಶಕ್ಕೆ ಪದಕ ಖಚಿತಪಡಿಸಿದ್ದಾರೆ.



ಪೋರ್ಚುಗಲ್‌ಗೆ ಕಾಂಗೋ ಟಕ್ಕರ್!

ಪಂದ್ಯದ ಮುಖ್ಯಾಂಶಗಳು
- ಪೋರ್ಚುಗಲ್ 1-1 ಡಿಆರ್ ಕಾಂಗೋ
- ವಿಶ್ವಕಪ್‌ನಲ್ಲಿ ಅಚ್ಚರಿಯ ಫಲಿತಾಂಶ

ಈಸ್ಟ್ ರದರ್‌ಫೋರ್ಡ್ (ಅಮೆರಿಕ): ಫಿಫಾ ವಿಶ್ವಕಪ್ 2026ರ ಗುಂಪು ಕೆ ಪಂದ್ಯದಲ್ಲಿ ಬಲಿಷ್ಠ ಪೋರ್ಚುಗಲ್ ತಂಡವನ್ನು ಡಿಆರ್ ಕಾಂಗೋ ಫುಟ್ಬಾಲ್ ಜಗತ್ತೆ ನಿಬ್ಬೆರಗಾಗುವಂತೆ ಮಾಡಿತು. ವಿಶ್ವಕಪ್‌ನ ಲೀಗ್ ಪಂದ್ಯದಲ್ಲಿ ರೋನಾಲ್ಡೋ ಇರುವ ಪೋರ್ಚುಗಲ್ ತಂಡದ ವಿರುದ್ಧ ಅಚ್ಚರಿಯ ಡ್ರಾ ಸಾಧಿಸಿದೆ. ಪಂದ್ಯದ ಆರಂಭದಿಂದಲೇ ಪೋರ್ಚುಗಲ್ ಬಾಲ್ ಮೇಲೆ ಹೆಚ್ಚಿನ ನಿಯಂತ್ರಣ ಸಾಧಿಸಿದರೂ, ಕಾಂಗೋ ಸಂಘಟಿತ ರಕ್ಷಣೆಯ ಮೂಲಕ ಎದುರಾಳಿಗಳ ದಾಳಿಯನ್ನು ನಿಯಂತ್ರಿಸಿತು. ಪೋರ್ಚುಗಲ್ ಹಲವು ಬಾರಿ ಗೋಲು ಗಳಿಸುವ ಅವಕಾಶಗಳನ್ನು ಸೃಷ್ಟಿಸಿದರೂ, ಕಾಂಗೋ ಗೋಲ್‌ಕೀಪರ್ ಮತ್ತು ರಕ್ಷಣಾ ವಿಭಾಗದ ದಿಟ್ಟ ಪ್ರದರ್ಶನದಿಂದ ಮುನ್ನಡೆ ಸಾಧಿಸಲು ವಿಫಲವಾಯಿತು. ಮತ್ತೊಂದೆಡೆ, ಕಾಂಗೋ ಕೂಡ ಪ್ರತಿದಾಳಿಗಳ ಮೂಲಕ ಪೋರ್ಚುಗಲ್‌ಗೆ ಸವಾಲು ಒಡ್ಡಿತು. ದ್ವಿತೀಯಾರ್ಧದಲ್ಲಿ ಪಂದ್ಯದ ವೇಗ ಮತ್ತಷ್ಟು ಹೆಚ್ಚಾಯಿತು. ಎರಡೂ ತಂಡಗಳು ತಲಾ ಒಂದು ಗೋಲು ದಾಖಲಿಸಿ ಅಂಕ ಹಂಚಿಕೊಂಡವು. ಪೋರ್ಚುಗಲ್ ಗೆಲುವಿಗಾಗಿ ಕೊನೆಯ ಕ್ಷಣಗಳವರೆಗೂ ಒತ್ತಡ ಹೇರಿದರೂ, ಕಾಂಗೋ ರಕ್ಷಣಾ ವಿಭಾಗ ದಿಟ್ಟವಾಗಿ ನಿಂತಿತು. ಈ ಡ್ರಾದೊಂದಿಗೆ ಎರಡೂ ತಂಡಗಳು ತಲಾ ಒಂದು ಅಂಕ ಗಳಿಸಿದ್ದು, ಗುಂಪು ಕೆಯಲ್ಲಿ ಮುಂದಿನ ಪಂದ್ಯಗಳ ಮಹತ್ವ ಹೆಚ್ಚಾಗಿದೆ. ಇದೇ ಗುಂಪಿನ ಇನ್ನೊಂದು ಪಂದ್ಯದಲ್ಲಿ ಕೊಲಂಬಿಯಾ ಉಜ್ಬೇಕಿಸ್ತಾನ ವಿರುದ್ಧ ಜಯ ಸಾಧಿಸಿದ್ದರಿಂದ, ಅಂಕಪಟ್ಟಿಯಲ್ಲಿ ಮುನ್ನಡೆ ಪಡೆದಿದೆ.

ಘಾನಾಗೆ ಜಯ



ಟೊರೊಂಟೊ: ಘಾನಾ ತಂಡವು ಕೊನೆಯ ಕ್ಷಣದ ಗೋಲಿನ ನೆರವಿನಿಂದ ಪನಾಮಾವನ್ನು 1-0 ಅಂತರದಿಂದ ಮಣಿಸಿ ಅಮೂಲ್ಯ ಮೂರು ಅಂಕಗಳನ್ನು ತನ್ನದಾಗಿಸಿಕೊಂಡಿತು. ಟೊರೊಂಟೊ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಎರಡೂ ತಂಡಗಳು ಆರಂಭದಿಂದಲೇ ಎಚ್ಚರಿಕೆಯ ಆಟ ಪ್ರದರ್ಶಿಸಿದವು. ಘಾನಾ ಹೆಚ್ಚು ದಾಳಿ ನಡೆಸಿದರೂ ಪನಾಮಾ ರಕ್ಷಣಾ ವಿಭಾಗ ದೃಢವಾಗಿ ನಿಂತು ಗೋಲು ಒಪ್ಪಿಸದೇ ಹೋರಾಡಿತು. ಪರಿಣಾಮ ಮೊದಲಾರ್ಧ ಗೋಲುರಹಿತ ಸಮಬಲದಲ್ಲಿ ಅಂತ್ಯಗೊಂಡಿತು. ದ್ವಿತೀಯಾರ್ಧದಲ್ಲೂ ಘಾನಾ ನಿರಂತರ ಒತ್ತಡ ಹೇರಿತು. ಆದರೆ ಪನಾಮಾ ಗೋಲ್‌ಕೀಪರ್ ಮತ್ತು ರಕ್ಷಣಾ ಆಟಗಾರರ ಉತ್ತಮ ಪ್ರದರ್ಶನದಿಂದ ಪಂದ್ಯ ಹೆಚ್ಚುವರಿ ಸಮಯದತ್ತ ಸಾಗಿತು.

ತಿರುವು ಪಡೆದ ಪಂದ್ಯ: ಪಂದ್ಯ ಡ್ರಾದತ್ತ ಸಾಗುತ್ತಿದೆ ಎನ್ನುವಾಗ, 90+5ನೇ ನಿಮಿಷದಲ್ಲಿ ಸಿ. ಯಿರೆಂಕ್ಯಿ ನಿರ್ಣಾಯಕ ಗೋಲು ದಾಖಲಿಸಿ ಘಾನಾ ಅಭಿಮಾನಿಗಳ ಸಂಭ್ರಮಕ್ಕೆ ಕಾರಣರಾದರು. ಆ ಗೋಲಿನೊಂದಿಗೆ ಘಾನಾ 1-0 ಮುನ್ನಡೆ ಪಡೆದು ಅಂತಿಮವಾಗಿ ಜಯ ಸಾಧಿಸಿತು. ಈ ಗೆಲುವಿನೊಂದಿಗೆ ಘಾನಾ ಗ್ರೂಪ್‌ನಲ್ಲಿ ಪ್ರಮುಖ ಮೂರು ಅಂಕಗಳನ್ನು ಗಳಿಸಿ ನಾಕೌಟ್ ಹಂತದ ಆಸೆಯನ್ನು ಜೀವಂತವಾಗಿರಿಸಿಕೊಂಡಿದೆ.

ಪಂದ್ಯದ ಫಲಿತಾಂಶ
- ಘಾನಾ 1-0 ಪನಾಮಾ
- ಘಾನಾ: ಸಿ. ಯಿರೆಂಕಿ: 90+5ನೇ ನಿ.
- ಘಾನಾದ ವಿಶ್ವಕಪ್ ಅಭಿಯಾನಕ್ಕೆ ಮಹತ್ವದ ಜಯ.
- ಪನಾಮಾ ಕೊನೆಯ ಕ್ಷಣದವರೆಗೂ ಘಾನಾವನ್ನು ತಡೆಹಿಡಿದಿತ್ತು.

ಕೇನ್ ಮಿಂಚಿನಾಟ ಇಂಗ್ಲೆಂಡ್‌ಗೆ ಜಯ

ದಿನದ ಮತ್ತೊಂದು ಪಂದ್ಯದಲ್ಲಿ ಇಂಗ್ಲೆಂಡ್ ತಂಡ ಕ್ರೊಯೇಷಿಯಾ ತಂಡವನ್ನು 4-2 ಗೋಲುಗಳಿಂದ ಮಣಿಸಿತು.

ಪಂದ್ಯದ 12ನೇ ನಿಮಿಷದಲ್ಲಿ ದೊರೆತ ಪೆನಾಲ್ಟಿಯನ್ನು ಹ್ಯಾರಿ ಕೇನ್ ಯಶಸ್ವಿಯಾಗಿ ಗೋಲಾಗಿ ಪರಿವರ್ತಿಸಿ ಇಂಗ್ಲೆಂಡ್‌ಗೆ ಮುನ್ನಡೆ ತಂದುಕೊಟ್ಟರು. ಬಳಿಕ 36ನೇ ನಿಮಿಷದಲ್ಲಿ ಮಾರ್ಟಿನ್ ಬಟುರಿನಾ ಗೋಲು ಬಾರಿಸಿ ಕ್ರೊಯೇಷಿಯಾವನ್ನು ಸಮಬಲಕ್ಕೆ ತಂದರು. ಆದರೆ 42ನೇ ನಿಮಿಷದಲ್ಲಿ ಮತ್ತೊಮ್ಮೆ ಕೇನ್ ಗೋಲು ದಾಖಲಿಸಿ ಇಂಗ್ಲೆಂಡ್‌ಗೆ 2-1 ಮುನ್ನಡೆ ಒದಗಿಸಿದರು. ಮೊದಲಾರ್ಧದ ಹೆಚ್ಚುವರಿ ಸಮಯದಲ್ಲಿ ಪೆಟಾರ್ ಮೂಸಾ ಗೋಲು ಬಾರಿಸಿ ಕ್ರೊಯೇಷಿಯಾವನ್ನು ಮತ್ತೆ ಪಂದ್ಯಕ್ಕೆ ಮರಳಿಸಿದರು. ಹೀಗಾಗಿ ಮೊದಲಾರ್ಧ 2-2 ಸಮಬಲದಲ್ಲಿ ಅಂತ್ಯಗೊಂಡಿತು.

ಪಂದ್ಯದ ಪ್ರಮುಖ ಕ್ಷಣಗಳು
- ಹ್ಯಾರಿ ಕೇನ್: 12ನೇ ನಿ. (ಪೆನಾಲ್ಟಿ), 42ನೇ ನಿ.
- ಮಾರ್ಟಿನ್ ಬಟುರಿನಾ: 36ನೇ ನಿ. (ಕ್ರೋ)
- ಪೆಟಾರ್ ಮೂಸಾ: 45+5ನೇ ನಿ. (ಕ್ರೋ)
- ಜೂಡ್ ಬೆಲ್ಲಿಂಗ್ಹ್ಯಾಮ್: 47ನೇ ನಿ.
- ಮಾರ್ಕಸ್ ರಾಶ್‌ಫೋರ್ಡ್: 85ನೇ ನಿ.

ದ್ವಿತೀಯಾರ್ಧ ಆರಂಭವಾದ ಕೂಡಲೇ ಜೂಡ್ ಬೆಲ್ಲಿಂಗ್ಹ್ಯಾಮ್ (47) ಗೋಲು ಬಾರಿಸಿ ಇಂಗ್ಲೆಂಡ್‌ಗೆ ಮಹತ್ವದ ಮುನ್ನಡೆ ನೀಡಿದರು. ಬಳಿಕ 85ನೇ ನಿಮಿಷದಲ್ಲಿ ಮಾರ್ಕಸ್ ರಾಶ್‌ಫೋರ್ಡ್ ಗೋಲು ದಾಖಲಿಸಿ ಜಯ ಖಚಿತಪಡಿಸಿದರು.



ಕೊಲಂಬಿಯಾ ಆಕ್ರಮಣಕ್ಕೆ ಉಜ್ಬೇಕಿಸ್ತಾನ್ ಶರಣು

ಮೆಕ್ಸಿಕೊ ಸಿಟಿ: ದಕ್ಷಿಣ ಅಮೆರಿಕದ ಬಲಿಷ್ಠ ತಂಡ ಕೊಲಂಬಿಯಾ 3-1 ಅಂತರದಲ್ಲಿ ಉಜ್ಬೇಕಿಸ್ತಾನ್ ತಂಡವನ್ನು ಮಣಿಸಿ ತನ್ನ ಅಭಿಯಾನವನ್ನು ಗೆಲುವಿನೊಂದಿಗೆ ಆರಂಭಿಸಿತು.

ಮೆಕ್ಸಿಕೊ ಸಿಟಿ ಸ್ಟೇಡಿಯಂನಲ್ಲಿ ನಡೆದ ಪಂದ್ಯದಲ್ಲಿ ಕೊಲಂಬಿಯಾ ಆರಂಭದಿಂದಲೇ ಉಜ್ಬೇಕಿಸ್ತಾನ್ ರಕ್ಷಣಾ ವಿಭಾಗದ ಮೇಲೆ ನಿರಂತರ ಒತ್ತಡ ಹೇರಿತು. ಅದರ ಫಲವಾಗಿ 40ನೇ ನಿಮಿಷದಲ್ಲಿ ಡೇನಿಯಲ್ ಮುನೋಜ್ ಗೋಲು ಬಾರಿಸಿ ಕೊಲಂಬಿಯಾಗೆ ಮುನ್ನಡೆ ತಂದುಕೊಟ್ಟರು. ಮೊದಲಾರ್ಧದ ಅಂತ್ಯಕ್ಕೆ ಕೊಲಂಬಿಯಾ 1-0 ಮುನ್ನಡೆಯಲ್ಲಿತ್ತು.

ದ್ವಿತೀಯಾರ್ಧ ಆರಂಭವಾದ ಬಳಿಕ ಉಜ್ಬೇಕಿಸ್ತಾನ್ ಹೆಚ್ಚು ಆಕ್ರಮಣಕಾರಿ ಆಟ ಪ್ರದರ್ಶಿಸಿತು. ಅದರ ಫಲವಾಗಿ 60ನೇ ನಿಮಿಷದಲ್ಲಿ ಅಬ್ಬೋಸ್ಬೇಕ್ ಫೈಜುಲ್ಲಾಯೆವ್ ಗೋಲು ದಾಖಲಿಸಿ ಪಂದ್ಯವನ್ನು 1-1 ಸಮಬಲಕ್ಕೆ ತಂದರು. ಆದರೆ ಸಮಬಲ ಹೆಚ್ಚು ಹೊತ್ತು ಉಳಿಯಲಿಲ್ಲ. ಕೇವಲ ಐದು ನಿಮಿಷಗಳ ಬಳಿಕ 65ನೇ ನಿಮಿಷದಲ್ಲಿ ಲೂಯಿಸ್ ಡಿಯಾಸ್ ಅದ್ಭುತ ಗೋಲು ಬಾರಿಸಿ ಕೊಲಂಬಿಯಾಗೆ ಮತ್ತೊಮ್ಮೆ ಮುನ್ನಡೆ ಒದಗಿಸಿದರು.

ಪಂದ್ಯದ ಕೊನೆಯ ಕ್ಷಣಗಳಲ್ಲಿ ಉಜ್ಬೇಕಿಸ್ತಾನ್ ಸಮಬಲ ಸಾಧಿಸಲು ಪ್ರಯತ್ನಿಸಿದರೂ, ಹೆಚ್ಚುವರಿ ಸಮಯದಲ್ಲಿ 90+9ನೇ ನಿಮಿಷದಲ್ಲಿ ಜುವಾನ್ ಕ್ಯಾಂಪಾಜ್ ಗೋಲು ದಾಖಲಿಸಿ ಕೊಲಂಬಿಯಾದ ಗೆಲುವಿಗೆ ಮುದ್ರೆ ಒತ್ತಿದರು.



ಉಜ್ಬೇಕಿಸ್ತಾನ್
- ಅಬ್ಬೋಸ್ಬೇಕ್ ಫೈಜುಲ್ಲಾಯೆವ್: 60ನೇ ನಿ.

ಕೊಲಂಬಿಯಾ
- ಡೇನಿಯಲ್ ಮುನೋಜ್: 40ನೇ ನಿ.
- ಲೂಯಿಸ್ ಡಿಯಾಸ್ 65ನೇ ನಿ.
- ಜುವಾನ್ ಕ್ಯಾಂಪಾಜ್ 90+9ನೇ ನಿ.

ಮೈಸೂರಿಗೆ ವೈಶಾಖ್ ವಿಜಯ ನಾಯಕ



> ಮೈಸೂರು ತಂಡವನ್ನು ಪ್ರತಿನಿಧಿಸುವುದು ಹೆಮ್ಮೆಯ ವಿಷಯ. ನನ್ನ ಕ್ರಿಕೆಟ್ ಕೆರಿಯರ್ ಶುರುವಾಗಿದ್ದೆ ಮೈಸೂರು ತಂಡದಿಂದ. ನಮ್ಮ ಹುಡಗರು ಪಂದ್ಯಾವಳಿಯಲ್ಲಿ ಮಿಂಚಲು ಸಿದ್ಧರಾಗಿದ್ದಾರೆ.
> ■ ವೈಶಾಖ್ ವಿಜಯ್, ಕ್ರಿಕೆಟರ್

ಮೈಸೂರು: ಮಹಾರಾಜ ಟ್ರೋಫಿಯಲ್ಲಿ ಮೈಸೂರು ವಾರಿಯರ್ಸ್ ತಂಡವನ್ನು ವೈಶಾಖ್ ವಿಜಯಕುಮಾರ್ ಮುನ್ನಡೆಸಲಿದ್ದಾರೆ.

ಶನಿವಾರದಿಂದ ಜುಲೈ 12 ರವರೆಗೆ ನಡೆಯಲಿರುವ ಬಹುನಿರೀಕ್ಷಿತ ಮಹಾರಾಜ ಟ್ರೋಫಿ ಟಿ20 ಪಂದ್ಯಾವಳಿಗೆ ಔಪಚಾರಿಕ ಚಾಲನೆ ಸಿಕ್ಕಿದೆ. ಟೂರ್ನಿಗೆ ಒಂದೇ ದಿನ ಬಾಕಿ ಇರುವಾಗ ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಫ್ರಾಂಚೈಸಿ ಮೈಸೂರು ವಾರಿಯರ್ಸ್ ಹಾಗೂ ಆಯೋಜಕ ಕೆಎಸ್‌ಸಿಎ ಜಂಟಿ ಮಾಧ್ಯಮ ಗೋಷ್ಠಿ ನಡೆಸಿ ಲೀಗ್ ಅಧಿಕೃತ ಹಾಡನ್ನು ಬಿಡುಗಡೆ ಮಾಡಿದವು. ಇದೇ ವೇಳೆ ಮೈಸೂರು ವಾರಿಯರ್ಸ್ ತನ್ನ ತಂಡವನ್ನು ಪರಿಚಯಿಸಿತು.

ಇದೇ ವೇಳೆ ಮಾಜಿ ಕ್ರಿಕೆಟಿಗ ಜಾವಗಲ್ ಶ್ರೀನಾಥ್ ಮಾತನಾಡಿ, ಮಹಾರಾಜ ಟ್ರೋಫಿಯು ಪ್ರಾದೇಶಿಕ ಪ್ರತಿಭೆಗಳಿಗೆ ಸದಾ ಅತ್ಯುತ್ತಮ ವೇದಿಕೆಯನ್ನು ಒದಗಿಸುತ್ತಾ ಬಂದಿದೆ. ಈ ಹೊಸ ಅಧಿಕೃತ ಗೀತೆಯ ಹಿಂದಿರುವ ಉತ್ಸಾಹವನ್ನು ನೋಡಿದರೆ, 2026 ರ ಸೀಸನ್ ಕರ್ನಾಟಕದಾದ್ಯಂತ ಸ್ಪರ್ಧಾತ್ಮಕ ಕ್ರಿಕೆಟ್ ಮತ್ತು ಅಭಿಮಾನಿಗಳ ಮನರಂಜನೆಯಲ್ಲಿ ಒಂದು ಹೊಸ ಮೈಲಿಗಲ್ಲನ್ನು ಸೃಷ್ಟಿಸಲಿದೆ ಎಂಬ ಸಂಪೂರ್ಣ ವಿಶ್ವಾಸ ನನಗಿದೆ, ಎಂದರು. ಯುವಕರು ಆಧುನಿಕ ಕ್ರಿಕೆಟ್ ಅರ್ಥ ಮಾಡಿಕೊಳ್ಳಬೇಕು, ಹಾಗೆ ಟಿ20 ಮಾದರಿಯ ಭರದಲ್ಲಿ ಇನ್ನೆರಡು ಮಾದರಿಗಳನ್ನು ಮರೆಯದಿರಿ ಎಂಬ ಸಲಹೆ ಕೊಟ್ಟರು.

ಹುಬ್ಬಳ್ಳಿಗೆ ಅನೀಶ್ವರ್ ಸಾರಥ್ಯ

ಇತ್ತ ಬೆಂಗಳೂರಿನಲ್ಲಿ ಹುಬ್ಬಳ್ಳಿ ತಂಡವೂ ತನ್ನ ಅಧಿಕೃತ ಜೆರ್ಸಿ ಬಿಡುಗಡೆ ಮಾಡುವ ವೇಳೆ ತಂಡವನ್ನು ಪರಿಚಯಿಸಿತು. ದೇಶಿ ಕ್ರಿಕೆಟ್‌ನಲ್ಲಿ ಉತ್ತಮ ಪ್ರದರ್ಶನ ನೀಡುತ್ತಾ ಬಂದಿರುವ ಅನೀಶ್ವರ್ ಗೌತಂ ಅವರನ್ನು ನಾಯಕರನ್ನಾಗಿ ನೇಮಿಸಿದೆ. ಕೆಎಸ್‌ಸಿಎ ಉಪಾಧ್ಯಕ್ಷ ಸುಜಿತ್ ಸೋಮಸುಂದರ್, ಮಹಾರಾಜ ಟ್ರೋಫಿ ಚೇರ್ಮನ್ ಕೇಶವ, ಕೆಎಸ್‌ಸಿಎ ಖಜಾಂಚಿ ಬಿ. ಎನ್. ಮಧುಕರ್, ಹುಬ್ಬಳ್ಳಿ ಫ್ರಾಂಚೈಸಿ ಮಾಲೀಕ ಶಿವೇಕ್ ಜಿಂದಾಲ್ ಮತ್ತು ಸುಶಿಲ್ ಕುಮಾರ್ ಜೆರ್ಸಿ ಅನಾವರಣಗೊಳಿಸಿದರು.

ನಾಯಕತ್ವ ಘೋಷಣೆ: ಸೈಕಲ್ ಪ್ಯೂರ್ ಅಗರಬತ್ತಿ ಪ್ರಾಯೋಜಕತ್ವದ ಹಾಗೂ ಎನ್. ಆರ್. ಗ್ರೂಪ್ ಒಡೆತನದ ಮೈಸೂರು ವಾರಿಯರ್ಸ್ ತಂಡವನ್ನು ಪರಿಚಯಿಸಿತು. ಕರ್ನಾಟಕ ಮತ್ತು ಐಪಿಎಲ್ ನ ಪ್ರಸಿದ್ಧ ವೇಗದ ಬೌಲರ್ ವೈಶಾಖ್ ವಿಜಯ್ ಕುಮಾರ್ ಅವರಿಗೆ ತಂಡವನ್ನು ಮುನ್ನಡೆಸುವ ಜವಾಬ್ದಾರಿ ನೀಡಲಾಗಿದೆ ಎಂದು ಫ್ರಾಂಚೈಸಿ ಘೋಷಿಸಿತು.

ಪ್ರಮುಖ ಆಟಗಾರರು: ಅಂತಾರಾಷ್ಟ್ರೀಯ ತಾರೆ ದೇವದತ್ ಪಡಿಕ್ಕಲ್, ಆಲ್ ರೌಂಡರ್ ಮನೋಜ್ ಭಾಂಡಗೆ, ಚೇತನ್ ಎಲ್.ಆರ್. ಮತ್ತು ರಿತೇಶ್ ಭಟ್ಕಳ್ ತಂಡದ ಪ್ರಮುಖ ಆಟಗಾರರಾಗಿದ್ದಾರೆ.

ಯುವಕರಲ್ಲಿ ಹಸಿವಿದೆ: ಅರ್ಜುನ್: ಸೈಕಲ್ ಪ್ಯೂರ್ ಅಗರಬತ್ತಿಯ ವ್ಯವಸ್ಥಾಪಕ ನಿರ್ದೇಶಕರು, ಮೈಸೂರು ವಾರಿಯರ್ಸ್ ತಂಡದ ಮಾಲೀಕರಾದ ಅರ್ಜುನ್ ರಂಗ, ಯುವ ಆಟಗಾರರಲ್ಲಿ ಗೆಲ್ಲುವ ಹಸಿವಿದೆ. ಗ್ರಾಮೀಣ ಮಟ್ಟದಲ್ಲಿ ನಿರಂತರವಾಗಿ ಉತ್ತಮ ಪ್ರದರ್ಶನ ನೀಡುತ್ತಿರುವ ಪ್ರತಿಭೆಗಳಿಗೆ ಇಂತಹ ಪ್ರಮುಖ ವೇದಿಕೆ ಕಲ್ಪಿಸಿಕೊಡಲು ನಾವು ಹೆಮ್ಮೆಪಡುತ್ತೇವೆ, ಎಂದು ಹೇಳಿದರು.

ಮಾರ್ಚ್ 10ರಿಂದಲೇ ಐಪಿಎಲ್

- 2027ರ ಪಂದ್ಯಾವಳಿ ಬೇಗನೇ ಶುರು!
- ವಾತಾವರಣಕ್ಕೆ ಸಂಬಂಧ ತೀರ್ಮಾನ

ಮುಂಬೈ: ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ವೇಳೆ ಬಿರುಬಿಸಲಿರುವ ನಿಟ್ಟನಲ್ಲಿ ಮತ್ತು ಪೂರ್ವ ಮಾನ್ಸೂನ್ ಬಗ್ಗೆ ಚಿಂತನೆ ನಡೆಸಿರುವ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಪಂದ್ಯಾವಳಿಯನ್ನು ವಾಡಿಕೆಗಿಂತಲೂ ಬೇಗನೇ ಶುರು ಮಾಡಿ, ಮುಗಿಸಲು ಚಿಂತನೆ ನಡೆಸಿದೆ.

ಸಾಮಾನ್ಯವಾಗಿ ಮಾರ್ಚ್ ಅಂತ್ಯದಿಂದ ಮೇ ಅಂತ್ಯ ಅಥವಾ ಜೂನ್ ಆರಂಭದವರೆಗೆ ನಡೆಯುವ ಈ ಕೂಟವು ಈ ಬಾರಿ ಮಾರ್ಚ್ ಆರಂಭದಲ್ಲೇ ಶುರುವಾಗಿ ಮೇ ಮಧ್ಯದಲ್ಲಿ ಮುಕ್ತಾಯಗೊಳ್ಳಲಿದೆ. ಐಪಿಎಲ್ ಮುಕ್ತಾಯಗೊಂಡು ಇನ್ನೂ ತಿಂಗಳು ಮುಗಿದಿಲ್ಲ. ಈ ನಡುವೆ ಬಿಸಿಸಿಐ ಕಾರ್ಯದರ್ಶಿ ದೇವಜಿತ್ ಸೈಕಿಯಾ ಈ ಬಗ್ಗೆ ಸುಳಿವು ನೀಡಿದ್ದು, ಹೆಚ್ಚಿನ ಬಿಸಿಲಿನಿಂದಾಗಿ ಪಂದ್ಯಾವಳಿ ಬೇಗನೇ ಶುರು ಮಾಡಲು ನಿರ್ಧರಿಸಲಾಗಿದೆ. ಮಾರ್ಚ್ 10ಕ್ಕೆ ಪಂದ್ಯಾವಳಿ ಶುರುವಾಗಲಿದೆ. ಮೇ 15ಕ್ಕೆ ಫೈನಲ್ ನಡೆಯಲಿದೆ. ಪಂದ್ಯಗಳ ಸಂಖ್ಯೆಯಲ್ಲೂ ಬದಲಾವಣೆಯಾಗುವ ಸಾಧ್ಯತೆಗಳಿವೆ ಎನ್ನಲಾಗಿದೆ.

2024ರಲ್ಲಿ ಫ್ರಾಂಚೈಸಿಯೊಂದು ಮಾಹಿತಿ ಕೊಟ್ಟು 2027ರಿಂದ ಮಾರ್ಚ್ 14ರಿಂದ ಮೇ 30ರವರೆಗೆ ನಡೆಸಲು ತೀರ್ಮಾನಿಸಲಾಗಿದೆ. ನಾವು ಅದಕ್ಕೆ ಸಜ್ಜಾಗಬೇಕಿದೆ ಎಂದು ತಿಳಿಸಿತ್ತು. ಈ ವರ್ಷ, ಐಪಿಎಲ್ ಮಾರ್ಚ್ 29 ರ ಸುಮಾರಿಗೆ ಪಂದ್ಯಾವಳಿ ಶುರುವಾಗಿತ್ತು.ಮೇ 31 ರೊಳಗೆ ಕೊನೆಗೊಂಡಿತು. ನಾವು ಚರ್ಚಿಸುತ್ತಿರುವ ಏಕೈಕ ವಿಷಯವೆಂದರೆ ಮೇ 15 ರ ನಂತರ ಪಂದ್ಯಾವಳಿಯ ಕೊನೆಯ ಹಂತದಲ್ಲಿ ಮಳೆ ಬೀಳುವ ಅಥವಾ ಪೂರ್ವ-ಮಾನ್ಸೂನ್ ಆರಂಭದ ಬಗ್ಗೆ. ಮತ್ತೊಂದೆಡೆ, ಆಟಗಾರರಿಗೆ ಅಥವಾ ಜನಸಮೂಹಕ್ಕೆ ಅನುಕೂಲಕರವಲ್ಲದ ಬಿಸಿ ವಾತಾವರಣವಿದೆ. ಆದ್ದರಿಂದ, ಮಾರ್ಚ್ ತಿಂಗಳ ಕೊನೆಯ ಭಾಗಕ್ಕಿಂತ ಸ್ವಲ್ಪ ಮುಂಚಿತವಾಗಿ ಪಂದ್ಯಾವಳಿಯನ್ನು ಪ್ರಾರಂಭಿಸಬಹುದೇ ಎಂಬುದರ ಕುರಿತು ಬಿಸಿಸಿಐ ಮತ್ತು ನಮ್ಮ ಐಪಿಎಲ್ ಆಡಳಿತ ಮಂಡಳಿಯಲ್ಲಿ ಚರ್ಚೆ ನಡೆಯುತ್ತಿದೆ. ಮುಂದಿನ ವರ್ಷದಿಂದ, ನಾವು ಪ್ರಯತ್ನ ಮಾಡುತ್ತೇವೆ ಮತ್ತು ಮಾರ್ಚ್ 10 ರೊಳಗೆ ಅದನ್ನು ಪ್ರಾರಂಭಿಸಬಹುದೇ ಮತ್ತು ಮೇ 15 ರೊಳಗೆ ಅದನ್ನು ಮುಗಿಸಬಹುದೇ ಎಂಬುದರ ಕುರಿತು ವಿಂಡೋಗಳನ್ನು ನೋಡಲು ನಾನು ಈಗಾಗಲೇ ನಮ್ಮ ಜನರಲ್ ಮ್ಯಾನೇಜರ್) ಭಾರತದ ಮಾಜಿ ವೇಗಿ ಅಬೇ ಕುರುವಿಲ್ಲಾ ಅವರಿಗೆ ಸೂಚಿಸಿದ್ದೇನೆ ಎಂದಿದ್ದಾರೆ.

ರಗ್ಬಿ: ಬೆಂಗಳೂರಿಗೆ ಜಯ



ಹೈದರಾಬಾದ್: ಇಲ್ಲಿನ ಗಚಿಬೌಲ್ಲಿ ಗಂತಿ ಮೋಹನ ಚಂದ್ರ ಬಾಲಯೋಗಿ ಅಥ್ಲೆಟಿಕ್ ಕ್ರೀಡಾಂಗಣದಲ್ಲಿ ನಡೆದ ರಗ್ಬಿ ಪ್ರೀಮಿಯರ್ ಲೀಗ್‌ನ ಪಂದ್ಯಗಳಲ್ಲಿ ಬೆಂಗಳೂರು ಬ್ರೇವ್‌ಹಾರ್ಟ್ಸ್ ತಂಡವು ದೆಹಲಿ ರೆಡ್ಜ್ ತಂಡವನ್ನು 38-28 ಅಂತರದಿಂದ ಮಣಿಸಿತು. ಮಹಿಳಾ ವಿಭಾಗದಲ್ಲಿ ಚೆನ್ನೈ ಬುಲ್ಸ್ ಮತ್ತು ಮುಂಬೈ ಡ್ರೀಮರ್ಸ್ ತಂಡಗಳ ನಡುವಿನ ಪಂದ್ಯ 26-26 ಅಂಕಗಳ ಸಮಬಲದಲ್ಲಿ ಅಂತ್ಯಗೊಂಡಿತು.

ಪಾಕ್ ವಿರುದ್ಧ ದಕ್ಷಿಣ ಆಫ್ರಿಕಾಗೆ ಭರ್ಜರಿ ಗೆಲುವು

ಬಿರ್ಮಿಂಗ್ಹ್ಯಾಮ್: ಮಹಿಳೆಯರ ಟಿ20 ವಿಶ್ವಕಪ್ ಪಂದ್ಯಾವಳಿಯಲ್ಲಿ ಪಾಕಿಸ್ತಾನ ಸತತ ಎರಡನೇ ಸೋಲು ಕಂಡಿದ್ದು ದ.ಆಫ್ರಿಕಾ ಗೆಲುವು ಸಾಧಿಸಿದೆ.

ಫಾತಿಮಾ ಸನಾ ಅವರ ಉತ್ತಮ ಬ್ಯಾಟಿಂಗ್ ಹೊರತಾಗ್ಯೂ ಮಿಂಚಿರುವ ದ.ಆಫ್ರಿಕಾ ಮಹಿಳೆಯರ ತಂಡವು ಗೆಲುವಿನ ನಗೆ ಬೀರಿತು. ಬುಧವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಪಾಕಿಸ್ತಾನ 20 ಓವರ್‌ಗಳಲ್ಲಿ 9 ವಿಕೆಟ್ ಕಳೆದುಕೊಂಡು 126 ರನ್ ಗಳಿಸಿತು. ತಂಡದ ಪರ ಫಾತಿಮಾ ಸನಾ 55 ರನ್ ಗಳಿಸಿದರು. ಆಫ್ರಿಕಾ ಪರ ಅನುಭವಿ ಮಾರಿಝುನ್ ಕಾಪ್ 3 ವಿಕೆಟ್ ಕಿತ್ತರು. ಗುರಿ ಬೆನ್ನತ್ತಿದ ದ.ಆಫ್ರಿಕಾ 16.5 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 127 ರನ್ ಗಳಿಸಿತು. ಅನ್ನೇರಿ ಡೆರ್ಕ್ಸೆನ್ 52, ನಾದಿನ್ ಡಿ ಕ್ಲರ್ಕ್ 37 ರನ್ ಗಳಿಸಿದರು. ಪಾಕಿಸ್ತಾನ ಪರ ನಾಯಕಿ ಫಾತಿಮಾ ಸನಾ 16 ರನ್‌ಗೆ 3 ವಿಕೆಟ್ ಕಿತ್ತರು. ಪವರ್ ಪ್ಲೇನಲ್ಲೇ ಪಾಕಿಸ್ತಾನ 5 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿಕೊಂಡಿತು. ಫಾತಿಮಾ ಉತ್ತಮ ಬ್ಯಾಟಿಂಗ್ ಮಾಡಿ ತಂಡದ ಮೊತ್ತವನ್ನು ಹಿಗ್ಗಿಸಿದರು. ಮಧ್ಯಮ ಓವರ್‌ಗಳಲ್ಲಿ 51 ರನ್ ಗಳಿಸಿದ ಪಾಕ್, ಡೆತ್ ಓವರ್‌ನಲ್ಲಿ 46 ರನ್ ಗಳಿಸಿತು. ಅತ್ತ ದ.ಆಫ್ರಿಕಾ ಪವರ್‌ಪ್ಲೇನಲ್ಲಿ 48 ರನ್ ಗಳಿಸಿ ಸರಳ ಗೆಲುವಿನತ್ತ ಸಾಗಿತ್ತು. ಆದರೆ ಮಧ್ಯಮ ಓವರ್‌ಗಳಲ್ಲಿ ಫಾತಿಮಾ ಬೌಲಿಂಗ್‌ನಲ್ಲಿ ಮಿಂಚಿದರು. ಅಲ್ಲಿ ಆಫ್ರಿಕಾ 5 ವಿಕೆಟ್ ಕಳೆದುಕೊಂಡು 76 ರನ್ ಗಳಿಸಿತ್ತು. ಡೆತ್ ಓವರ್‌ನಲ್ಲಿ ಬೇಕಿದ್ದ 3 ರನ್ ಗಳಿಸಲು ಮತ್ತೆ 2 ವಿಕೆಟ್ ಕಳೆದುಕೊಂಡಿತು. ಪಂದ್ಯದಲ್ಲಿ 17 ವಿಕೆಟ್ ಬಿದ್ದವು. ಫಾತಿಮಾ ಸನಾ 3 ವಿಕೆಟ್ ಪಡೆದಿದ್ದಲ್ಲದೆ 55★ ರನ್ ಗಳಿಸಿದರು.




ICC WOMEN'S T20 WORLD CUP ENGLAND & WALES 2026

ಸಂಕ್ಷಿಪ್ತ ಸ್ಕೋರ್
ಪಾಕಿಸ್ತಾನ 20 ಓವರ್‌ಗಳಲ್ಲಿ 126/9: ಫಾತಿಮಾ 55★, ಹಸ್ಸನ್ 23; ಕಾಪ್ 23/3
ದ.ಆಫ್ರಿಕಾ 16.5 ಓವರ್‌ಗಳಲ್ಲಿ 127/8: ಡರ್ಕ್ಸೆನ್ 52, ಕ್ಲರ್ಕ್ 37; ಫಾತಿಮಾ 16/3

ಇಂದು ಐರ್ಲೆಂಡ್-ನ್ಯೂಜಿಲೆಂಡ್ ಪಂದ್ಯ: ಸೋಲಿನೊಂದಿಗೆ ಆರಂಭ ಮಾಡಿರುವ ಹಾಲಿ ಚಾಂಪಿಯನ್ ನ್ಯೂಜಿಲೆಂಡ್ ತಂಡವು ಶುಕ್ರವಾರ ತಡರಾತ್ರಿ ನಡೆಯಲಿರುವ ಪಂದ್ಯದಲ್ಲಿ ಐರ್ಲೆಂಡ್ ತಂಡವನ್ನು ಎದುರಿಸಲಿದೆ. ಕೇರ್, ಸೂಜಿ ಸೇರಿದಂತೆ ಪ್ರಮುಖ ಆಟಗಾರ್ತಿಯರ ಪಾಳೆಯ ಹೊಂದಿರುವ ನ್ಯೂಜಿಲೆಂಡ್ ಇನ್ನೂ ಪಂದ್ಯಾವಳಿಯಲ್ಲಿ ಮೊದಲ ಗೆಲುವು ದಾಖಲಿಸಬೇಕಿದೆ. ಸೌತೆಂಪ್ಟನ್‌ನಲ್ಲಿ ನಡೆಯಲಿರುವ ಈ ಪಂದ್ಯವು ರಾತ್ರಿ 11ಕ್ಕೆ ಶುರುವಾಗಲಿದೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



6019

ಎಡದಿಂದ ಬಲಕ್ಕೆ
1.ಓದಲು ಬರೆಯಲು ಬಾರದವನು (4)
3.ಕಾನೂನುಬದ್ಧವಾಗಿ ಮಾನ್ಯತೆ ಪಡೆದದ್ದು (4)
5.ಪರಿಶೀಲನೆ-ವಿಮರ್ಶೆಯ ಸಮಾನಪದ (4)
6.ಸೂರ್ಯನ ಮಗನಾಗಿ ಕರ್ಣ (3)
8.ಸಸಿ ನೆಡುವ ಮಣ್ಣಿನ ಪಾತ್ರೆಯಿದು (2)
9.ಬೆಳ್ಳನೆಯ ಹಲ್ಲು (2)
11.ಪಾಟಿಯ ಮೇಲೆ ಬರೆವ ಮೃದುಕಲ್ಲು (3)
13.ಬಂಗಾಳ ವಿಭಜನೆಯ ವಿರುದ್ಧವಾದ ಹೋರಾಟ (4)
15.ಅರಸನಿಗೆ ಕಡೆಯಲ್ಲಿ ಸಿಕ್ಕ ಬಿಳಿಸಕ್ಕರೆ (4)
16.ಅಕ್ಷರದ ಮೇಲ್ಭಾಗದ ಸಣ್ಣಗೆರೆ (4)

ಮೇಲಿನಿಂದ ಕೆಳಕ್ಕೆ
1.ಹಕ್ಕು-ಆಡಳಿತ ಶಕ್ತಿಯಿದು (4)
2.ಹೂವಿನ ಧೂಳು ತಲೆಕೆಳಗಾಗಿ ಬಿದ್ದಿದೆ (3)
3.ಕವಿ ರನ್ನನಿಗೆ ಆಶ್ರಯ ನೀಡಿದ ಮಹಿಳೆ (4)
4.ಗಿರೀಶ್ ಕಾರ್ನಾಡರು ಬರೆದ ನಾಟಕ (4)
7.ಜೇನು ವಿತರಣೆ ಮಾಡಿ ಗೆಲುವು ಸಾಧಿಸಿದವನು (3)
8.ಔಷಧಿಯಾಗಿಯೂ ಬಳಸುವ ತರಕಾರಿ (3)
9.ಕಡೆಗೋಲಿನಿಂದ ಕಡೆದ ಮಜ್ಜಿಗೆ (4)
10.ಕಾಡುಪ್ರಾಣಿಗಳ ಅರಸನಾಗಿ ಸಿಂಹ (4)
12.ಪಟ್ಟು ಹಿಡಿದು ರಾಜ್ಯಾಭಿಷೇಕ ಮಾಡುವಿಕೆ (4)
14.ಕೂಡು-ಕಳೆವ ಲೆಕ್ಕಗಳಿರುವ ಶಾಸ್ತ್ರ (3)

6018 ಉತ್ತರ

ಎಡದಿಂದ ಬಲಕ್ಕೆ:
1.ಸುದ್ದಿಗಾರ 3.ಗಿರಿಧರ
5.ಕಡಗ 6.ಮನ
8.ತಂತಿ 9.ರಥ 12.ಕುಜ
14.ದಟ್ಟಣೆ 15.ಶಿಲಾನ್ಯಾಸ
16.ಚುಡಾಯಿಸು

ಮೇಲಿನಿಂದ ಕೆಳಕ್ಕೆ :
1.ಸುದರ್ಶನ 2.ರಸಿಕತೆ
3.ಗಿರಗಿಟ್ಲೆ 4.ರಯಪತಿ
7.ಮನ್ಮಥ 8.ತಂಬಾಕು
9.ರವಿಶಶಿ 10.ಮಂದಹಾಸ
11.ಹಣಬಾಚು
13.ಜಮಾಯಿಸು

ಕಿರುಸುದ್ದಿ

ಮಸೀದಿಗೆ ನುಗ್ಗಿ ಆಕ್ರಮಣ: ಆರೋಪಿ ಬಂಧನ

• **ಕಾಸರಗೋಡು:** ಮಧ್ಯರಾತ್ರಿಯಲ್ಲಿ ಮಸೀದಿಗೆ ನುಗ್ಗಿ ಆಕ್ರಮಿಸಿ ಮುಕ್ರಿ ಸಹಿತ ಮೂರು ಮಂದಿಗೆ ಇರಿದು ಗಾಯಗೊಳಿಸಲಾಗಿದೆ. ಈ ಘಟನೆಯಲ್ಲಿ ಕಾಸರಗೋಡು ನಿವಾಸಿ ಹಾಗೂ ಹಲವು ಪ್ರಕರಣಗಳಲ್ಲಿ ಆರೋಪಿಯಾದ ಸಿಯಾದ್ ಅಬ್ದುಲ್ಲ (27) ಎಂಬಾತನನ್ನು ಪಯ್ಯನ್ನೂರು ಪೊಲೀಸರು ಸೆರೆ ಹಿಡಿದಿದ್ದಾರೆ. ಇರಿತದಿಂದ ಮೂರು ಕ್ಷಿಗಳು, ಒಂದು ಕತ್ತರಿಯನ್ನು ವಶಪಡಿಸಲಾಗಿದೆ. ಏಳಿಲೋಡ್ ಫಾರೂಕ್ ಜುಮಾ ಮಸೀದಿಯ ಮುಕ್ರಿ ಹಾಗೂ ಮಂಜೇರಿ ನಿವಾಸಿಯಾದ ಮುಹಮ್ಮದ್ ಆಶಿಕ್ (24), ಜಮಾಅತ್ ಪದಾಧಿಕಾರಿಗಳಾದ ನಾಸರ್ ಹನ್ನ (47), ಮಸೀದಿಗೆ ಪ್ರಾರ್ಥನೆಗೆಂದು ಆಗಮಿಸಿದ ಕೆ.ಎಂ. ಸಮೀರ್ (37) ಎಂಬವರು ಗಾಯಗೊಂಡಿದ್ದು, ಅವರನ್ನು ಪಯ್ಯನ್ನೂರು ತಾಲೂಕು ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ. ಬುಧವಾರ ರಾತ್ರಿ 10.45ರ ವೇಳೆ ಈ ಆಕ್ರಮಣ ನಡೆದಿದ್ದು, ಮಸೀದಿಯ ಗಾಜನ್ನು ಪುಡಿಗೈಯ್ಯಲಾಗಿದೆ.

ಬ್ಯಾಂಕ್ ಸಾಲ ತೀರಿಸಲಾಗದೆ ಹಳೆ ಮನೆಯಲ್ಲಿ ನೇಣಿಗೆ ಶರಣಾದ ವ್ಯಕ್ತಿ

• **ಉಡುಪಿ:** ಬ್ಯಾಂಕಿನಲ್ಲಿ ಮಾಡಿದ ಸಾಲವನ್ನು ಸಕಾಲದಲ್ಲಿ ತೀರಿಸಲಾಗದೆ ತೀವ್ರ ಮಾನಸಿಕ ಖಿನ್ನತೆಗೆ ಒಳಗಾಗಿದ್ದ ವ್ಯಕ್ತಿಯೊಬ್ಬರು ತಮ್ಮ ಹಳೆಯ ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಶಂಕರನಾರಾಯಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಂಭವಿಸಿದೆ. ಭಾಸ್ಕರ್ ಶೆಟ್ಟಿ (48) ಮೃತರು. ಜೂನ್ 17ರಂದು ಬೆಳಗ್ಗೆ 8 ಗಂಟೆಗೆ ಭಾಸ್ಕರ್ ಶೆಟ್ಟಿ ಅವರು ತಮ್ಮ ಹೆಂಡತಿ ಆಶಾ ಅವರ ಬಳಿ ನಾನು ನಮ್ಮ ಹಳೆ ಮನೆಗೆ ಹೋಗಿ ಬರುತ್ತೇನೆ ಎಂದು ಹೇಳಿ ಹೊರಟಿದ್ದರು. ಆದರೆ 10 ಗಂಟೆಯಾದರೂ ಅವರು ವಾಪಸ್ ಬಾರದೇ ಇದ್ದಾಗ ಅನುಮಾನಗೊಂಡ ಹೆಂಡತಿ ಆಶಾ ಹಳೆ ಮನೆಗೆ ಹೋಗಿ ಹುಡುಕಾಡಿದ್ದಾರೆ. ಹಳೆ ಮನೆಯ ಬಾಗಿಲ ಬಳಿ ಭಾಸ್ಕರ್ ಅವರ ಚಪ್ಪಲಿ ಇರುವುದನ್ನು ಗಮನಿಸಿ ಬಾಗಿಲು ದೂಡಿದಾಗ ಅದು ಒಳಗಡೆಯಿಂದ ಲಾಕ್ ಆಗಿರುವುದು ತಿಳಿದುಬಂದಿದೆ. ತಕ್ಷಣ ಮನೆಯ ಹಿಂಬದಿಯ ಕಿಟಕಿಯ ಮೂಲಕ ಇಣುಕಿ ನೋಡಿದಾಗ ನೇಣು ಬಿಗಿದುಕೊಂಡಿರುವುದು ಪತ್ತೆಯಾಗಿದೆ. ಬ್ಯಾಂಕ್ ಸಾಲದ ಚಿಂತೆಯೇ ಈ ಆತ್ಮಹತ್ಯೆಗೆ ಕಾರಣ ಎಂದು ತಿಳಿದುಬಂದಿದ್ದು, ಶಂಕರನಾರಾಯಣ ಪೊಲೀಸ್ ಠಾಣೆಯಲ್ಲಿ ಯುಡಿಆರ್ ಪ್ರಕರಣ ದಾಖಲಾಗಿದೆ.

ತಂದೆಯ ಸಾವಿನ ಬೇಸರದಲ್ಲಿ ಯುವಕನ ಆತ್ಮಹತ್ಯೆ

• **ಉಡುಪಿ:** ಎರಡು ವರ್ಷಗಳ ಹಿಂದೆ ತಂದೆ ಆತ್ಮಹತ್ಯೆ ಮಾಡಿಕೊಂಡಿದ್ದ ಘಟನೆಯಿಂದ ತೀವ್ರ ಮಾನಸಿಕ ಆಘಾತಕ್ಕೊಳಗಾಗಿ, ಸರಿಯಾಗಿ ಊಟ-ತಿಂಡಿ ಮಾಡದೆ ನೊಂದಿದ್ದ ಯುವಕನೊಬ್ಬ ತಾನೂ ಮನೆಯಲ್ಲೇ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಹಿರಿಯಡ್ಕದಲ್ಲಿ ಸಂಭವಿಸಿದೆ. ಗುರುದೇವ (25) ಆತ್ಮಹತ್ಯೆ ಮಾಡಿಕೊಂಡ ಯುವಕ. ಗುರುದೇವ ಅವರು ಯಾವುದೇ ಸರಿಯಾದ ಕೆಲಸ ಕಾರ್ಯಗಳನ್ನು ಮಾಡದೆ ತಿರುಗಾಡಿಕೊಂಡಿದ್ದರು. ಎರಡು ವರ್ಷಗಳ ಹಿಂದೆ ತಂದೆ ಆತ್ಮಹತ್ಯೆ ಮಾಡಿಕೊಂಡ ದಿನದಿಂದ ಅವರು ತೀವ್ರವಾಗಿ ನೊಂದಿದ್ದು, ಮಾನಸಿಕ ಖಿನ್ನತೆಯಿಂದಾಗಿ ಸಮಯಕ್ಕೆ ಸರಿಯಾಗಿ ಆಹಾರವನ್ನೂ ಸೇವಿಸುತ್ತಿರಲಿಲ್ಲ. ಜೂ. 17 ರಂದು ಮುಂಜಾನೆ ಮನೆಯ ಮುಂಭಾಗದ ಕೋಣೆಯ ಮೇಲ್ಚಾವಣಿಗೆ ನೈಲಾನ್ ಸೀರೆಯಿಂದ ಕುತ್ತಿಗೆಗೆ ಬಿಗಿದುಕೊಂಡು ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಹಿರಿಯಡ್ಕ ಪೊಲೀಸ್ ಠಾಣೆಯಲ್ಲಿ ಈ ಬಗ್ಗೆ ಪ್ರಕರಣ ದಾಖಲಾಗಿದೆ.

ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಮಹಿಳೆಯ ಹಣ ಕಳವು

• **ಕುಂಬಳೆ:** ಕೇರಳ ಸರಕಾರಿ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ಮಹಿಳೆಯ 30,000 ರೂ. ಕಳವಿಗೀಡಾದ ಬಗ್ಗೆ ಆರೋಪಿಸಲಾಗಿದೆ. ಈ ಹಿನ್ನೆಲೆಯಲ್ಲಿ ಬಸ್‌ನ್ನು ಕುಂಬಳೆ ಪೊಲೀಸ್ ಠಾಣೆಗೆ ತಲುಪಿಸಿ ಎಲ್ಲಾ ಪ್ರಯಾಣಿಕರನ್ನು ಪರಿಶೀಲಿಸಿದರೂ ಹಣ ಪತ್ತೆಯಾಗಲಿಲ್ಲ. ಬುಧವಾರ ಸಂಜೆ 6 ಗಂಟೆಗೆ ಕಾಸರಗೋಡಿನಿಂದ ಮಂಗಳೂರಿಗೆ ತೆರಳುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಕಾಸರಗೋಡಿನಿಂದ ಪ್ರಯಾಣಿಸಿದ ಮೊಗ್ರಾಲ್ ಪುತ್ತೂರು ನಿವಾಸಿಯಾದ ಮಹಿಳೆಯ ಹಣ ಕಳವಿಗೀಡಾಗಿದೆ. ಬಸ್ ಚೌಕಿಗೆ ತಲುಪಿದಾಗ ಮಹಿಳೆಯ ಪರ್ಸ್‌ನಲ್ಲಿ ಹಣ ನಾಪತ್ತೆಯಾಗಿರುವುದು ಪತ್ತೆಯಾಯಿತು. ಈ ಬಗ್ಗೆ ಮಹಿಳೆಯು ಬಸ್ ನಿರ್ವಾಹಕರಿಗೆ ತಿಳಿಸಿದ್ದು, ಇದರಿಂದಾಗಿ ಬಸ್‌ನ್ನು ನೇರವಾಗಿ ಕುಂಬಳೆ ಪೊಲೀಸ್ ಠಾಣೆಗೆ ತಲುಪಿಸಲಾಯಿತು. ಬಸ್‌ನಲ್ಲಿ ಸುಮಾರು 70ರಷ್ಟು ಮಹಿಳಾ ಪ್ರಯಾಣಿಕರಿದ್ದರು ಹಾಗೂ ಇಬ್ಬರು ಮಾತ್ರ ಪುರುಷರಿದ್ದರು. ಮಹಿಳೆಯರನ್ನು ಮಹಿಳಾ ಪೊಲೀಸರು ಮತ್ತು ಪುರುಷರನ್ನು ಪುರುಷ ಪೊಲೀಸರು ಪರಿಶೀಲಿಸಿದರೂ ಹಣ ಪತ್ತೆಯಾಗಲಿಲ್ಲ. ಈ ಬಗ್ಗೆ ಕಾರ್ಯಾಚರಣೆ ಮುಂದುವರಿದಿದೆ. ಬಳಿಕ ರಾತ್ರಿ 8 ಗಂಟೆಯ ನಂತರ ಬಸ್‌ನ್ನು ಮಂಗಳೂರಿನತ್ತ ಕಳುಹಿಸಲಾಯಿತು.

ಮರದಲ್ಲೇ ಹಳದಿ ಬಣ್ಣಕ್ಕೆ ತಿರುಗಿದ ಎಳೆ ಅಡಿಕೆ ಕಾಯಿಗಳು | ಫಸಲು ನಷ್ಟದ ಆತಂಕದಲ್ಲಿ ದ.ಕ.ದ ಕೃಷಿಕರು

ಅಡಿಕೆ ಕೃಷಿಕನಿಗೆ ಈಗ ಹೊಸ ತಲೆನೋವು

▸ ಮಿಥುನ್ ಕರ್ಲಪ್ಪಾಡಿ





ದಿಗಂತ ವಿಶೇಷ

• **ಸುಳ್ಯ:** ಅಡಿಕೆ ಕೃಷಿಕನಿಗೆ ಒಂದಲ್ಲ ಒಂದು ಸಮಸ್ಯೆ ಕಾಡುತ್ತಲೇ ಇರುತ್ತದೆ. ಎಲೆ ಚುಕ್ಕೆ ರೋಗ, ಹಳದಿ ರೋಗ, ಕೊಳೆ ರೋಗದ ಸಾಲಿಗೆ ಈಗ ಹೊಸದೊಂದು ಸಮಸ್ಯೆ ಸೇರಿಕೊಂಡಿದೆ. ಪ್ರಸ್ತಕ ಸಾಲಿನಲ್ಲಿ ಮುಂಗಾರು ಮಳೆ ವಾಡಿಕೆಗಿಂತ ಕಡಿಮೆಯಾಗಲಿದೆ ಎಂಬ ಆತಂಕ ಒಂದೆಡೆಯಾದರೆ ಮತ್ತೊಂದೆಡೆ ಬೆಳೆದ ಬೆಳೆ ಕೈ ಸೇರುತ್ತಿಲ್ಲ ಎಂಬ ಭೀತಿ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ಸೇರಿದಂತೆ ಬಹುತೇಕ ತಾಲೂಕಿನ ಅಡಿಕೆ ತೋಟಗಳಲ್ಲಿ ಈ ವರ್ಷ ಈ ಹಿಂದಿಗಿಂತಲೂ ಅಧಿಕವಾಗಿ ಎಳೆಯ ಅಡಿಕೆಗಳು ನೆಲಕಚ್ಚುವ ಸಮಸ್ಯೆ ಮುಂದುವರಿದಿದೆ. ಅಲ್ಲದೇ ಕೆಲವು ಸಣ್ಣ ಗಿಡಗಳಲ್ಲಿ ಅಡಿಕೆಗಳು ಮರದಲ್ಲಿಯೇ ಹಳದಿ ಬಣ್ಣಕ್ಕೆ ತಿರುಗಿದ್ದು, ಮರದ ಸೋಗೆಗಳು ಕೂಡ ಸುಟ್ಟ ರೀತಿಗೆ ಮಾರ್ಪಾಡುಗೊಂಡಿದ್ದು, ಇದು ಕೃಷಿ ವಲಯದ ಆತಂಕಕ್ಕೆ ಕಾರಣವಾಗಿದೆ.

ಸಾಮಾನ್ಯವಾಗಿ ಬೇಸಗೆ ಸಮಯದಲ್ಲಿ ಎಳೆ ನಳ್ಳಿಗಳು ಬೀಳುವುದು ಸಾಮಾನ್ಯ. ಹವಾಮಾನ ವೈಪರೀತ್ಯ, ನೀರಿನ ಕೊರತೆ, ಪೋಷಕಾಂಶದ ಕೊರತೆಯಿಂದ ಈ ಸಮಸ್ಯೆ ಕಾಡುತ್ತದೆ. ಆದರೆ ಸುಳ್ಯ, ಸುಬ್ರಹ್ಮಣ್ಯ ಭಾಗದಲ್ಲಿ ಮೇ ಎರಡನೇ ವಾರದಿಂದ ಉತ್ತಮ ಮಳೆಯಾಗಿದ್ದು, ಮಣ್ಣಿನಲ್ಲಿ ತೇವಾಂಶ ಇದೆ. ಅಲ್ಲದೇ ರಸಗೊಬ್ಬರ ಹಾಕಿದ ತೋಟಗಳಲ್ಲಿಯೂ ಈ ಬಾರಿ ಎಳೆಯ ಅಡಿಕೆ ಉದುರುತ್ತಿವೆ. ಇದರಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಬಾರಿ ಶೇ.40ರಷ್ಟು ಫಸಲು ನಾಶವಾಗುವ ಆತಂಕ ಈಗಾಗಲೇ ಶುರುವಾಗಿದೆ. ಪ್ರತಿ ವರ್ಷ ಕೊಳೆ ರೋಗದಿಂದ ಅಡಿಕೆ ನಾಶವಾಗುತ್ತಿದ್ದರೆ ಈ ವರ್ಷ 'ಹೊಸ ಸಮಸ್ಯೆ' ಅಡಿಕೆ ಬೆಳೆಯನ್ನು ಆಪೋಶನ ಪಡೆಯುತ್ತಿದೆ.

ಸುಳ್ಯದಲ್ಲಿ ಮರಗಳ ಮಾರಣಹೋಮ!

ಕಳೆದ ಹಲವಾರು ವರ್ಷಗಳಿಂದ ಬಾಧಿಸುತ್ತಿರುವ ಹಳದಿ ರೋಗ ಸುಳ್ಯ ತಾಲೂಕಿನ ಕೃಷಿಕರನ್ನು ಹೈರಾಣಾಗಿಸಿದೆ. ಅಲ್ಲದೇ ಬಹುತೇಕ ತೋಟಗಳಲ್ಲಿ ಅಡಿಕೆ ಮರಗಳ ಕೊಬೆಗಳೇ ಇಲ್ಲವಾಗಿದೆ. ಕೆಲವು ಕೃಷಿಕರು ಕೈಯಾರೆ ನೆಟ್ಟು ಬೆಳೆಸಿದ ಮರಗಳನ್ನು ಕಡಿಯುತ್ತಿದ್ದಾರೆ. ಇದರ ನಡುವೆಯೇ ಕಾಣಿಸಿಕೊಂಡ ಎಲೆಚುಕ್ಕಿ ರೋಗ ಅಡಿಕೆ ಕೃಷಿಕರನ್ನು ನಲುಗಿಸಿದೆ. ಒಟ್ಟಾರೆಯಾಗಿ ಸುಳ್ಯ ತಾಲೂಕಿನ ಕೃಷಿಕರು ಆತಂತ್ರ ಸ್ಥಿತಿಗೆ ತಲುಪಿದ್ದಾರೆ. ಈ ನಡುವೆ ನಳ್ಳಿಗಳು ಅಡಿಕೆ ಹಣ್ಣಾದ ಮಾದರಿಯಲ್ಲಿ ಕೆಂಪು ಬಣ್ಣಕ್ಕೆ ತಿರುಗಿ ಬೀಳುವ ಸಸಮಸ್ಯೆ ಅಜ್ಜಾವರ, ಬೆಳ್ಳಾರೆ, ಅರಂತೋಡು, ಗುತ್ತಿಗಾರು, ಆಲೆಟ್ಟಿ ಸೇರಿದಂತೆ ಇತರೆ ಭಾಗಗಳಲ್ಲಿ ಅತೀ ಹೆಚ್ಚಾಗಿ ಕಾಣಿಸಿಕೊಂಡಿದೆ. ಇದು ರೈತರ ನಿದ್ದೆಗೆಡಿಸಿದ್ದು, ಈ ಸಮಸ್ಯೆ ಇದು ವಿಚಿತ್ರವಾಗಿದ್ದರೂ ಸಾಮಾನ್ಯವಾಗಿ ಎಲ್ಲಾ ಕೃಷಿಕರ ತೋಟಗಳಲ್ಲಿಯೂ ಉದ್ಭವಿಸಿದೆ.

ತೋಟಗಾರಿಕಾ ಇಲಾಖೆ ವಾದವೇನು?

ಮೂರು ರೀತಿಯಲ್ಲಿ ಕಾಯಿಗಳು ಉದುರುತ್ತಿದ್ದು, ಕೆಂಪು ಬಣ್ಣಕ್ಕೆ ತಿರುಗಿ ಉದುರಲು ಮುಖ್ಯವಾಗಿ ಬೋರಾಕ್ಸ್ ಹಾಗೂ ಪೊಟ್ಯಾಶ್ ಅಂಶ ಕಡಿಮೆಯಾಗಿ ಇದು ಉದುರುತ್ತಿರಬಹುದು. ಮಣ್ಣು ಪರೀಕ್ಷೆಯನ್ನು ಮಾಡಿಸಿದಲ್ಲಿ ಅದನ್ನು ಪತ್ತೆಹಚ್ಚಬಹುದಾಗಿದೆ. ಜೊತೆಗೆ ಕೀಟಗಳ ಹಾವಳಿಯಿಂದ ಹಿಂಗಾರದಲ್ಲಿ ರಸವನ್ನು ಬ್ಯಾಕ್ಟೀರಿಯಾ ಹೀರಿದಾಗ ಉದುರುತ್ತದೆ. ಅಲ್ಲದೇ ಎಪ್ರಿಲ್ ಮೇ ತಿಂಗಳಿನಲ್ಲಿ ಅನಿರೀಕ್ಷಿತ ಮಳೆಯಿಂದಾಗಿ ತೋಟಗಳಲ್ಲಿ ಮರಗಳು ಒಮ್ಮೆಲೆ ಎಲ್ಲಾ ಕ್ರಿಯೆಗಳನ್ನು ಮಾಡಲು ಆರಂಭಿಸಿದಾಗ ಹಿಂಗಾರದಲ್ಲಿನ ಅಡಿಕೆಗಳು ಉದುರುತ್ತಿರಬಹುದು ಎಂದು ತೋಟಗಾರಿಕಾ ಇಲಾಖೆ ಅಧಿಕಾರಿಗಳು ಹೇಳುತ್ತಾರೆ.

> ಅಡಿಕೆ ನಳ್ಳಿಗಳು ಉದುರಿದ ತೋಟಗಳಲ್ಲಿಂದ ಎಳೆ ಅಡಿಕೆ ನಳ್ಳಿಗಳನ್ನು ಪಡೆದು ವಿಶೇಷವಾಗಿ ಅಧ್ಯಯನ ನಡೆಸಿ, ಇದಕ್ಕೆ ಕಾರಣ ಪತ್ತೆ ಹಚ್ಚಬೇಕಿದೆ. ಇದು ಬ್ಯಾಕ್ಟೀರಿಯಾ ಅಥವಾ ಇತರೇ ಕಾರಣವೇ ಎಂಬುದು ಪರೀಕ್ಷೆಯ ಮೂಲಕವೇ ಪತ್ತೆಹಚ್ಚಬೇಕು.
>
> ■ **ಕೆ. ವಿನಾಯಕ ಹೆಗ್ಡೆ,** ಸಿಪಿಸಿಆರ್‌ಐ ವಿಭಾಗದ ಮುಖ್ಯಸ್ಥರು, ಕಾಸರಗೋಡು

ಸಮಸ್ಯೆಗೆ ಸಿಗದ ಕಾರಣ?

ಇತ್ತ ರೈತರು ತಮ್ಮ ತೋಟಗಳಿಗೆ ಹಲವಾರು ವಿಧಗಳಲ್ಲಿ ಮದ್ದು ಸಿಂಪಡಣೆಯ ಮೂಲಕ ತೋಟಗಳಲ್ಲಿ ಕಾಣಿಸಿಕೊಂಡ ಕೀಟಗಳ ಬಾಧೆ, ಎಲೆಚುಕ್ಕೆ ರೋಗ ಹಳದಿ ರೋಗದ ನಿಯಂತ್ರಣಕ್ಕೆ ಹರಸಾಹಸ ಪಡುತ್ತಿದ್ದಾರೆ. ಇದೀಗ ಅಡಿಕೆ ಗೊನೆಗಳಲ್ಲಿ ಕೆಂಪು ಬಣ್ಣಕ್ಕೆ ತಿರುಗಿದ ಕಾಯಿಗಳ ಸಮಸ್ಯೆಗೆ ಸ್ಪಷ್ಟವಾದ ಕಾರಣ ಸಿಗಲಿಲ್ಲ. ಇದು ಮಣ್ಣಿನಲ್ಲಿ ಪೋಷಕಾಂಶದ ಕೊರತೆಯಿಂದ ಉಂಟಾಗಿರಬಹುದು ಎಂದು ಸುಳ್ಯ ಭಾಗದ ರೈತರ ಮಾತಾಗಿದ್ದರೆ, ಇತ್ತ ಕೆಲ ರೈತರು ಮರಕ್ಕೆ ತಗುಲಿರುವ ಹೊಸ ರೋಗವಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಒಟ್ಟಾರೆಯಾಗಿ ಈ ಎಲ್ಲಾ ಪ್ರಶ್ನೆಗಳಿಗೆ ಕೃಷಿ ಸಂಶೋಧನಾ ಕೇಂದ್ರವೇ ಉತ್ತರವನ್ನು ನೀಡಬೇಕಿದೆ.

ಉಡುಪಿ ನಗರಸಭೆ ಕಚೇರಿ ಮೇಲೆ ಲೋಕಾ ಪೊಲೀಸರ ದಿಢೀರ್ ದಾಳಿ



• **ಉಡುಪಿ:** ಸಾರ್ವಜನಿಕರ ದೂರು ಹಾಗೂ ಕಡತಗಳ ವಿಲೇವಾರಿಯಲ್ಲಿನ ವಿಳಂಬ ನೀತಿಯ ಹಿನ್ನೆಲೆಯಲ್ಲಿ ಉಡುಪಿ ನಗರಸಭೆ ಕಚೇರಿಯ ಮೇಲೆ ಲೋಕಾಯುಕ್ತ ಪೊಲೀಸರು ದಿಢೀರ್ ದಾಳಿ ನಡೆಸಿ, ವಿವಿಧ ವಿಭಾಗಗಳ ಪ್ರಮುಖ ದಾಖಲೆಗಳನ್ನು ವಶಕ್ಕೆ ಪಡೆದು ತೀವ್ರ ಪರಿಶೀಲನೆ ನಡೆಸುತ್ತಿದ್ದಾರೆ. ಲೋಕಾಯುಕ್ತ ಅಧಿಕಾರಿಗಳ ಈ ಹಠಾತ್ ಕಾರ್ಯಾಚರಣೆಯಿಂದಾಗಿ ನಗರಸಭೆ ಕಚೇರಿಯಲ್ಲಿ ಕೆಲಕಾಲ ತೀವ್ರ ಆತಂಕ ಹಾಗೂ ದಿಗಿಲಿನ ವಾತಾವರಣ ನಿರ್ಮಾಣವಾಗಿತ್ತು.

ನಗರಸಭೆಯ ವಿವಿಧ ವಿಭಾಗಗಳಲ್ಲಿ ಸಾರ್ವಜನಿಕರು ಸಲ್ಲಿಸಿದ ನೂರಾರು ಅರ್ಜಿಗಳು ಹಾಗೂ ಪ್ರಮುಖ ಕಡತಗಳು ದೀರ್ಘಕಾಲದಿಂದ ವಿಲೇವಾರಿಯಾಗದೆ ಅನಗತ್ಯವಾಗಿ ಬಾಕಿ ಉಳಿದಿವೆ ಮತ್ತು ಸಾರ್ವಜನಿಕರನ್ನು ಸತಾಯಿಸಲಾಗುತ್ತಿದೆ ಎಂಬ ಗಂಭೀರ ಆರೋಪಗಳು ಕೇಳಿಬಂದಿದ್ದವು. ಈ ನಿಖರ ದೂರುಗಳ ಆಧಾರದ ಮೇಲೆ ಎಚ್ಚೆತ್ತ ಲೋಕಾಯುಕ್ತ ತಡೆರಹಿತ ದಾಳಿ ಸಂಘಟಿಸಿದೆ. ದಾಳಿಯ ವೇಳೆ ಕಚೇರಿಯ ಆಡಳಿತಾತ್ಮಕ ದಾಖಲೆಗಳು, ಸಾರ್ವಜನಿಕ ಸೇವೆಗಳ ಅನುಷ್ಠಾನದ ಸ್ಥಿಗತಿ ಹಾಗೂ ಇಲಾಖಾವಾರು ಕಡತ ನಿರ್ವಹಣೆಯ ಕಾರ್ಯವೈಖರಿಯನ್ನು ಅಧಿಕಾರಿಗಳು ಸೂಕ್ಷ್ಮವಾಗಿ ಪರಿಶೀಲಿಸಿ ಮಾಹಿತಿ ಸಂಗ್ರಹಿಸಿದ್ದಾರೆ.

> ಲೋಕಾಯುಕ್ತ ಅಧಿಕಾರಿಗಳ ಈ ಹಠಾತ್ ಕಾರ್ಯಾಚರಣೆಯಿಂದಾಗಿ ನಗರಸಭೆ ಕಚೇರಿಯಲ್ಲಿ ಕೆಲಕಾಲ ತೀವ್ರ ಆತಂಕ ಹಾಗೂ ದಿಗಿಲಿನ ವಾತಾವರಣ ನಿರ್ಮಾಣ

ಮಂಗಳೂರು ಲೋಕಾಯುಕ್ತ ಪೊಲೀಸ್ ಅಧೀಕ್ಷಕರಾದ ಬಿ. ಪಿ. ದಿನೇಶ್ ಕುಮಾರ್ ಅವರ ನೇರ ಮಾರ್ಗದರ್ಶನದಲ್ಲಿ, ಉಡುಪಿ ಲೋಕಾಯುಕ್ತ ಡಿವೈಎಸ್ಪಿ ಹಾಲಮೂರ್ತಿ ರಾವ್ ಹಾಗೂ ಮಂಗಳೂರು ಡಿವೈಎಸ್ಪಿ ಸುರೇಶ ಕುಮಾರ್ ಅವರ ಜಂಟಿ ಉಸ್ತುವಾರಿಯಲ್ಲಿ ಈ ಬೃಹತ್ ಕಾರ್ಯಾಚರಣೆ ನಡೆದಿದೆ. ಇನ್ಸ್‌ಪೆಕ್ಟರ್‌ಗಳಾದ ಮಂಜುನಾಥ್, ರಾಜೇಂದ್ರ ನಾಯ್ಕ, ಚಂದ್ರಶೇಖರ ಹಾಗೂ ಲೋಕಾಯುಕ್ತ ಸಿಬ್ಬಂದಿಗಳ ತಂಡವು ಸದ್ಯ ನಗರಸಭೆಯ ಪ್ರತಿಯೊಂದು ತಾಂತ್ರಿಕ ಮತ್ತು ಆಡಳಿತ ವಿಭಾಗದ ಅಧಿಕಾರಿಗಳಿಂದ ಕಡತಗಳನ್ನು ತರಿಸಿಕೊಂಡು ತನಿಖೆ ಮುಂದುವರಿಸಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭತ್ತ ಬೆಳೆ 2026ಕ್ಕೆ 366 ಹೆಕ್ಟೇರ್ ಹೆಚ್ಚಳ



• **ಮಂಗಳೂರು:** ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮುಂಗಾರು ಆರಂಭವಾಗುತ್ತಿದ್ದಂತೆ ಕೃಷಿ ಚಟುವಟಿಕೆಗಳು ಬಿರುಸು ಪಡೆದಿವೆ.

ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನಲ್ಲಿ ಭತ್ತ ಬೆಳೆ ವಿಸ್ತೀರ್ಣ 2025ರಿಂದ 2026ಕ್ಕೆ 366 ಹೆಕ್ಟೇರ್ ಹೆಚ್ಚಳವಾಗಿದೆ. ಈ ಬಾರಿ ಒಟ್ಟು 10 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಭತ್ತ ಬೆಳೆಯುವ ಗುರಿ ಹೊಂದಲಾಗಿದೆ ಎಂದು ಕೃಷಿ ಇಲಾಖಾ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಕೃಷಿ ಇಲಾಖೆ ವತಿಯಿಂದ ಈಗಾಗಲೇ ಕೃಷಿಕರಿಗೆ ಅಗತ್ಯವಾದ ಭತ್ತದ ಬೀಜ, ರಸಗೊಬ್ಬರ ಹಾಗೂ ರಾಸಾಯನಿಕಗಳ ವಿತರಣೆ ಆರಂಭಗೊಂಡಿದೆ. ಭತ್ತದ ತಳಿಗಳಾದ ಜಯ, ಜ್ಯೋತಿ, ಎಂಒ 4, ಸಹ್ಯಾದ್ರಿ ಬ್ರಹ್ಮ, ಸಹ್ಯಾದ್ರಿ ಕೆಂಪು ಮುಕ್ತಿ ತಳಿ ಸೇರಿದಂತೆ ಒಟ್ಟು 498.5 ಕ್ವಿಂಟಾಲ್ ಭತ್ತದ ಬೀಜಗಳನ್ನು ಕೃಷಿ ಇಲಾಖೆ ವಿತರಣೆ ಮಾಡಿದೆ. ಇನ್ನೂ ಕೂಡ 219.5 ಕ್ವಿಂಟಾಲ್ ಭತ್ತದ ಬೀಜಗಳ ದಾಸ್ತಾನು ಇದೆ. ಕೃಷಿಕರಿಗೆ ಭತ್ತದ ಬೀಜ ಮತ್ತು ರಸಗೊಬ್ಬಗಳ ಕೊರತೆಯಾಗದಂತೆ ಎಚ್ಚರವಹಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

> ▸▸ ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನಲ್ಲಿ ಭತ್ತ ಬೆಳೆ ವಿಸ್ತೀರ್ಣ 2025ರಿಂದ 2026ಕ್ಕೆ 366 ಹೆಕ್ಟೇರ್ ಹೆಚ್ಚಳವಾಗಿದೆ.

ಜಿಲ್ಲೆಯಲ್ಲಿ ಯೂರಿಯಾ ಡಿಎಪಿ, ಎಂಒಪಿ, ಎನ್‌ಪಿಕೆ, ಎಸ್‌ಎಸ್‌ಪಿ ಸೇರಿದಂತೆ ಒಟ್ಟು 24 ಸಾವಿರದ 868.7 ಮೆಟ್ರಿಕ್ ಟನ್ ರಸಗೊಬ್ಬರ ಲಭ್ಯವಿದ್ದು, ಕೃಷಿಕರ ಬೇಡಿಕೆಗೆ ಅನುಗುಣವಾಗಿ 9 ಸಾವಿರದ 609.853 ಮೆಟ್ರಿಕ್ ಟನ್ ರಸಗೊಬ್ಬರವನ್ನು ಪೂರೈಸಲಾಗಿದೆ. ಪ್ರಸ್ತುತ 15 ಸಾವಿರದ 258.8 ಮೆಟ್ರಿಕ್ ಟನ್ ರಸಗೊಬ್ಬರ ದಾಸ್ತಾನು ಇದೆ.

ಮುಂಗಾರು ಹಂಗಾಮಿನಲ್ಲಿ ಕೇಂದ್ರ ವಲಯದ ರಾಷ್ಟ್ರೀಯ ಆಹಾರ ಭದ್ರತೆ ಮತ್ತು ಪೌಷ್ಟಿಕ ಅಭಿಯಾನ ಯೋಜನೆಯಲ್ಲಿ 200 ಹೆಕ್ಟೇರ್ ಪ್ರದೇಶದಲ್ಲಿ ಯಾಂತ್ರೀಕೃತ ನಾಟಿ ಹಾಗೂ ನೇರ ಬಿತ್ತನೆ ಮೂಲಕ ಭತ್ತ ಬೆಳೆಯಲು ರೈತರನ್ನು ಪ್ರೋತ್ಸಾಹಿಸಲಾಗುತ್ತಿದೆ. ಉತ್ಪಾದನೆಗೆ ಬೇಕಾಗುವ ಕೃಷಿ ಪರಿಕರಗಳನ್ನು ಶೇಕಡಾ ನೂರರಷ್ಟು ಸಹಾಯಧನದಲ್ಲಿ ವಿತರಿಸಿ ಉತ್ಪಾದನೆ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮನೆಯ ಮೇಲೆ ಕಾಡಾನೆ ದಾಳಿ: ಕುಟುಂಬ ಅಪಾಯದಿಂದ ಪಾರು



• **ಮಡಿಕೇರಿ:** ಕಾಡಾನೆಯೊಂದು ಮನೆಯ ಮೇಲೆ ದಾಳಿ ಮಾಡಿರುವ ಘಟನೆ ತಿತಿಮತಿ ಗ್ರಾಮ ಪಂಚಾಯತ್ ವ್ಯಾಪ್ತಿಯ ದೊಡ್ಡರೇಷ್ಮೆ ಹಡ್ಲು ಗ್ರಾಮದಲ್ಲಿ ಗುರುವಾರ ಮುಂಜಾನೆ ನಡೆದಿದೆ.

ಗ್ರಾಮದ ನಿವಾಸಿ ಪಿ.ಸಿ. ಪಾಪು ಅವರ ಮನೆಗೆ ಬೆಳಗ್ಗೆ 5.30ರ ವೇಳೆಗೆ ಕಾಡಾನೆ ದಾಳಿ ನಡೆಸಿದೆ. ಕಾಡಾನೆ ಮನೆಯ ಸಮೀಪ ಬಂದು ಗೋಡೆ ಹಾಗೂ ಮನೆಯ ಭಾಗಕ್ಕೆ ಹಾನಿ ಉಂಟು ಮಾಡಿದ್ದು, ಮನೆಯೊಳಗಿದ್ದ ಪಾಪು ಹಾಗೂ ಅವರ ಕುಟುಂಬಸ್ಥರು ಎಚ್ಚರಗೊಂಡು ಸಮಯಪ್ರಜ್ಞೆಯಿಂದ ಹೊರಬಂದು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಘಟನೆಯಿಂದ ಮನೆಯ ಕೆಲವು ಭಾಗಗಳಿಗೆ ಹಾನಿಯಾಗಿದ್ದು, ಕುಟುಂಬಸ್ಥರು ಭಯಭೀತರಾಗಿದ್ದಾರೆ.

ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಸೂಕ್ತ ಪರಿಹಾರ ಹಾಗೂ ಶಾಶ್ವತ ಕ್ರಮ ಕೈಗೊಳ್ಳುವಂತೆ ಸ್ಥಳೀಯರು ಒತ್ತಾಯಿಸಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಈ ಭಾಗದಲ್ಲಿ ಕಾಡಾನೆಗಳ ಹಾವಳಿ ಹೆಚ್ಚಾಗಿದ್ದು, ಗ್ರಾಮಸ್ಥರು ಆತಂಕದಲ್ಲಿ ಜೀವನ ನಡೆಸುವಂತಾಗಿದೆ. ಕಾಡಾನೆಗಳ ಉಪಟಳ ತಡೆಗೆ ಅರಣ್ಯ ಇಲಾಖೆ ಪರಿಣಾಮಕಾರಿ ಕ್ರಮ ಕೈಗೊಳ್ಳಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಸಮಾಜಘಾತುಕರನ್ನು ಮಟ್ಟ ಹಾಕಲು ನೂತನ ಕ್ರಿಯಾ ಯೋಜನೆ: ಕಾಸರಗೋಡು ಎಸ್‌ಪಿ



• **ಕಾಸರಗೋಡು:** ಜಿಲ್ಲೆಯಲ್ಲಿ ಸಮಾಜಘಾತುಕರನ್ನು ಹಾಗೂ ಅಪರಾಧ ಕೃತ್ಯಗಳನ್ನು ಮಟ್ಟ ಹಾಕಲು ಹೊಸ ಕ್ರಿಯಾ ಯೋಜನೆಗೆ ರೂಪು ನೀಡಲಾಗುವುದು ಎಂದು ಜಿಲ್ಲಾ ನೂತನ ಪೊಲೀಸ್ ವರಿಷ್ಠಾಧಿಕಾರಿಯಾಗಿ ಬುಧವಾರ ಕರ್ತವ್ಯ ವಹಿಸಿಕೊಂಡಿರುವ ಕಾಸರಗೋಡು ಜಿಲ್ಲೆಯವರೇ ಆದ ಪಿ.ನಿತಿನ್‌ರಾಜ್ ಹೇಳಿದ್ದಾರೆ.

ಗೂಂಡಾಗಳ ಸದ್ದಡಗಿಸಲು ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುವುದು. ಮಾದಕ ದ್ರವ್ಯ ದಂಧೆಯನ್ನು ಬೇರು ಸಹಿತ ಕಿತ್ತುಹಾಕಲು ಮೊದಲ ಆದ್ಯತೆ ನೀಡಲಾಗುವುದು. ಮಾದಕ ವ್ಯಸನದ ದುಷ್ಪರಿಣಾಮಗಳ ಕುರಿತು ಜನರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಅವರು ತಿಳಿಸಿದ್ದಾರೆ.

ಮಾದಕ ದ್ರವ್ಯ ದಂಧೆಯಲ್ಲಿ ತೊಡಗಿದವರು ಆ ಬಗ್ಗೆ ಸ್ವಯಂ ಚಿಂತನೆ ನಡೆಸಿ ಅಂತಹ ಕೃತ್ಯಗಳನ್ನು ಕೈಬಿಡಬೇಕು. ಮಾದಕ ದ್ರವ್ಯ ವ್ಯಸನಿಗಳನ್ನು ಅದರಿಂದ ಮುಕ್ತಗೊಳಿಸಲು ವೈಜ್ಞಾನಿಕ ರೀತಿಯ ಕ್ರಮಗಳನ್ನು ಆರಂಭಿಸಲಾಗುವುದು. ಮಾದಕ ದ್ರವ್ಯ ವಿರುದ್ಧ ಆಪರೇಶನ್ ತೂಫಾನ್ ಎಂಬ ಹೆಸರಿನಲ್ಲಿ ನಡೆಯುತ್ತಿರುವ ಕಾರ್ಯಾಚರಣೆಯನ್ನು ಇನ್ನಷ್ಟು ದಕ್ಷಗೊಳಿಸಲು ವಿವಿಧ ಯೋಜನೆಗಳನ್ನು ರೂಪಿಸಲಾಗಿದೆ ಎಂದು ಅವರು ತಿಳಿಸಿದರು.

ಪಿಟ್ ಎನ್‌ಡಿಪಿಎಸ್ ಸೇರಿದಂತೆ ವಿವಿಧ ಸೆಕ್ಷನ್‌ಗಳನ್ನು ಬಳಸಿಕೊಂಡು ಮಾದಕ ದ್ರವ್ಯ ಪೂರೈಕೆದಾರರ ವಿರುದ್ಧ ಕಠಿಣ ಕ್ರಮ ಜರಗಿಸಲಾಗುವುದು.

> ಎಸ್‌ಪಿಸಿಯ ಸೇವೆಯನ್ನು ಬಳಸಿಕೊಳ್ಳಲಾಗುವುದು. ಅಂತಾರಾಷ್ಟ್ರೀಯ ಮಾದಕ ದ್ರವ್ಯ ವಿರೋಧಿ ದಿನವಾದ ಜೂನ್ 26ರಂದು ಜನಪ್ರತಿನಿಧಿಗಳನ್ನು ಒಳಪಡಿಸಿ ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುವುದು. ಮಾದಕದ್ರವ್ಯ ವಿರೋಧಿ ಅಭಿಯಾನದಲ್ಲಿ ಶಾಲಾ ಅಧ್ಯಾಪಕರು, ರಕ್ಷಕ ಶಿಕ್ಷಕ ಸಂಘದವರ ಸಹಕಾರವೂ ಅತೀ ಅಗತ್ಯವಾಗಿದೆ.
>
> ■ **ಪಿ. ನಿತಿನ್‌ರಾಜ್,** ಜಿಲ್ಲಾ ನೂತನ ಪೊಲೀಸ್ ವರಿಷ್ಠಾಧಿಕಾರಿ

ಮಾದಕ ವಸ್ತು ಪತ್ತೆ ಮಾತ್ರವಲ್ಲ ಅದರ ಮೂಲವನ್ನು ಕಂಡುಕೊಂಡು ನಿರ್ಮೂಲನೆಗೊಳಿಸಲಾಗುವುದು. ಮಾದಕ ದ್ರವ್ಯ ವ್ಯಸನವನ್ನು ಎದುರಿಸಲು ಶಾಲೆಗಳಲ್ಲಿ ಸ್ಕೂಲ್ ಪ್ರೊಟೆಕ್ಷನ್ ಗ್ರೂಪ್‌ಗಳನ್ನು ಇನ್ನಷ್ಟು ಬಲಪಡಿಸಲಾಗುವುದು ಎಂದರು.

'ಭಜನಾಮೃತ' ಉದ್ಘಾಟಿಸಿ ಪರ್ಯಾಯ ಶಿರೂರು ಮಠಾಧೀಶ ಶ್ರೀ ವೇದವರ್ಧನ ತೀರ್ಥ ಶ್ರೀಪಾದರು

ಭಜನೆಯಿಂದ ಭಗವಂತ ಸಂತೃಪ್ತನಾಗಲು ಸಾಧ್ಯ



• **ಉಡುಪಿ:** ಪುಣ್ಯಪ್ರದವಾದ ಭಜನೆಯನ್ನು ದೇವರ ಸ್ಮರಣೆಯ ನೆಲೆಯಲ್ಲಿ ಮಾಡಬೇಕೇ ಹೊರತು ಟೈಂಪಾಸ್‌ಗಲ್ಲ. ಕಲಿಯುಗದಲ್ಲಿ ಭಜನೆಯಿಂದ ಭಗವಂತ ಸಂತೃಪ್ತನಾಗಲು ಸಾಧ್ಯ ಎಂದು ಪರ್ಯಾಯ ಶ್ರೀ ಶಿರೂರು ಮಠಾಧೀಶ ಶ್ರೀ ವೇದವರ್ಧನ ತೀರ್ಥ ಶ್ರೀಪಾದರು ಹೇಳಿದ್ದಾರೆ.

ಅವರು ಶ್ರೀಕೃಷ್ಣ ಮಠ, ಪರ್ಯಾಯ ಶ್ರೀ ಶಿರೂರು ಮಠದ ಆಶ್ರಯದಲ್ಲಿ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಭಜನಾ ಪರಿಷತ್ ಉಡುಪಿ ತಾಲೂಕು ಘಟಕದ ಸಹಯೋಗದಲ್ಲಿ ಅಧಿಕ ಮಾಸದ ಅಂಗವಾಗಿ 33 ಭಜನಾ ಕೃತಿಗಳ ಸಾಮೂಹಿಕ ಗೀತ ಗಾಯನ 'ಭಜನಾಮೃತ'ವನ್ನು ಶ್ರೀಕೃಷ್ಣ ಮಠದ ರಾಜಾಂಗಣದಲ್ಲಿ ಉದ್ಘಾಟಿಸಿ ಆಶೀರ್ವಚನ ನೀಡಿದರು. ದೇವರ ಸನ್ನಿಧಾನದಲ್ಲಿ ದೇವರಿಗೆ ಪ್ರಿಯವಾದ ಕೆಲಸ ಮಾಡುವುದು ದೇವರಿಗೆ ತೃಪ್ತಿ ನೀಡುತ್ತದೆ. ಅಧಿಕ ಮಾಸದಲ್ಲಿ ಮಾಡುವ ಭಜನೆಯಿಂದ ಅಧಿಕ ಫಲ ದೊರೆಯಲು ಸಾಧ್ಯ ಎಂದರು.

ಶ್ರೀ ಮಂಜುನಾಥೇಶ್ವರ ಭಜನಾ ಪರಿಷತ್ ಉಡುಪಿ ತಾಲೂಕು ಅಧ್ಯಕ್ಷ ವಿಜಯ ಶೆಟ್ಟಿ ಕೊಂಡಾಡಿ, ಭಜನಾ ಪರಿಷತ್ ರಾಜ್ಯ ಉಪಾಧ್ಯಕ್ಷ ರಾಜೇಂದ್ರ ಕುಮಾರ್ ಬಸ್ರೂರು, ಶ್ರೀ ಕ್ಷೇ.ಧ.ಗ್ರಾ. ಯೋಜನೆಯ ಉಡುಪಿ ತಾಲೂಕು ಯೋಜನಾಧಿಕಾರಿ ಸುರೇಂದ್ರ ನಾಯ್ಕ್, ಭಜನಾ ಪರಿಷತ್ ದ.ಕ. ಜಿಲ್ಲಾ ಸಮನ್ವಯಾಧಿಕಾರಿ ಸಂತೋಷ್ ಪಿ.ಅಳಿಯೂರು, ವಲಯ ಸಂಯೋಜಕರಾದ ಗಣೇಶ್ ಕುಮಾರ್ ಸಂಪಿಗೆನಗರ, ರೂಪಾ ಶ್ರೀ ಸಹಿತ ನೂರಾರು ಸಂಖ್ಯೆಯಲ್ಲಿ ತಾಲೂಕಿನ ವಿವಿಧ ಭಜನಾ ಮಂಡಳಿಗಳ ಸದಸ್ಯರು ಉಪಸ್ಥಿತರಿದ್ದರು.

ಪರಿಷತ್ ಭಜನಾ ತರಬೇತುದಾರೆ ವಿದುಷಿ ಉಷಾ ಹೆಬ್ಬಾರ್, ವಿದ್ವಾನ್ ಮಧೂರು ಬಾಲಸುಬ್ರಹ್ಮಣ್ಯಂ ನೇತೃತ್ವ ದಲ್ಲಿ 33 ಭಜನಾ ಕೃತಿಗಳ ಸಾಮೂಹಿಕ ಗೀತಗಾಯನ 'ಭಜನಾಮೃತ' ನೆರವೇರಿತು.

ಉಡುಪಿ ತಾಲೂಕು ಭಜನಾ ಪರಿಷತ್ ಪ್ರಧಾನ ಕಾಯದರ್ಶಿ ಶಿವಕುಮಾರ್ ಅಂಬಲಪಾಡಿ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

> ದೇವರ ಸನ್ನಿಧಾನದಲ್ಲಿ ದೇವರಿಗೆ ಪ್ರಿಯವಾದ ಕೆಲಸ ಮಾಡುವುದು ದೇವರಿಗೆ ತೃಪ್ತಿ ನೀಡುತ್ತದೆ. ಅಧಿಕ ಮಾಸದಲ್ಲಿ ಮಾಡುವ ಭಜನೆಯಿಂದ ಅಧಿಕ ಫಲ ದೊರೆಯಲು ಸಾಧ್ಯ.
>
> ■ **ಶ್ರೀ ವೇದವರ್ಧನ ತೀರ್ಥ ಶ್ರೀಪಾದರು**

ಕಾರು-ಲಾರಿ ಡಿಕ್ಕಿ: ಶಬರಿಮಲೆ ಯಾತ್ರಿಕ ಅಪಘಾತದಲ್ಲಿ ಸಾವು





• **ಮಡಿಕೇರಿ:** ಶಬರಿಮಲೆ ಯಾತ್ರೆಮುಗಿಸಿ ಹಿಂತಿರುಗುತ್ತಿದ್ದ ವಾಹನ ಅಪಘಾತಕ್ಕೊಳಗಾಗಿ ಓರ್ವ ಸಾವಿಗೀಡಾದ ಘಟನೆ ವೀರಾಜಪೇಟೆ ಸಮೀಪದ ಪೆರುಂಬಾಡಿ- ಮಾಕುಟ್ಟ ಅಂತರಾಜ್ಯ ಹೆದ್ದಾರಿಯಲ್ಲಿ ಸಂಭವಿಸಿದೆ.

ಬೆಂಗಳೂರು ಎಸ್.ಆರ್ ನಗರದ ಡೈರಿ ಸರ್ಕಲ್ ನಿವಾಸಿ ರೋಹಿತ್ (29) ಸಾವಿಗೀಡಾದವರು.

ಬೆಂಗಳೂರು ನಗರದ ಆರ್. ಎಸ್. ನಗರದ ನಾಲ್ವರು ನಿವಾಸಿಗಳು ಶಬರಿಮಲೆ ಯಾತ್ರೆಗಾಗಿ ಜೂ.14ರಂದು ಮಾರುತಿ ಸ್ವಿಫ್ಟ್ ಕಾರಿನಲ್ಲಿ ಶಬರಿಮಲೆಗೆ ತೆರಳಿದ್ದರು. ಯಾತ್ರೆ ಮುಗಿಸಿ ಬುಧವಾರ ಕೇರಳದ ಇರಿಟ್ಟಿ- ಮಾಕುಟ್ಟ ಮಾರ್ಗವಾಗಿ ಬೆಂಗಳೂರಿಗೆ ತೆರಳುತಿದ್ದಾಗ ಚಾಲಕನ ನಿಯಂತ್ರಣ ತಪ್ಪಿದ ಕಾರು, ವೀರಾಜಪೇಟೆಯಲ್ಲಿ ಕೆಂಪು ಕಲ್ಲು ಇಳಿಸಿ ಮರಳುತ್ತಿದ್ದ ಕೊಟುಪೊಳೆ ಮೂಲದ ಮಿನಿ ಲಾರಿಗೆ ಡಿಕ್ಕಿಯಾಗಿದೆ.

ಪರಿಣಾಮವಾಗಿ ಕಾರಿನಲ್ಲಿ ಪ್ರಯಾಣಿಸುತಿದ್ದ ರೋಹಿತ್‌ನ ತಲೆಭಾಗಕ್ಕೆ ಮಾರಣಾಂತಿಕ ಗಾಯವಾಗಿ, ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ. ಉಳಿದ ಮೂವರು ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಗಾಯಾಳುಗಳನ್ನು ವೀರಾಜಪೇಟೆ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಕಾರು ಚಾಲಕ ಶಣ್ಮುಗ ಎಂಬವರು ನೀಡಿದ ದೂರಿನ ಮೇರೆಗೆ ವೀರಾಜಪೇಟೆ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 31° 26°
ಉಡುಪಿ 32° 26°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಶುಕ್ರವಾರ 19, ಜೂನ್ 2026 e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 3

ನನಸಾಗುತ್ತಿದೆ ರೈಲು ನಿಲ್ದಾಣದ ಬಹುಕಾಲದ ಬೇಡಿಕೆ: ಕ್ಯಾ.ಚೌಟ



ಪುಟ 5

ಕೇರಳದಲ್ಲಿ ಎಲ್ಲೆಡೆ 'ಜನಗಣತಿ'ಯ ಉತ್ಸಾಹ

ಬಿಜೆಪಿ ಕುಂಬಳೆ ಪಂಚಾಯತ್ ಸಮಿತಿಯ ನೂತನ ಕಚೇರಿ ಉದ್ಘಾಟನೆ



ಬಿಜೆಪಿ ಕುಂಬಳೆ ಪಂಚಾಯತ್ ಸಮಿತಿಯ ನೂತನ ಕಚೇರಿಯನ್ನು ಗುರುವಾರ ಬಿಜೆಪಿ ಕಾಸರಗೋಡು ಜಿಲ್ಲಾಧ್ಯಕ್ಷೆ ಎಂ.ಎಲ್.ಅಶ್ವಿನಿ ಉದ್ಘಾಟಿಸಿದರು. ಈ ಸಂದರ್ಭ ಜನಸಂಘ ಮತ್ತು ಬಿಜೆಪಿ ಆರಂಭಿಕ ಕಾರ್ಯಕರ್ತರನ್ನು ಗುರುತಿಸಿ ಗೌರವಿಸಲಾಯಿತು. ಬಿಜೆಪಿ ರಾಜ್ಯ ಸಮಿತಿ ಸದಸ್ಯರಾದ ಕೋಳಾರು ಸತೀಶ್ಚಂದ್ರ ಭಂಡಾರಿ, ತುರ್ತು ಪರಿಸ್ಥಿತಿ ಹೋರಾಟಗಾರ ಸುಬ್ಬಯ್ಯ ರೈ ಮತ್ತಿತರರಿದ್ದರು. (ವರದಿ ಪುಟ 5)

ಗೂಡಿಗೆ ನುಗ್ಗಿದ 'ಗೂಂಡಾ'ಗಳು

20 ನಾಟಿ ಕೋಳಿಗಳು ಬೀದಿ ನಾಯಿ ಪಾಲು

ಬಾಳೆಪುಣಿ ಗ್ರಾಮದಲ್ಲಿ ಘಟನೆ

ಕೊಣಾಜೆ: ಮಹಿಳೆಯೊಬ್ಬರು ಜೀವನೋಪಾಯಕ್ಕಾಗಿ ಸಾಕುತ್ತಿದ್ದ ನಾಟಿ ಕೋಳಿಗಳನ್ನು ಬೀದಿ ನಾಯಿಗಳು ಕಚ್ಚಿ ಕೊಂದು ಹಾಕಿದ ಘಟನೆ ಬಾಳೆಪುಣಿ ಗ್ರಾಮ ನವಗ್ರಾಮ ಸೈಟ್‌ನಲ್ಲಿ ನಡೆದಿದೆ.
ಇಲ್ಲಿ ಕಳೆದ ಸುಮಾರು 40 ವರ್ಷದಿಂದ ವಾಸಿಸುತ್ತಿರುವ ಪುಷ್ಪಾವತಿ ಎಂಬುವವರು ಎರಡು ವರ್ಷದ ಹಿಂದೆ ಅನಾರೋಗ್ಯದಿಂದ ತನ್ನ ಗಂಡನನ್ನು ಕಳೆದುಕೊಂಡು ಒಂಟಿ ಮಹಿಳೆಯಾಗಿ ಜೀವನವನ್ನು ನಡೆಸುತ್ತಿದ್ದಾರೆ. ಮಕ್ಕಳು ಸಂಬಂಧಿಕರು ಯಾರು ಇಲ್ಲದೆ ಈ ಒಂಟಿ ಮಹಿಳೆಯು ಜೀವನೋಪಾಯಕ್ಕಾಗಿ ನಾಟಿಕೋಳಿಗಳನ್ನು ಸಾಕಿ ಮಾರಾಟ ಮಾಡುತ್ತಿದ್ದರು. ಅವರು ಕಷ್ಟಪಟ್ಟು ಸಾಕುತ್ತಿದ್ದ 20 ನಾಟಿ ಕೋಳಿಗಳನ್ನು ಬೀದಿ ನಾಯಿಗಳು ಗೂಡಿನ ಒಳಗೆ ನುಗ್ಗಿ ಕೊಂದು ಹಾಕಿದೆ. ಇದರಿಂದಾಗಿ ಸುಮಾರು 15000 ರೂ. ನಷ್ಟವಾಗಿರಬಹುದು ಎಂದು ಅಂದಾಜಿಸಲಾಗಿದೆ. ಬೀದಿ ನಾಯಿಗಳಿಂದ ತನಗಾದ ನಷ್ಟಕ್ಕೆ ಪರಿಹಾರ ಒದಗಿಸಿಕೊಡುವಂತೆ ಗ್ರಾಮ ಆಡಳಿತ, ಇಲಾಖೆಗೆ ಮನವಿ ಮಾಡುತ್ತಿದ್ದಾರೆ.

ಸುತ್ತಮುತ್ತ

ಸೀತಾ ನದಿಗೆ ತ್ಯಾಜ್ಯ ಎಸೆದ ವ್ಯಕ್ತಿಗೆ ಬಿತ್ತು 5000 ರೂ. ದಂಡ!

ಕೋಟ: ಪಾಂಡೇಶ್ವರ ಗ್ರಾಮಪಂಚಾಯತ್ ವ್ಯಾಪ್ತಿಯ ಮಾಬುಕಳ ಸೀತಾ ನದಿಗೆ ತ್ಯಾಜ್ಯ ಎಸೆದ ಪ್ರಕರಕ್ಕೆ ಸಂಬಂಧಿಸಿದಂತೆ ಪಾಂಡೇಶ್ವರ ಪಂಚಾಯತ್ ಕಠಿಣ ಕ್ರಮಗಳನ್ನು ಕೈಗೊಂಡಿದ್ದು ತ್ಯಾಜ್ಯ ಎಸೆದವರಿಗೆ 5000 ರೂ. ದಂಡ ವಿಧಿಸಿ ಪ್ರಕಟಣೆಯಲ್ಲಿ ತಿಳಿಸಿತ್ತು ಆದರೆ ಅದೇ ವ್ಯಾಪ್ತಿಯ ಮಾಬುಕಳ ಸೀತಾ ನದಿಗೆ ಭಾರತಿ ದಿವಾಕರ್ ಎನ್ನುವವರು ಸಾಸ್ತಾನ ರಾಷ್ಟ್ರೀಯ ಹೆದ್ದಾರಿ ಮೂಲಕ ಸಂಚರಿಸುವ ವೇಳೆ ತ್ಯಾಜ್ಯವನ್ನು ನದಿಗೆ ಎಸೆದಿದ್ದಾರೆ. ಇದನ್ನು ಹೆದ್ದಾರಿಯಲ್ಲಿ ಸಂಚರಿಸುತ್ತಿದ್ದ ಇಬ್ಬರು ಪತ್ರಕರ್ತರಾದ ರಾಜೇಶ್ ಗಾಣಿಗ ಅಚ್ಲಾಡಿ ಹಾಗೂ ರವೀಂದ್ರ ಕೋಟ ಕಸ ಎಸೆದವರನ್ನು ಪ್ರಶ್ನಿಸಿದ್ದರು. ಆದರೆ ತ್ಯಾಜ್ಯ ಎಸೆದಾತ ಪತ್ರಕರ್ತರ ಮಾತಿಗೆ ಕಿವಿಗೊಡದೆ ನಿಂದಿಸಿ ಅಲ್ಲಿಂದ ಕಾಲ್ಕಿತ್ತರು.
ಈ ಬಗ್ಗೆ ಪತ್ರಕರ್ತರು ಪಾಂಡೇಶ್ವರ ಗ್ರಾಮ ಪಂಚಾಯತ್‌ಗೆ ವ್ಯಕ್ತಿಯ ವಾಹನ ಹಾಗೂ ಆತನ ಫೋಟೋ ಸಹಿತ ಮಾಹಿತಿ ನೀಡಿದ್ದು ಆಡಳಿತ ಆ ವಿಳಾಸ ಪಡೆದು ನೋಟಿಸ್ ಜಾರಿಗೊಳಿಸಿದ್ದರು. ಇದೀಗ ಆತ ತ್ಯಾಜ್ಯ ಎಸೆದ ಬಗ್ಗೆ ಕ್ಷಮೆ ಕೋರಿ ದಂಡ ಪಾವತಿಸಿದ್ದಾರೆ. ಈ ಬಗ್ಗೆ ಪರಿಸರ ಪ್ರೇಮಿಗಳು ಸ್ಥಳೀಯಾಡಳಿತ ಹಾಗೂ ಪತ್ರಕರ್ತರ ಸಾಮಾಜಿಕ ಬದ್ಧತೆಯನ್ನು ಕೊಂಡಾಡಿದ್ದಾರೆ.

ಕರಾವಳಿ ಈಗ ಸಮುದ್ರದಲ್ಲಿ 'ಮೀನೇ ಇಲ್ಲ' ಸ್ಥಿತಿ

ಬೂತಾಯಿ @ 450!

ಸಂಕಷ್ಟದಲ್ಲಿ ಮೀನುಗಾರರು, ಗ್ರಾಹಕರು

ಮಂಗಳೂರು/ ಉಡುಪಿ: ಕರಾವಳಿಯ ಮೀನು ಮಾರುಕಟ್ಟೆಯಲ್ಲಿ ಮೀನಿನ ಅಭಾವ ತೀವ್ರಗೊಂಡಿದ್ದು, ಗ್ರಾಹಕರು ಮೀನುಗಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ.
ಮುಂಗಾರು ಮಳೆ ಸಂಪೂರ್ಣ ಕುಂಠಿತವಾದ ಬೆನ್ನಿಗೇ ಸಮುದ್ರದಲ್ಲಿ ಮೀನುಗಳ ಸಂತಾನೋತ್ಪತ್ತಿಗೆಪೂರಕವಾದತೂಫಾನ್ ಅಬ್ಬರ ಕಾಣಿಸಿಕೊಳ್ಳದಿರುವುದು ಮೀನಿನ ಕೊರತೆಗೆ ಮುನ್ನುಡಿ ಬರೆದಿದೆ.

ಮೀನುಗಾರಿಕೆಗೆ ನಿರಾಸಕ್ತಿ

ಪ್ರಸ್ತುತ ಯಾಂತ್ರೀಕೃತ ಬೋಟ್ ಮೀನುಗಾರಿಕೆಗೆ ನಿಷೇಧ ಜಾರಿಯಲ್ಲಿದೆ. ಇಂತಹ ಸಂದರ್ಭದಲ್ಲಿಸಾಂಪ್ರದಾಯಿಕ ಬೋಟ್‌ಗಳು ಮೀನುಗಾರಿಕೆಗೆ ಇಳಿಯಬೇಕಿತ್ತು. ಆದರೆ, ಸಮುದ್ರದಲ್ಲಿ ಮೀನುಗಳ ಕೊರತೆ ವಿಪರೀತವಾಗಿರುವ ಹಿನ್ನೆಲೆಯಲ್ಲಿ ಅವರು ಕೂಡಾ ಸಮುದ್ರಕ್ಕಿಳಿಯಲು ಹಿಂದೇಟು ಹಾಕುತ್ತಿದ್ದಾರೆ.

ಕೆಲವೇ ಕೆಲವು ದೋಣಿಗಳು

ಕೆಲವೇ ದೋಣಿಗಳು ಈಗ ಕಡಲಿಗೆ ಮೀನುಗಾರಿಕೆ ನಡೆಸಲು ಹೋಗುತ್ತಿದ್ದರೂ, ಅವರ ಬಲೆಗಳಿಗೆ ಅಗತ್ಯ ಹಾಗೂ ನಿರೀಕ್ಷಿತ ಪ್ರಮಾಣದಲ್ಲಿ ಮೀನುಗಳು ಬೀಳುತ್ತಿಲ್ಲ, ಇದರ ಪರಿಣಾಮ ಸ್ಥಳೀಯ ಮಾರುಕಟ್ಟೆಯಲ್ಲಿ ಮೀನುಗಳ ದರ ಗಗನಕ್ಕೇರಿ ಆತಂಕ ಹುಟ್ಟಿಸುತ್ತಿದೆ.
ಮಳೆಗಾಲದ ಅವಧಿಯಲ್ಲಿಯೇ ಮೀನಿನ ಕೊರತೆ ಇನ್ನಷ್ಟು ತೀವ್ರವಾಗಿರುವುದು ಕರಾವಳಿಯ ಕೃಷಿ ಮತ್ತು ಮೀನುಗಾರಿಕೆ ಎರಡೂ ವಲಯಕ್ಕೆ ಹೊಡೆತ ನೀಡಿದೆ. ಮುಂಬರುವ ದಿನಗಳಲ್ಲಿ ಹವಾಮಾನ ಬದಲಾಗಿ ಮೀನು ಓಡಾಟ ಹೆಚ್ಚಾಗದೆ ಇದ್ದರೆ ಮೀನುಗಾರರ ಜೀವನೋಪಾಯ ಮತ್ತು ಮಾರುಕಟ್ಟೆಯ ಧಾರಣೆ ಸ್ಥಿರತೆ ಮತ್ತಷ್ಟು ಹದಗೆಡುವ ಆತಂಕವಿದೆ.



ಇದೆಲ್ಲ ಯಾಕೆ? ಏನು?

- ಕಡಲಲ್ಲಿ ಈ ಬಾರಿ ಇನ್ನೂ ಕಾಣಿಸಿಕೊಳ್ಳದ ತೂಫಾನ್
- ಕಡಲಿಗಿಳಿದರೂ ಬಲೆಗೆ ಬೀಳುತ್ತಿಲ್ಲ ಭಾರೀ ಮೀನು
- ಎಲ್ಲೆಡೆ ಮೀನುಗಾರಿಕೆಗೆ ಮೀನುಗಾರರ ನಿರಾಸಕ್ತಿ
- ಮಾರುಕಟ್ಟೆಯಲ್ಲಿ ಕಾಡಿದೆ ಮೀನಿನ ಭಾರೀ ಅಭಾವ

ಹೊಟೇಲ್‌ಗಳು, ಮೀನು ಪ್ರಿಯರಿಗೆ ಶಾಕ್

ಸದ್ಯ ಮಾರುಕಟ್ಟೆಯಲ್ಲಿ ಸಿಗುತ್ತಿರುವ ಏಕೈಕ ಮೀನು ಅಂದರೆ ಅದು 'ಬೂತಾಯಿ'. ಲಭ್ಯತೆ ತೀರಾ ಕಡಿಮೆ ಇರುವುದರಿಂದ, ಬೂತಾಯಿ ದರವು ಕಿಲೋ ಒಂದಕ್ಕೆ ಬರೋಬ್ಬರಿ 450 ರೂಪಾಯಿಗೆ ಏರಿಕೆಯಾಗಿದೆ. ಮೀನಿನ ಬೆಲೆ ಸಾಮಾನ್ಯ ಮನುಷ್ಯನ ಕೈಗೆಟುಕದಂತಾಗಿದ್ದು, ಹೊಟೇಲ್‌ಗಳು ಹಾಗೂ ಮೀನು ಪ್ರಿಯರು ತೀವ್ರ ನಿರಾಶೆ ವ್ಯಕ್ತಪಡಿಸುತ್ತಿದ್ದಾರೆ.

ತೂಫಾನ್ ಬಳಿಕವೇ

"ಸದ್ಯ ಕಡಲಿನಲ್ಲಿ ಮೀನುಗಾರಿಕೆ ಪೂರಕ ವಾತಾವರಣ ಇಲ್ಲ. ಜೂ. 24 ರ ನಂತರ ತೂಫಾನ್ ಏಳುವ ನಿರೀಕ್ಷೆ ಇದ್ದು, ಆ ಬಳಿಕವೇ ಸಂದರ್ಭ ನೋಡಿಕೊಂಡು ಮತ್ತೆ ಸಾಂಪ್ರದಾಯಿಕ ಮೀನುಗಾರಿಕೆ ಆರಂಭಿಸುವ ಯೋಚನೆ ಮಾಡಿದ್ದೇವೆ.

- ಸುಂದರ ಪಿ. ಸಾಲ್ಯಾನ್, ನಾಡದೋಣಿ ಮೀನುಗಾರಿಕಾ ಸಂಘದ ಅಧ್ಯಕ್ಷ

ಬಾಟಲಿ, ಪ್ಲಾಸ್ಟಿಕ್, ಆಹಾರ ತ್ಯಾಜ್ಯ

ಕಡಲ ತೀರದಲ್ಲಿ ಎಂಥಾ ಅವಸ್ಥೆ?

ಸ್ಥಳೀಯರಿಗೆ ಆರೋಗ್ಯದ ಚಿಂತೆ

ಉಪ್ಪಳ: ಮಂಗಲ್ಪಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಉಪ್ಪಳ ಸಮೀಪದ ಹನುಮಾನ್ ನಗರ ಸಮುದ್ರ ಕರಾವಳಿ ಪ್ರದೇಶದಲ್ಲಿ ತ್ಯಾಜ್ಯ ರಾಶಿ ತುಂಬಿ ತುಳುಕುತ್ತಿದ್ದು, ಅಪಾರ ಸಮಸ್ಯೆ ಎದುರಾಗಿದೆ. ಇದರಿಂದ ಸ್ಥಳೀಯ ನಿವಾಸಿಗಳಲ್ಲಿ ಆರೋಗ್ಯ ಸಮಸ್ಯೆ ಕಾಡುತ್ತಿದೆ.
ರಾಷ್ಟ್ರೀಯ ಹೆದ್ದಾರಿ ಬದಿ, ಸರ್ವೀಸ್ ರಸ್ತೆಗಳ ಬದಿ ತ್ಯಾಜ್ಯ ರಾಶಿಗಳ ಚಿತ್ರಣ ಕಾಣುತ್ತಿದ್ದವೋ ಇದೀಗ ಸಮುದ್ರ ತೀರದಲ್ಲೂ ತ್ಯಾಜ್ಯ ರಾಶಿ ಹೆಚ್ಚುತ್ತಿರುವುದೂ ಆತಂಕತಂದಿದೆ. ಪ್ರಜ್ಞಾವಂತ ನಾಗರಿಕರೇ ತ್ಯಾಜ್ಯ ಎಸೆಯುತ್ತಿರುವುದು ಕಂಡು ಬಂದಿದೆ. ಮೋಜು ಮಸ್ತಿ ಮಾಡಿ ತಂದ ಬಾಟಲಿ, ತಿಂದ ಆಹಾರ ಪದಾರ್ಥವನ್ನು ಅಲ್ಲೇ ಎಸೆದು ಹೋಗುತ್ತಿದ್ದಾರೆ. ಇದರಿಂದ ಸಮಸ್ಯೆಯೂ ಹೆಚ್ಚುತ್ತಿದೆ.
ಹನುಮಾನ್‌ನಗರ ಪರಿಸರದಲ್ಲಿ ಹಸಿರು ಕ್ರಿಯಾಸೇನೆ ಕಾರ್ಯಕರ್ತೆಯರು ಮಾಲಿನ್ಯ ಸಂಗ್ರಹಿಸಿಡಲು ಪೆಟ್ಟಿಗೆ ಇರಿಸಿದರೂ ಅದಕ್ಕೆ ಕಸ ಹಾಕದೇ ಹೊರಗಡೆಯೇ ಎಸೆಯುತ್ತಿದ್ದಾರೆ. ವಿವಿಧ ಫ್ಲ್ಯಾಟ್‌ಗಳ ತ್ಯಾಜ್ಯ ನೀರನ್ನು ಬಿಡುತ್ತಿದ್ದಾರೆ ಎಂದು ಸ್ಥಳೀಯರು ದೂರಿದ್ದಾರೆ.



ಕ್ರಮ ಕೈಗೊಳ್ಳಲು ನಾಗರಿಕರ ಆಗ್ರಹ

ಸಮುದ್ರ ತೀರಾ ಪ್ರದೇಶದಲ್ಲಿ ತುಂಬಿಕೊಂಡಿರುವ ತ್ಯಾಜ್ಯದಿಂದ ಊರವರಿಗೂ ಹಾಗೂ ಪ್ರವಾಸಿಗರಿಗೂ ಅಪಾರ ಸಮಸ್ಯೆ ತಲೆದೋರಿದೆ. ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ತ್ಯಾಜ್ಯ ಎಸೆಯುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಕರಾವಳಿ ಭಾಗದ ನಿವಾಸಿಗಳು ಒತ್ತಾಯಿಸಿದ್ದಾರೆ.

ಉಳ್ಳೂರು 74 ಗ್ರಾಮದಲ್ಲಿ ಆಘಾತಕಾರಿ ಘಟನೆ | ಹಾವು ಹುಟ್ಟೂರಿಗೆ ರವಾನೆ

ಕಾಡಿಂದ ನಾಡಿಗೆ ಬಂದ ಜಿಂಕೆ ಹೆಬ್ಬಾವಿನ ಹೊಟ್ಟೆ ಸೇರಿತು

ಕುಂದಾಪುರ: ಜಿಂಕೆಯನ್ನು ನುಂಗಿದ ಸ್ಥಿತಿಯಲ್ಲಿ ಭಾರೀ ಗಾತ್ರದ ಹೆಬ್ಬಾವೊಂದು ಗದ್ದೆಯೊಂದರಲ್ಲಿ ಪತ್ತೆಯಾದರೆ, ಪಕ್ಕದಲ್ಲಿ ಇನ್ನೊಂದು ಹೆಬ್ಬಾವು ಮತ್ತೊಂದು ಜಿಂಕೆಯನ್ನುನುಂಗುವ ವೇಳೆ ಪತ್ತೆಯಾದ ವಿಲಕ್ಷಣ ಘಟನೆ ಇಲ್ಲಿನ ಉಳ್ಳೂರು 74 ಗ್ರಾಮದಲ್ಲಿ ಸಂಭವಿಸಿದೆ.

ಎರಡೂ ಜಿಂಕೆಗಳು ಸಾವು

ವಿಪರ್ಯಾಸವೆಂದರೆ ಈ ಘಟನೆಯಲ್ಲಿ ಎರಡೂ ಜಿಂಕೆಗಳು ಕೂಡಾ ಸಾವನ್ನಪ್ಪಿದೆ.
ಉಳ್ಳೂರು 74 ಗ್ರಾಮದ ಗ್ರಾಮ ಅರಣ್ಯ ಸಮಿತಿಯ ಕಾರ್ಯನಿರ್ವಹಣಾ ಸದಸ್ಯ ಚಿಟ್ಟೆ ರಾಜಗೋಪಾಲ ಹೆಗ್ಡೆ ಎಂಬವರ ಗದ್ದೆಯಲ್ಲಿ ಬುಧವಾರ ಸಂಜೆಯ ವೇಳೆಗೆ ಹೆಬ್ಬಾವೊಂದು ಜಿಂಕೆಯನ್ನು ನುಂಗಿದರೆ, ಇನ್ನೊಂದು ಹೆಬ್ಬಾವು ಮತ್ತೊಂದು ಜಿಂಕೆಯನ್ನು ನುಂಗುವ ವೇಳೆ ಅಲ್ಲಿದ್ದ ಜನರ ಕಣ್ಣಿಗೆ ಬಿದ್ದಿದೆ. ಕೂಡಲೇ ಅಲ್ಲಿನ ರೈತರು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಆಗಮಿಸಿದ ಶಂಕರನಾರಾಯಣ ವಲಯದ ಇಲಾಖೆ ಫಾರೆಸ್ಟರ್ ಮಂಜುನಾಥ್ ಹಾಗೂ ಬೀಟ್ ಗಾರ್ಡರ್ ದೇವಾನಂದ್ ಅವರು ಸ್ಥಳಕ್ಕೆ ಆಗಮಿಸಿ, ಆ ಹೆಬ್ಬಾವಿನಿಂದ ಜಿಂಕೆಯನ್ನು ರಕ್ಷಣೆ ಮಾಡಲು ಸತತವಾಗಿ ಪ್ರಯತ್ನಿಸಿದರೂ, ಅದು ಸಾವನ್ನಪ್ಪಿದೆ.



ಕಾಡಿನತ್ತ ಜಿಂಕೆ 'ಹಂತಕ'ನ ಪಯಣ

ಜಿಂಕೆಯನ್ನು ನುಂಗಿದ ಹೆಬ್ಬಾವನ್ನು ಸುರಕ್ಷಿತವಾಗಿ ಹಿಡಿದು, ಸ್ಥಳೀಯ ರಿಕ್ಷಾ ಚಾಲಕ- ಮಾಲಕರ ಸಂಘದ ಅಧ್ಯಕ್ಷ ಕೃಷ್ಣಮೂರ್ತಿ ಹಾಗೂ ಸ್ಥಳೀಯರ ನೆರವಿನಿಂದ ಮತ್ತೆ ಕಾಡಿಗೆ ಬಿಡಲಾಗಿದೆ.

ಬಂಟ್ವಾಳದಲ್ಲಿ ಗಾಳಿ-ಮಳೆಗೆ ಗೋಡೆ ಕುಸಿತ



ಬಂಟ್ವಾಳ ತಾಲೂಕಿನಲ್ಲಿ ಮಳೆ ಹಾನಿ ಮುಂದುವರಿದಿದೆ. ಬಡಗಬೆಳ್ಳೂರು ಗ್ರಾಮದ ವಾರಟೆಲ್ ಎಂಬಲ್ಲಿ ಹಸನಬ್ಬ ಎಂಬವರ ಮನೆಯ ಗೋಡೆ ಕುಸಿದು ಬಿದ್ದಿದ್ದರೆ, ಕಸಬಾ ಗ್ರಾಮದ ಅಗ್ರಹಾರ ಎಂಬಲ್ಲಿ ರಾಬರ್ಟ್ ರೊಡ್ರಿಗಸ್ ಎಂಬವರ ದನದ ಹಟ್ಟಿಯಲ್ಲಿ ಬೆಂಕಿ ತಗಲಿ ಮೇಲ್ಛಾವಣಿ ಕುಸಿದಿದೆ.

ಇದು ಪಚ್ಚಿನಡ್ಕ-ನೋರ್ಣಡ್ಕ ರಸ್ತೆಯ ಕಥೆ | ಕೇಳುವವರಿಲ್ಲ ಸಂಚಾರ ಯಾತನೆ ಅನುಭವಿಸುವ ಸ್ಥಳೀಯರ ವ್ಯಥೆ

300 ಮೀಟರ್‌ನ ಈ ರಸ್ತೆಯಲ್ಲಿ ನಿತ್ಯ ಡಾಮರಿಗಾಗಿ ಶೋಧ!



ಸಂಗಮ ವಿಶೇಷ

ಬಂಟ್ವಾಳ: ರಸ್ತೆ ಜನರ ಜೀವನಾಡಿಯಾಗಿದ್ದು ತಾಲೂಕಿನ ಅಮ್ಟಾಡಿ ಗ್ರಾಮದ ಪಚ್ಚಿನಡ್ಕ-ನೋರ್ಣಡ್ಕ ರಸ್ತೆಯ ಸ್ಥಿತಿ ನೋಡಿದರೆ ಅದು ರಸ್ತೆಯೇ ಅಥವಾ ಕೆಸರುಗುಂಡಿಯೇ ಎಂಬ ಅನುಮಾನ ಉಂಟಾಗುತ್ತಿದೆ.
ಸುಮಾರು 300 ಮೀ. ಉದ್ದದ ಈ ರಸ್ತೆಯಲ್ಲಿ ಡಾಮರು ಸಂಪೂರ್ಣ ಕಿತ್ತು ಹೋಗಿದ್ದು, ಇಲ್ಲಿ ಸಂಚಾರ ಅಸಾಧ್ಯ ಎಂಬಂತಾಗಿದೆ.

ಸುಲಭ ಸಂಪರ್ಕ ಮಾರ್ಗವಾಗಿತ್ತು

ಒಂದು ಕಾಲದಲ್ಲಿ ಪಚ್ಚಿನಡ್ಕದಿಂದ ಕೆಂಪುಗುಡ್ಡೆ, ಅಜೆಕಲ ಹಾಗೂ ಬಂಟ್ವಾಳ ಬೈಪಾಸ್‌ಗೆ ಸಂಪರ್ಕ ಕಲ್ಪಿಸುವ ಸುಲಭ ಮಾರ್ಗವಾಗಿದ್ದ ಈ ರಸ್ತೆ ಈಗ ಮಣ್ಣು, ಕೆಸರು ಆವರಿಸಿ ಸಾರ್ವಜನಿಕರು ನರಕಯಾತನೆ ಪಡುವಂತಾಗಿದೆ. ಈ ರಸ್ತೆಯಲ್ಲಿ ಸಂಚರಿಸುವ ದ್ವಿಚಕ್ರ ವಾಹನ ಸವಾರರು ಭಯದಲ್ಲೇ ಸಂಚರಿಸುತ್ತಿದ್ದರೆ, ಮಳೆಗಾಲದಲ್ಲಿ ರಸ್ತೆಯ ಸ್ಥಿತಿ ಮತ್ತಷ್ಟು ಹದಗೆಟ್ಟು ವಾಹನಗಳ ಸಂಚಾರವೇ ದುಸ್ತರವಾಗುತ್ತದೆ. ಹಲವರು ತಮ್ಮ ವಾಹನಗಳನ್ನು ಮಧ್ಯದಲ್ಲೇ ನಿಲ್ಲಿಸಿ, ಪರ್ಯಾಯ ಮಾರ್ಗವನ್ನು ಹುಡುಕುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ರಸ್ತೆಯನ್ನೇ ಅವಲಂಬಿಸಿರುವ ನೂರಾರು ಜನರು ಸಂಕಷ್ಟ ಅನುಭವಿಸುತ್ತಿವೆ. ಶಾಲಾ-ಕಾಲೇಜು ವಿದ್ಯಾರ್ಥಿಗಳು, ಉದ್ಯೋಗಿಗಳು, ಹಿರಿಯ ನಾಗರಿಕರು, ಮಹಿಳೆಯರು ತಮ್ಮ ದೈನಂದಿನ ಸಂಚಾರಕ್ಕೆ ಪರದಾಡುತ್ತಿದ್ದಾರೆ. »» ಪುಟ 6

ಎಲ್ಲೆಡೆ ವೈರಲ್ ಆಗುತ್ತಿದೆ 'ಎಚ್ಚರಿಕೆ'ಯ ಪೋಸ್ಟರ್!

'ಪಚ್ಚಿನಡ್ಕ-ನೋರ್ಣಡ್ಕ ರಸ್ತೆಯಲ್ಲೊಂದು ಕೆಸರ್‌ಡೊಂಜಿ ದಿನ' ಎಂಬ ಕಾಲ್ಪನಿಕ ಕಾರ್ಯಕ್ರಮದ ಪೋಸ್ಟರ್ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದು, ಜನರ ಅಸಹಾಯಕತೆಯನ್ನೂ ಆಡಳಿತದ ನಿರ್ಲಕ್ಷ್ಯವನ್ನೂ ಬಿಂಬಿಸಿದೆ. ಜೊತೆಗೆ 'ಅತೀ ಕೆಟ್ಟ ರಸ್ತೆ, ಸಾರ್ವಜನಿಕರು ಎಚ್ಚರಿಕೆಯಿಂದ ಸಂಚರಿಸಿ, ಪ್ರಯಾಣಿಕರ ಜೀವಕ್ಕೆ ಅಪಾಯ' ಎಂಬ ಎಚ್ಚರಿಕೆ ಫಲಕಗಳ ಚಿತ್ರಗಳೂ ಕೂಡಾ ಎಲ್ಲೆಡೆ ವ್ಯಾಪಕವಾಗಿ ಹರಿದಾಡುತ್ತಿವೆ.

ಒಂದೆರಡು ಮಳೆ ಬಿದ್ದರೆ ಇಲ್ಲಿನ ಪರಿಸ್ಥಿತಿ ಭಗವಂತನಿಗೇ ಪ್ರಿಯ

ಜಾರಿಬೀಳುವ ಭಯ ಕಾಡುತ್ತಿದೆ

"ರಸ್ತೆ ಸಂಪೂರ್ಣ ಹದಗೆಟ್ಟಿದ್ದರಿಂದ ದ್ವಿಚಕ್ರ ವಾಹನದಲ್ಲಿ ಹೋಗುವಾಗ ಯಾವ ಕ್ಷಣದಲ್ಲಿ ಜಾರಿಬೀಳುತ್ತೇವೋ ಎಂಬ ಭಯ ಕಾಡುತ್ತದೆ. ಮಳೆಗಾಲದಲ್ಲಿ ಪರಿಸ್ಥಿತಿ ಇನ್ನೂ ಹದಗೆಡುವ ಸಾಧ್ಯತೆ ಇದೆ. ಇದಕ್ಕೆ ಶಾಶ್ವತ ಪರಿಹಾರ ನೀಡಬೇಕು.

- ದಿನೇಶ್, ಸ್ಥಳೀಯ ನಿವಾಸಿ

ದೇವರ, ದೈವ ಸಾನಿಧ್ಯಗಳು ಹಿಂದುತ್ವದ ಅಸ್ಮಿತೆ ತಿಳಿಸುತ್ತದೆ: ಎಡನೀರು ಶ್ರೀ 2
ಮುಳ್ಳಿ ಸಮುದಾಯ ಆ. ಕೇಂದ್ರದಲ್ಲಿ ಆ್ಯಂಬುಲೆನ್ಸ್ ಇಲ್ಲದೆ ಪರದಾಟ 4
ಪಾರದರ್ಶಕವಾಗಿ ಪರೀಕ್ಷೆ ನಡೆಸಲು ಎಲ್ಲಾ ಸಿದ್ಧತೆಗಳ ನಡೆಸಿ: ಉಡುಪಿ ಡೀಸಿ 6

ಸುತ್ತಮುತ್ತ



ಉಳ್ಳಾಲ ತಾಲೂಕಿನ ಕುಂಪಲ ಶಿವಪುರದ ಶ್ರೀ ದುರ್ಗಾಪರಮೇಶ್ವರಿ ಕ್ಷೇತ್ರದಲ್ಲಿ ಶ್ರೀ ಅನಂತ ಪದ್ಮನಾಭ ದೇವರ ಪ್ರತಿಷ್ಠೆಯು ಬುಧವಾರ ನಡೆಯಿತು.

ಯೂಸ್ಡ್ ವೆಹಿಕಲ್ ಡೀಲರ್ಸ್ ಆ್ಯಂಡ್ ಏಜೆಂಟ್ಸ್ ಸಂಘಟನೆ ಸಭೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲಾ ಯೂಸ್ಡ್ ವೆಹಿಕಲ್ ಡೀಲರ್ಸ್ ಆ್ಯಂಡ್ ಏಜೆಂಟ್ಸ್ ಎಸೋಸಿಯೇಶನ್ ಮಂಗಳೂರು ಇದರ 23ನೇ ಮಹಾ ಸಭೆಯನ್ನು ಭಾನುವಾರ ಮರಿಯ ಜಯಂತಿ ಹಾಲ್ ಜೆಪ್ಪು ಸೆಮಿನರಿ ಇಲ್ಲಿ ಸಂಘದ ಅಧ್ಯಕ್ಷ ಜಯರಾಜ್ ಕೋಟ್ಯಾನ್ ಅಧ್ಯಕ್ಷತೆಯಲ್ಲಿ ಜರಗಿತು. ಗೌರವಾಧ್ಯಕ್ಷ ಬಿ. ಅಶೋಕ್ ಕುಮಾರ್ ಶೆಟ್ಟಿ ದೀಪ ಬೆಳಗಿಸಿದರು. ಕಾರ್ಯದರ್ಶಿ ಮುನೀರ್ ಅಹಮ್ಮದ್ ವರದಿಯನ್ನು ಮಂಡಿಸಿದರು. ಲೆಕ್ಕ ಪತ್ರವನ್ನು ಕೋಶಾಧಿಕಾರಿ ಹರ್ಷವರ್ಧನ ಶೇಟ್ ಮಂಡಿಸಿದರು. ಹಾಗೂ ಎಸ್ಸೆಲ್ಸಿ ಹಾಗೂ ಪಿಯುಸಿ ಯಲ್ಲಿ ಶೇ. 85%ಕ್ಕಿಂತ ಹೆಚ್ಚು ಅಂಕ ಗಳಿಸಿದ ಸಂಘದ ಸದಸ್ಯರ ಮಕ್ಕಳನ್ನು ಸನ್ಮಾನಿಸಲಾಯಿತು. ವೇದಿಕೆಯಲ್ಲಿ ಉಪಾಧ್ಯಕ್ಷರಾದ ಕಿಶೋರ್ ಕುಮಾರ್, ಜೊತೆ ಕಾರ್ಯದರ್ಶಿಯಾಗಿ ಅಬ್ದುಲ್ ಸಲಾಮ್. ಸಂಘಟನಾ ಕಾರ್ಯದರ್ಶಿಯಾಗಿ ದಿನೇಶ್ ಕುಮಾರ್, ಸಾಂಸ್ಕೃತಿಕ ಹಾಗೂ ಕ್ರೀಡಾ ಕಾರ್ಯದರ್ಶಿಯಾಗಿ ಇಬ್ರಾಹಿಂ ಖಲೀಲ್ ಇವರು ಉಪಸ್ಥಿತರಿದ್ದರು. ಮೊಹಮ್ಮದ್ ರಝಾಕ್ ನಿರೂಪಿಸಿದರು.ಮಾಧವ ಬಂಗೇರ ಪ್ರಾರ್ಥಿಸಿದರು.

ಆಲಂಕಾರು ವಲಯ ಭಜನಾ ಪರಿಷತ್ ಅಧ್ಯಕ್ಷರಾಗಿ ಆಯ್ಕೆ

ಕಡಬ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಆಲಂಕಾರು ವಲಯ ಭಜನಾ ಪರಿಷತ್‌ನ ನೂತನ ಅಧ್ಯಕ್ಷರಾಗಿ ಕುಂತೂರು ಪದವು ರಾಮಡ್ಕ ಶ್ರೀ ದುರ್ಗಾಪರಮೇಶ್ವರಿ ಸೇವಾ ಟ್ರಸ್ಟ್ ಅಧ್ಯಕ್ಷ ಹರೀಶ್ ಮುಂಡಾಳ ಆಯ್ಕೆಯಾಗಿದ್ದಾರೆ.



ಕುಂತೂರು ಶ್ರೀ ಶಾರದಾ ಭಜನಾ ಮಂದಿರದಲ್ಲಿ ಭಜನಾ ಪರಿಷತ್‌ನ ಕಡಬ ತಾಲೂಕು ಅಧ್ಯಕ್ಷ ಸುಂದರ ಗೌಡ ಒಗ್ಗು ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಆಯ್ಕೆ ನಡೆದಿದೆ. ಉಪಾಧ್ಯಕ್ಷರಾಗಿ ಚಂದ್ರಶೇಖರ್ ಗೌಡ, ಕಾರ್ಯದರ್ಶಿಯಾಗಿ ಸರೋಜಾ ಮಾಯಲ್ಗ, ಕೋಶಾಧಿಕಾರಿಯಾಗಿ ಉಮೇಶ್ ಗೌಡ ಆಯ್ಕೆಯಾದರು. ಶಾರದಾ ಭಜನಾ ಮಂಡಳಿ ಗೌರವಾಧ್ಯಕ್ಷ ನಾಗಪ್ಪ ಗೌಡ, ವಲಯ ಮೇಲ್ವಿಚಾರಕಿ ಲತಾ ಇದ್ದರು. ಪ್ರೇಮಾವತಿ ಸ್ವಾಗತಿಸಿ, ಕವಿತಾ ವಂದಿಸಿದರು. ಸವಿತಾ, ರೇಖಾ ನಿರ್ವಹಿಸಿದರು.

ಶ್ರೀ ರಾಮಕೃಷ್ಣ ಪ್ರೌಢಶಾಲಾ ಮಂತ್ರಿ ಮಂಡಲ ರಚನೆ



ಪುತ್ತೂರು: 2026-27ನೇ ಸಾಲಿನ ಶೈಕ್ಷಣಿಕ ವರ್ಷದ ಶಾಲಾ ಮಂತ್ರಿ ಮಂಡಲವನ್ನು ರಚಿಸಲಾಯಿತು. ವಿದ್ಯಾರ್ಥಿ ನಾಯಕನಾಗಿ 10ನೇ ತರಗತಿಯ ತೇಜಸ್ವಿ, ಉಪನಾಯಕನಾಗಿ 9ನೇ ತರಗತಿಯ ಸಾತ್ವಿಕ್ ಪಿ.ಎಂ ಆಯ್ಕೆಯಾದರು. ಸಭಾಧ್ಯಕ್ಷರಾಗಿ ದ್ರಿಶಾ, ಗೃಹ ಮಂತ್ರಿಗಳಾಗಿ ಹರ್ಷಿತ್ ಹಾಗೂ ಶ್ರಾವ್ಯಾ ಎಸ್., ಉಪ ಗೃಹ ಮಂತ್ರಿಗಳಾಗಿ ಪ್ರಾಯಶ್ ಮತ್ತು ಪ್ರತೀನ್, ಶಿಕ್ಷಣ ಮಂತ್ರಿಗಳಾಗಿ ಗಗನ್ ಹಾಗೂ ಮನುಶ್ರೀ, ಉಪ ಶಿಕ್ಷಣ ಮಂತ್ರಿಗಳಾಗಿ ಆಶ್ಲೇಷ್‌ಕುಮಾರ್ ಮತ್ತು ರಿಶಿತ್, ನೀರಾವರಿ ಮಂತ್ರಿಯಾಗಿ ಹರ್ಷತ್, ಉಪ ನೀರಾವರಿಮಂತ್ರಿಗಳಾಗಿ ತರುಣ್ ಮತ್ತು ಸಾಯಿಪ್ರಣಾಮ್,ಸ್ವಚ್ಛತಾ ಮಂತ್ರಿಗಳಾಗಿ ಅಭಿಷೇಕ್ ಪ್ರಭು ಮತ್ತು ಪುಣ್ಯಶ್ರೀ, ಉಪ ಸ್ವಚ್ಛತಾ ಮಂತ್ರಿಗಳಾಗಿ ಸಿಂಚನಾ ಎ. ಗೌಡ, ಧನ್ವಿತ್ ಮತ್ತು ಕೌಶಿಕ್, ಸಾಂಸ್ಕೃತಿಕ ಮಂತ್ರಿಯಾಗಿ ಬೃಂದಾ ಆರ್. ಕೆ., ಉಪ ಸಾಂಸ್ಕೃತಿಕಮಂತ್ರಿಗಳಾಗಿ ದೀಕ್ಷಿಷ್ ಮತ್ತು ಅನ್ವಿತಾ, ಆಹಾರ ಮಂತ್ರಿಗಳಾಗಿ ಶಶಾಂಕ್, ಯಜ್ಞ ಮತ್ತು ಜಯರಾಜ್, ಉಪ ಆಹಾರ ಮಂತ್ರಿಗಳಾಗಿ ಅನೀಶ್ ಮತ್ತು ಹಂಸಿನಿ, ಹರ್ಷಿತ್, ಸಹಕಾರ ಮಂತ್ರಿಗಳಾಗಿ ಉಪಜ್ಞಾ ಮತ್ತು ಅನ್ವಿತಾ, ಕೃಷಿ ಮಂತ್ರಿಯಾಗಿ ವರುಣ್, ಉಪ ಕೃಷಿ ಮಂತ್ರಿಗಳಾಗಿ ರಿಧಿ ಮತ್ತು ಚೈತನ್ಯ, ಕ್ರೀಡಾ ಮಂತ್ರಿಗಳಾಗಿ ಶೇಕ್ ಮೊಹಮ್ಮದ್‌ಮುಸ್ತಾಫ ಮತ್ತು ವೈಷ್ಣವಿ, ಉಪಕ್ರೀಡಾ ಮಂತ್ರಿಯಾಗಿ ಚಿಂತನ್ ದೇವಾಡಿಗ, ಬ್ಯಾಂಕಿಂಗ್ ಮಂತ್ರಿಯಾಗಿ ಧನ್ವಿ ಎಸ್., ಉಪ ಬ್ಯಾಂಕಿಂಗ್ ಮಂತ್ರಿಯಾಗಿ 8ನೇ ತರಗತಿಯ ನಿಧಿ ಜೆ, ವಾರ್ತಾ ಮಂತ್ರಿಯಾಗಿ 9ನೇ ತರಗತಿಯ ಚರಣ್, ಉಪ ವಾರ್ತಾಮಂತ್ರಿಯಾಗಿ 8ನೇ ತರಗತಿಯ ಪ್ರಣವ ಪದ್ಮನಾಭ ಆಯ್ಕೆಯಾದರು. ಶಾಲಾ ಪ್ರಭಾರ ಮುಖ್ಯೋಪಾಧ್ಯಾಯರಾದ ಗಾಯತ್ರಿ ಎಸ್. ನೇತೃತ್ವದಲ್ಲಿ ಜರುಗಿದ ಶಾಲಾ ಚುನಾವಣೆಯಲ್ಲಿ ಚುನಾವಣಾಧಿಕಾರಿಗಳಾಗಿ ಸಹ ಶಿಕ್ಷಕಿಯರಾದ ಸಂಧ್ಯಾ ಕೆ., ಸುಚಿತ್ರ ಕೆ. ಬಿ., ತುಳಸಿ ಮತ್ತು ಇತರ ಶಿಕ್ಷಕಿಯರು ಹಾಗೂ ಶಿಕ್ಷಕೇತರ ವೃಂದದವರು ಸಹಕರಿಸಿದರು.

ಮುಂದಿನ ವರ್ಷದಿಂದಲೇ ಪುತ್ತೂರು ಮೆಡಿಕಲ್ ಕಾಲೇಜು ಆರಂಭ | ಅಧಿಕಾರಿಗಳ ಜೊತೆ ಶಾಸಕ ರೈ ಸಭೆ

ಖಾಲಿಯಿರುವ ತಾತ್ಕಾಲಿಕ ಕಟ್ಟಡಗಳನ್ನು ಗುರುತಿಸಲು ಸೂಚನೆ



ಪುತ್ತೂರು: ಪುತ್ತೂರಿನಲ್ಲಿ ನಿರ್ಮಾಣಗೊಳ್ಳಲಿರುವ ಸರಕಾರಿ ಆಸ್ಪತ್ರೆ, ಮೆಡಿಕಲ್ ಕಾಲೇಜಿಗೆ ಎಲ್ಲ ಮೂಲ ಸೌಕರ್ಯಗಳನ್ನು ಒದಗಿಸಲು ಸಂಬಂಧಪಟ್ಟ ಇಲಾಖೆಗಳ ಜತೆ ಶಾಸಕ ಅಶೋಕ್ ರೈ ಸಮನ್ವಯ ಸಭೆ ನಡೆಸಿದರು.

ಶಾಸಕರ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಪುತ್ತೂರು ವೈದ್ಯಕೀಯ ಕಾಲೇಜು ನೋಡೆಲ್ ಅಧಿಕಾರಿಯಾಗಿರುವ, ರಾಜೀವ್ ಗಾಂಧಿ ಆರೋಗ್ಯ ವಿವಿ ನಿರ್ದೇಶಕ ಲೋಹಿತ್ ಉಪಸ್ಥಿತರಿದ್ದರು.

ಕಟಾರದಿಂದ ನೀರು ಪೂರೈಕೆ

320 ಹಾಸಿಗೆಗಳ ಮೆಡಿಕಲ್ ಕಾಲೇಜು ಆಸ್ಪತ್ರೆ, ಮೆಡಿಕಲ್ ಕಾಲೇಜು, 500 ಸಾಮರ್ಥ್ಯದ ವಿದ್ಯಾರ್ಥಿ ಹಾಸ್ಟೆಲ್, 500 ಸಾಮರ್ಥ್ಯದ ವಿದ್ಯಾರ್ಥಿನಿಯರ ಹಾಸ್ಟೆಲ್, ಬೋಧಕ ಸಿಬ್ಬಂದಿ ವಸತಿ ನಿಲಯಗಳು ನಿರ್ಮಾಣಗೊಳ್ಳಲಿದ್ದು, ಇದಕ್ಕೆ ಬೇಕಾದ ನೀರು ಪೂರೈಕೆ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಪುತ್ತೂರು ನಗರಕ್ಕೆ ನೀರು ಪೂರೈಸುತ್ತಿರುವ ಜಲಸಿರಿ ಯೋಜನೆಯಲ್ಲಿ ನೀರಿನ ಲಭ್ಯತೆಯ ಬಗ್ಗೆ ಪರಿಶೀಲಿಸಲು ಸೂಚಿಸಲಾಯಿತು. ಶಾಸಕರು ಮಾತನಾಡಿ, ಪುತ್ತೂರು- ಉಪ್ಪಿನಂಗಡಿ ನಡುವಿನ ಕಟಾರದಲ್ಲಿ ಕುಮಾರಧಾರಾ ನದಿಗೆ ಕಿಂಡಿ ಅಣೆಕಟ್ಟು ನಿರ್ಮಾಣವಾಗಲಿದ್ದು, ಬಳಿಕ ಅಲ್ಲಿಂದ ನೀರು ಪೂರೈಸಲು ಸಾಧ್ಯವಿದೆ ಎಂದರು.

ಹೊಸ ಎಕ್ಸ್‌ಪ್ರೆಸ್ ಫೀಡರ್ ಸ್ಥಾಪನೆ

ಮೆಡಿಕಲ್ ಕಾಲೇಜ್, ಆಸ್ಪತ್ರೆ, ಹಾಸ್ಟೆಲ್, ವಸತಿ ನಿಲಯಗಳಿಗೆ ನಿರಂತರ ವಿದ್ಯುತ್ ಪೂರೈಕೆ ಮಾಡುವ ಬಗ್ಗೆ ಚರ್ಚೆ ನಡೆಸಲಾಯಿತು. ಹೊಸದಾಗಿ ಎಕ್ಸ್‌ಪ್ರೆಸ್ ಫೀಡರ್ ಸ್ಥಾಪನೆ ಸಂಬಂಧ ಮೆಸ್ಕಾಂಗೆ ಸೂಚನೆ ನೀಡಲಾಯಿತು.

ಆಪ್ಟಿಕ್ ಫೈಬರ್ ಕೇಬಲ್ ಲೈನ್ ಅಳವಡಿಸುವ ವಿಚಾರದಲ್ಲಿ ಬಿಎಸ್ಸೆನ್ನೆಲ್ ಸಂಸ್ಥೆಗೆ ಬರೆಯಲು ನಿರ್ಧರಿಸಲಾಯಿತು. ನ್ಯಾಶನಲ್ ಮೆಡಿಕಲ್ ಕಮಿಶನ್ ಮಾನದಂಡಗಳ ಪ್ರಕಾರ ಹಾಲಿ ತಾಲೂಕು ಸರಕಾರಿ ಆಸ್ಪತ್ರೆಯನ್ನು ನವೀಕರಿಸಲು, ಆಸ್ಪತ್ರೆಯಲ್ಲಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಉದ್ದೇಶಿಸಲಾಗಿದೆ. ತಾಲೂಕಿನಲ್ಲಿ 1 ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಒಂದು ನಗರ ಆರೋಗ್ಯ ಕೇಂದ್ರವನ್ನು ಪ್ರತ್ಯೇಕವಾಗಿ ಗುರುತಿಸಲಾಗುತ್ತದೆ ಎಂದು ತಿಳಿಸಲಾಯಿತು.

ಪುತ್ತೂರು ವೈದ್ಯಕೀಯ ವಿದ್ಯಾಲಯ ಕಟ್ಟಡ ಸಮುಚ್ಚಯ ನಿರ್ಮಾಣ ಕಾಮಗಾರಿ ಪೂರ್ಣಗೊಳ್ಳುವ ಮೊದಲೇ ಮುಂದಿನ ವರ್ಷದಿಂದ ಮೆಡಿಕಲ್ ಕಾಲೇಜು ಆರಂಭಿಸಲು ಅನುಕೂಲವಾಗುವಂತೆ ಖಾಲಿ ಇರುವ ಸರಕಾರಿ ಕಟ್ಟಡಗಳನ್ನು ಗುರುತಿಸಲು ಸಭೆಯಲ್ಲಿ ಶಾಸಕರು ಸೂಚಿಸಿದರು. ಕಟ್ಟಡ ಪೂರ್ಣಗೊಳ್ಳುವವರೆಗೆ ತಾತ್ಕಾಲಿಕ ನೆಲೆಯಲ್ಲಿ ಖಾಲಿ ಸರಕಾರಿ ಕಟ್ಟಡಗಳನ್ನು ಬಳಸಲು ನಿರ್ಧರಿಸಲಾಯಿತು.

ಸಭೆಯಲ್ಲಿ ತಾಲೂಕು ಆರೋಗ್ಯಾಧಿಕಾರಿ ಡಾ. ದೀಪಕ್ ರೈ, ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ರಾಜೇಶ್ ರೈ, ವಲಯ ಅರಣ್ಯ ಅಧಿಕಾರಿ ಕಿರಣ್ ಬಿ.ಎಂ., ಮೆಸ್ಕಾಂ ಪುತ್ತೂರು ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ರಾಮಚಂದ್ರ ಎ., ನಗರ ಯೋಜನಾ ಪ್ರಾಧಿಕಾರದ ಸದಸ್ಯ ನಿಹಾಲ್ ಶೆಟ್ಟಿ ಜಲಸಿರಿ ಯೋಜನೆ ಅಧಿಕಾರಿಗಳು ಉಪಸ್ಥಿತರಿದ್ದರು.

ಅಗತ್ಯವಿರುವಷ್ಟೇ ಮರ ಕತ್ತರಿಸಿ, ಕಾಡು ಉಳಿಸಿ

ಆಸ್ಪತ್ರೆ ಹಾಗೂ ವೈದ್ಯಕೀಯ ಕಾಲೇಜು ನಿರ್ಮಾಣವಾಗಲಿರುವ ಸೇಡಿಯಾಪುವಿನ 40 ಎಕರೆ ಜಾಗದಲ್ಲಿ ಅರಣ್ಯ ಜಮೀನು ಕೂಡ ಇರುವ ಕಾರಣ ಮರಗಳ ತೆರವು ವಿಚಾರದಲ್ಲಿ ಚರ್ಚೆ ನಡೆಯಿತು. ಅಗತ್ಯವಿರುವಷ್ಟು ಮರಗಳನ್ನಷ್ಟೇ ಕತ್ತರಿಸಬೇಕು. ಉಳಿದ ಕಾಡು ಹಾಗೇ ಇರಲಿ ಎಂದು ಶಾಸಕರು ತಿಳಿಸಿದರು.

ಅಂಬಿಕಾ ಕಾಲೇಜಿನಲ್ಲಿ ಪ್ರೇರಣಾ ಕಾರ್ಯಾಗಾರ | ಡಾ.ನರಸಿಂಹಮೂರ್ತಿ ಆಶಯ

ಶಿಕ್ಷಣ ಬದುಕನ್ನು ರೂಪಿಸುವ ಮಾಧ್ಯಮ



ಪುತ್ತೂರು: ಶಿಕ್ಷಣ ನಮ್ಮ ಬದುಕನ್ನು ರೂಪಿಸುವ ಮಾಧ್ಯಮವಾಗಿದೆ. ಪ್ರತಿಯೊಬ್ಬ ವಿದ್ಯಾರ್ಥಿಯಲ್ಲೂ ತನ್ನದೇ ಆದ ಕಲಿಕೆಯ ಸಾಮರ್ಥ್ಯ ಇದೆ. ಹುಟ್ಟುತ್ತಾ ಮಕ್ಕಳಾಗಿ, ಬೆಳೆಯುತ್ತಾ ಈ ದೇಶದ ಪ್ರಜೆಗಳಾಗಿ ರೂಪುಗೊಳ್ಳುವಲ್ಲಿ ಕಲಿಕೆಯ ಪಾತ್ರ ದೊಡ್ಡದು. ವಿದ್ಯಾರ್ಥಿಗಳು ಈ ದೇಶದ ನಿಜವಾದ ಶಕ್ತಿ ಎಂದು ದಿಲ್ಲಿಯ ಜವಾಹರಲಾಲ್ ನೆಹರು ವಿವಿ ಭಾರತೀಯ ವಿದೇಶಾಂಗ ವ್ಯವಹಾರಗಳ ವಿಭಾಗದ ಪ್ರಾಧ್ಯಾಪಕ ಡಾ. ನರಸಿಂಹ ಮೂರ್ತಿ ಹೇಳಿದರು.

ಅವರು ನಗರದ ನೆಲ್ಲಿಕಟ್ಟೆ ಅಂಬಿಕಾ ಪದವಿ ಪೂರ್ವ ವಿದ್ಯಾಲಯದ ಪ್ರಥಮ ಪಿಯುಸಿ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಆಯೋಜಿಸಲಾದ ಪ್ರೇರಣಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಪಿಯುಸಿ ಎಂಬುದು ವಿದ್ಯಾರ್ಥಿಗಳು ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವ ಸಮಯ. ಈ ಹಂತದಲ್ಲಿ ಸರಿಯಾದ ಮಾರ್ಗದರ್ಶನ ಸಿಗಬೇಕು. ಕಲಿಯಬೇಕು, ಒಳ್ಳೆಯ ಸ್ಥಾನವನ್ನು ಗಳಿಸಬೇಕು ಎಂಬ ಗುರಿ ಇರಿಸಿಕೊಂಡವನಿಗೆ ಸಾಧನೆ ಸಾಧ್ಯವಾಗುತ್ತದೆ. ವಿದ್ಯಾರ್ಥಿಗಳು ಪರೀಕ್ಷೆಗಾಗಿ ಓದದೆ ತಮ್ಮ ಜೀವನಕ್ಕಾಗಿ ಓದಬೇಕು. ಒಳ್ಳೆಯ ಆಲೋಚನೆ ವಿಭಿನ್ನ ಚಿಂತನೆಗಳ ಮೂಲಕ ಕಲಿಯಲು ಮುಂದಾದಾಗ ಬದುಕು ಸಾರ್ಥಕವಾಗುತ್ತದೆ. ಉತ್ತಮವಾದ ಕನಸನ್ನು ಕಾಣುತ್ತಾ ಆ ಕನಸನ್ನು ನನಸು ಮಾಡುವಲ್ಲಿ ಸತತವಾಗಿ ಪ್ರಯತ್ನ ಮಾಡಿದರೆ ಯಶಸ್ಸನ್ನು ಪಡೆಯಲು ಸಾಧ್ಯ ಎಂದರು.

ಮಾಹಿತಿಯ ಕೊರತೆ ಇದೆ

ಇನ್ನೊರ್ವ ಮುಖ್ಯ ಅತಿಥಿ ಬೆಂಗಳೂರಿನ ವೇದಾಂಶ್ ಅಕಾಡೆಮಿಯ ಸ್ಥಾಪಕ ನವೀನ್ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುವ ಬಗ್ಗೆ ಮಾಹಿತಿ ನೀಡಿ, ಪಿಯುಸಿ ಹಂತ ಮುಗಿದ ನಂತರ ವಿದ್ಯಾರ್ಥಿಗಳಿಗೆ ವಿಪುಲವಾದ ಅವಕಾಶಗಳಿವೆ. ಜೆಇಇ, ನೀಟ್, ಕೆಸೆಟ್, ನಾಟ, ಎನ್‌ಡಿಎ, ಕೃಷಿ ಕ್ಷೇತ್ರ, ವೈದ್ಯಕೀಯ ಕ್ಷೇತ್ರ ಅಲ್ಲದೆ ಇನ್ನೂ ಅನೇಕ ರೀತಿಯಲ್ಲಿ ಜೀವನವನ್ನು ನಡೆಸಲು ಅನುಕೂಲವಾಗುವ ಕೋರ್ಸ್‌ಗಳು ಇವೆ. ಆದರೆ ನಮ್ಮಲ್ಲಿ ಮಾಹಿತಿಯ ಕೊರತೆಯನ್ನು ಕಾಣುತ್ತಿದ್ದೇವೆ. ವಿಜ್ಞಾನ ಹಾಗೂ ವಾಣಿಜ್ಯ ವಿಭಾಗದಲ್ಲಿ ಕಲಿತ ವಿದ್ಯಾರ್ಥಿಗಳಿಗೆ ವಿವಿಧ ಬಗೆಯ ವೃತ್ತಿಪರ ಕೋರ್ಸ್‌ಗಳಿದ್ದು ಉದ್ಯೋಗವನ್ನು ಪಡೆಯುವಲ್ಲಿ ಸಹಕಾರಿಯಾಗಿವೆ ಎಂದು ತಿಳಿಸಿದರು.

ವೇದಿಕೆಯಲ್ಲಿ ಬೆಂಗಳೂರು ದೃಶ್ಯ ಕಾವ್ಯ ಅಕಾಡೆಮಿಯ ಭರತ್, ಅಂಬಿಕಾ ಪದವಿಪೂರ್ವ ವಿದ್ಯಾಲಯದ ಪ್ರಾಂಶುಪಾಲ ಸತ್ಯಜಿತ್ ಉಪಾಧ್ಯಾಯ ಉಪಸ್ಥಿತರಿದ್ದರು.

ಜೀವಶಾಸ್ತ್ರ ಉಪನ್ಯಾಸಕ ವಿಷ್ಣು ಪ್ರದೀಪ್ ಕಾರ್ಯಕ್ರಮ ನಿರ್ವಹಿಸಿದರು.

ದಕ್ಷಿಣಕಾಶಿಯ 'ಧರಿತ್ರಿ ಮೇಲೆ ದಶ ಸಹಸ್ರ ವೃಕ್ಷ' ಸಂಕಲ್ಪ-'ವೃಕ್ಷ ಸಮೃದ್ಧಿ'ಗೆ ಚಾಲನೆ

ಉಪ್ಪಿನಂಗಡಿಯಲ್ಲಿ ಹಣ್ಣಿನ ಸಸಿಗಳ ನಾಟಿ



ಉಪ್ಪಿನಂಗಡಿ: ಇಲ್ಲಿನ ಸ್ವಯಂಸೇವಾ ಸಂಸ್ಥೆಯಾಗಿರುವ ಟೀಮ್ ದಕ್ಷಿಣ ಕಾಶಿ ಪ್ರಾಯೋಜಿತ 'ಧರಿತ್ರಿ ಮೇಲೆ ದಶ ಸಹಸ್ರ ವೃಕ್ಷ' ಸಂಕಲ್ಪದಡಿ ನಡೆಸಲಾದ ವೃಕ್ಷ ಸಮೃದ್ಧಿ ಕಾರ್ಯಕ್ರಮಕ್ಕೆ ಸಂಸದ ಕ್ಯಾಪ್ಟನ್ ಬೃಜೇಶ್ ಚೌಟ ರವರು ಗುರುವಾರ ಚಾಲನೆ ನೀಡಿದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಆಶಯದಂತೆ ಪ್ರತಿಯೋರ್ವ ನಾಗರಿಕ ಒಂದೊಂದು ವೃಕ್ಷವನ್ನು ನೆಟ್ಟು ಬೆಳೆಸುವ ಸಂಕಲ್ಪವನ್ನು ತೊಡಬೇಕು. ತನ್ಮೂಲಕ ಪ್ರಕೃತಿಯ ಆರಾಧನೆಯನ್ನು ಮಾಡಬೇಕು. ಪ್ರಧಾನಿಯ ಆಶಯಕ್ಕೆ ಪೂರಕವಾಗಿ ಟೀಮ್ ದಕ್ಷಿಣ ಕಾಶಿ ತಂಡದ ಸದಸ್ಯರು ಸಂಘಟನೆಯ ದಶಮಾನೋತ್ಸವದ ಒಳಗಾಗಿ ಭೂಮಿ ಮೇಲೆ ಹತ್ತು ಸಾವಿರ ಸಸಿ ನೆಟ್ಟು ಪೋಷಿಸುವ ಅಭಿಯಾನ ಕೈಗೊಂಡಿರುವುದು ಶ್ಲಾಘನೀಯ ಕಾರ್ಯ ಎಂದು ಅವರು ಹೇಳಿದರು.

ಈ ಕಾರ್ಯದ ಜೊತೆಗೆ ಜಿಲ್ಲೆಯ ಪ್ರತಿಯೋರ್ವ ವಿದ್ಯಾರ್ಥಿಯೂ ತಮ್ಮ ತಮ್ಮ ಮನೆ ಮಂದಿಯೊಡಗೂಡಿ ಒಂದೊಂದು ಸಸಿ ನೆಟ್ಟು ಪೋಷಿಸುವ ಸಂಕಲ್ಪ ತೊಡಬೇಕು. ಅಂತಹ ಸಸಿಗಳ ಜೊತೆ ಭಾವಚಿತ್ರವನ್ನು ತೆಗೆದು ಸಂಸದರ ಕಚೇರಿಯ ವಾಟ್ಸಪ್ ಸಂಖ್ಯೆ 7483644105 ಕ್ಕೆ ಕಳುಹಿಸಬೇಕೆಂದು ತಿಳಿಸಿದರು.

ಸ್ಕೌಟ್-ಗೈಡ್ಸ್ ವಿದ್ಯಾರ್ಥಿಗಳ ಸಹಕಾರ

ಕಾರ್ಯಕ್ರಮದಂಗವಾಗಿ ವಿವಿಧ ಹಣ್ಣಿನ ಸಸಿಗಳನ್ನು ಕುಮಾರಧಾರಾ ಹಳೇ ಸೇತುವೆಯ ಬಳಿ ನಡೆಯಲಾಯಿತು. ಇಂದ್ರಪ್ರಸ್ಥ ವಿದ್ಯಾಲಯದ ಸ್ಕೌಟ್ಸ್ ಗೈಡ್ಸ್ ವಿದ್ಯಾರ್ಥಿಗಳು ಸಸಿ ನೆಡುವ ಕಾರ್ಯದಲ್ಲಿ ಸಹಕರಿಸಿದರು.

ಕಾರ್ಯಕ್ರಮದಲ್ಲಿ ಟೀಮ್ ದಕ್ಷಿಣ ಕಾಶಿ ಅಧ್ಯಕ್ಷ ವಿದ್ಯಾಧರ ಜೈನ್, ಮಾಜಿ ಶಾಸಕ ಸಂಜೀವ ಮಠಂದೂರು, ಸಿಎ ಬ್ಯಾಂಕ್ ಅಧ್ಯಕ್ಷ ಸುನೀಲ್ ಕುಮಾರ್ ದಡ್ಡು ಬಿಜೆಪಿ ಮುಂದಾಳುಗಳಾದ ಸುರೇಶ್ ಅತ್ರಮಜಲು, ರಾಮಚಂದ್ರ ಮಣಿಯಾಣಿ, ಪ್ರಸನ್ನ ದರ್ಬೆ, ದಯಾನಂದ ಶೆಟ್ಟಿ ಉಜಿರೆಮಾರ್, ಹರಿಪ್ರಸಾದ್ ಯಾದವ್, ಮೋಹನ್ ಪಕ್ಕಳ, ಪುರುಷೋತ್ತಮ ಮುಂಗ್ಲಿಮನೆ, ಚಂದ್ರಶೇಖರ್ ಬಪ್ಪಳಿಗೆ, ನಾಗೇಶ್, ಮುಕುಂದ ಬಜತ್ತೂರು, ರಾಮಚಂದ್ರ ಪೂಜಾರಿ, ಉಷಾ ಮುಳಿಯ, ಲಕ್ಷ್ಮಣ ಬೆಳ್ಳಿಪ್ಪಾಡಿ, ಪ್ರಮುಖರಾದ ಸುಂದರ ಗೌಡ, ಸಚಿನ್ ಎ.ಎಸ್., ಪ್ರಸನ್ನ ಪೆರಿಯಡ್ಕ, ರವೀಂದ್ರ ಆಚಾರ್ಯ, ಕರುಣಾಕರ ಸುವರ್ಣ, ಆದೇಶ್ ಶೆಟ್ಟಿ ತಿಮ್ಮಪ್ಪ ಗೌಡ, ಸುನೀಲ್ ಅನಾವು, ಕಿಶೋರ್ ನೀರಕಟ್ಟೆ, ಲಕ್ಷ್ಮೀಶ ನಾಯ್ಕ್, ವೀಣಾ ಆರ್. ಪ್ರಸಾದ್, ಸುಧಾಕರ ಶೆಟ್ಟಿ, ಸುಬ್ರಹ್ಮಣ್ಯ ಭಟ್, ಯು ರಾಜೇಶ್ ಪೈ, ಎನ್. ಉಮೇಶ್ ಶೆಣೈ, ಸದಾನಂದ ಪೂಜಾರಿ, ವಿಜೇತ್ ಜೈನ್ ಮೊದಲಾದವರು ಭಾಗವಹಿಸಿದ್ದರು.

ಸವಣೂರು ವಿದ್ಯಾರಶ್ಮಿ ವಿದ್ಯಾಲಯ ವಿದ್ಯಾರ್ಥಿ ಸಂಘದ ಉದ್ಘಾಟನೆ



ಸವಣೂರು: ವಿದ್ಯಾರಶ್ಮಿ ವಿದ್ಯಾಲಯದಲ್ಲಿ 2026-27ನೇ ಸಾಲಿನ ವಿದ್ಯಾರ್ಥಿ ಸಂಘವನ್ನು ಸಂಸ್ಥೆಯ ಸಂಚಾಲಕರಾದ ಸವಣೂರು ಸೀತಾರಾಮ ರೈ ಕೆ ಉದ್ಘಾಟಿಸಿದರು. ಬಳಿಕ ವಿದ್ಯಾರ್ಥಿಸಂಘದ ಪದಾಧಿಕಾರಿಗಳನ್ನು ಕ್ಯಾಬಿನೆಟ್ ಬ್ಯಾಜ್ ತೊಡಿಸುವುದರ ಮೂಲಕ ಅಭಿನಂದಿಸಿ, "ಎಲ್ಲರೂ ಜೊತೆಯಾಗಿ ಸೇರಿಕೊಂಡು ಹೊಂದಾಣಿಕೆಯಿಂದ ಕೆಲಸ ಮಾಡುವುದು ನಾಯಕತ್ವ" ಎಂದರು.

ಮುಖ್ಯ ಅತಿಥಿ ನಿವೃತ್ತ ಪ್ರಾಧ್ಯಾಪಕ ಡಾ. ನರೇಂದ್ರ ರೈ ದೇರ್ಲ ಮಾತನಾಡಿ, ಭಾವಾನಾತ್ಮಕ ಶಿಕ್ಷಣಕ್ಕೆ ಮಹತ್ವಕೊಟ್ಟರೆ ವಿದ್ಯಾರ್ಥಿಯು ಪರಿಪೂರ್ಣತೆಯತ್ತ ಹೋಗಲು ಸಾಧ್ಯ ಶಿಕ್ಷಣವೆಂದರೆ ತನ್ನನ್ನು ತಾನು ನೋಡುವುದಲ್ಲ, ಆದರಿಂದ ಆಚೆ ನೋಡುವುದೇ ಶಿಕ್ಷಣ ಎಂದು ಹೇಳಿದರು.

ಸಂಸ್ಥೆಯ ಆಡಳಿತಾಧಿಕಾರಿ ಅಶ್ವಿನ್ ಎಲ್ ಶೆಟ್ಟಿ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿದರು. ವೇದಿಕೆಯಲ್ಲಿ ಎಸ್. ಎನ್.ಆರ್. ರೂರಲ್ ಎಜ್ಯುಕೇಶನಲ್ ಟ್ರಸ್ಟ್ ಟ್ರಸ್ಟಿಗಳಾದ ಎನ್. ಸುಂದರ್ ರೈ, ರಶ್ಮಿ ಅಶ್ವಿನ್ ಶೆಟ್ಟಿ ಪ್ರಾಂಶುಪಾಲೆ ಶಶಿಕಲಾ ಎಸ್ ಆಳ್ವ ಶಿಕ್ಷಕ-ರಕ್ಷಕ ಸಂಘದ ಉಪಾಧ್ಯಕ್ಷ ತಾರಾನಾಥ ಕಾಯರ್ಗ ಇದ್ದರು. ಶಿಕ್ಷಕ-ರಕ್ಷಕ ಸಂಘದ ಸದಸ್ಯರಾದ ಜೈನುದ್ದೀನ್ ತೋಟದಮೂಲೆ, ತಿಮ್ಮಪ್ಪ ಪೂಜಾರಿ ಭಾಗವಹಿಸಿದರು. 10ನೇ ತರಗತಿಯ ಲಿಬಾ ಫಾತಿಮ ನಿರೂಪಿಸಿದರು. ಮುಖ್ಯ ಅತಿಥಿಗಳ ಪರಿಚಯವನ್ನು ಕೆ ಎಂ. ಸುಹೈಲ್, ಸಂವಿಧಾನದ ಪೀಠಿಕೆಯನ್ನು ನಿರೀಕ್ಷಾ ವೈ ಆರ್ ವಾಚಿಸಿ, ತೇಜಸ್ವಿನಿ ಮತ್ತು ಬಳಗ ಪ್ರಾರ್ಥಿಸಿದರು. ನಿಶ್ಮಿತಾ ಸ್ವಾಗತಿಸಿ, ವಿದ್ಯಾರ್ಥಿ ಸಂಘದ ಅಧ್ಯಕ್ಷೆ ದ್ವಿತೀಯ ಪಿಯುಸಿ ವಾಣಿಜ್ಯ ವಿಭಾಗದ ಶ್ರದ್ಧಾ ಕೆ.ಡಿ. ವಂದಿಸಿದರು.

ಬ್ಯೂಟಿಪಾರ್ಲರ್ ವೃತ್ತಿಯಲ್ಲಿ ಶಿಸ್ತು, ಸೃಜನಶೀಲತೆ ಅಗತ್ಯ: ಮನಮೋಹನ್



ಬೆಳ್ತಂಗಡಿ: ಡಾ. ವೀರೇಂದ್ರ ಹೆಗ್ಗಡೆಯವರ ಆಶ್ರಯದಂತೆ ನಡೆಯುವ ರುಡ್‌ಸೆಟ್ ಸಂಸ್ಥೆ ಉಜಿರೆಯಲ್ಲಿ ತರಬೇತಿ ಪಡೆಯುವುದೇ ಸೌಭಾಗ್ಯ. ಬ್ಯೂಟಿಪಾರ್ಲರ್ ವೃತ್ತಿಯಲ್ಲಿ ಪ್ರತಿಯೊಬ್ಬರೂ ತನ್ನದೇ ಆದ ಸೃಜನಶೀಲತೆಯನ್ನು ಅಳವಡಿಸಿಕೊಂಡರೆ ಬೆಳವಣಿಗೆ ಹೊಂದಲು ಅನುಕೂಲಕರವಾಗುತ್ತದೆ. ಸಮಯಪಾಲನೆ, ಶಿಸ್ತು ಜೊತೆಗೆ ಇರಲಿ ಎಂದು ಉಜಿರೆ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಂಗ್ಲ ಮಾಧ್ಯಮ (ಕೇಂದ್ರೀಯ ಪಠ್ಯ), ಇದರ ಮುಖ್ಯೋಪಾಧ್ಯಾಯ ಮನಮೋಹನ್ ನಾಯಕ್ ಹೇಳಿದರು.

ಅವರು ಉಜಿರೆಯ ರುಡ್‌ಸೆಟ್ ಸಂಸ್ಥೆಯಲ್ಲಿ 35 ದಿನಗಳ ಕಾಲ ನಡೆದ ವಸತಿಯುತ ಮಹಿಳಾ ಬ್ಯೂಟಿಪಾರ್ಲರ್ ನಿರ್ವಹಣೆ ತರಬೇತಿಯ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ, ಪ್ರಮಾಣ ಪತ್ರ ವಿತರಿಸಿದರು.

■ 35 ದಿನಗಳ ವಸತಿ ಸಹಿತ ಮಹಿಳಾ ಬ್ಯೂಟಿಪಾರ್ಲರ್ ನಿರ್ವಹಣೆ ತರಬೇತಿ

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ರುಡ್‌ಸೆಟ್ ಸಂಸ್ಥೆಯ ನಿರ್ದೇಶಕ ಸುನೀಲ್ ನಾಯ್ಕ ಅವರು, ಹಣಕಾಸಿನ ಜ್ಞಾನ ಮತ್ತು ಡಿಜಿಟಲ್ ವ್ಯವಹಾರಗಳ ಅರಿವು ಇಂದಿನ ಕಾಲದಲ್ಲಿ ಅತ್ಯಗತ್ಯವಾಗಿದ್ದು, ಈ ತರಬೇತಿ ನಿಮ್ಮೆಲ್ಲರಿಗೂ ಶುಭವಾಗಲಿ ಎಂದರು. ಅತಿಥಿ ಉಪನ್ಯಾಸಕಿ ಮಾಧವಿ. ಎಂ. ರೈ ಇದ್ದರು. ಶೈಲಜಾ ತರಬೇತಿ ಅನುಭವ ಹಂಚಿಕೊಂಡರು. ಸಂಸ್ಥೆಯ ಹಿರಿಯ ಉಪನ್ಯಾಸಕ ಅಬ್ರಹಾಂ ಜೇಮ್ಸ್ ನಿರೂಪಿಸಿದರು. ಸಂಸ್ಥೆಯ ಹಿರಿಯ ಉಪನ್ಯಾಸಕ ಕರುಣಾಕರ್ ಕೆ. ಜೈನ್ ವಂದಿಸಿದರು.

ಆತೂರು ಶ್ರೀ ಸದಾಶಿವ ದೇಗುಲ: ಸರಸ್ವತಿ ವಂದನಾ ಕಾರ್ಯಕ್ರಮ



ಕಡಬ: ದೇವಾಲಯ ಸಂವರ್ಧನಾ ಸಮಿತಿ ಪುತ್ತೂರು ಜಿಲ್ಲೆ ಹಾಗೂ ಆತೂರು ಶ್ರೀ ಸದಾಶಿವ ದೇವಸ್ಥಾನದ ಸಹಕಾರದೊಂದಿಗೆ ದೇವಸ್ಥಾನದಲ್ಲಿ ಸರಸ್ವತಿ ವಂದನಾ ಕಾರ್ಯಕ್ರಮ ನಡೆಯಿತು.

ಸುಳ್ಯ ತಾಲೂಕು ದೇವಾಲಯ ಸಂವರ್ಧನಾ ಸಮಿತಿ ಸದಸ್ಯ ಬಾಲಕೃಷ್ಣ ಪುತ್ತೂರು, ಮತ್ತೂರು ಜಿಲ್ಲಾ ಧಾರ್ಮಿಕ ಶಿಕ್ಷಣ ಪ್ರಮುಖ್ ವೀಣಾ ಬಾಲಕೃಷ್ಣ ಮಾತನಾಡಿದರು. ದೇವಾಲಯ ಸಂವರ್ಧನಾ ಸಮಿತಿ ಕಡಬ ತಾಲೂಕು ಸಹ ಸಂಯೋಜಕ ಯತೀಶ್ ಗುಂಡಿಜೆ, ಧಾರ್ಮಿಕ ಶಿಕ್ಷಣ ಶಿಕ್ಷಕಿ ರಕ್ಷಿತಾ, ದೇವಸ್ಥಾನದ ಕಾರ್ಯದರ್ಶಿ ರಘುನಾಥ ಶೆಟ್ಟಿ ಕಲ್ಲಾಡಿ, ಪ್ರಮುಖರಾದ ಭವಾನಿಶಂಕರ ಗೌಡ ಪರಂಗಾಜೆ, ಸಂಜೀವ ಗೌಡ ಕೊನೆಮಜಲು, ಶ್ರೀರಾಮ ಕೆಮ್ಮಾರ, ಪರಮೇಶ್ವರ ಸಬಳೂರು, ರಾಧಾಕೃಷ್ಣ ವಳಕಡಮ, ಸಂಕಪ್ಪ ಗೌಡ ಕ್ಯೊಲ, ನಯನ ಗುಂಡಿಜೆ, ಆನಂದ ವಳಕಡಮ, ಜಗದೀಶ್ ಆನೆಗುಂಡಿ, ಮೋಕ್ಷಿತ್ ಆನೆಗುಂಡಿ, ಹರೀಶ್ ಆನೆಗುಂಡಿ ಉಪಸ್ಥಿತರಿದ್ದರು.

ದೇವಾಲಯ ಸಂವರ್ಧನಾ ಸಮಿತಿ ಜಿಲ್ಲಾ ಸಂಯೋಜಕ ಯದುಶ್ರೀ ಆನೆಗುಂಡಿ ಸ್ವಾಗತಿಸಿ, ಕಾರ್ಯಕ್ರಮ ನಿರ್ವಹಿಸಿದರು. ಅಂಗನವಾಡಿಯಿಂದ ಪದವಿ ತರಗತಿಯವರೆಗಿನ ಸುಮಾರು 60 ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ವಿದ್ಯಾರ್ಥಿಗಳು ತಂದಿದ್ದ ಪುಸ್ತಕಗಳಿಗೆ ದೇವಸ್ಥಾನದ ಪ್ರಧಾನ ಅರ್ಚಕ ವಿಷ್ಣುಮೂರ್ತಿ ಬಡೆಕ್ಕಿಲ್ಲಾಯ ಅವರು ಪೂಜೆ ನೆರವೇರಿಸಿದರು.

ಗಾಂಧಿನಗರದ ನಾವೂರು ಶ್ರೀ ಕಲ್ಕುಡ ಕಲ್ಲುರ್ಟಿ ದೈವಸ್ಥಾನದ ನವೀಕೃತ ಶಿಲಾಮಯ ಗುಡಿಯಲ್ಲಿ ಪುನರ್ ಪ್ರತಿಷ್ಠಾ ಕಲಶೋತ್ಸವ

ದೇವರ, ದೈವ ಸಾನಿಧ್ಯಗಳು ಹಿಂದುತ್ವದ ಅಸ್ಮಿತೆ ತಿಳಿಸುತ್ತದೆ: ಎಡನೀರು ಸ್ವಾಮೀಜಿ



ಸುಳ್ಯ: ಗಾಂಧಿನಗರ ನಾವೂರು ಶ್ರೀ ಕಲ್ಕುಡ ಕಲ್ಲುರ್ಟಿ ದೈವಸ್ಥಾನದ ನವೀಕೃತ ಶಿಲಾಮಯ ಗುಡಿಯಲ್ಲಿ ಶ್ರೀ ಕಲ್ಕುಡ, ಕಲ್ಲುರ್ಟಿ ಹಾಗೂ ಗುಳಿಗ ದೈವದ ಕಟ್ಟೆಯಲ್ಲಿ ದೇಲಂಪಾಡಿ ಬ್ರಹ್ಮಶ್ರೀ ವೇದಮೂರ್ತಿ ಗಣೇಶ ತಂತ್ರಿವರ್ಯರ ದಿವ್ಯ ಹಸ್ತದಿಂದ ಸೋಮವಾರದಿಂದ ಗುರುವಾರದವರೆಗೆ ಧಾರ್ಮಿಕ ವಿಧಿವಿಧಾನಗಳೊಂದಿಗೆ ಪುನರ್ ಪ್ರತಿಷ್ಠಾ ಕಲಶೋತ್ಸವ ನಡೆಯಿತು.

ಗುರುವಾರ ಗಣಪತಿ ಹೋಮ, ಬ್ರಹ್ಮಕಲಶ ಪೂಜೆ, ಬೆಳಿಗ್ಗೆ ಗಂಟೆ 8.08 ರಿಂದ 9.06ರ ಕರ್ಕಟಕ ಲಗ್ನದ ಶುಭಮುಹೂರ್ತದಲ್ಲಿ ಶ್ರೀ ಕಲ್ಕುಡ, ಕಲ್ಲುರ್ಟಿ, ಗುಳಿಗ ದೈವಗಳ ಪುನರ್ ಪ್ರತಿಷ್ಠಾ ಕಲಶಾಭಿಷೇಕ ನಡೆಯಿತು.

ಬಳಿಕ ನಡೆದ ಧಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ಎಡನೀರು ಮಠದ ಸಚ್ಚಿದಾನಂದ ಭಾರತೀ ಶ್ರೀಗಳು ಆಶೀರ್ವಚನ ನೀಡಿ, ರಾಜಕೀಯವಾಗಿ ಧರ್ಮಗಳನ್ನು ಒಡೆಯುತ್ತಿರುವ ಕಾಲಘಟ್ಟದಲ್ಲಿ ಧಾರ್ಮಿಕ ಕೇಂದ್ರಗಳು ಒಗ್ಗೂಡಿಸುವ ಕೆಲಸಗಳನ್ನು ಮಾಡುತ್ತಿದ್ದು ಪ್ರತಿಯೊಬ್ಬರು ಕೈ ಜೋಡಿಸಬೇಕು. ದೇವ ಮತ್ತು ದೈವ ಸಾನಿಧ್ಯಗಳು ಹಿಂದು ಸಂಸ್ಕಾರಗಳ ಜೊತೆಗೆ ಹಿಂದುತ್ವದ ಅಸ್ಮಿತೆಯನ್ನು ತಿಳಿಸುತ್ತಿದೆ ಎಂದು ಹೇಳಿದರು.

ದೇವರ ಅನುಗ್ರಹವಿರಲಿ

ಬ್ರಹ್ಮಶ್ರೀ ಗಣೇಶ ತಂತ್ರಿ ಮಾತನಾಡಿ, ಪೂರ್ವಜರು ಹೇಳುತ್ತಿದ್ದ ಪುರಾಣ ಇತಿಹಾಸಗಳ ಕತೆಗಳಂತೆ ನಾವೆಲ್ಲರೂ ಸೇರುವ ಊರಿನಲ್ಲಿ ಕೇವಲ 64 ದಿನಗಳಲ್ಲಿ ಇಂತಹ ಭವ್ಯವಾದ ಶಿಲಾಮಯ ಗುಡಿಯನ್ನು ನಿರ್ಮಿಸಲಾಗಿದ್ದು ಇಲ್ಲಿ ಪುನರ್ ಪ್ರತಿಷ್ಠಾ ಮಹೋತ್ಸವ ಅದ್ದೂರಿಯಾಗಿ ಜರುಗಿದೆ. ಸುಳ್ಯದ ಅಧಿಪತಿ ಚೆನ್ನಕೇಶವ ದೇವರ ಬ್ರಹ್ಮ ರಥವು ನಿಂತಾಗ ಆರಾಧನೆಯ ಮೂಲಕ ರಥವನ್ನು ಮುಂದಕ್ಕೆ ಚಲಿಸುವಂತೆ ಮಾಡಿದ ದೈವಿಕ ಶಕ್ತಿಗಳು ಇಂದು ನಾವೂರಿನಲ್ಲಿ ಅಹಿಂಸೆ ಸತ್ಯ ಧರ್ಮದ ಸ್ಥಳವಾದ ಗಾಂಧಿನಗರ ಪ್ರದೇಶದ ಹೆಸರೇ ಬಿಂಬಿಸುತ್ತಿದೆ. ಶ್ರೀ ಕಲ್ಕುಡ ಮತ್ತು ಕಲ್ಲುರ್ಟಿ ಹಾಗೂ ಪರಿವಾರ ಶಕ್ತಿಗಳೇ ಇಲ್ಲಿನ ಸಾಕ್ಷಿಯಾಗಿದ್ದು, ದೈವದ ಅನುಗ್ರಹ ಸದಾ ಎಲ್ಲರ ಮೇಲಿರಲಿ ಎಂದು ಶುಭಹಾರೈಸಿದರು.

ಸಭಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಕೃಷ್ಣ ಕಾಮತ್ ವಹಿಸಿದ್ದರು.

ಸಭಾ ವೇದಿಕೆಯಲ್ಲಿ ಉಪಸ್ಥಿತರಿದ್ದ ಡಾ.ಕೆ.ವಿ. ಚಿದಾನಂದ, ಆಡಳಿತ ಧರ್ಮದರ್ಶಿ ಪಿ.ಕೆ. ಉಮೇಶ್, ಹರಪ್ರಸಾದ್ ತುದಿಯಡ್ಕ ಶುಭಹಾರೈಸಿದರು. ಆಡಳಿತ ಧರ್ಮದರ್ಶಿ ಪಿ.ಕೆ. ಉಮೇಶ್ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ದೇವಸ್ಥಾನದ ಜೀರ್ಣೋದ್ಧಾರ ಹಾಗೂ ದೇವಸ್ಥಾನದ ಪರಿಚಯವನ್ನು ಮಾಡಿದರು. ಶಿವಪ್ರಸಾದ್ ಆಲೆಟ್ಟಿ ವಂದಿಸಿದರು.

ಸುತ್ತಮುತ್ತ

ಪೊನ್ನಣ್ಣಗೆ ಸಚಿವ ಸ್ಥಾನ ನೀಡಲು ಒತ್ತಾಯ

ಮಡಿಕೇರಿ: ಕೊಡಗಿನ ಸಮಗ್ರ ಅಭಿವೃದ್ಧಿಗಾಗಿ ಮತ್ತು ರಾಜ್ಯದ ಜನರ ಸೇವೆಗಾಗಿ ವಿರಾಜಪೇಟೆ ಕ್ಷೇತ್ರದ ಶಾಸಕ ಎ.ಎಸ್.ಪೊನ್ನಣ್ಣ ಅವರಿಗೆ ಸಚಿವ



ಸ್ಥಾನ ನೀಡಬೇಕೆಂದು ಮಡಿಕೇರಿ ತಾಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಹಾಗೂ ಕರಿಕೆ ಗ್ರಾ.ಪಂ. ಮಾಜಿ ಅಧ್ಯಕ್ಷ ಎನ್.ಬಾಲಚಂದ್ರನ್ ನಾಯರ್ ಒತ್ತಾಯಿಸಿದ್ದಾರೆ.

ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರಾಗಿ ಮತ್ತು ಶಾಸಕರಾಗಿ ಪೊನ್ನಣ್ಣ ಅವರು ದಕ್ಷತೆಯಿಂದ ಕಾರ್ಯನಿರ್ವಹಿಸಿ ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಗುರುತಿಸಿಕೊಂಡಿದ್ದಾರೆ. ಅಭಿವೃದ್ಧಿ ಕಾರ್ಯಗಳ ಮೂಲಕವೇ ಅಭಿವೃದ್ಧಿಪರ ಚಿಂತನೆಯ ಜನಸ್ನೇಹಿ ಶಾಸಕರು ಎನ್ನುವ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಸಚಿವ ಸ್ಥಾನವನ್ನು ಹೊಂದಲು ಅವರು ಸಮರ್ಥರಾಗಿದ್ದು, ನೂತನ ಮುಖ್ಯಮಂತ್ರಿಗಳು ಸಂಪುಟದಲ್ಲಿ ಅಧಿಕಾರ ನೀಡಬೇಕೆಂದು ಮನವಿ ಮಾಡಿದ್ದಾರೆ. ಕಳೆದ ಅನೇಕ ವರ್ಷಗಳಿಂದ ಕೊಡಗು ಜಿಲ್ಲೆ ಸಚಿವ ಸ್ಥಾನದಿಂದ ವಂಚಿತವಾಗಿದೆ. ಪ್ರಸ್ತುತ ರಾಜ್ಯದಲ್ಲಿ ಬಹುಮತ ಹೊಂದಿರುವ ಕಾಂಗ್ರೆಸ್ ಸರಕಾರ ಕೊಡಗಿನವರಿಗೆ ಸಚಿವ ಸ್ಥಾನ ನೀಡುತ್ತದೆ ಎನ್ನುವ ವಿಶ್ವಾಸವಿದೆ. ಕಾವೇರಿ ನಾಡು ಕೊಡಗು ರಾಜ್ಯಕ್ಕೆ ಅಪಾರ ಕೊಡುಗೆಯನ್ನು ನೀಡಿದೆ. ಈ ಬಾರಿಯ ಚುನಾವಣೆಯಲ್ಲಿ ಎರಡೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಭರ್ಜರಿ ಗೆಲುವು ಸಾಧಿಸಿದೆ. ಮತ ನೀಡಿದ ಜನರ ಅಭಿಲಾಷೆಯಂತೆ ಪೊನ್ನಣ್ಣ ಅವರನ್ನು ಸಚಿವರನ್ನಾಗಿ ನೇಮಕ ಮಾಡಿ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಸ್ಥಾನ ಕಲ್ಪಿಸಬೇಕೆಂದು ಒತ್ತಾಯಿಸಿದ್ದಾರೆ.

ಹಿಂದೂ ಹಿ.ಪ್ರಾ.ಶಾಲೆ: ರಕ್ತ ವರ್ಗೀಕರಣ ಶಿಬಿರ

ಶಿರ್ವ: ಕಟಪಾಡಿ ಜೇಸಿಐ ಪ್ರಾಯೋಜಕತ್ವದಲ್ಲಿ ಉದ್ಯಾವರ ಹಿಂದೂ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವರ್ಷಂಪ್ರತಿ ಜರುಗುವ ವಿದ್ಯಾರ್ಥಿಗಳ ರಕ್ತ ವರ್ಗೀಕರಣ ಶಿಬಿರವು ಮಂಗಳವಾರ ಉಡುಪಿ ಲೋಂಬಾರ್ಡ್ ಮೆಮೋರಿಯಲ್ ಆಸ್ಪತ್ರೆಯ ಸಹಭಾಗಿತ್ವದಲ್ಲಿ ಜರುಗಿತು.

ಶಾಲಾ ಆಡಳಿತ ಮಂಡಳಿಯ ಅಧ್ಯಕ್ಷ ಗಣಪತಿ ಕಾರಂತ್,ಸಂಚಾಲಕ ಸುರೇಶ್ ಶೆಣೈ, ಆಡಳಿತ ಮಂಡಳಿ ಸದಸ್ಯ ಕೃಷ್ಣಕುಮಾರ್ ರಾವ್ ಮಟ್ಟು, ಗಣೇಶ್ ಕುಮಾರ್, ಶಾಲಾ ಶಿಕ್ಷಕ ರಕ್ಷಕ ಸಂಘದ ಅಧ್ಯಕ್ಷ ನವೀನ್ ಅಮೀನ್, ರವಿಕಿರಣ್ ಪಾಠಕ್, ಕಾರ್ಯಕ್ರಮದ ಪ್ರಾಯೋಜಕರಾದ ಕಟಪಾಡಿ ಜೇಸಿಐ ಪೂರ್ವಾಧ್ಯಕ್ಷ ಪ್ರಶಾಂತ್ ಆರ್.ಎಸ್, ಮಹೇಶ್ ಅಂಚನ್, ಸುಕುಮಾರ್ ಅಂಬಾಡಿ, ಕಾರ್ಯದರ್ಶಿ ಗೌರವ್, ಲೋಂಬಾರ್ಡ್ ಮೆಮೋರಿಯಲ್ ಆಸ್ಪತ್ರೆಯ ಸಾರ್ವಜನಿಕ ಸಂಪರ್ಕಅಧಿಕಾರಿ ರೋಹಿ ರತ್ನಾಕರ್, ಶಾಲಾ ಮುಖ್ಯ ಶಿಕ್ಷಕಿ ಅನುರಾಧಾ ಶೆಟ್ಟಿ, ಆಸ್ಪತ್ರೆಯ ಸಿಬ್ಬಂದಿ ವರ್ಗದವರು ಮೊದಲಾದವರು ಉಪಸ್ಥಿತರಿದ್ದರು.

ಬೆಳ್ಳಾರೆ: ಶಿಕ್ಷಕರು, ವಿದ್ಯಾರ್ಥಿಗಳಿಗೆ ವಿಪತ್ತು ನಿರ್ವಹಣೆ ತರಬೇತಿ

ಮಂಗಳೂರು: ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ(ಎನ್.ಡಿ.ಆರ್.ಎಫ್) ವತಿಯಿಂದ ಮಳೆಗಾಲದಲ್ಲಿ ವಿವಿಧ ರೀತಿಯ ಪ್ರಾಕೃತಿಕ ಘಟನೆಗಳನ್ನು ನಿರ್ವಹಿಸುವ ಬಗ್ಗೆ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಮಾಹಿತಿ ಮತ್ತು ಪ್ರದರ್ಶನ ಕಾರ್ಯಕ್ರಮ ಸುಳ್ಯ ತಾ. ಬೆಳ್ಳಾರೆ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಮಂಗಳವಾರ ನಡೆಯಿತು.

ಕಾರ್ಯಕ್ರಮದಲ್ಲಿ ಎನ್.ಡಿ.ಆರ್.ಎಫ್. ' ಅಧಿಕಾರಿಗಳು ವಿವಿಧ ಪ್ರಾಕೃತಿಕ ವಿಪತ್ತುಗಳ ಅರಿವು, ಅವುಗಳ ಸಂದರ್ಭದಲ್ಲಿ ಕೈಗೊಳ್ಳಬೇಕಾದ ಸಿದ್ಧತೆಗಳ ಬಗ್ಗೆ ಮಾಹಿತಿ ನೀಡಿದರು. ವಿಪತ್ತು ಸಂದರ್ಭದಲ್ಲಿ ವಹಿಸಬೇಕಾದ ಮುನ್ನಚ್ಚರಿಕೆಗಳ ಕುರಿತು ಪ್ರಾಯೋಗಿಕವಾಗಿ ತೋರಿಸಲಾಯಿತು. ದಕ್ಷಿಣ ಕನ್ನಡ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಹಯೋಗದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಉಪನ್ಯಾಸಕರ ನೇಮಕಾತಿ

ಕಾಸರಗೋಡು: ತೃಕ್ಕರೀಪುರ ಸರಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಉಪನ್ಯಾಸಕರ ನೇಮಕಾತಿಗಾಗಿ ಸಂದರ್ಶನವು ಜೂ.22ರಂದು ನಡೆಯಲಿದೆ. ಬಯೋಮೆಡಿಕಲ್ ಇಂಜಿನಿಯರಿಂಗ್ ಉಪನ್ಯಾಸಕರ ಹುದ್ದೆಗೆ ಬೆಳಗ್ಗೆ 10 ಗಂಟೆಗೆ ಮತ್ತು ಮೆಕ್ಯಾನಿಕಲ್ ಇಂಜಿನಿಯರಿಂಗ್ ಉಪನ್ಯಾಸಕರ ವಿಭಾಗಕ್ಕೆ ಬೆಳಗ್ಗೆ 11 ಗಂಟೆಗೆ ಸಂದರ್ಶನ ಏರ್ಪಡಿಸಲಾಗಿದೆ. ಸಂಬಂಧಿತ ವಿಷಯದಲ್ಲಿ ಬಿ.ಟೆಕ್ ಪ್ರಥಮ ದರ್ಜೆ ವಿದ್ಯಾರ್ಹತೆಯಾಗಿದೆ, ಹೆಚ್ಚಿನ ವಿವರಗಳಿಗೆ 0467 2211400, 9497609501 ಕರೆ ಮಾಡಬಹುದು.

ಕಬಕ- ಪುತ್ತೂರು ರೈಲು ನಿಲ್ದಾಣದಲ್ಲಿ ವಿಸ್ತರಿತ ಶೆಲ್ಟರ್ ನಿರ್ಮಾಣ ಕಾಮಗಾರಿಗೆ ಚಾಲನೆ

ನನಸಾಗುತ್ತಿದೆ ರೈಲು ನಿಲ್ದಾಣದ ಬಹುಕಾಲದ ಬೇಡಿಕೆ: ಕ್ಯಾ. ಚೌಟ

ಪುತ್ತೂರು: ಪುತ್ತೂರು– ಸುಬ್ರಹ್ಮಣ್ಯ ರೈಲು ಮಾರ್ಗದಲ್ಲಿ ಹೊಸದಾಗಿ 3 ರೈಲ್ವೇ ಓವರ್‌ಬ್ರಿಜ್ ನಿರ್ಮಿಸಲು 18 ಕೋಟಿ ರೂ. ಮಂಜೂರಾಗಿದೆ ಎಂದು ದ.ಕ. ಸಂಸದ ಕ್ಯಾ. ಬ್ರಿಜೇಶ್ ಚೌಟ ಹೇಳಿದರು.

ಅವರು ಗುರುವಾರ ಕಬಕ ಪುತ್ತೂರು ರೈಲು ನಿಲ್ದಾಣದಲ್ಲಿ ವಿಸ್ತರಿತ ಶೆಲ್ಟರ್ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಮುಕ್ವೆ ಲೆವೆಲ್ ಕ್ರಾಸಿಂಗ್, ಪುತ್ತೂರು ಕ್ಲಬ್ ಮತ್ತು ಪುತ್ತೂರು ಗೇಟ್ ಲೆವೆಲ್ ಕ್ರಾಸಿಂಗ್‌ಗಳಲ್ಲಿ ಓವರ್‌ಬ್ರಿಜ್ ನಿರ್ಮಿಸಲಾಗುತ್ತದೆ. ಪುತ್ತೂರು ನಿಲ್ದಾಣದಲ್ಲಿ 4.4 ಕೋಟಿ ವೆಚ್ಚದಲ್ಲಿ ವಿಸ್ತರಿತ ಶೆಲ್ಟರ್ ಮತ್ತು ಸಂಪರ್ಕ ರಸ್ತೆ ನಿರ್ಮಾಣವಾಗಲಿದೆ. ಇದು ಈ ನಿಲ್ದಾಣದ ಬಹುಕಾಲದ ಬೇಡಿಕೆಯಾಗಿದೆ ಎಂದರು.

ಹಂತ ಹಂತವಾಗಿ ಮೂಲ ಸೌಕರ್ಯ

ಮೀಟರ್‌ಗೇಜ್ ಹಳಿಯು ಬ್ರಾಡ್‌ಗೇಜ್ ಆದ ಮೇಲೆ ಪುತ್ತೂರು ನಿಲ್ದಾಣದಿಂದ ನೂರಾರು ಪ್ರಯಾಣಿಕರು ನಿತ್ಯ ಪ್ರಯಾಣಿಸುತ್ತಾರೆ. ಹೀಗಾಗಿ ಶೆಲ್ಟರ್ ವಿಸ್ತರಣೆ ಅನಿವಾರ್ಯವಾಗಿತ್ತು. ಸುಬ್ರಹ್ಮಣ್ಯ



ರೋಡ್ ನಿಲ್ದಾಣದಲ್ಲಿ ರೂ. 5.29 ಕೋಟಿ ವೆಚ್ಚದಲ್ಲಿ ಕೋಚ್ ವಾಟರಿಂಗ್ ವ್ಯವಸ್ಥೆಯಾಗಿದೆ. ಮೂಲ ಸೌಕರ್ಯ ಒದಗಿಸುವ ಕಾರ್ಯ ಹಂತ ಹಂತವಾಗಿ ನಡೆಯುತ್ತಿದೆ. ಈ ಭಾಗದ ರೈಲು ನಿಲ್ದಾಣದ ಬೇಡಿಕೆಗಳ ಬಗ್ಗೆ ಶೀಘ್ರದಲ್ಲೇ ಮೈಸೂರು ವಿಭಾಗದ ಡಿಆರ್‌ಎಂ ಜತೆ ಸಭೆ ಮಾಡಿ ಸಮಗ್ರ ಯೋಜನೆ ರೂಪಿಸಲಾಗುವುದು ಎಂದರು.

ಕೇಂದ್ರ ರಸ್ತೆ ನಿಧಿಯಿಂದ ದಕ್ಷಿಣ ಕನ್ನಡ ಜಿಲ್ಲೆಯ ಹಲವು ರಸ್ತೆಗಳ ಅಭಿವೃದ್ಧಿಗೆ ರೂ. 57 ಕೋಟಿ ಬಿಡುಗಡೆಯಾಗಿದೆ. ಇದರಲ್ಲಿ ಪುತ್ತೂರಿನ ರಸ್ತೆಗಳು ಕೂಡ ಸೇರಿವೆ. ಅಭಿವೃದ್ಧಿಯಲ್ಲಿ ರಾಜಕೀಯ ಮಾಡುವುದಿಲ್ಲ, ಬಿಜೆಪಿ ವಿಕಾಸವಾದದಲ್ಲಿ ನಂಬಿಕೆ ಇಟ್ಟುಕೊಂಡಿದೆ ಎಂದು ಕ್ಯಾ. ಚೌಟ ಹೇಳಿದರು.

ನಗರಸಭೆ ನಿಕಟಪೂರ್ವ ಅಧ್ಯಕ್ಷೆ ಲೀಲಾವತಿ ಅಣ್ಣು ನಾಯ್ಕ ವೇದಿಕೆಯಲ್ಲಿದ್ದರು. ಮೈಸೂರು ವಿಭಾಗದ ಸೀನಿಯರ್ ಡಿವಿಶನಲ್ ಇಂಜಿನಿಯರ್ ರೋಹನ್ ಡೋಂಗ್ರೆ ಸ್ವಾಗತಿಸಿ, ಪ್ರಾಸ್ತಾವಿಕ ಮಾತುಗಳನ್ನಾಡಿದರು. ರೈಲ್ವೆ ಇಂಜಿನಿಯರ್ ಹರ್ಷವರ್ಧನ ಕಾರ್ಯಕ್ರಮ ನಿರ್ವಹಿಸಿದರು. ಬಳಿಕ ಸಂಸದರು ಕಬಕ ಪುತ್ತೂರು ನಿಲ್ದಾಣ ಪರಿಶೀಲಿಲನೆ ನಡೆಸಿದರು.

- ಪುತ್ತೂರು- ಸುಬ್ರಹ್ಮಣ್ಯ ರೈಲು ಮಾರ್ಗದಲ್ಲಿ ಹೊಸದಾಗಿ ಮೂರು ರೈಲ್ವೇ ಓವರ್‌ಬ್ರಿಜ್ ನಿರ್ಮಾಣ
- ಪುತ್ತೂರು ನಿಲ್ದಾಣದಲ್ಲಿ 4.4 ಕೋಟಿ ವೆಚ್ಚದಲ್ಲಿ ವಿಸ್ತರಿತ ಶೆಲ್ಟರ್ ಮತ್ತು ಸಂಪರ್ಕ ರಸ್ತೆ ನಿರ್ಮಾಣ
- ಸುಬ್ರಹ್ಮಣ್ಯ ರೋಡ್ ನಿಲ್ದಾಣದಲ್ಲಿ ರೂ. 5.29 ಕೋಟಿ ವೆಚ್ಚದಲ್ಲಿ ಕೋಚ್ ವಾಟರಿಂಗ್ ವ್ಯವಸ್ಥೆ

ರೈಲು ಸೇವೆಗಳ ಬೇಡಿಕೆ

ಬೆಂಗಳೂರು-ಮಂಗಳೂರು ವಂದೇ ಭಾರತ್ ರೈಲು ಓಡಿಸುವ ಬೇಡಿಕೆ ಇದೆ. ಸುಬ್ರಹ್ಮಣ್ಯ-ಸಕಲೇಶಪುರದ ಮಧ್ಯೆ ಘಾಟಿಯಲ್ಲಿ ಬಾಕಿ ಇದ್ದ 48 ಕಿ.ಮೀ. ಉದ್ದದ ಹಳಿ ವಿದ್ಯುದೀಕರಣ ಕಾಮಗಾರಿ ಪೂರ್ಣಗೊಂಡ ಬಳಿಕ ಈ ಬೇಡಿಕೆ ಹೆಚ್ಚಿದೆ. ಅದೇ ರೀತಿ ಮೆಮು ರೈಲಿನ ಬೇಡಿಕೆಯೂ ಇದೆ. ರೈಲು ಸೇವೆಗಳ ಬೇಡಿಕೆ ಇರುವುದು ಸಹಜ. ಮೂಲಸೌಕರ್ಯ ಅಭಿವೃದ್ಧಿಯಾಗದೆ ಇದೆಲ್ಲ ಸಾಧ್ಯವಿಲ್ಲ. ಬೆಂಗಳೂರು- ಮಂಗಳೂರು ಮಧ್ಯೆ ಹಳಿ ದ್ವಿಪಥಗೊಳ್ಳುವ ಅಗತ್ಯವಿದೆ.

● ಕ್ಯಾ. ಬ್ರಿಜೇಶ್ ಚೌಟ, ಸಂಸದ

ಅಮ್ಟೂರು ಆರೋಗ್ಯ ಕೇಂದ್ರದ ಕಾಮಗಾರಿ ವೀಕ್ಷಿಸಿದ ಸಂಸದ, ಶಾಸಕರು

ಬಂಟ್ವಾಳದ 22 ಆರೋಗ್ಯ ಕ್ಷೇಮ ಕೇಂದ್ರಕ್ಕೆ ಅನುದಾನ

ಬಂಟ್ವಾಳ: ಪ್ರಧಾನ ಮಂತ್ರಿ ಆಯುಷ್ಮಾನ್ ಭಾರತ್ ಹೆಲ್ತ್ ಇನ್‌ಫ್ರಾಸ್ಟ್ರಕ್ಚರ್ ಮಿಷನ್ ಹಾಗೂ ಕೇಂದ್ರ ಸರಕಾರದ 15ನೇ ಹಣಕಾಸು ಯೋಜನೆಯಡಿ 65 ಲಕ್ಷ ರೂ.ವೆಚ್ಚದಲ್ಲಿ ಕಲ್ಲಡ್ಕ ಸಮೀಪದ ಅಮ್ಟೂರುವಿನಲ್ಲಿ ನಿರ್ಮಾಣಗೊಳ್ಳುತ್ತಿರುವ ಆರೋಗ್ಯ ಕ್ಷೇಮ ಕೇಂದ್ರದ ಕಾಮಗಾರಿಯನ್ನು ಸಂಸದ ಕ್ಯಾ.ಬ್ರಿಜೇಶ್ ಚೌಟ ಹಾಗೂ ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಜೊತೆಯಾಗಿ ತೆರಳಿ ವೀಕ್ಷಿಸಿದರು.



ಈ ಸಂದರ್ಭ ಮಾತನಾಡಿದ ಸಂಸದ ಕ್ಯಾ.ಚೌಟ, ದಕ್ಷಿಣ ಕನ್ನಡ ಜಿಲ್ಲೆಗೆ ಬಂದ 80 ಕೋಟಿ ರೂ. ಅನುದಾನದಲ್ಲಿ ಬಂಟ್ವಾಳ ಕ್ಷೇತ್ರದ 22 ಆರೋಗ್ಯ ಕ್ಷೇಮ ಕೇಂದ್ರಕ್ಕೆ 14.30 ಕೋಟಿ ರೂ. ಹಾಗೂ ವಿಶೇಷವಾಗಿ ಆಮ್ಟೂರು ಗ್ರಾಮದಲ್ಲಿ ನಿರ್ಮಾಣವಾಗುತ್ತಿರುವ ಆರೋಗ್ಯ ಕ್ಷೇಮ ಕೇಂದ್ರಕ್ಕೆ 65 ಲಕ್ಷ ರೂಪಾಯಿ ಅನುದಾನವನ್ನು ಒದಗಿಸಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭ ಶಾಸಕ ರಾಜೇಶ್ ನ್ಯಾಕ್ ಉಳಿಪ್ಪಾಡಿಗುತ್ತು, ಬಿಜೆಪಿ ಬಂಟ್ವಾಳ ಕ್ಷೇತ್ರದ ಅಧ್ಯಕ್ಷ ಆರ್. ಚೆನ್ನಪ್ಪ ಕೋಟ್ಯಾನ್, ಮಾಜಿ ಶಾಸಕ ಪದ್ಮನಾಭ ಕೊಟ್ಟಾರಿ, ಬಿಜೆಪಿಯ ಜಿಲ್ಲಾ ಕಾರ್ಯದರ್ಶಿಗಳಾದ ದಿನೇಶ್ ಅಮ್ಟೂರು, ದೇವಪ್ಪ ಪೂಜಾರಿ, ಬಂಟ್ವಾಳ ಮಂಡಲದ ಪ್ರಧಾನ ಕಾರ್ಯದರ್ಶಿಗಳಾದ ಶಿವಪ್ರಸಾದ್ ಶೆಟ್ಟಿ ಸುದರ್ಶನ ಬಜ, ಪಕ್ಷದ ಪ್ರಮುಖರಾದ ಮಾಧವ ಮಾವೆ, ಮೋನಪ್ಪ ದೇವಸ್ಯ, ಚಿದಾನಂದ ಮುರಬೈಲು ಗೋಪಾಲ ಪೂಜಾರಿ, ಲಖಿತಾ ಆರ್. ಶೆಟ್ಟಿ ಪುಷ್ಪರಾಜ್ ಚೌಟ, ಅಭಿಷೇಕ್ ರೈ, ಆನಂದ ಎ. ಶಂಬೂರು, ಜಿನರಾಜ್ ಕೋಟ್ಯಾನ್, ಗ್ರಾ. ಪಂ. ಮಾಜಿ ಅಧ್ಯಕ್ಷ ಪ್ರೇಮಾ, ಕಲ್ಲಡ್ಕ ರೈತರ ಸೇವಾ ಸಹಕಾರಿ ಸಂಘದ ನಿರ್ದೇಶಕರುಗಳಾದ ಪ್ರಭಾಕರ ಶೆಟ್ಟಿ ಬೈದರಡ್ಕ, ಮಹಾಬಲ ಸಾಲಿಯನ್ ಮೂಳಿಕೊಡಂಗೆ, ಬಂಟ್ವಾಳ ಮಂಡಲದ ಯುವ ಮೋರ್ಚಾ ಕಾರ್ಯದರ್ಶಿ ಕೌಶಿಲ್ ಶೆಟ್ಟಿಬಾಳಿಕೆ,ಬಂಟ್ವಾಳಮಂಡಲದ ಓಬಿಸಿ ಮೋರ್ಚಾ ಕಾರ್ಯದರ್ಶಿ ಯತೀಶ್ ಮೂಳಿಕೊಡಂಗೆ, ಆಮ್ಟೂರು ಶಕ್ತಿ ಕೇಂದ್ರ ಪ್ರಮುಖರಾದ ಪ್ರವೀಣ್ ಕುಮಾರ್ ರಾಯಪ್ಪ ಕೋಡಿ, ಸಂಪತ್ ಕೋಟ್ಯಾನ್ ಕಡೇಶಿವಾಲಯ ಹಾಗೂ ಬೂತ್ ಅಧ್ಯಕ್ಷರುಗಳಾದ ಶೇಖರ್ ಕೊಟ್ಟಾರಿ, ಸತೀಶ್ ಪೂಜಾರಿ, ಬೂತ್ ಕಾರ್ಯದರ್ಶಿಗಳಾದ ಸಂದೀಪ್ ಶೆಟ್ಟಿ ಬೈದರಡ್ಕ ದಾಮೋದರ ಪೂಜಾರಿ, ಪ್ರಮುಖರಾದ ಗೋಪಾಲಕೃಷ್ಣ ಪೂವಳ, ನವೀನ್ ಕೊಟ್ಟಾರಿ, ಜಯಂತ ಗೌಡ, ರಮೇಶ್ ಕರಿಂಗಾಣ, ಉಮೇಶ್ ಟಿ. ಪೂಜಾರಿ ಗಂಗಾಧರ ಕುಲಾಲ್, ಮೋಹನ್ ಕುಲಾಲ್, ಜಯಶ್ರೀ ಕಲ್ಲಡ್ಕ ದೇವಕಿ ದಿವಾಕರ ಪೂಜಾರಿ, ಸುಮಾ ಶ್ರೀಧರ ಪೂಜಾರಿ, ಪ್ರಮೀಳಾ ವಸಂತ ಪೂಜಾರಿ, ತ್ರಿವೇಣಿ ದಿನೇಶ್, ರಾಕೇಶ್ ಬಜಾರ್ ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು. ಇದೇ ವೇಳೆ ಸಂಸದರು ಹಾಗೂ ಶಾಸಕರು ಗಿಡ ನೆಟ್ಟರು.

ಮಡಿಕೇರಿಯಲ್ಲಿ ಮುಳಿಯ 'ಸಿಲ್ವರ್ ಮ್ಯಾರಥಾನ್ 2026' ಗೆ ಚಾಲನೆ

ಹೊಸ ವಿನ್ಯಾಸದ ಬೆಳ್ಳಿ ಆಭರಣಗಳ ಪ್ರದರ್ಶನ, ಮಾರಾಟ

ಮಡಿಕೇರಿ: ಮುಳಿಯ ಗೋಲ್ಡ್ ಎಂಡ್ ಡೈಮಂಡ್ಸ್‌ನ ವಿಶೇಷ ಎಕ್ಸ್‌ಕ್ಲೂಸಿವ್ ಬೆಳ್ಳಿ ಆಭರಣಗಳ ಬ್ರ್ಯಾಂಡ್ 'ಸಿಲ್ವೆರಿಯಾ' ವತಿಯಿಂದ ಮಡಿಕೇರಿಯಲ್ಲಿ 'ಸಿಲ್ವರ್ ಮ್ಯಾರಥಾನ್ 2026' ಯೋಜನೆಗೆ ಗುರುವಾರ ಚಾಲನೆ ನೀಡಲಾಯಿತು.

ಈ 90 ದಿನಗಳ ವಿಶೇಷ ಯೋಜನೆಯು ಸೆಪ್ಟೆಂಬರ್ 14, 2026ರವರೆಗೆ ನಡೆಯಲಿದ್ದು, ಗ್ರಾಹಕರಿಗೆ ವೈವಿಧ್ಯಮಯ 92.5 ಶುದ್ಧತೆಯ ಸ್ಟರ್ಲಿಂಗ್ ಸಿಲ್ವರ್ ಆಭರಣಗಳನ್ನು ಪರಿಚಯಿಸುವ ಉದ್ದೇಶವನ್ನು ಹೊಂದಿದೆ. ಬೆಳ್ಳಿ ಸರಗಳು, ನೆಕ್ಲೇಸ್‌ಗಳು, ಕಾಲ್ಗೆಜ್ಜೆ ಮಕ್ಕಳ ಜ್ಯುವೆಲ್ಲರಿ, ಉಂಗುರಗಳು, ಬಳೆಗಳು, ಕಿವಿಯೋಲೆಗಳು ಹಾಗೂ ವಾಚ್‌ಗಳ ವಿಶೇಷ ಸಂಗ್ರಹವನ್ನು ವೀಕ್ಷಿಸಿ ಖರೀದಿಸಬಹುದಾಗಿದೆ. ಚಿನ್ನಾಭರಣಗಳಲ್ಲಿ ಲಭ್ಯವಿರುವ ಎಲ್ಲಾ ವಿನ್ಯಾಸಗಳು ಮತ್ತು ವೈವಿಧ್ಯತೆಗಳು ಬೆಳ್ಳಿ ಆಭರಣಗಳಲ್ಲಿ ಲಭ್ಯವಿವೆ.

ಈ 90 ದಿನಗಳ ಅವಧಿಯಲ್ಲಿ ಪ್ರತಿ ಖರೀದಿಯಲ್ಲಿ 5,000 ಹಾಗೂ ಅದಕ್ಕಿಂತ ಹೆಚ್ಚಿನ ಮೌಲ್ಯದ ಸಿಲ್ವರ್ ಆಭರಣಗಳನ್ನು ಖರೀದಿಸುವ ಗ್ರಾಹಕರಿಗೆ ಎಲೆಕ್ಟ್ರಿಕ್ ಸ್ಕೂಟರ್, ಫ್ರಿಜ್ ಸಹಿತ ಆಕರ್ಷಕ ಬಹುಮಾನಗಳನ್ನು ಗೆಲ್ಲುವ ಅವಕಾಶ ಕಲ್ಪಿಸಲಾಗಿದೆ. ಜೊತೆಗೆ ಹಳೆಯ ಬೆಳ್ಳಿ ಆಭರಣಗಳನ್ನು ಹೊಸ ಸಿಲ್ವೆರಿಯಾ ಆಭರಣಗಳಿಗೆ ವಿನಿಮಯ ಮಾಡಿ ಕೊಳ್ಳಲು ಅವಕಾಶವಿದೆ.



ಈ ಕುರಿತು ಪ್ರತಿ ಶಾಖೆಯಲ್ಲೂ ಬೆಳ್ಳಿ ಆಭರಣಗಳ ಕುರಿತ ವಿಚಾರ ಸಂಕಿರಣ, ಫ್ಯಾಷನ್ ಶೋ, ನಿತ್ಯೋಪಯೋಗಿ ಬೆಳ್ಳಿ ಪಾತ್ರೆ ಪಗಡಿಗಳ ಪ್ರದರ್ಶನ ಮಾರಾಟ, ಸೆಲ್ಫಿ ಸ್ಪರ್ಧೆ ಹಾಗೂ ಶಾಲಾ– ಕಾಲೇಜುಗಳಲ್ಲಿ ವಿವಿಧ ಕಾರ್ಯ ಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಜೊತೆಗೆ ಬ್ಯೂಟಿಷಿಯನ್‌ಗಳು ಮತ್ತು ಫ್ಯಾಷನ್ ಕ್ಷೇತ್ರಕ್ಕೆ ಸಂಬಂಧಿಸಿದ ವಿಶೇಷ ಕಾರ್ಯಕ್ರಮಗಳೂ ನಡೆಯಲಿವೆ.

ಈ ಕುರಿತು ಮಾತನಾಡಿದ ಮುಳಿಯ ಸಂಸ್ಥೆಯ ಚೇರ್ಮನ್ ಹಾಗೂ ಮ್ಯಾನೇಜಿಂಗ್ ಡೈರೆಕ್ಟರ್ ಕೇಶವ ಪ್ರಸಾದ್, ಮುಳಿಯ ಸಿಲ್ವೆರಿಯಾದಲ್ಲಿ ವಿವಿಧ ವಿನ್ಯಾಸಗಳ ವೈವಿಧ್ಯಮಯ ಬೆಳ್ಳಿ ಆಭರಣಗಳ ವಿಶೇಷ ಸಂಗ್ರಹ ಲಭ್ಯವಿದೆ. ಒಮ್ಮೆ ಭೇಟಿ ನೀಡಿದರೆ ವೈವಿಧ್ಯತೆ ಮತ್ತು ವಿನ್ಯಾಸಗಳು ಖಂಡಿತವಾಗಿಯೂ ಆಶ್ಚರ್ಯಗೊಳಿಸುತ್ತವೆ. ಈ ಸಂಭ್ರಮಾಚರಣೆ ಪುತ್ತೂರು, ಬೆಳ್ತಂಗಡಿ, ಮಡಿಕೇರಿ, ಗೋಣಿ ಕೊಪ್ಪ ಮತ್ತು ಬೆಂಗಳೂರು ಸೇರಿದಂತೆ ಎಲ್ಲಾ ಮುಳಿಯ ಶಾಖೆಗಳಲ್ಲಿ ನಡೆಯಲಿದ್ದು, ನೆಲ್ಯಾಡಿ ಹಾಗೂ ಕೊಡಗಿನ ಸೋಮವಾರಪೇಟೆಯಲ್ಲಿರುವ ವಿಶೇಷ 'ಸಿಲ್ವೆರಿಯಾ' ಶಾಖೆಗಳಲ್ಲಿಯೂ ಇದರ ಪ್ರಯೋಜನ ಪಡೆಯಬಹುದು ಎಂದು ತಿಳಿಸಿದ್ದಾರೆ.

ಮುಳಿಯ ಗೋಲ್ಡ್ ಎಂಡ್ ಡೈಮಂಡ್ಸ್‌ನ ಆಡಳಿತ ನಿರ್ದೇಶಕ ಕೃಷ್ಣನಾರಾಯಣ ಮಾತನಾಡಿ, ಕಳೆದ ಒಂದು ವರ್ಷದಲ್ಲಿ ಚಿನ್ನದಂತೆ ಬೆಳ್ಳಿಯ ಬೆಲೆಯಲ್ಲಿಯೂ ಏರಿಕೆಯಾಗಿದ್ದು, ಗ್ರಾಹಕರು ತಮ್ಮ ಮನೆಯಲ್ಲಿ ಇರುವ ಬೆಳ್ಳಿ ಆಭರಣಗಳ ಮೌಲ್ಯ ಮಾಪನ ಮಾಡಿ ಹಳೆಯದು ಅಥವಾ ಕಪ್ಪಾಗಿರುವ ಆಭರಣಗಳನ್ನು ಹೊಸ ವಿನ್ಯಾಸಕ್ಕೆ ಬದಲಾಯಿಸಬಹುದು ಎಂದು ತಿಳಿಸಿದರು.

ಪಾಟಾಳಿ ಯಾನೆ ಗಾಣಿಗ ಸಮಾಜ ಸಂಘ: ಶೈಕ್ಷಣಿಕ ಸಾಧಕರಿಗೆ ಸನ್ಮಾನ



ಸುಳ್ಯ: ಪಾಟಾಳಿ ಯಾನೆ ಗಾಣಿಗ ಸಮಾಜ ಸೇವಾ ಸಂಘದ ವತಿಯಿಂದ 10ನೇ ತರಗತಿಯಲ್ಲಿ ರಾಜ್ಯಕ್ಕೆ ಎರಡನೇ ಸ್ಥಾನ ಹಾಗೂ ಪಿಯುಸಿ ವಿಭಾಗದಲ್ಲಿ ರಾಜ್ಯಕ್ಕೆ 11ನೇ ಸ್ಥಾನವನ್ನು ತನ್ನದಾಗಿಸಿಕೊಂಡ ಪ್ರತಿಭಾನ್ವಿತ ವಿಧ್ಯಾರ್ಥಿನಿಯರನ್ನು ಗುರುತಿಸಿ ಸನ್ಮಾನಿಸಲಾಯಿತು.

ಸುಳ್ಯ ನಾಲ್ಕೂರು ಗ್ರಾಮ ಅಂಜೇರಿ ಸುಬ್ಬ ಪಾಟಾಳಿ ಹಾಗೂ ವೇದಾವತಿ ದಂಪತಿ ಪುತ್ರಿ ಸುಶ್ಮಿತಾ 2025 –26ನೇ ಸಾಲಿನಲ್ಲಿ ನಡೆದ 10ನೇ ತರಗತಿ ಪರೀಕ್ಷೆಯಲ್ಲಿ 625 ಅಂಕಗಳಲ್ಲಿ 624 ಅಂಕಗಳನ್ನು ಗಳಿಸಿ ರಾಜ್ಯಕ್ಕೆ 2ನೇ ಸ್ಥಾನವನ್ನು ಹಾಗೂ ಕನಕಮಜಲು ಗ್ರಾಮದ ಗಣೇಶ ಕೊಲ್ಲಮೊಗ್ರ ಹಾಗೂ ಮಮತಾ ದಂಪತಿ ಪುತ್ರಿ ಶರಣ್ಯಾ 2025–26ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯ 600 ಅಂಕಗಳಲ್ಲಿ 590 ಅಂಕಗಳನ್ನು ಗಳಿಸಿ ರಾಜ್ಯಕ್ಕೆ 11ನೇ ಸ್ಥಾನವನ್ನು ಗಳಿಸಿದ್ದು, ಶೈಕ್ಷಣಿಕ ಸಾಧನೆಗೈದ ವಿಧ್ಯಾರ್ಥಿನಿಯರನ್ನು ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭ ಪಾಟಾಳಿ ಸಮಾಜ ಸೇವಾ ಸಂಘದ ಅಧ್ಯಕ್ಷ ಸುರೇಶ್ ಕರ್ಲಪ್ಪಾಡಿ, ಕಾರ್ಯದರ್ಶಿ ಗೋಪಾಲಕೃಷ್ಣ ಮೊರಂಗಲ್ಲು, ಕೋಶಾಧಿಕಾರಿ ರಾಧಾಕೃಷ್ಣ ಬೇರ್ಪಡ್ಕ, ಆಂತರಿಕ ಲೆಕ್ಕ ಪರಿಶೋಧಕ ಮಹಾ ಲಿಂಗನ್ ಬಾಜತ್ತೂರ್‌ಟ್ಟಿ, ಉಪಾಧ್ಯಕ್ಷೆ ಹೇಮ ಲತಾ ಕಲ್ಲುಗುಂಡಿ, ಗ್ರಾಮವಾರು ಸಮಿತಿ ಸಂಚಾಲಕ ಉದಯರವಿ ಕಲ್ಚಾರು, ಕಾರ್ಯಕಾರಿ ಸದಸ್ಯರಾದ ಕೇಶವ ಮೊರಂಗಲ್ಲು, ಪ್ರವೀಣ್ ಕುಮಾರ್ ಜಯನಗರ, ಸತ್ಯಾ ಕೊಲ್ಲಮೊಗ್ರ ಉಪಸ್ಥಿತರಿದ್ದರು.

ಮಂಗಳೂರು ವಿ.ವಿ.ಯಲ್ಲಿ ಶೂನ್ಯ ಕಸ ನಿರ್ವಹಣೆ ತರಬೇತಿ



ಕೊಣಾಜೆ: ಮಂಗಳೂರು ವಿಶ್ವವಿದ್ಯಾನಿಲಯದಸ್ವಚ್ಛತಾಸಿಬ್ಬಂದಿಗಳಿಗೆಮೂಲದಲ್ಲೇ ಕಸವನ್ನು ವಿಂಗಡಿಸಿ ಸಂಪನ್ಮೂಲವಾಗಿ ಪರಿವರ್ತಿಸುವ ಶೂನ್ಯ ತ್ಯಾಜ್ಯ ನಿರ್ವಹಣೆ ವಿಧಾನದ ಕುರಿತು ಅರಿವು ಮೂಡಿಸುವ ಮಾಹಿತಿ ಕಾರ್ಯಕ್ರಮ ನಡೆಯಿತು.

ಮಂಗಳೂರುವಿವಿಯಸಮಾಜಕಾರ್ಯ ಸ್ನಾತಕೋತ್ತರ ವಿಭಾಗ ಮತ್ತು ಜನ ಶಿಕ್ಷಣ ಟ್ರಸ್ಟ್ ಸಹಯೋಗದಲ್ಲಿ ಲೆಕ್ಚರ್ ಹಾಲ್‌ನಲ್ಲಿ ನಡೆದ ಮಾಹಿತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸ್ವಚ್ಛತಾ ರಾಯಭಾರಿ ಶೀನ ಶೆಟ್ಟಿ ಕಸದ ಅಸಮರ್ಪಕ ನಿರ್ವಹಣೆಯಿಂದಾಗುವ ಅಪಾಯ, ಕಸವನ್ನು ಸಂಪನ್ಮೂಲವಾಗಿ ಪರಿವರ್ತಿಸುವ ಉಪಾಯಗಳು ಬಗ್ಗೆ ಮಾಹಿತಿ ನೀಡಿ, ಸಂವಾದ ನಡೆಸಿದರು.

ಟ್ರಸ್ಟ್ ನಿರ್ದೇಶಕರು 'ಭುವಿ' ಚಿತ್ರ ಪ್ರದರ್ಶನದ ಮೂಲಕ ಬಯಲು ಕಸಾಲಯಗಳ ಬೆಂಕಿಯಿಂದ ಪರಿಸರ ಜೀವ ಸಂಕುಲಕ್ಕೆ ಆಗುತ್ತಿರುವ ಕಸ ಕಂಟಕಗಳ ಕುರಿತು ತಿಳಿಸಿದರು.

ಸಮಾಜ ಕಾರ್ಯ ವಿಭಾಗದ ಮುಖ್ಯಸ್ಥ ಪೌಲ್ ಜಿ. ಅಕ್ವಿನಾಸ್, ವಿದ್ಯಾರ್ಥಿಗಳಿಗೆ, ಪ್ರಾಧ್ಯಾಪಕರಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ ಶೂನ್ಯ ಕಸ ನಿರ್ವಹಣೆ ಮಾಹಿತಿ ನೀಡುವುದು ಅಗತ್ಯವಿದೆ ಎಂದರು.

ಸಹಾಯಕ ಪ್ರಾಧ್ಯಾಪಕಿ ಡಾ. ಯಶಸ್ವಿನಿ ಭಟ್ಟಂಗಾಯ ಪ್ರಾಸ್ತಾವಿಕ ಮಾತನಾಡಿದರು. ಪುತ್ತೂರಿನ ಸ್ವಚ್ಛತಾ ಸೇನಾನಿ ಆಸ್ವಾಲ್ಡ್ ಸಾಲ್ದಾನ, ಸಂಶೋಧನಾ ವಿದ್ಯಾರ್ಥಿ ವಿದ್ಯಾ ಉಪಸ್ಥಿತರಿದ್ದರು. ಸಮಾಜ ಕಾರ್ಯ ವಿದ್ಯಾರ್ಥಿಗಳಾದ ಲಿಖಿತಾ, ಅಕ್ಷತಾ, ಸಾಕೇತ್ ಕಾರ್ಯಕ್ರಮ ಸಯೋಜಿಸಿದರು.

ಮಕ್ಕಳಿಗೆ 'ಸಂಸ್ಕಾರ' ನೋಟ್ ಪುಸ್ತಕಗಳ ಉಚಿತ ವಿತರಣೆ



ಉಡುಪಿ: ಹಿಂದು ಜನಜಾಗೃತಿ ಸಮಿತಿ ವತಿಯಿಂದ ಟಿ. ಎ. ಪೈ ಮಾಡರ್ನ್ ಹಿರಿಯ ಪ್ರಾಥಮಿಕ ಶಾಲೆಯಲ್ಲಿನ 74 ವಿದ್ಯಾರ್ಥಿಗಳಿಗೆ ಉಚಿತವಾಗಿ ಸಂಸ್ಕಾರ ನೋಟ್ ಪುಸ್ತಕಗಳನ್ನು ವಿತರಿಸುವ ಕಾರ್ಯಕ್ರಮ ನಡೆಸಲಾಯಿತು.

ಆದರ್ಶ ವಿಚಾರಗಳ ಉಲ್ಲೇಖ

ಸಂಸ್ಕಾರ ವಹಿಯ ಮುಖಪುಟ ಹಾಗೂ ಹಿಂಬದಿಯ ಪುಟಗಳಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ರಾಷ್ಟ್ರ ಪುರುಷರ ಹಾಗೂ ಉತ್ತಮ ರಾಜ್ಯಾಡಳಿತ ನಡೆಸಿ ಪ್ರಜೆಗಳ ಹಿತಕ್ಕಾಗಿ ಹೋರಾಡಿದ ರಾಜ–ಮಹಾರಾಜರ ಆದರ್ಶಗಳನ್ನು ಮುದ್ರಿಸಲಾಗಿದೆ. ಒಳಗಿನ ಪುಟಗಳಲ್ಲಿ ಸುಸಂಸ್ಕಾರ ಮತ್ತು ನೈತಿಕತೆ ಕುರಿತು ವಿಷಯಗಳು ಒಳಗೊಂಡಿವೆ. ಮಕ್ಕಳು ಅವುಗಳನ್ನು ಓದಿ ತಿಳಿದುಕೊಂಡು ಜೀವನದಲ್ಲಿ ಅಳವಡಿಸಿಕೊಂಡರೆ ಮಕ್ಕಳು ಆದರ್ಶ ವಿದ್ಯಾರ್ಥಿಯಾಗಿ ರೂಪುಗೊಳ್ಳುವುದರಲ್ಲಿ ಸಂದೇಹವಿಲ್ಲ, ಇದರಿಂದ ಅವರು ಮುಂದೆ ಆದರ್ಶ ರಾಷ್ಟ್ರವನ್ನು ಕಟ್ಟಲು ಸಾಧ್ಯವಾಗುತ್ತದೆ.

ಈ ಸಂದರ್ಭ ಸಂಸ್ಥೆಯ ಕಾರ್ಯಕರ್ತರಾದ ಪ್ರತಿಮಾ, ವನಮಾಲಾ, ಗೀತಾ ಆಚಾರ್ಯ, ದಿನೇಶ್ ಮತ್ತು ಧರ್ಮಪ್ರೇಮಿ ಬಾಲಕೃಷ್ಣ ನಾಯಕ್ ಉಪಸ್ಥಿತರಿದ್ದರು.

ಕಾರ್ಯಕ್ರಮದ ಯಶಸ್ವಿ ಆಯೋಜನೆಗೆ ಶಾಲೆಯ ಮುಖ್ಯೋಪಾಧ್ಯಾಯರು ಹಾಗೂ ಸಿಬ್ಬಂದಿ ವರ್ಗದವರು ಸಹಕಾರ ನೀಡಿದರು.

ಸುಳ್ಯ ಪೊಲೀಸ್ ಠಾಣೆಯಲ್ಲಿ ವಿದ್ಯಾರ್ಥಿಗಳಿಗೆ ತೆರೆದ ಮನೆ ಕಾರ್ಯಕ್ರಮ

ಶಾಲಾ ಮಕ್ಕಳಿಗೆ ರಕ್ಷಣೆ, ಕಾನೂನು ಅರಿವಿನ ಪಾಠ

ಸುಳ್ಯ: ಜೇಸಿಐ ಸುಳ್ಯ ಪಯಸ್ವಿನಿ ವತಿಯಿಂದ ಕೊಡಿಯಾಲ್‌ಬೈಲ್ ಮಹಾತ್ಮ ಗಾಂಧಿ ಮಲ್ನಾಡ್ ವಿದ್ಯಾ ಸಂಸ್ಥೆಯ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ತೆರೆದ ಮನೆ ಕಾರ್ಯಕ್ರಮವನ್ನು ಸುಳ್ಯ ಪೊಲೀಸ್ ಠಾಣೆಯಲ್ಲಿ ಗುರುವಾರ ನಡೆಸಲಾಯಿತು.

ಮಕ್ಕಳಿಗೆ ಸಂಬಂಧಿತ ಕಾನೂನುಗಳು ಹಾಗೂ ಪೊಲೀಸ್ ಠಾಣಾ ಕಾರ್ಯ ವೈಖರಿ ಬಗ್ಗೆ ಪ್ರಾತ್ಯಕ್ಷಿಕೆಯೊಂದಿಗೆ ಠಾಣಾ ಉಪನಿರೀಕ್ಷಕ ಸಂತೋಷ್ ಕುಮಾರ್ ಬಿ.ಪಿ. ಮಾಹಿತಿ ನೀಡಿದರು. ಠಾಣೆಯಲ್ಲಿ ನಡೆಯುವ ಕೆಲಸಗಳ ಬಗ್ಗೆ ಹಾಗೂ ಎಲ್ಲಾ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುವ ಕೊಠಡಿ ಮತ್ತು ಉಪಕರಣ, ಬಂಧಿಖಾನೆ ಮುಂತಾದ ವಿಷಯಗಳ ಕುರಿತು ಅರಿವು ಹಾಗೂ ಮಾಹಿತಿಯನ್ನು ಮೂಡಿಸಿದರು.

ಸಹಾಯಕ ಪೊಲೀಸ್ ಉಪನಿರೀಕ್ಷಕ ಶ್ರೀಕೃಷ್ಣ



ಮಹಿಳಾ ಪೊಲೀಸ್ ಕಾನ್ಸ್‌ಟೇಬಲ್ ಜ್ಯೋತಿ ಅವರು, ಮಕ್ಕಳ ಹಕ್ಕುಗಳ ಕಾನೂನು, ರಕ್ಷಣೆ ಮತ್ತು ಸಂಚಾರ ನಿಯಮ ಠಾಣಾ ವೈಖರಿಯ ಕುರಿತು ತಿಳಿಸಿದರು.

ಈ ಸಂದರ್ಭ ಜೇಸಿಐ ಸುಳ್ಯ ಪಯಸ್ವಿನಿ ಅಧ್ಯಕ್ಷೆ ಲತಾಶ್ರೀ ಸುಪ್ರೀತ್ ಮೋಂಟಡ್ಕ, ಎಂ.ಜಿ.ಎಂ. ಶಾಲಾ ಸಂಚಾಲಕ ದೊಡ್ಡಣ್ಣ ಬರೆಮೇಲು, ಮುಖ್ಯ ಶಿಕ್ಷಕಿ ವಿಜಯಲಕ್ಷ್ಮೀ ಎನ್., ತಾರಾ ಮಾಧವ ಚೊಂತಾರು, ಸತ್ಯ ಶಾಂತಿ ತ್ಯಾಗ ಮೂರ್ತಿ, ಪ್ರಶಾಂತ್ ಅಂಬೆಕಲ್ಲು, ಶಿಕ್ಷಕರಾದ ಚಿತ್ರಲೇಖಾ ಮಡಪ್ಪಾಡಿ, ಚೈತ್ರಾ ಬಿ.ಡಿ, ಶಿವರಂಜಿನಿ, ದಿವ್ಯ ಎನ್., ದೈಹಿಕ ಶಿಕ್ಷಕ ಜಯಪ್ರಕಾಶ್ ಕೆ., ಮುಖಂಡ ಸುಪ್ರೀತ್ ಮೋಂಟಡ್ಕ ಹಾಗೂ ಠಾಣಾ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಕೆದಿಲದಲ್ಲಿ ಯುವವಾಹಿನಿ ಮಾಣಿ ಘಟಕದಿಂದ ಯುವ ವೃಕ್ಷೋತ್ಸವ

ಮುಂದಿನ ಪೀಳಿಗೆಗೆ ನೀಡುವ ಅಮೂಲ್ಯ ಉಡುಗೊರೆ

ಬಂಟ್ವಾಳ: ಈಗ ನೆಡಲಾಗುವ ಗಿಡ ಮುಂದಿನ ಪೀಳಿಗೆಗೆ ನೀಡುವ ಅಮೂಲ್ಯ ಉಡುಗೊರೆಯಾಗಿದೆ ಎಂದು ಯುವವಾಹಿನಿ ಮಾಣಿ ಘಟಕ ಅಧ್ಯಕ್ಷ ಗಣೇಶ್ ಸಾಯಿ ಕೊಡಾಜೆ ಹೇಳಿದರು.

ಗುರುವಾರ ಯುವ ವೃಕ್ಷೋತ್ಸವದ ನಾಲ್ಕನೇ ಹಂತದ ಕಾರ್ಯಕ್ರಮದ ಅಂಗವಾಗಿ ಕೆದಿಲ ಗ್ರಾಮ ಪಂಚಾಯತ್ ರುದ್ರಭೂಮಿಯಲ್ಲಿ ವೃಕ್ಷೋತ್ಸವ ಅಂಗವಾಗಿ ಗಿಡ ನಾಟಿ ಮಾಡಿ ಮಾತನಾಡಿದರು.

ಅಂತಿಮ ಯಾತ್ರೆಯ ತಾಣವಾಗಿರುವ ರುದ್ರಭೂಮಿಯೂ ಹಸಿರಿನಿಂದ ಕಂಗೊಳಿಸಿದಾಗ, ಅದು ಜೀವನದ ನಿರಂತರತೆಯ ಸಂಕೇತವಾಗುತ್ತದೆ ಎಂಬ ಸಂದೇಶದೊಂದಿಗೆ ಗಿಡಗಳನ್ನು ನೆಟ್ಟು ಪರಿಸರ ಸಂರಕ್ಷಣೆಯ ಸಂಕಲ್ಪ ಕೈಗೊಳ್ಳಲಾಯಿತು.

ನಂತರ ಪಾಟ್ರಕೋಡಿ ಅಂಗನವಾಡಿ ಕೇಂದ್ರದಲ್ಲಿ,



ಗಿಡ ನಾಟಿ ಮಾಡಲಾಯಿತು.

ಈ ಸಂದರ್ಭ ಘಟಕದ ಕೋಶಾಧಿಕಾರಿಯಾದ ತ್ರಿವೇಣಿ ರಮೇಶ್, ವ್ಯಕ್ತಿತ್ವ ವಿಕಸನ ನಿರ್ದೇಶಕರಾದ ಸತೀಶ್ ಪೂಜಾರಿ, ಸಂಘಟನಾ ಕಾರ್ಯದರ್ಶಿ ಬಾಲಕೃಷ್ಣ ಕೆರೆಕೋಡಿ, ನಿತೀನ್ ಅಂಗರಾಜೆ ಯಶೋಧ ಪೆರ್ನೆ ಕೆದಿಲ ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ಹಾಗೂ ಸಿಬ್ಬಂದಿಗಳು, ಅಂಗನವಾಡಿ ಕೇಂದ್ರದ ಶಿಕ್ಷಕಿ, ಸಹಾಯಕಿ ಉಪಸ್ಥಿತರಿದ್ದರು.

ಸುತ್ತಮುತ್ತ

ಮಂಗಳೂರು ನಗರ: ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಂಗಳೂರು: ತುರ್ತು ಕಾಮಗಾರಿ ಹಮ್ಮಿಕೊಂಡಿರುವುದರಿಂದ ಪ್ರಗತಿ ಸರ್ವಿಸ್ ಸ್ಟೇಷನ್, ಬೆಸೆಂಟ್ ಕಾಲೇಜ್, ಸಿಟಿ ಪಾಯಿಂಟ್, ಭಗವತಿ ನಗರ, ಕೊಡಿಯಾಲ್‌ಬೈಲ್, ಶಾರದಾ ವಿದ್ಯಾಲಯ, ಪಿವಿಎಸ್ ಕಲಾಕುಂಜ, ಎಕ್ಸ್‌ಪರ್ಟ್ ಕಾಲೇಜು, ಅಳಕೆ, ಕಾರ್‌ಸ್ಟ್ರೀಟ್, ಗೋಕರ್ಣನಾಥ ಓಲ್ಡ್ ಗೇಟ್ ರೋಡ್, ಕುದ್ರೋಳಿ, ನಡುಪಳ್ಳಿ, ಜಮ್ಮಮಸೀದಿ, ಸುಂದರ್ ಐಸ್ಪ್ಲಾಂಟ್, ಬಸವನಗುಡಿ, ಕೆನರಾ ಹೈಸ್ಕೂಲ್, ಡೊಂಗರಕೇರಿ, ಹೋಂಡಾ ಮ್ಯಾಟ್ರಿಕ್ಸ್, ಸಿಟಿಪಾಯಿಂಟ್, ಓಶಿಯನ್ ಪರ್ಲ್, ಆಯೋಧ್ಯಹೋಟೆಲ್, ಹೋಟೆಲ್ ತಾಜ್ ಮಹಲ್, ಮಾನಸಟವರ್, ಪಿವಿಎಸ್ ಸರ್ಕಲ್, ಕೊಡಿಯಾಲ್‌ಬೈಲ್, ಮಣ್ಣಗುಡ್ಡ, ಹರಿದಾಸ್ ಲೇನ್, ಕಾಂತರಾಜಶೆಟ್ಟಿಲೇನ್, ಅಳಕೆ ಮಾರ್ಕೆಟ್, ವಾದಿರಾಜನಗರ, ಬೊಕ್ಕಪಟ್ನ, ಚರ್ಚ್ ಗೇಟ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಜೂ.19ರಂದು ಬೆಳಿಗ್ಗೆ 9.30ರಿಂದ ಸಂಜೆ 5.30ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಬೆಂದೂರು ಫೀಡರ್

ಬೆಂದೂರು ಫೀಡರ್‌ನಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ, ಲೋವರ್ ಬೆಂದೂರು, ರಾಧಾ ಮೆಡಿಕಲ್ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಜೂ.19ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಕೊರಗ ಸಮುದಾಯಕ್ಕೆ ವಸತಿ ಸೌಲಭ್ಯ: ಅರ್ಜಿ ಆಹ್ವಾನ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ವಸತಿ ರಹಿತ ಕೊರಗ ಸಮುದಾಯದವರಿಗೆ ರೂ. 4.50 ಲಕ್ಷಗಳಂತೆ ವಸತಿ ಸೌಲಭ್ಯಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಈಗಾಗಲೇ ಅರ್ಜಿ ಸಲ್ಲಿಸಿ ಮನೆ ಮಂಜೂರು ಆಗದಿದ್ದಲ್ಲಿ ಪುನಃ ಅರ್ಜಿ ಸಲ್ಲಿಸುವ ಅಗತ್ಯವಿರುವುದಿಲ್ಲ. ಈವರೆಗೆ ಅರ್ಜಿ ಸಲ್ಲಿಸದಿದ್ದವರು ಹೊಸದಾಗಿ ಅರ್ಜಿ ಸಲ್ಲಿಸಬಹುದು. 15 ವರ್ಷಗಳೊಳಗೆ ಸರಕಾರದ ಯಾವುದೇ ಇಲಾಖೆಯಿಂದ ವಸತಿ ಸೌಲಭ್ಯ ಪಡೆದಿರಬಾರದು. ಆರ್.ಡಿ ಸಂಖ್ಯೆ ಹೊಂದಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಹೊಂದಿರಬೇಕು. ರೇಷನ್ ಕಾರ್ಡ್, ಆಧಾರ್ ಕಾರ್ಡ್ ಹಾಗೂ ವೋಟರ್ ಐಡಿ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಮೊಬೈಲ್ ಸಂಖ್ಯೆ ಕಡ್ಡಾಯವಾಗಿ ನಮೂದಿಸಬೇಕು. ಅರ್ಜಿ ನಮೂನೆಯನ್ನು ಗ್ರಾಮ ಪಂಚಾಯತ್/ ನಗರಸಭೆ/ ಪುರಸಭೆಗಳಿಂದ ಪಡೆದು ಭರ್ತಿ ಮಾಡಿ ಆಯಾ ತಾಲೂಕಿನ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರ (ಗ್ರೇಡ್-1/2) ಕಚೇರಿಗೆ ಸಲ್ಲಿಸಬೇಕು ಎಂದು ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆ ಯೋಜನಾ ಸಮನ್ವಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೃಶ್ಯಕಲೆ ಪದವಿ ಪ್ರವೇಶಾತಿ: ಅರ್ಜಿ ಆಹ್ವಾನ

ಮಂಗಳೂರು: ಮೈಸೂರು ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜಿನ 2026-27 ನೇ ಶೈಕ್ಷಣಿಕ ಸಾಲಿನ ಬ್ಯಾಚುಲರ್ ಆಫ್ ವಿಜ್ಯುವಲ್ ಆರ್ಟ್ಸ್ (ಬಿ.ವಿ.ಎ) ತರಗತಿಗಳ ಪ್ರವೇಶಾತಿಗೆ ದ್ವಿತೀಯ ಪಿ.ಯು.ಸಿ ಅಥವಾ ಸಮಾನಾಂತರ ಕೋರ್ಸುಗಳಲ್ಲಿ ಪಾಸ್ ಆಗಿರುವ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅಭ್ಯರ್ಥಿಗಳು ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಕೊನೆಯ ದಿನ ಜೂನ್ 22. ಪದವಿಯಲ್ಲಿ ಚಿತ್ರಕಲೆ, ಶಿಲ್ಪಕಲೆ, ಗ್ರಾಫಿಕ್ಸ್, ಅನ್ವಯಕಲೆ, ಕಲಾ ಇತಿಹಾಸ ಹಾಗೂ ಛಾಯಾಚಿತ್ರ ಮತ್ತು ಛಾಯಾಚಿತ್ರ ಪತ್ರಿಕೋದ್ಯಮ ವಿಷಯಗಳಲ್ಲಿ ವಿಶೇಷ ಅಧ್ಯಯನ ಒಳಗೊಂಡಿರುತ್ತದೆ. ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಅರ್ಹತಾ ಪರೀಕ್ಷೆ ಮತ್ತು ವೈಯಕ್ತಿಕ ಸಂದರ್ಶನವನ್ನು ಜೂನ್ 23 ರಂದು ನಡೆಸಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 0821-2438931 ಸಂಪರ್ಕಿಸಬಹುದು ಎಂದು ಮೈಸೂರು ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜಿನ ಡೀನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿಳಿನೆಲೆ ಪ್ರೌಢ ಶಾಲೆ: ವಿದ್ಯಾರ್ಥಿ ಸಂಘಗಳ ಉದ್ಘಾಟನೆ

ಸುಬ್ರಹ್ಮಣ್ಯ: ವಿದ್ಯಾರ್ಥಿ ಜೀವನದಲ್ಲಿ ವಿದ್ಯಾರ್ಜನೆಯ ಕಡೆ ಹೆಚ್ಚಿನ ಗಮನ ಗಮನಹರಿಸಬೇಕು. ಪಠ್ಯದೊಂದಿಗೆ ಪಠ್ಯೇತರ ಚಟುವಟಿಕೆಗಳಲ್ಲಿ ಕೂಡ ವಿದ್ಯಾರ್ಥಿಗಳು ತಮ್ಮನ್ನು ತೊಡಗಿಸಿಕೊಳ್ಳಬೇಕು. ಇದು ಅಗಾಧವಾದ ಜ್ಞಾನ ಸಂಪಾದನೆಗೆ ಪೂರಕವಾಗುತ್ತದೆ. ವಿವಿಧ ಸಂಘಗಳು ಹಮ್ಮಿಕೊಳ್ಳುವಂತಹ ಕಾರ್ಯಕ್ರಮಗಳಲ್ಲಿ ತೊಡಗಿ ಕೊಂಡಾಗ ನಮ್ಮಲ್ಲಿರುವ ಪ್ರತಿಭೆಗಳನ್ನು ತೋರಿಸಿಕೊಳ್ಳುವುದಕ್ಕೆ ಸಾಧ್ಯ ಎಂದು ಎಡಮಂಗಲ ಸರಕಾರಿ ಪ್ರೌಢ ಶಾಲೆಯ ಕನ್ನಡ ಅಧ್ಯಾಪಕ ಡಾ. ಸಂತೋಷ್ ಪಿ.ಎಸ್. ಹೇಳಿದರು.

ಶ್ರೀ ಸುಬ್ರಹ್ಮಣ್ಯ ಮಠ ಎಜುಕೇಶನ್ ಸೊಸೈಟಿ ಆಡಳಿತಕೊಳಪಟ್ಟ ಬಿಳಿನೆಲೆ ಶ್ರೀ ಗೋಪಾಲಕೃಷ್ಣ ಪ್ರೌಢ ಶಾಲೆಯ ವಿವಿಧ ಸಂಘಗಳಿಗೆ ದೀಪ ಬೆಳಗುವುದರ ಮೂಲಕ ಚಾಲನೆ ನೀಡಿ ಮಾತನಾಡಿದರು. ಆಡಳಿತ ಮಂಡಳಿಯ ಕಾರ್ಯದರ್ಶಿ ಶ್ರೀಕೃಷ್ಣಶರ್ಮ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಗುರು ಸತ್ಯಶಂಕರ ಭಟ್, ವಿದ್ಯಾರ್ಥಿ ನಾಯಕ ಜೀವನ್, ವಿವಿಧ ಸಂಘಗಳ ಅಧ್ಯಕ್ಷರಾದ ಸೃಷ್ಟಿ ತೃಷಾ, ನಿರೀಕ್ಷಾ, ಜಾಹ್ನವಿ, ಉಪನಾಯಕಿಯರಾದ ಸುಮೇಧಾ ಭಟ್, ಪೂಜಿತಾ, ಸಂಜನಾ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕೀರ್ತಿ ವಂದಿಸಿದರು. ಶ್ರಾವ್ಯ ಹಾಗೂ ಧನ್ವಿ ಕಾರ್ಯಕ್ರಮ ನಿರ್ವಹಿಸಿದರು.

ಉಡೋತ್‌ಮೊಟ್ಟೆಗೆ ಕೊಡಗು ಜಿಲ್ಲಾಧಿಕಾರಿ ಭೇಟಿ | ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ ನಿರ್ದೇಶನ

ಗಾಜಿನ ಸೇತುವೆ ವೀಕ್ಷಣೆ ನಿರ್ಬಂಧ ಬಗ್ಗೆ ಮರು ಪರಿಶೀಲನೆ

ಮಡಿಕೇರಿ: ಮಡಿಕೇರಿ ಹೊರವಲಯದ ಅಬ್ಬಿ ಜಲಪಾತ ಮತ್ತು ಮಾಂದಲ್ ಪಟ್ಟಿಗೆ ತೆರಳುವ ಮಾರ್ಗದ ಜಂಕ್ಷನ್ ಬಳಿ ಮತ್ತು ಉಡೋತ್‌ಮೊಟ್ಟೆ ಬಳಿ ನಿರ್ಮಾಣಗೊಂಡಿರುವ ಗಾಜಿನ ಸೇತುವೆ ಸ್ಥಳಕ್ಕೆ ಜಿಲ್ಲಾಧಿಕಾರಿ ಎಸ್.ಜೆ. ಸೋಮಶೇಖರ್ ಅವರು ಗುರುವಾರ ಭೇಟಿ ನೀಡಿ ಪರಿಶೀಲಿಸಿದರು.

ಮೊದಲಿಗೆ ಅಬ್ಬಿ ಜಲಪಾತ ಮತ್ತು ಮಾಂದಲ್ ಪಟ್ಟಿಗೆ ತೆರಳುವ ಮಾರ್ಗದ ಜಂಕ್ಷನ್ ಬಳಿಯ ಗಾಜಿನ ಸೇತುವೆ ವೀಕ್ಷಿಸಿದ ಅವರು, ಗಾಜಿನ ಸೇತುವೆ ನಿರ್ಮಾಣ ಮಾಡಿರುವ ಜಾಗ, ಗಾಜಿನ ಸೇತುವೆ ನಿರ್ಮಾಣ ಮಾಡಲು ಅನುಮತಿ ಪಡೆಯಲಾಗಿದೆಯೇ, ನಿರ್ಮಾಣ ಸಂದರ್ಭದಲ್ಲಿ ಇಂಜಿನಿಯರ್‌ಗಳ ದೃಢೀಕರಣ ಪತ್ರ, ಹಾಗೆಯೇ ಪ್ರವಾಸಿಗರ ಅನುಕೂಲಕ್ಕಾಗಿ ವಾಹನ ನಿಲುಗಡೆಗೆ ಸ್ಥಳಾವಕಾಶ, ಪ್ರವಾಸಿಗರ ವೀಕ್ಷಣೆಗೆ ಎಷ್ಟು ಕಾಲಾವಕಾಶ ಮತ್ತು ಪ್ರವಾಸಿಗರಿಗೆ ನಿಗದಿ ಮಾಡಿರುವ ಶುಲ್ಕ ಮತ್ತಿತರ ಬಗ್ಗೆ ಮಾಹಿತಿ ಪಡೆದರಲ್ಲದೆ, ಪ್ರವಾಸೋದ್ಯಮ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ನಿರ್ದೇಶನ ನೀಡಿದರು.



ಜೀಪು ಚಾಲಕರಿಂದ ಮಾಹಿತಿ

ಅಬ್ಬಿಫಾಲ್ಸ್ ಮತ್ತು ಮಾಂದಲ್ ಪಟ್ಟಿಗೆ ತೆರಳುವ ಜಂಕ್ಷನ್ ಸ್ಥಳಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಅಲ್ಲಿನ ಮಾಂದಲ್ ಪಟ್ಟಿಗೆ ತೆರಳುವ ಜೀಪುಗಳ ಮಾಹಿತಿ ಪಡೆದ ಜಿಲ್ಲಾಧಿಕಾರಿಯವರು ಪ್ರವಾಸಿಗರಿಂದ ಬಾಡಿಗೆ ದರ ಎಷ್ಟು ಪಡೆಯಲಾಗುತ್ತಿದೆ. ವಾಹನ ಮತ್ತು ಚಾಲಕರಿಗೆ ಪರವಾನಗಿ ಇದೆಯೇ ಎಂದು ಮತ್ತಿತರ ಬಗ್ಗೆ ಚಾಲಕರಿಂದ ಮಾಹಿತಿ ಪಡೆದರು.

ಸುರಕ್ಷತೆಗೆ ಒತ್ತು ನೀಡಬೇಕು. ಪ್ರವಾಸಿಗರಿಗೆ ಕಿರಿಕಿರಿ ಉಂಟುಮಾಡಬಾರದು. ದೂರುಗಳು ಬರದಂತೆ ಎಚ್ಚರ ವಹಿಸಬೇಕು ಎಂದು ನಿರ್ದೇಶನ ನೀಡಿದರು. ಬಳಿಕ ಉಡೋತ್‌ಮೊಟ್ಟೆ ಬಳಿಯ ಗಾಜಿನ ಸೇತುವೆ ವೀಕ್ಷಿಸಿದ ಜಿಲ್ಲಾಧಿಕಾರಿಯವರು, ಪ್ರವಾಸಿಗರ ಸುರಕ್ಷತೆಗೆ ಒತ್ತು ನೀಡಬೇಕು. ವಾಹನ ನಿಲುಗಡೆಗೆ ಜಾಗ ಇಲ್ಲದಿರುವುದರಿಂದ ಸಾಮಾನ್ಯವಾಗಿ ಓಡಾಡುವ ವಾಹನಗಳ ಸಂಚಾರಕ್ಕೆ ತೊಂದರೆಯಾಗದಂತೆ ಗಮನಹರಿಸಬೇಕು. ಪ್ರವಾಸೋದ್ಯಮ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಸೂಚಿಸಿದರು.

ಅಗತ್ಯ ಸೂಚನೆ

ಹೋಂಸ್ಟೇ ಮತ್ತು ರೆಸಾರ್ಟ್‌ನಲ್ಲಿ ಸುರಕ್ಷತೆ ಸಂಬಂಧ ಸಿಸಿಟಿವಿ, ನೋಂದಣಿ ಪುಸ್ತಕ, ದೂರು ನಿರ್ವಹಣಾ ಪುಸ್ತಕ, ವಿದೇಶಿ ಪ್ರವಾಸಿಗರು ಆಗಮಿಸಿದಲ್ಲಿ ಅವರ ಪಾಸ್‌ಪೋರ್ಟ್, ವಿಮಾನ ಟಿಕೆಟ್, ಗುರುತಿನ ಚೀಟಿ, ಹಾಗೆಯೇ ವಿದೇಶಿ ಪ್ರವಾಸಿಗರ ಬಗ್ಗೆ ಸ್ಥಳೀಯ ಪೊಲೀಸ್ ಠಾಣೆಗೆ ಕಡ್ಡಾಯವಾಗಿ ಮಾಹಿತಿ ನೀಡುವುದು ಮತ್ತಿತರ ಬಗ್ಗೆ ಮಾಹಿತಿ ಪಡೆದರು. ಕಸ ವಿಲೇವಾರಿ ಸಂಬಂಧ ಹಸಿ ಕಸ ಮತ್ತು ಒಣ ಕಸವನ್ನು ಬೇರ್ಪಡಿಸಿ ವಿಲೇವಾರಿ ಮಾಡಬೇಕು. ಶುದ್ಧ ಕುಡಿಯುವ ನೀರು ಒದಗಿಸಬೇಕು ಎಂದರು. ಹೋಂಸ್ಟೇ/ ಬಾರ್ ರೆಸಾರ್ಟ್‌ನಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗಳ ಬಗ್ಗೆಯೂ ಸಹ ಸಂಪೂರ್ಣ ಮಾಹಿತಿ ಇರಬೇಕು ಎಂದು ಜಿಲ್ಲಾಧಿಕಾರಿ ನಿರ್ದೇಶನ ನೀಡಿದರು.

'ಮಳೆಗಾಲದಲ್ಲಿ ಮುನ್ನೆಚ್ಚರ ವಹಿಸುವ ಸಂಬಂಧ ಈ ಎರಡು ಗಾಜಿನ ಸೇತುವೆ ವೀಕ್ಷಣೆಗೆ ಈ ಹಿಂದೆ ನಿರ್ಬಂಧ ಹೇರಲಾಗಿತ್ತು, ಈ ಬಗ್ಗೆ ಮರುಪರಿಶೀಲಿಸಿ, ಪ್ರವಾಸಿಗರು ಮತ್ತು ಎಲ್ಲರ ಹಿತಾಸಕ್ತಿ ಕಾಪಾಡುವಲ್ಲಿ ಜಿಲ್ಲಾಡಳಿತ ಅಗತ್ಯ ಕ್ರಮವಹಿಸಲಿದೆ' ಎಂದು ಜಿಲ್ಲಾಧಿಕಾರಿ ಅವರು ಹೇಳಿದರು. ಬಳಿಕ ಕಡಗದಾಳು ಬಳಿ ರೆಸಾರ್ಟ್ ಒಂದಕ್ಕೆ ಅನುಮತಿ ನೀಡುವ ಸಂಬಂಧ ಹೋಂ ಸ್ಟೇಗೆ ಭೇಟಿ ನೀಡಿ ಸ್ಥಳ ಪರಿಶೀಲಿಸಿದರು.

ಕೃಷಿಯೇತರ ಚಟುವಟಿಕೆಗೆ ಭೂಮಿ ಪರಿವರ್ತನೆ ಯಾಗಿದೆಯೇ, ಗ್ರಾಮ ಪಂಚಾಯಿತಿಯಿಂದ ಹೋಂ ಸ್ಟೇ ನಿರ್ಮಾಣಕ್ಕೆ ಅನುಮತಿ ಪಡೆಯಲಾಗಿದೆಯೇ, ಪೊಲೀಸ್ ಇಲಾಖೆಯಿಂದ ಎನ್‌ಒಸಿ, ವಿದ್ಯುತ್ ಪೂರೈಕೆ, ಮತ್ತಿತರ ಬಗ್ಗೆ ಮಾಹಿತಿ ಪಡೆದರು.

ಪ್ರವಾಸೋದ್ಯಮ ಇಲಾಖೆ ಉಪ ನಿರ್ದೇಶಕ ಶಶಿಧರ, ಸಮಾಲೋಚಕ ಜತಿನ್, ಗಾಜಿನ ಸೇತುವೆಯ ಮಾಲಕರು, ಹೋಂಸ್ಟೇ/ ರೆಸಾರ್ಟ್ ಮಾಲಕರು, ಕಂದಾಯ ಇಲಾಖೆ ಅಧಿಕಾರಿಗಳು ಇತರರು ಇದ್ದರು.

ಬಿದ್ಕಲ್‌ಕಟ್ಟೆ ಪಬ್ಲಿಕ್ ಸ್ಕೂಲ್‌ನಲ್ಲಿ ಯಕ್ಷಗಾನ ಶಿಕ್ಷಣ ತರಗತಿ ಉದ್ಘಾಟನೆ



ಕುಂದಾಪುರ: ಯಕ್ಷಗಾನ ಸಕಲ ಕಲೆಗಳ ಶಿರೋಮಣಿ. ಜೀವರ ಜೀವನವನ್ನು ಪಾವನಗೊಳಿಸುವ ದೇವಕಲೆ. ಅನಕ್ಷರಸ್ಥರನ್ನೂ ಸಾಕ್ಷರರನ್ನಾಗಿಸುವ ಯಕ್ಷಗಾನಕ್ಕೆ ಸರಿಗಟ್ಟುವ ಕಲೆ ಮತ್ತೊಂದಿಲ್ಲ, ಪ್ರಭಾವೀ ಕಲೆಯಾದ ಯಕ್ಷಗಾನದ ಶಿಕ್ಷಣವೆಂಬುದು ವಿದ್ಯಾರ್ಥಿಗಳಿಗೆ ಅತ್ಯಂತ ಅಗತ್ಯ ಎಂದು ಕುಂದಾಪುರ ಸರಕಾರಿ ಪದವಿಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕ, ಹಿರಿಯ ಹವ್ಯಾಸಿ ಕಲಾವಿದ ಉದಯ ಕುಮಾರ್ ಶೆಟ್ಟಿ ಅಭಿಪ್ರಾಯಪಟ್ಟರು.

ಉಡುಪಿ ಯಕ್ಷ ಶಿಕ್ಷಣ ಟ್ರಸ್ಟ್ ಇದರ ಪ್ರಾಯೋಜಕತ್ವದಲ್ಲಿ ಉಡುಪಿ ಕಲಾರಂಗದ ನೇತೃತ್ವದಲ್ಲಿ ಬಿದ್ಕಲ್ ಕಟ್ಟೆಯ ಕರ್ನಾಟಕ ಪಬ್ಲಿಕ್ ಸ್ಕೂಲ್‌ನ ಸಹಯೋಗದಲ್ಲಿ ಶಾಲೆಯಲ್ಲಿ ನಡೆಯುವ ಯಕ್ಷಗಾನ ಶಿಕ್ಷಣ ತರಗತಿಯನ್ನು ಬುಧವಾರ ಉದ್ಘಾಟಿಸಿ ಅವರು ಮಾತನಾಡಿದರು.

ಶಾಲೆಯ ಉಪಪ್ರಾಂಶುಪಾಲ ಮೊಗೆಬೆಟ್ಟು ಕರುಣಾಕರ ಶೆಟ್ಟಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಟ್ರಸ್ಟ್‌ನ ಕಾರ್ಯವನ್ನು ಶ್ಲಾಘಿಸಿದರು. ಯಕ್ಷಗುರು, ಭಾಗವತ ಪ್ರಸಾದ್ ಕುಮಾರ್ ಮೊಗೆಬೆಟ್ಟು ಹಾಗೂ ಶಾಲಾ ಎಸ್.ಡಿ.ಎಂ.ಸಿ ಉಪಾಧ್ಯಕ್ಷ ಗೌತಮ್ ಶೆಟ್ಟಿ ಶುಭ ಹಾರೈಸಿದರು. ವಿದ್ಯಾರ್ಥಿ ಮಂದಾರ ಉಡುಪ ಸ್ವಾಗತಿಸಿದರು. ತರಗತಿಯ ಉಸ್ತುವಾರಿ, ಕನ್ನಡ ಶಿಕ್ಷಕ ನಾಗರಾಜ್ ಎನ್. ಪ್ರಾಸ್ತಾವಿಕ ಮಾತಾಡಿದರು. ಇನ್ನೋರ್ವ ಉಸ್ತುವಾರಿ ಶಿಕ್ಷಕ ಸುಧಾಕರ್ ಅತಿಥಿಗಳನ್ನು ಗೌರವಿಸಿದರು. ಶಾಲಾ ವಿದ್ಯಾರ್ಥಿ ವಿಘ್ನೇಶ್ ಅಡಿಗ ಕಾರ್ಯಕ್ರಮ ನಿರೂಪಿಸಿದರು. ವಿದ್ಯಾರ್ಥಿನಿ ದೀಪ್ತಿ ವಂದಿಸಿದರು.

ಸಂತ ಫಿಲೋಮಿನಾ ಕಾಲೇಜಿನಲ್ಲಿ ಉಪನ್ಯಾಸಕರಿಗೆ ವಿಶೇಷ ಕಾರ್ಯಾಗಾರ



ಪುತ್ತೂರು: ಇಲ್ಲಿನ ಪ್ರತಿಷ್ಠಿತ ಸಂತ ಫಿಲೋಮಿನಾ ಕಾಲೇಜಿನ (ಸ್ವಾಯತ್ತ) ಸ್ಟಾಫ್ ಡೆವಲಪ್ಮೆಂಟ್ ಅಂಡ್ ಅಪ್ರೈಸಲ್ ಸೆಲ್ ವತಿಯಿಂದ ನೂತನ ಉಪನ್ಯಾಸಕರಿಗಾಗಿ ಹಮ್ಮಿಕೊಳ್ಳಲಾದ ಐದು ದಿನಗಳ ಫ್ಯಾಕಲ್ಟಿ ಇಂಡಕ್ಷನ್ ಪ್ರೋಗ್ರಾಂ-2026'ರ ಉದ್ಘಾಟನಾ ಸಮಾರಂಭವು ಕಾಲೇಜಿನ ಪಿ.ಜಿ. ಸೆನಾರ್ ಹಾಲ್‌ನಲ್ಲಿ ನೆರವೇರಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಸಂಚಾಲಕ ಫಾ.ಡಾ. ಜೆ.ಬಿ. ಸಲ್ಡಾನ್ಹಾ ಕಾರ್ಯಕ್ರಮ ಉದ್ಘಾಟಿಸಿ, ಪ್ರತಿಯೊಂದು ಸಂಸ್ಥೆ ಅಥವಾ ಕಾಲೇಜಿಗೂ ಒಂದು ದೂರದೃಷ್ಟಿ ಮತ್ತು ಧ್ಯೇಯೋದ್ದೇಶ ಇರುತ್ತದೆ. ಮೊದಲು ಆ ದೂರದೃಷ್ಟಿ ಮತ್ತು ಧ್ಯೇಯೋದ್ದೇಶವನ್ನು ಅರ್ಥ ಮಾಡಿಕೊಳ್ಳುವುದು ಅಗತ್ಯ ಎಂದರು.

ಕಾಲೇಜ್ ಶಿಕ್ಷಣ ಇಲಾಖೆಯ ನಿರ್ದೇಶಕಿ ಪ್ರೊ. ಶೋಭಾ ಜಿ. ಮಾತನಾಡಿ, ಶಿಕ್ಷಕ ವೃತ್ತಿ ಎಂಬುದು ಕೇವಲ ಕೆಲಸವಲ್ಲ, ಅದೊಂದು ಬದ್ಧತೆ, ನಾವು ನಮ್ಮ ವೃತ್ತಿ ಮತ್ತು ಕಾಲೇಜಿನ ಧ್ಯೇಯೋದ್ದೇಶಗಳಿಗೆ ಸಂಪೂರ್ಣವಾಗಿ ಬದ್ಧರಾಗಿರಬೇಕು. ಇದರೊಂದಿಗೆ, ನಾವು ವಿದ್ಯಾರ್ಥಿಗಳ ಮನಸ್ಥಿತಿಯನ್ನು ಅರ್ಥ ಮಾಡಿಕೊಳ್ಳುವುದು ಅತ್ಯಂತ ಮುಖ್ಯ. ವಿದ್ಯಾರ್ಥಿಗಳ ಮನಸ್ಸನ್ನು ಅರ್ಥಮಾಡಿಕೊಂಡು ಬಾಂಧವ್ಯ ಬೆಳೆಸಿಕೊಂಡಾಗ ಮಾತ್ರ ಅವರ ಜೀವನದಲ್ಲಿ ಮಾದರಿ ವ್ಯಕ್ತಿಯಾಗಲು ಸಾಧ್ಯ ಎಂದರು.

ಬೆಂಗಳೂರಿನ ಕಾಲೇಜ್ ಶಿಕ್ಷಣ ಇಲಾಖೆಯ ಗೆಜೆಟೆಡ್ ಮ್ಯಾನೇಜರ್ ಅಚಲಾ ವಿ. ಹೆಗ್ಡೆ ಶುಭಾಶಂಸನೆಗೈದರು. ಕಾಲೇಜಿನ ಪ್ರಾಂಶುಪಾಲ ಫಾ.ಡಾ. ಆಂಟನಿ ಪ್ರಕಾಶ್ ಮೊಂತೆರೋ ಪ್ರೇರಣಾದಾಯಿ ಸಂದೇಶ ನೀಡಿದರು. ಕಾಲೇಜಿನ ಉಪ ಪ್ರಾಂಶುಪಾಲ ಡಾ ವಿಜಯ್ ಕುಮಾರ್ ಮೊಳೆಯಾರ್, ನೂತನ ಅಧ್ಯಾಪಕ ವೃಂದದವರು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು. ಎಂಕಾಂ ಉಪನ್ಯಾಸಕಿ ಶ್ರೀರಾಗ ಪ್ರಾರ್ಥಿಸಿದರು. ಸಂಯೋಜಕ ಡಾ. ಎಡ್ವಿನ್ ಡಿ'ಸೋಜಾ ಸ್ವಾಗತಿಸಿ, ಸಿಬ್ಬಂದಿ ಅಭಿವೃದ್ಧಿ ಮತ್ತು ಮೌಲ್ಯಮಾಪನ ಘಟಕದ ಸದಸ್ಯ ಡಾ. ರಾಧಾಕೃಷ್ಣ ವಂದಿಸಿದರು. ಎಂಸಿಎ ವಿಭಾಗದ ಉಪನ್ಯಾಸಕಿ ಅಕ್ಷತಾ ಕಾರ್ಯಕ್ರಮ ನಿರ್ವಹಿಸಿದರು.

ಕಾಲೇಜುಗಳನ್ನು ನಿರ್ಮಿಸುವುದಕ್ಕಿಂತ ಉಳಿಸುವುದು ಮುಖ್ಯ: ಸಚಿವ ಖಾದರ್



ಕೊಣಾಜೆ: ಕಾಲೇಜು ಮಂಜೂರುಗೊಳಿಸುವುದು ಮುಖ್ಯವಲ್ಲ, ಅದರ ಬೆನ್ನಹಿಂದೆ ಬಿದ್ದು ಕಾರ್ಯಗತಗೊಳಿಸುವುದು ಮುಖ್ಯ. ಕಲ್ಲರಕೋಡಿಗೆ ಕಾಲೇಜು ಮಂಜೂರುಗೊಳಿಸಿದ ಬಳಿಕ ಅದನ್ನು ಉಳಿಸಿಕೊಳ್ಳುವುದು ಎಲ್ಲರ ಜವಾಬ್ದಾರಿ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು.ಟಿ. ಖಾದರ್ ಹೇಳಿದರು.

ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಹಿರಿಯ ಪ್ರಾಥಮಿಕ ಶಾಲೆ ಕಲ್ಲರಕೋಡಿಯಲ್ಲಿ ನೂತನವಾಗಿ ನಿರ್ಮಾಣವಾದ ಉನ್ನತೀಕರಿಸಿದ ಪದವಿಪೂರ್ವ ಕಾಲೇಜು ಕಟ್ಟಡ ಉದ್ಘಾಟಿಸಿ, ಮಾತನಾಡಿದರು.

ಕಾರ್ಯಕ್ರಮದಲ್ಲಿ ರಾಜ್ಯ ಗೇರು ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಮತಾ ಡಿ. ಎಸ್. ಗಟ್ಟಿ ಮೇಲಿನ ಅಂತಸ್ತು ಉದ್ಘಾಟಿಸಿದರು. ಬಂಟ್ವಾಳ ತಾಲೂಕು ಅಕ್ರಮ ಸಕ್ರಮ ಸಮಿತಿ ಅಧ್ಯಕ್ಷ ಚಂದ್ರಹಾಸ ಕರ್ಕೇರ ತರಗತಿ ಕೊಠಡಿ ಉದ್ಘಾಟಿಸಿದರು. ಬಂಟ್ವಾಳ ತಾಲೂಕು ಪ್ರಭಾರ ಕ್ಷೇತ್ರ ಶಿಕ್ಷಣಾಧಿಕಾರಿ ಮಾಲತಿ ಕೆ., ನರಿಂಗಾನ ಕಂಬಳ ಸಮಿತಿ ಕಾರ್ಯಾಧ್ಯಕ್ಷ ಪ್ರಶಾಂತ್ ಕಾಜವ ಮಿತ್ತಕೋಡಿ, ನರಿಂಗಾನ ಬೋಳ ಸಂತ ಲಾರೆನ್ಸ್ ಚರ್ಚ್ ಧರ್ಮಗುರು ವಂ. ಫಾ. ಫೆಡ್ರಿಕ್ ಡಿಸೋಜ, ಸಮಾಜ ಸೇವಕ ಇಬ್ರಾಹಿಂ ಪಾರೆ, ಡಿಡಿಪಿಐ ಹೆಚ್. ಹೆಚ್. ರಾಜೇಶ್ವರಿ, ನರಿಂಗಾನ ಗ್ರಾಮ ಪಂಚಾಯಿತಿ ಪಿಡಿಒ ಶ್ವೇತ ಕೆ., ಕಾರ್ಯದರ್ಶಿ ನಳಿನಿ ಎ.ಕೆ., ಗ್ರಾಮ ಕರಣಿಕ ಚೈತ್ರಾ ಕೆ., ಪ್ರಗತಿಪರ ಕೃಷಿಕ ಚಂದ್ರಹಾಸ್ ಶೆಟ್ಟಿ ಮೋರ್ಲಗುತ್ತು, ನರಿಂಗಾನ ಗ್ರಾಮ ಪಂಚಾಯಿತಿ ನಿಕಟಪೂರ್ವ ಸದಸ್ಯರಾದ ಮುರಲೀಧರ ಶೆಟ್ಟಿ ಮೋರ್ಲ, ಶೇಖಬ್ಬ ನಿಡ್ಮಾಡ್, ಸುಂದರ ಪೂಜಾರಿ ಕಂಬಳಕೋಡಿ, ಲತೀಫ್ ಕಾಪಿಕಾಡ್, ಶಾಲಾ ಮೇಲುಸ್ತುವಾರಿ ಸಮಿತಿ ಅಧ್ಯಕ್ಷ ಅಶ್ರಫ್ ಎಸ್.ಎಚ್., ಗುತ್ತಿಗೆದಾರ ಫರ್ಜಾನ್ ಅಹ್ಮದ್ ಸಿದ್ಧಕಟ್ಟೆ ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು. ನರಿಂಗಾನ ಗ್ರಾ.ಪಂ. ನಿಕಟಪೂರ್ವ ಅಧ್ಯಕ್ಷ ನವಾಝ್ ನರಿಂಗಾನ ಸ್ವಾಗತಿಸಿ, ಪ್ರಾಸ್ತಾವಿಕ ನುಡಿಗಳನ್ನಾಡಿದರು. ಪತ್ರಕರ್ತ ಸತೀಶ್ ಕುಮಾರ್ ಪುಂಡಿಕಾಯಿ ನಿರೂಪಿಸಿದರು.

ತೆಕ್ಕಟ್ಟೆ ಸೇವಾ ಸಂಗಮ ವಿದ್ಯಾಕೇಂದ್ರ: ಪುಟಾಣಿ ಮಕ್ಕಳ ಅಕ್ಷರಯಾನಕ್ಕೆ ಚಾಲನೆ



ಕೋಟ: ಶಿಕ್ಷಣ ಜೀವನದ ಮೊದಲ ಹೆಜ್ಜೆಯಾಗಿ ಪುಟಾಣಿ ಮಕ್ಕಳಿಗೆ ಅಕ್ಷರಜ್ಞಾನದ ಮಹತ್ವವನ್ನು ತಿಳಿಸುವ ಉದ್ದೇಶದಿಂದ ತೆಕ್ಕಟ್ಟೆ ಸೇವಾ ಸಂಗಮ ವಿದ್ಯಾಕೇಂದ್ರದ ಶಾಲೆಯಲ್ಲಿ ಅಕ್ಷರಾಭ್ಯಾಸ ಕಾರ್ಯಕ್ರಮ ಸಂಭ್ರಮದಿಂದ ನಡೆಯಿತು.

ಪುರೋಹಿತ ಪ್ರಸನ್ನ ಭಟ್ ಅವರ ಪೌರೋಹಿತ್ಯದಲ್ಲಿ ಜ್ಞಾನ ದೇವತೆ ಸರಸ್ವತಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿ, ಒಂದನೇ ತರಗತಿಗೆ ಸೇರ್ಪಡೆಯಾದ ಮಕ್ಕಳಿಗೆ ಸಂಪ್ರದಾಯಬದ್ಧವಾಗಿ ಅಕ್ಷರಾಭ್ಯಾಸ ಮಾಡಿಸಲಾಯಿತು. ಮಕ್ಕಳ ವಿದ್ಯಾಭ್ಯಾಸದ ಶುಭಾರಂಭವನ್ನು ದೇವಿಯ ಆಶೀರ್ವಾದದೊಂದಿಗೆ ಆರಂಭಿಸುವ ಮೂಲಕ ವಿದ್ಯೆಯ ಮಹತ್ವವನ್ನು ಸಾರಲಾಯಿತು. ಕಾರ್ಯಕ್ರಮದಲ್ಲಿ ಶಾಲೆಯ ಆಡಳಿತ ಮಂಡಳಿಯ ಉಪಾಧ್ಯಕ್ಷ ಅರುಣ್ ಕುಮಾರ್ ಶೆಟ್ಟಿ ಉಪಸ್ಥಿತರಿದ್ದು ಮಕ್ಕಳಿಗೆ ಶುಭ ಹಾರೈಸಿದರು. ಮುಖ್ಯೋಪಾಧ್ಯಾಯ ಹರ್ಷ ಕೋಟೇಶ್ವರ ಮಾತನಾಡಿ, ಮಕ್ಕಳ ಭವಿಷ್ಯ ಉಜ್ವಲವಾಗಲಿ ಹಾಗೂ ಶಿಕ್ಷಣದ ಪಯಣ ಯಶಸ್ವಿಯಾಗಲಿ ಎಂದು ಆಶಿಸಿದರು.ಈ ಸಂದರ್ಭದಲ್ಲಿ ಶಾಲೆಯ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳು ಉಪಸ್ಥಿತರಿದ್ದು ಕಾರ್ಯಕ್ರಮಕ್ಕೆ ಸಹಕರಿಸಿದರು.

ಯೇನೆಕಲ್ಲು ದೇವಸ್ಥಾನದಲ್ಲಿ ಅಷ್ಟಮಂಗಲ ಪ್ರಶ್ನೆ: ಭಕ್ತರ ಸಭೆ



ಸುಬ್ರಹ್ಮಣ್ಯ: ಯೇನೆಕಲ್ಲು ಶ್ರೀ ಶಂಖಪಾಲ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ ಮತ್ತು ಶ್ರೀ ಉಳ್ಳಾಕುಲು, ಉಳ್ಳಾಲ್ತಿ ಮತ್ತು ಶ್ರೀ ಬಚ್ಚನಾಯಕ ದೈವಸ್ಥಾನದಲ್ಲಿ ಬ್ರಹ್ಮ ಕಲಶೋತ್ಸವ ನಡೆಸಲು ಪೂರ್ವಭಾವಿಯಾಗಿ ಅಷ್ಟಮಂಗಲ ಚಿಂತನೆಯನ್ನು ನಡೆಸುವ ಕುರಿತು ಭಕ್ತಾದಿಗಳ ಸಭೆಯು ದೇವಸ್ಥಾನದ ಸಭಾಭವನದಲ್ಲಿ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಹರೀಶ್ ಕುಮಾರ್ ಬಾನಡ್ಕ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಸದಸ್ಯ ಅಶೋಕ್ ನೆಕ್ರಾಜೆ, ಯೇನೆಕಲ್ಲು ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಮಾಜಿ ಅಧ್ಯಕ್ಷರಾದ ನಾಗೇಶ್ ನೆಕ್ರಾಜೆ, ಭವಾನಿಶಂಕರ ಪೂಂಬಾಡಿ, ಎನ್. ಕೆ. ಮನೋಹರ ನಾಳ, ಮಾಗಣೆ ಗೌಡರಾದ ಉದಯ ಕುಮಾರ್ ಬಾನಡ್ಕ, ರಾಧಾಕೃಷ್ಣ ಪೂಜಾರಿಮನೆ, ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಪ್ರಶಾಂತ್ ಕೋಡಿಬೈಲು, ವಿನಯ್ ನೆಕ್ರಾಜೆ, ಮಹೇಶ್ ನಾಳ, ವಿಶ್ವನಾಥ ಪೂಜಾರಿಮನೆ, ಕುಸುಮಾವತಿ, ಜಯಲಲಿತಾ ಮತ್ತಿತರರು ಉಪಸ್ಥಿತರಿದ್ದು, ವಿವಿಧ ಸಲಹೆ ಸೂಚನೆಗಳನ್ನು ನೀಡಿದರು.

ಡೋಂಗ್ರೆ ಕುಟುಂಬಸ್ಥರಿಂದ ಮಕ್ಕಳಿಗೆ ಶೈಕ್ಷಣಿಕ ಪರಿಕರ ವಿತರಣೆ



ಬೆಳ್ತಂಗಡಿ: ರೋಟರಿ ಕ್ಲಬ್, ಭಾರತೀಯ ದಂತ ವೈದ್ಯ ಸಂಘ ಮತ್ತು ಆಯುಷ್ ಫೆಡರೇಶನ್ ಆಫ್ ಇಂಡಿಯಾದ ಸಹಯೋಗದಲ್ಲಿ ಡೋಂಗ್ರೆ ಕುಟುಂಬಸ್ಥರು ಕೊಡ ಮಾಡುವ 18ನೇ ವರ್ಷದ ಶಾಲಾ ಶೈಕ್ಷಣಿಕ ಪರಿಕರಗಳ ವಿತರಣಾ ಸಮಾರಂಭವು ಜೂ. 17ರಂದು ಸೂಳಬೆಟ್ಟು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆಯಿತು.

ಸಮಾರಂಭದ ಅತಿಥಿಗಳಾಗಿದ್ದ ಬೆಳ್ತಂಗಡಿ ರೋಟರಿ ಕ್ಲಬ್‌ನ ಅಧ್ಯಕ್ಷ ಶ್ರೀಧರ ಕೆ.ವಿ., ಕಾರ್ಯದರ್ಶಿ ಡಾ. ರಾಘವೇಂದ್ರ ಪಿದಮಲೆ ಮತ್ತು ಡಾ. ಮುಕ್ತಾ ಪಟವರ್ಧನ್ ಅವರು ಶಾಲಾ ಹಾಗೂ ಅಂಗನವಾಡಿ ಮಕ್ಕಳಿಗೆ ಶೈಕ್ಷಣಿಕ ಪರಿಕರಗಳನ್ನು ವಿತರಿಸಿದರು. ದಾನಿಗಳಾದ ಡಾ. ಶಶಿಧರ ಡೋಂಗ್ರೆ ಕಾರ್ಯಕ್ರಮ ಉದ್ಘಾಟಿಸಿದರು. ಡಾ. ಸುಷ್ಮಾ ಡೋಂಗ್ರೆ, ಡಾ. ಮನೀಷ್ ಡೋಂಗ್ರೆ ಮತ್ತು ಬಳಂಜ ಗ್ರಾ.ಪಂ. ಮಾಜಿ ಅಧ್ಯಕ್ಷ ವಿಶ್ವನಾಥ ಡೋಂಗ್ರೆ ಅವರು ಉಪಸ್ಥಿತರಿದ್ದರು. ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷ ಪ್ರವೀಣ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮಕ್ಕಳಿಗೆ ಬರೆಯುವ ಪುಸ್ತಕ, ಸಮವಸ್ತ್ರ ಬ್ಯಾಗ್, ಕೊಡೆ, ಪೆನ್ನು, ಪೆನ್ಸಿಲ್, ಪೇಸ್ಟ್ ಮತ್ತಿತರ ಪರಿಕರಗಳನ್ನು ವಿತರಿಸಲಾಯಿತು.

ಇದೇ ವೇಳೆ, ಜೆ.ಇ.ಇ. ಮೈನ್ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕ ಗಳಿಸಿದ ಸೂಳಬೆಟ್ಟಿನ ಪ್ರಥಮ ಗೋಖಲೆ ಮತ್ತು ಬೆಳ್ತಂಗಡಿ ಜೂನಿಯರ್ ಕಾಲೇಜಿನಲ್ಲಿ ವಿಜ್ಞಾನ ವಿಭಾಗದಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಅಳದಂಗಡಿಯ ಸಾಕ್ಷಿ ಅವರನ್ನು ಅಭಿನಂದಿಸಿ, ಡೋಂಗ್ರೆ ಕುಟುಂಬಸ್ಥರು ಆರ್ಥಿಕ ಸಹಾಯ ನೀಡಿ ಪ್ರೋತ್ಸಾಹಿಸಿದರು.

ಶಿಕ್ಷಕಿ ರೀಟಾ ರೋಡ್ರಿಗಸ್, ಅಂಗನವಾಡಿ ಕಾರ್ಯಕರ್ತೆ ಶಕುಂತಲಾ, ಅಕ್ಷರ ದಾಸೋಹದ ಲವಿನಾ ಮತ್ತು ಚಿತ್ರಾಕ್ಷಿ ಅವರು ಕಾರ್ಯಕ್ರಮದಲ್ಲಿ ಹಾಜರಿದ್ದರು. ಶಾಲಾ ಮುಖ್ಯೋಪಾಧ್ಯಾಯಿನಿ ಲೀನಾ ಮೊರಾಸ್ ಅವರು ಸ್ವಾಗತಿಸಿ, ಕಾರ್ಯಕ್ರಮ ವಂದಿಸಿದರು.

ಆಸ್ಪತ್ರೆಯ ವೈದ್ಯರು, ಸಿಬ್ಬಂದಿ ಸರಿಯಾಗಿ ಸ್ಪಂದಿಸುತ್ತಿಲ್ಲ | ಅತಿಕಾರಿಬೆಟ್ಟು ಗ್ರಾ.ಪಂ. ಗ್ರಾಮಸಭೆಯಲ್ಲಿ ಗ್ರಾಮಸ್ಥರ ದೂರು

ಮುಲ್ಕಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಆ್ಯಂಬುಲೆನ್ಸ್ ಇಲ್ಲದೆ ಪರದಾಟ

ಮುಲ್ಕಿ: ಅತಿಕಾರಿಬೆಟ್ಟು ಗ್ರಾಮ ಪಂಚಾಯತ್ ಗ್ರಾಮಸಭೆ ಆಡಳಿತ ಅಧಿಕಾರಿ, ಶಿಕ್ಷಣ ಇಲಾಖೆಯ ಗಣೇಶ್ ಅಧ್ಯಕ್ಷತೆಯಲ್ಲಿ ನಡೆಯಿತು.

ಮುಲ್ಕಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಕೇಂದ್ರದಲ್ಲಿ ಆ್ಯಂಬುಲೆನ್ಸ್ ಇಲ್ಲದೆ ಪರದಾಡಬೇಕಾದ ಸ್ಥಿತಿ ನಿರ್ಮಾಣವಾಗಿತ್ತು. ಬಳಿಕ ಬಜಪೆಯಿಂದ ಆ್ಯಂಬುಲೆನ್ಸ್ ಬಂದು ತಮ್ಮ ಮಗುವನ್ನು ಚಿಕಿತ್ಸೆಗೆ ಕರೆದುಕೊಂಡು ಹೋಗಿದ್ದಾರೆ ಎಂದು ನಾಗರಿಕ ದೀಕ್ಷಿತ್ ಆಸ್ಪತ್ರೆ ಆಡಳಿತದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಇದಕ್ಕೆ ಪೂರಕವಾಗಿ ದಿನೇಶ್ಚಂದ್ರ ಅಜಿಲ ಮಾತನಾಡಿ, ಆಸ್ಪತ್ರೆಯ ವೈದ್ಯರು ಹಾಗೂ ಸಿಬ್ಬಂದಿ ಸರಿಯಾಗಿ ಸ್ಪಂದಿಸುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ರೋಗಿಗಳು ಮುಲ್ಕಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಔಷಧವನ್ನು ಖಾಸಗಿ ಮೆಡಿಕಲ್‌ನಲ್ಲಿ ತೆಗೆದುಕೊಳ್ಳುವ ಪರಿಸ್ಥಿತಿ ಬಂದಿದೆ ಎಂದು ಗ್ರಾಮಸ್ಥರು ದೂರಿದರು. ಗ್ರಾಮಸ್ಥ ರವೀಶ್ ಕಾಮತ್ ಮಾತನಾಡಿ, ಕಳೆದ ಸಾಲಿನ ಕಾಮಗಾರಿಗಳಲ್ಲಿ ಎಷ್ಟು ಅನುಷ್ಠಾನವಾಗಿದೆ ಎಂದು ವಿವರಗಳನ್ನು ತಿಳಿಸಿ ಎಂದು ಆಗ್ರಹಿಸಿದರು. ಆಗ ಅಭಿವೃದ್ಧಿ ಅಧಿಕಾರಿ ಶೈಲಜಾ ಮಾತನಾಡಿ ಮೈಲೊಟ್ಟು ಪಂಜಿನಡ್ಕ ರಸ್ತೆಗೆ 30 ಲಕ್ಷ ರೂ. ಶಾಸಕರ ನಿಧಿಯಿಂದ ಮೀಸಲಿಸಲಾಗಿದೆ. ಮಳೆಗಾಲ ಮುಗಿದ ಕೂಡಲೇ ಕಾಮಗಾರಿ ಶುರು ಮಾಡಲಾಗುವುದು ಎಂದರು.



ಕಿಶೋರ್ ಶೆಟ್ಟಿ ಸಮಸ್ಯೆ ಬಗ್ಗೆ ಪ್ರಸ್ತಾಪಿಸಿದರು.

ರಸ್ತೆ ಕಳಪೆ ಕಾಮಗಾರಿ ತನಿಖೆಗೆ ಆಗ್ರಹ

ಪಂಚಾಯತ್ ವ್ಯಾಪ್ತಿಯ ಮಟ್ಟು ರಸ್ತೆಗೆ ಕೆಆರ್‌ಡಿಎಲ್‌ನಿಂದ ಕಾಂಕ್ರೀಟೀಕರಣ ನಡೆದಿದ್ದು, ಕಳಪೆಯಾಗಿ ಲೋಕಾಯುಕ್ತಕ್ಕೆ ದೂರು ನೀಡಿದರೂ ಸರಿಯಾದ ದುರಸ್ತಿ ಕಾಮಗಾರಿ ನಡೆಸಿಲ್ಲ, ಕಳಪೆ ಕಾಮಗಾರಿ ನಡೆಸಿದ ಗುತ್ತಿಗೆದಾರರನ್ನು ಬ್ಲಾಕ್ ಲಿಸ್ಟ್‌ಗೆ ಹಾಕಬೇಕು ಎಂದು ಗ್ರಾಮಸ್ಥ ಪ್ರಖ್ಯಾತ್ ಶೆಟ್ಟಿ ದೂರಿದರು. ಅವರು ಮಾತನಾಡಿ, ಪಂಚಾಯತ್ ವ್ಯಾಪ್ತಿಯ ಪ್ರಧಾನ ಕೇಂದ್ರ ಪ್ರದೇಶವಾದ ಮೈಲೊಟ್ಟಿಗೆ ಬಸ್ ತಂಗುದಾಣವಿಲ್ಲ, ಪ್ರಯಾಣಿಕರು ಅಂಗಡಿ ಬಾಗಿಲಿನಲ್ಲಿ ಬಸ್ಸಿಗೆ ಕಾಯಬೇಕಾದ ಪರಿಸ್ಥಿತಿ ಇದೆ. ಮಳೆಗಾಲದಲ್ಲಿ ಅವರ ಪಾಡು ಹೇಳತೀರದಾಗಿದೆ. ಮೈಲೊಟ್ಟು ರೈಲ್ವೇ ಗೇಟ್ ರಸ್ತೆ ಹೊಂಡ ಗುಂಡಿಗಳಿಂದ ಅಧೋಗತಿಗೆ ಇಳಿದಿದ್ದು ವಾಹನ ಸಂಚಾರ ದುಸ್ತರವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಗ್ರಾಮಸ್ಥ ದಯಾನಂದ ಮಟ್ಟು ಮಾತನಾಡಿ, ಮಟ್ಟುವಿನಲ್ಲಿ ವಾರ್ಡ್ ಸಭೆ ಯಾಕೆ ಮಾಡಿಲ್ಲ ಪ್ರಶ್ನಿಸಿದರು. ವಕೀಲ ರವೀಶ್ ಕಾಮತ್ ಮಾತನಾಡಿ, ಪಂಚಾಯತ್ ವ್ಯಾಪ್ತಿಯ ಕಟ್ಟಡಗಳು ಶಿಥಿಲಾವಸ್ಥೆಯಲ್ಲಿದೆ. ಆಯುಷ್ಮಾನ್ ಆಸ್ಪತ್ರೆ ಸಿಬ್ಬಂದಿ ಇಲ್ಲದೇ ಮುಚ್ಚುವ ಸ್ಥಿತಿಯಲ್ಲಿದೆ ಎಂದರು. ಗ್ರಾಮಸ್ಥ ಸಾಧು ಅಂಚನ್ ಮಟ್ಟು, ಶಶಿಧರ್ ಶೆಟ್ಟಿ ಮಾತನಾಡಿದರು. ಪೊಲೀಸ್ ಸಿಬ್ಬಂದಿ ಸಂದೀಪ್, ನೋಡಲ್ ಅಧಿ ಕಾರಿಯಾಗಿ ತೋಟಗಾರಿಕಾ ಇಲಾಖೆಯ ಪ್ರವೀಣ್ ಕೆ., ಕೆಮ್ರಾಲ್ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಅನ್ಸಿಲಾ, ಜಿ.ಪಂ. ಇಂಜಿನಿಯರ್ ಪ್ರಶಾಂತ್ ಆಳ್ವ ಮತ್ತಿತರರಿದ್ದರು.

ಸುತ್ತ ಮುತ್ತ

ಸಿಎ ಪರೀಕ್ಷೆ: ಶ್ರೀಶಕೃಷ್ಣ ಕುಳಮರ್ವ ತೇರ್ಗಡೆ



ಬದಿಯಡ್ಕ: ಐಸಿಎಐ 2026ರಲ್ಲಿ ನಡೆಸಿದ ಸಿಎ ಪರೀಕ್ಷೆಯಲ್ಲಿ ನೀರ್ಚಾಲು ಸಮೀಪದ ಕುಳಮರ್ವ ಶ್ರೀಶಕೃಷ್ಣ ಉತ್ತಮ ಅಂಕಗಳೊಂದಿಗೆ ತೇರ್ಗಡೆಯಾಗಿದ್ದಾರೆ. ಪ್ರತಿಭಾನ್ವಿತರಾದ ಅವರು ಅನ್ನಪೂರ್ಣ ಮತ್ತು ಜಯಶಂಕರ ಪ್ರಸಾದ ಕುಳಮರ್ವ ಅವರ ಪುತ್ರ. ಪ್ರಸ್ತುತ ನೀರ್ಚಾಲಿನಲ್ಲಿ ವಾಸಿಸುತ್ತಿದ್ದಾರೆ.

ವಿದ್ಯಾರ್ಥಿ ಸಲಹೆಗಾರರ ನೇಮಕಾತಿಗೆ ಸಂದರ್ಶನ

ಕಾಸರಗೋಡು: ಪರಿಶಿಷ್ಟ ಪಂಗಡ ಅಭಿವೃದ್ಧಿ ಇಲಾಖೆಯಡಿ ಕಾರ್ಯನಿರ್ವಹಿಸುವ ಕಾಸರಗೋಡು ಬುಡಕಟ್ಟು ಅಭಿವೃದ್ಧಿ ಕಚೇರಿಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಶಿಕ್ಷಣ ಸಂಸ್ಥೆಗಳಿಗೆ ಗುತ್ತಿಗೆ ಆಧಾರದ ಮೇಲೆ ವಿದ್ಯಾರ್ಥಿ ಸಲಹೆಗಾರರನ್ನು ನೇಮಿಸಲಾಗುತ್ತಿದೆ. ಕಾಸರಗೋಡು ಮಾದರಿ ವಸತಿ ಶಾಲೆ, ಸಾವಿತ್ರಿಭಾಯಿ ಫುಲೆ ಸ್ಮಾರಕ ಆಶ್ರಮ ಶಾಲೆ, ಮೆಟ್ರಿಕ್ ಪೂರ್ವ ಹಾಸ್ಟೆಲ್‌ಗಳು ಮತ್ತು ಮೆಟ್ರಿಕ್ ನಂತರದ ಹಾಸ್ಟೆಲ್‌ಗಳಲ್ಲಿ ವಾಸಿಸುವ ವಿದ್ಯಾರ್ಥಿಗಳಿಗೆ ಕೌನ್ಸೆಲಿಂಗ್ ನೀಡಲು ಈ ನೇಮಕಾತಿಯಾಗಿದೆ. ಆಸಕ್ತ ಅಭ್ಯರ್ಥಿಗಳಿಗಾಗಿ ಜೂ.22ರಂದು ಬೆಳಗ್ಗೆ 11 ಗಂಟೆಗೆ ಜಿಲ್ಲಾ ಬುಡಕಟ್ಟು ಅಭಿವೃದ್ಧಿ ಕಚೇರಿಯಲ್ಲಿ ಸಂದರ್ಶನ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಕನ್ನಡ ಅನುವಾದಕರ ನೇಮಕಾತಿಗೆ ಸಂದರ್ಶನ

ಕಾಸರಗೋಡು: ಜಿಲ್ಲಾ ಪರಿಶಿಷ್ಟ ಪಂಗಡ ಅಭಿವೃದ್ಧಿ ಕಚೇರಿಯು ಕನ್ನಡ ಭಾಷಾಂತರಕಾರರನ್ನು ನೇಮಿಸಿಕೊಳ್ಳುತ್ತಿದೆ. ಪದವಿ, ಕನ್ನಡ ಮತ್ತು ಮಲೆಯಾಳ ಭಾಷಾಂತರ ಜ್ಞಾನ ವಿದ್ಯಾರ್ಹತೆಯಾಗಿದೆ. ಪತ್ರಿಕೋದ್ಯಮ ಕೋರ್ಸ್ ಪ್ರಮಾಣಪತ್ರ ಹೊಂದಿರುವವರಿಗೆ ಆದ್ಯತೆ ನೀಡಲಾಗುವುದು. ಕೆಲಸವು ಜಿಲ್ಲಾ ಮಾಹಿತಿ ಕಚೇರಿಯ ಸುತ್ತ ಕೇಂದ್ರೀಕೃತವಾಗಿರುತ್ತದೆ. 20 ರಿಂದ 45 ವರ್ಷದೊಳಗಿನ ವಯಸ್ಸಿನವರಾಗಿರಬೇಕು. ಅಭ್ಯರ್ಥಿಗಳು ಜಿಲ್ಲಾ ಮಾಹಿತಿ ಕಚೇರಿಯಲ್ಲಿ ಜೂ.23ರಂದು ಬೆಳಗ್ಗೆ 11 ಗಂಟೆಗೆ ಪ್ರಮಾಣಪತ್ರಗಳ ಪ್ರತಿಗಳು ಮತ್ತು ಕೆಲಸದ ಅನುಭವ ತೋರಿಸುವ ಪ್ರಮಾಣಪತ್ರದೊಂದಿಗೆ ಸಂದರ್ಶನಕ್ಕೆ ಹಾಜರಾಗಬೇಕು. ಹೆಚ್ಚಿನ ವಿವರಗಳಿಗೆ 04994 255466 ಕರೆ ಮಾಡಬಹುದು ಎಂದು ಪ್ರಕಟಣೆ ತಿಳಿಸಿದೆ.

ಕುಂಬ್ಡಾಜೆ ಆಶಾ ಕಾರ್ಯಕರ್ತೆಯರ ನೇಮಕಾತಿ

ಬದಿಯಡ್ಕ: ಕುಂಬ್ಡಾಜೆ ಕುಟುಂಬ ಆರೋಗ್ಯ ಕೇಂದ್ರದಲ್ಲಿ ಆಶಾ ಕಾರ್ಯಕರ್ತೆಯರ ನೇಮಕಾತಿಗಾಗಿ ಜುಲೈ 4ರಂದು ಬೆಳಗ್ಗೆ 10.30ಕ್ಕೆ ಕುಂಬ್ಡಾಜೆ ಕುಟುಂಬ ಆರೋಗ್ಯ ಕೇಂದ್ರದಲ್ಲಿ ಸಂದರ್ಶನ ನಡೆಯಲಿದೆ. ಪಂಚಾಯತ್ ವ್ಯಾಪ್ತಿಯ ಖಾಯಂ ನಿವಾಸಿಗಳು, ಎಸ್‌ಎಸ್‌ಎಲ್‌ಸಿ ವಿದ್ಯಾರ್ಹತೆ ಹೊಂದಿರುವವರು, ವಿವಾಹಿತರು ಮತ್ತು 25 ರಿಂದ 45 ವರ್ಷದೊಳಗಿನವರು ಅರ್ಜಿ ಸಲ್ಲಿಸಬಹುದು. ಅಭ್ಯರ್ಥಿಗಳು ಮೂಲ ಪ್ರಮಾಣಪತ್ರಗಳೊಂದಿಗೆ ಸಂದರ್ಶನಕ್ಕೆ ಹಾಜರಾಗಬೇಕು. ಹೆಚ್ಚಿನ ಮಾಹಿತಿಗಾಗಿ 04994 280700 ಕರೆ ಮಾಡಬಹುದು.

ಉಪನ್ಯಾಸಕರ ನೇಮಕಾತಿಗೆ ಸಂದರ್ಶನ

ಕಾಸರಗೋಡು: ಕಾಸರಗೋಡು ಸರಕಾರಿ ಕಾಲೇಜಿನಲ್ಲಿ ಜಿಯೋಲಾಜಿ ವಿಷಯದಲ್ಲಿ ತಾತ್ಕಾಲಿಕ ಉಪನ್ಯಾಸಕರ ನೇಮಕಕ್ಕಾಗಿ ಜೂ.23ರಂದು ಬೆಳಗ್ಗೆ 10.30ಕ್ಕೆ ಸಂದರ್ಶನ ನಡೆಯಲಿದೆ. ಸ್ನಾತಕೋತ್ತರ ಪದವಿಯಲ್ಲಿ ಶೇಕಡಾ 55ರಷ್ಟು ಅಂಕಗಳನ್ನು ಪಡೆದು ಕಾಲೇಜು ಶಿಕ್ಷಣ ಉಪನಿರ್ದೇಶಕರ ಕಚೇರಿಯಲ್ಲಿ ಹೆಸರು ನೋಂದಾಯಿಸಿದವರಿಗೆ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗೆ 04992 256027 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ನರ್ಸ್ ನೇಮಕಾತಿ

ಮಂಜೇಶ್ವರ: ವರ್ಕಾಡಿ ಕುಟುಂಬ ಆರೋಗ್ಯ ಕೇಂದ್ರದಲ್ಲಿ ಸ್ಟಾಫ್ ನರ್ಸ್ ನೇಮಕಾತಿಗಾಗಿ ಸಂದರ್ಶನವು ಜೂ.29ರಂದು ಬೆಳಗ್ಗೆ 11 ಗಂಟೆಗೆ ನಡೆಯಲಿದೆ. ಬಿಎಸ್‌ಸಿ, ನರ್ಸಿಂಗ್, ಜನರಲ್ ನರ್ಸಿಂಗ್ (ಕೇರಳ ನೋಂದಣಿ) ವಿದ್ಯಾರ್ಹತೆಯಾಗಿದೆ. ವಯೋಮಿತಿ 18–40 ಆಗಿದೆ. ಹೆಚ್ಚಿನ ವಿವರಗಳಿಗೆ 04998 203900 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

‘ನಮಸ್ತೆ ಜಿಲ್ಲಾಧಿಕಾರಿ’ ಕಾರ್ಯಕ್ರಮದಲ್ಲಿ ಅರ್ಜುನ್ ಪಾಂಡ್ಯನ್‌ಗೆ ಶಾಲಾ ವಿದ್ಯಾರ್ಥಿಗಳ ಬೇಡಿಕೆ

ಶಾಲೆಗೆ ಅತ್ಯಾಧುನಿಕ ಕೊಠಡಿ, ಲ್ಯಾಬ್ ನಿರ್ಮಿಸಿ ಕೊಡಿ!

ಕಾಸರಗೋಡು: ನಮ್ಮ ಶಾಲೆಯಲ್ಲಿ ಕನಿಷ್ಠ ಎರಡು ತರಗತಿಗಳನ್ನಾದರೂ ಹೈಟೆಕ್ ಮಾದರಿಯಲ್ಲಿ ಅತ್ಯಾಧುನಿಕವಾಗಿ ಅಭಿವೃದ್ಧಿಗೊಳಿಸುವಂತೆ ಬಂಗ್ರ ಮಂಜೇಶ್ವರ ಜಿಎಚ್‌ಎಸ್ ಶಾಲೆಯ ವಿದ್ಯಾರ್ಥಿಗಳು ಕಾಸರಗೋಡು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರಲ್ಲಿ ಮನವಿ ಮಾಡಿದ್ದಾರೆ.

ಕಾಸರಗೋಡು ಜಿಲ್ಲಾಧಿಕಾರಿ ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿದ್ದ ‘ನಮಸ್ತೆ ಜಿಲ್ಲಾಧಿಕಾರಿ’ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು ಈ ವಿನಂತಿ ಮಾಡಿದ ಪ್ರಸಂಗ ನಡೆಯಿತು.

ಮಕ್ಕಳ ಬೇಡಿಕೆಗೆ ಶಿಕ್ಷಕರ ಬೆಂಬಲ!

ಅತ್ಯಾಧುನಿಕ ಮಾದರಿಯ ಲ್ಯಾಬ್ ಮತ್ತು ಹೈಟೆಕ್ ತರಗತಿ ಬೇಕೆಂಬ ವಿದ್ಯಾರ್ಥಿಗಳ ಬೇಡಿಕೆಗಳಿಗೆ ಶಿಕ್ಷಕರು ಕೂಡಾ ಬೆಂಬಲಿಸಿದರು. ಇದೇ ವೇಳೆ ‘ನೀವು ನಮ್ಮ ಶಾಲೆಗೆ ಯಾವಾಗ ಬರುತ್ತೀರಾ, ನಮ್ಮ ಸಹಪಾಠಿಗಳು ಕೂಡಾ ನಿಮ್ಮನ್ನು ಭೇಟಿ ಮಾಡಲು ಬಯಸುತ್ತಿದ್ದಾರೆ ಸಾರ್’ ಎಂದು ವಿದ್ಯಾರ್ಥಿಗಳು ಜಿಲ್ಲಾಧಿಕಾರಿಗೆ ತಿಳಿಸಿದರು. ಇದಕ್ಕೆ ಉತ್ತರಿಸಿದ ಜಿಲ್ಲಾಧಿಕಾರಿಗಳು ಒಂದು ದಿನ ನಿಮ್ಮ ಶಾಲೆಗೆ ಬಂದೇ ಬರುತ್ತೇನೆ ಎಂದು ಹೇಳಿದರು. ಮಕ್ಕಳಿಗೆ ಆಟದ ಸಮಯ ಸರಿಯಾಗಿ ನೀಡಲಾಗುತ್ತಿದೆಯೇ?, ಕಲಿಕಾ ಒತ್ತಡದ ನಡುವೆ ಆಟವಾಡಲು ಸಾಧ್ಯವಾಗುತ್ತಿದೆಯೇ ಎಂದು ಜಿಲ್ಲಾಧಿಕಾರಿಗಳು ಮಕ್ಕಳನ್ನು ಪ್ರಶ್ನಿಸಿದರು. ಇದಕ್ಕೆ ವಿದ್ಯಾರ್ಥಿಗಳು ಸಮರ್ಪಕವಾದ ಉತ್ತರವನ್ನು ನೀಡಿದ್ದಾರೆ.

ಜಿಲ್ಲಾಧಿಕಾರಿಯಾಗಲು ಬಾಲ್ಯದಲ್ಲಿ ಪ್ರೇರೇಪಿಸಿದವರು ಯಾರು? ಆಗ ಶೈಕ್ಷಣಿಕ ವಿದ್ಯಾಭ್ಯಾಸ ಹಾಗೂ ಕಲಿಕಾ ವಾತಾವರಣ ಹೇಗಿತ್ತು ಮತ್ತು ನಿಮ್ಮ ಹುಟ್ಟೂರು ಇಡುಕ್ಕಿಯಿಂದ ಕಾಸರಗೋಡಿಗೆ ಬಂದಾಗ ಹೇಗನಿಸಿತು ಮುಂತಾದ ಪ್ರಶ್ನೆಗಳನ್ನು ವಿದ್ಯಾರ್ಥಿಗಳು ಜಿಲ್ಲಾಧಿಕಾರಿಗೆ ಕೇಳಿದರು. ಇಡುಕ್ಕಿಯಲ್ಲಿನ ಶೈಕ್ಷಣಿಕ ವಿದ್ಯಾಭ್ಯಾಸ ಮತ್ತು ಕೊಲ್ಲಂನ ಟಿಕೆಎಂ ಇಂಜಿನಿಯರಿಂಗ್ ಕಾಲೇಜಿನ ದಿನಗಳ ಬಗ್ಗೆ ಡಿಸಿ ಮಕ್ಕಳಿಗೆ ವಿವರಿಸಿದರು.



ಸ್ಥಳದ ಕೊರತೆ ಇದೆ

ಮಂಜೇಶ್ವರ ಜಿಎಚ್‌ಎಸ್ ಶಾಲೆಯಲ್ಲಿ ಮಕ್ಕಳಿಗೆ ಆಟವಾಡಲು ಕೇವಲ ಒಂದು ಸಣ್ಣ ಮೈದಾನವಿದೆ. ಶಾಲೆಯಲ್ಲಿ ಲ್ಯಾಬ್ ಸ್ಥಾಪಿಸಿದ ನಂತರ ಸ್ಥಳಾವಕಾಶದ ಕೊರತೆ ಎದುರಾಗಲಿದೆ ಎಂದು ಶಿಕ್ಷಕರು ಜಿಲ್ಲಾಧಿಕಾರಿಯೊಂದಿಗೆ ಸಮಸ್ಯೆಗಳನ್ನು ಹಂಚಿಕೊಂಡರು.

ಭಾಗವಹಿಸುವವರು ನೋಂದಾಯಿಸಿ

‘ನಮಸ್ತೆ ಜಿಲ್ಲಾಧಿಕಾರಿ’ ಕಾರ್ಯಕ್ರಮ ಜಿಲ್ಲಾಡಳಿತ ಮತ್ತು ಮಕ್ಕಳ ನಡುವಿನ ಸೌಹಾರ್ದಯುತ ಭೇಟಿಗಾಗಿ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಪ್ರಾರಂಭಿಸಿದ ಯೋಜನೆ. ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಇಚ್ಛಿಸುವವರು dcipksd@gmail.com ಮೂಲಕ ಹೆಸರು ನೋಂದಾಯಿಸಿಕೊಳ್ಳಬಹುದು ಎಂದು ಜಿಲ್ಲಾಡಳಿತ ತಿಳಿಸಿದೆ.

ಕಾಸರಗೋಡು ಅಭಿವೃದ್ಧಿಗೆ ಅವಕಾಶ

ಮಾದಕ ವ್ಯಸನ ಅಪಾಯಕಾರಿ. ಆದ್ದರಿಂದ ವಿದ್ಯಾರ್ಥಿಗಳು ಈ ಬಗ್ಗೆ ಜಾಗೃತರಾಗಿ ಇರಬೇಕು ಎಂದು ಜಿಲ್ಲಾಧಿಕಾರಿ ಸಲಹೆ ನೀಡಿ, ಕಾಸರಗೋಡು ಜಿಲ್ಲೆ ಉತ್ತಮವಾದ ಸ್ಥಳ. ಪ್ರವಾಸೋದ್ಯಮ ಸೇರಿದಂತೆ ಜಿಲ್ಲೆಯಲ್ಲಿ ಸಾಕಷ್ಟು ಅಭಿವೃದ್ಧಿ ಅವಕಾಶವಿದೆ ಎಂದು ನುಡಿದರು.

ಕಾಸರಗೋಡು ಅಭಿವೃದ್ಧಿ ಪ್ಯಾಕೇಜ್‌ನಡಿ ಶಾಲೆಯ ಹೊಸ ಕಟ್ಟಡ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಭರವಸೆ ನೀಡಿದರು. ಬಂಗ್ರಮಂಜೇಶ್ವರ ಜಿಎಚ್‌ಎಸ್ ಎಸ್‌ನ 6ರಿಂದ 10ನೇ ತರಗತಿ ತನಕದ 25 ಮಂದಿ ವಿದ್ಯಾರ್ಥಿಗಳು ಮತ್ತು ಇಬ್ಬರು ಶಿಕ್ಷಕರು ‘ನಮಸ್ತೆ ಜಿಲ್ಲಾಧಿಕಾರಿ’ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಡಿಸಿಗೆ ಭಾವಚಿತ್ರ ಉಡುಗೊರೆ

ಶಾಲೆಯು ಕನ್ನಡ ಮತ್ತು ಮಲೆಯಾಳ ಮಾಧ್ಯಮಗಳನ್ನು ಹೊಂದಿದ್ದು, 323 ಮಂದಿ ವಿದ್ಯಾರ್ಥಿಗಳು ಪ್ರೌಢಶಾಲೆಯಲ್ಲಿ ಓದುತ್ತಿದ್ದಾರೆ. ಮಕ್ಕಳು ತಯಾರಿಸಿದ ಹೂಗುಚ್ಛಗಳನ್ನು ಜಿಲ್ಲಾಧಿಕಾರಿಯವರಿಗೆ ಉಡುಗೊರೆಯಾಗಿ ವಿತರಿಸಲಾಯಿತು. ಫಾತಿಮತ್ ಜುಮ್ನಾ ಎಂಬ ವಿದ್ಯಾರ್ಥಿನಿ ಬಿಡಿಸಿದ ಛಾಯಾಚಿತ್ರವನ್ನು ಸಹ ಜಿಲ್ಲಾಧಿಕಾರಿಗೆ ನೀಡಲಾಯಿತು. ನಂತರ ಜಿಲ್ಲಾಧಿಕಾರಿಗಳು ಮಕ್ಕಳೊಂದಿಗೆ ಫೋಟೋ ತೆಗೆದುಕೊಂಡು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಕ್ಕಾಗಿ ಪ್ರಮಾಣ ಪತ್ರಗಳನ್ನು ವಿತರಿಸಿ, ಶುಭ ಹಾರೈಸಿದರು.

ಸ್ವಯಂ ಗಣತಿ ಮೂಲಕ ನಟ ಪಿ.ಪಿ. ಕುಂಞಿಕೃಷ್ಣನ್ ಮಾಸ್ಟರ್ ಸಾಥ್

ಕೇರಳದಲ್ಲಿ ಎಲ್ಲೆಡೆ ‘ಜನಗಣತಿ’ಯ ಉತ್ಸಾಹ

ಕಾಸರಗೋಡು: ಕೇಂದ್ರ ಸರ್ಕಾರದ ಸೂಚನೆಯಂತೆ ದೇಶದ ಪ್ರಗತಿ ಮತ್ತು ಅಭಿವೃದ್ಧಿಗೆ ಪೂರಕವಾಗಿ ಯೋಜನೆ ರೂಪಿಸುವ ನಿಟ್ಟಿನಲ್ಲಿ ರಾಷ್ಟ್ರೀಯ ಜನಸಂಖ್ಯಾ ಗಣತಿ (ಜನಗಣತಿ 2027) ಪ್ರಕ್ರಿಯೆಯು ಕೇರಳ ರಾಜ್ಯದಾದ್ಯಂತ ಹುರುಪಿನಿಂದ ಆರಂಭವಾಗಿದೆ.

ಇದರ ಭಾಗವಾಗಿ ಚಲನಚಿತ್ರ ನಟ ಪಿ.ಪಿ.ಕುಂಞಿಕೃಷ್ಣನ್ ಮಾಸ್ಟರ್ ಅವರು ತಮ್ಮ ಮೊಬೈಲ್ ಫೋನ್ ಮೂಲಕ ಜನಗಣತಿ ಪೋರ್ಟಲ್‌ನಲ್ಲಿ ಸ್ವಯಂ ಗಣತಿ ಮಾಡಿಕೊಂಡು ತಮ್ಮದೇ ಆದ ಮಾಹಿತಿಯನ್ನು ದಾಖಲಿಸಿಕೊಳ್ಳುವ ಮೂಲಕ ಮಾದರಿಯಾಗಿದ್ದಾರೆ.

ಕಾಸರಗೋಡು ಜಿಲ್ಲೆಯ ಜನಗಣತಿ ಅಧಿಕಾರಿಗಳ ಸಮ್ಮುಖದಲ್ಲಿ ತೃಕ್ಕರೀಪುರ ತಡಿಯಂಕೊವ್ವಲ್‌ನಲ್ಲಿರುವ ಅವರ ನಿವಾಸದಲ್ಲಿ ದತ್ತಾಂಶ ಸಂಗ್ರಹವನ್ನು ನಡೆಸಲಾಯಿತು. ದೇಶದ ನಿಖರವಾದ ಅಭಿವೃದ್ಧಿ ಯೋಜನೆಗಾಗಿ ಸ್ವಯಂ ಗಣತಿಯ ಮೂಲಕ ತಮ್ಮ ಮಾಹಿತಿಯನ್ನು ದಾಖಲಿಸುವ ಅಂಗವಾಗಿ ಎಲ್ಲಾ ಸಾರ್ವಜನಿಕರು ಈ ರಾಷ್ಟ್ರೀಯ ಜನಗಣತಿ ಯಲ್ಲಿ ಭಾಗವಹಿಸಬೇಕೆಂದು ವಿನಂತಿಸಿದರು.

11 ಅಂಕೆಯ ಗುರುತಿನ ಸಂಖ್ಯೆ

ಜನಗಣತಿ ಪೋರ್ಟಲ್‌ನಲ್ಲಿ (ಸ್ವಯಂ ಗಣತಿ) ಸಾರ್ವಜನಿಕರು ತಮ್ಮ ಮಾಹಿತಿಯನ್ನು ಡಿಜಿಟಲ್ ರೂಪದಲ್ಲಿ ದಾಖಲಿಸುವ ಸೌಲಭ್ಯವು ಜೂ.30ರ ವರೆಗೆ ಲಭ್ಯವಿದೆ. ಈ ರೀತಿಯಲ್ಲಿ ತಮ್ಮ ಮಾಹಿತಿಯನ್ನು ಯಶಸ್ವಿಯಾಗಿ ದಾಖಲಿಸುವವರಿಗೆ 11 ಅಂಕೆಯ ಗುರುತಿನ ಸಂಖ್ಯೆ ದೊರೆಯುತ್ತದೆ. ಈ ಗುರುತಿನ ಸಂಖ್ಯೆಯು ಜುಲೈ ತಿಂಗಳು ಮನೆಗಳಿಗೆ ಖುದ್ದಾಗಿ ಭೇಟಿ ನೀಡುವ ಗಣತಿದಾರರಿಗೆ ಮಾತ್ರ ಹಸ್ತಾಂತರಿಸಬೇಕಾಗುತ್ತದೆ. ಇದು ಜನಗಣತಿ ಪ್ರಕ್ರಿಯೆಯನ್ನು ಸರಳ ಮತ್ತು ಹೆಚ್ಚು ಪಾರದರ್ಶಕವಾಗಿಸಲು ಸಹಾಯ ಮಾಡುತ್ತದೆ. ಜನಗಣತಿಯ ಎರಡನೇ ಹಂತವು ನೈಜ ಜನಸಂಖ್ಯಾ ಗಣತಿಯಾಗಿದ್ದು, 2027ನೇ ಫೆಬ್ರವರಿಯಲ್ಲಿ ನಡೆಯಲಿದೆ. ಈ ನಿಟ್ಟಿನಲ್ಲಿ ಸಂಪೂರ್ಣವಾಗಿ ಸಹಕರಿಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ ಎಂದು ಕುಂಞಿಕೃಷ್ಣನ್ ಮಾಸ್ಟರ್ ನೆನಪಿಸಿದರು.

ಅವರ ನಿವಾಸದಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಿಲ್ಲಾ ಮಾಹಿತಿ ಅಧಿಕಾರಿ ಎಂ.ಮಧುಸೂದನನ್, ಜನಗಣತಿ ನಿರ್ದೇಶನಾಲಯದ ಜಿಲ್ಲಾ ಸಮನ್ವಯ ಅಧಿಕಾರಿ ಟಿ.ರಾಜ್‌ಕುಮಾರ್, ಜಿಲ್ಲಾಡಳಿತದ ಜನಗಣತಿ ಇಲಾಖೆಯ ಜೂನಿಯರ್ ಸೂಪರಿಂಟೆಂಡೆಂಟ್ ಜಗದೀಶ್, ಪಿ. ರಾಗೇಶ್ ಮತ್ತು ಜಿಲ್ಲಾಡಳಿತದ ಸಿಬ್ಬಂದಿ ಕೃತಿಕಾ ಮೊದಲಾದವರು ಹಾಜರಿದ್ದರು.



ಎರಡು ಹಂತದಲ್ಲಿ ಗಣತಿ

ಈ ವರ್ಷದ ಜನಗಣತಿ ಪ್ರಕ್ರಿಯೆಯನ್ನು ಕೇರಳದಲ್ಲಿ ಎರಡು ಹಂತಗಳಲ್ಲಿ ಆಯೋಜಿಸಲಾಗಿದೆ. ಮೊದಲ ಹಂತದಲ್ಲಿ ಮನೆಗಳ ದತ್ತಾಂಶ ಸಂಗ್ರಹ ನಡೆಯುತ್ತಿದೆ. ಆ ಬಳಿಕ ಫೆಬ್ರವರಿಯಲ್ಲಿ ಎರಡನೇ ಹಂತ ನಡೆಯಲಿದೆ.

ಬಿಜೆಪಿ ಕುಂಬಳೆ ಪಂಚಾಯತ್ ನೂತನ ಕಚೇರಿ ಉದ್ಘಾಟಿಸಿ ಅಶ್ವಿನಿ ಹೇಳಿಕೆ

ಒಳಒಪ್ಪಂದ ರಾಜಕೀಯಕ್ಕೆ ಜನರಿಂದ ತಿರಸ್ಕಾರ

ಕುಂಬಳೆ: ಈ ಬಾರಿ ವಿಧಾನಸಭಾ ಚುನಾವಣೆಯಲ್ಲಿ ಎಡರಂಗದ ಮುಖವಾಡ ಕಳಚಿದೆ. ಕಾಸರಗೋಡು ಜಿಲ್ಲೆಯಲ್ಲಿ ಒಳಒಪ್ಪಂದ ರಾಜಕೀಯವನ್ನು ಜನರು ತಿರಸ್ಕಾರ ಮಾಡಿದ್ದಾರೆ. ಸೋಲು ಗೆಲುವು ಚುನಾವಣೆಯಲ್ಲಿ ಸಹಜ. ತಪ್ಪನ್ನು ಸರಿಪಡಿಸಿಕೊಂಡು ಜಿಲ್ಲೆಯಲ್ಲಿ ಪಕ್ಷವನ್ನು ಸದೃಢ ಮಾಡಲಾಗುವುದು ಎಂದು ಬಿಜೆಪಿ ಕಾಸರಗೋಡು ಜಿಲ್ಲಾಧ್ಯಕ್ಷೆ ಎಂ.ಎಲ್.ಅಶ್ವಿನಿ ಹೇಳಿದ್ದಾರೆ.

ಬಿಜೆಪಿ ಕುಂಬಳೆ ಪಂಚಾಯತ್ ಸಮಿತಿಯ ನೂತನ ಕಚೇರಿಯನ್ನು ಗುರುವಾರ ಉದ್ಘಾಟಿಸಿ ಅವರು ಮಾತನಾಡಿದರು.

ಶಾಸಕರು ಧ್ವನಿಯಾಗಲಿದ್ದಾರೆ

ರಾಜ್ಯ ವಿಧಾನಸಭೆಗೆ ಮೂವರು ಬಿಜೆಪಿ ಪ್ರತಿನಿಧಿಗಳ ಆಯ್ಕೆಯು ಬಿಜೆಪಿ ಕಾರ್ಯಕರ್ತರ ಮೇಲಿನ ನಿರೀಕ್ಷೆಗಳು ಮತ್ತು ಜವಾಬ್ದಾರಿಯನ್ನು ಹೆಚ್ಚಿಸಿದೆ. ಅಲ್ಲದೇ ಕೇರಳದಲ್ಲಿ ಬಿಜೆಪಿ ಬಲವಾಗಿ ಬೇರೂರುವ ಸಂಕೇತವಾಗಿದೆ. ಕೇರಳದ ಜನರು ಬಿಜೆಪಿಯನ್ನು ಎಡ ಮತ್ತು ಐಕ್ಯ ರಂಗಗಳಿಗೆ ಪರ್ಯಾಯ ಶಕ್ತಿಯಾಗಿ ನೋಡುತ್ತಾರೆ ಎಂಬುದು ಸಾಬೀತಾಗಿದೆ. ಅಲ್ಲದೇ ಈ ಮೂವರು ಶಾಸಕರು ವಿಧಾನಸಭೆಯಲ್ಲಿ ಜನರ ಸಮಸ್ಯೆಯ ಧ್ವನಿಯಾಗಲಿದ್ದಾರೆ ಎಂದು ನುಡಿದರು.

ಉದ್ಘಾಟನೆಗೂ ಮುನ್ನ ಬಿಜೆಪಿ ರಾಜ್ಯ ಸಮಿತಿ ಸದಸ್ಯ ಹಾಗೂ ಹಿರಿಯ ನಾಯಕ ವಿ.ರವೀಂದ್ರನ್ ಧ್ವಜಾರೋಹಣ ನೆರವೇರಿಸಿ, ಶುಭ ಹಾರೈಸಿ, ಪಕ್ಷ ಸಂಘಟನೆಗೆ ಕರೆ ನೀಡಿದರು.

ಹಿರಿಯ ಕಾರ್ಯಕರ್ತರಿಗೆ ಗೌರವ

ಕುಂಬಳೆ ಪಂಚಾಯತ್ ದಕ್ಷಿಣ ವಲಯ ಸಮಿತಿ ಅಧ್ಯಕ್ಷ ಕೆ.ಸುಜಿತ್ ರೈ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಜನಸಂಘ ಮತ್ತು ಬಿಜೆಪಿ ಆರಂಭಿಕ ಕಾರ್ಯಕರ್ತರನ್ನು ಇದೇ ವೇಳೆ ಗೌರವಿಸಲಾಯಿತು.

ಬಿಜೆಪಿ ರಾಜ್ಯ ಸಮಿತಿ ಸದಸ್ಯರಾದ ಕೋಳಾರು ಸತೀಶ್ಚಂದ್ರ ಭಂಡಾರಿ, ತುರ್ತು ಪರಿಸ್ಥಿತಿ ಹೋರಾಟಗಾರ ಹಾಗೂ ಜನಸಂಘದ ಕಾರ್ಯಕರ್ತ ಸುಬ್ಬಯ್ಯ ರೈ, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಮುರಳೀಧರ ಯಾದವ್, ಕುಂಬಳೆ ಮಂಡಲ ಪ್ರಧಾನ ಕಾರ್ಯದರ್ಶಿ ವಸಂತಕುಮಾರ್ ಮಯ್ಯ, ಮಂಡಲ ಉಪಾಧ್ಯಕ್ಷರಾದ ವಿಕ್ರಮ್ ಪೈ, ಪ್ರೇಮಾವತಿ, ಕುಂಬಳೆ ಪಂಚಾಯತ್ ಉತ್ತರ ವಲಯ ಸಮಿತಿ ಅಧ್ಯಕ್ಷ ಶಿವಪ್ರಸಾದ್ ರೈ ಮಡ್ವ, ಕೆ.ವಿನೋದನ್ ಕಡಪ್ಪುರ, ಪಂಚಾಯತ್ ಜನಪ್ರತಿನಿಧಿಗಳು, ಕಾರ್ಯಕರ್ತರು ಅಪಾರ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು.



> ಯುಡಿಎಫ್ ಜನರಿಗೆ ಸುಳ್ಳು ಭರವಸೆ ನೀಡಿ ಅಧಿಕಾರಕ್ಕೇರಿದೆ. ಗ್ಯಾರಂಟಿ ಘೋಷಿಸಿದ ಇತರೆ ರಾಜ್ಯಗಳಲ್ಲಿ ಪರಿಷ್ಕರಣೆ ಹೆಸರಿನಲ್ಲಿ ಜನರಿಗೆ ವಂಚನೆ ಮಾಡಲಾಗುತ್ತದೆ. ರಾಜ್ಯದಲ್ಲೂ ಮುಂದೆ ಇದು ನಡೆಯಲಿದೆ.
> • ಎಂ.ಎಲ್.ಅಶ್ವಿನಿ

ಎಕೆಪಿಎ ವೆಸ್ಟ್ ಯೂನಿಟ್‌ನಿಂದ ರಕ್ತದಾನ ದಿನಾಚರಣೆ, ದಾನಿಗೆ ಸನ್ಮಾನ



ಕಾಸರಗೋಡು: ಆಲ್ ಕೇರಳ ಫೋಟೋಗ್ರಾಫರ್ಸ್ ಅಸೋಸಿಯೇಷನ್ ವೆಸ್ಟ್ ಯೂನಿಟ್‌ನಿಂದ ವಿಶ್ವ ರಕ್ತದಾನ ದಿನದಂದು ಸುಮಾರು 25ಕ್ಕೂ ಅಧಿಕ ಬಾರಿ ರಕ್ತದಾನ ಮಾಡಿದ ಯೂನಿಟ್ ಸದಸ್ಯ ಸುಬ್ರಹ್ಮಣ್ಯ ವಿಡಿಯೋನಿಕ್ಸ್ ಅವರನ್ನು ಸನ್ಮಾನಿಸಲಾಯಿತು.

ಯೂನಿಟ್ ಅಧ್ಯಕ್ಷ ವಸಂತ್ ಕೆರೆಮನೆ ಶಾಲು ಹೊದೆಸಿ, ಸ್ಮರಣಿಕೆ ನೀಡಿ ಗೌರವಿಸಿದರು. ಮುಖ್ಯ ಅತಿಥಿಯಾಗಿ ಆಗಮಿಸಿದ ನಗರಸಭಾ ಸದಸ್ಯ ರವೀಂದ್ರ ಪೂಜಾರಿ ಅವರು ಮಾತನಾಡಿ, ರಕ್ತದಾನ ಶ್ರೇಷ್ಠ ದಾನವಾಗಿದೆ. ಒಂದು ಜೀವ ಉಳಿಸುವಲ್ಲಿ ರಕ್ತದ ಬದಲು ರಕ್ತವೇ ನೀಡಬೇಕು ಎಂದರು. ಕಾಸರಗೋಡಿನಲ್ಲಿ ಆರಂಭದಲ್ಲಿ ಸರಕಾರಿ ಆಸ್ಪತ್ರೆಯಲ್ಲಿ ರಕ್ತದಾನ ಮಾಡುತ್ತಿದ್ದ ಆಗಿನ ಕಾಲದ ತಮ್ಮ ಅನುಭವ ಹಾಗೂ ರಕ್ತದಾನದ ಆವಶ್ಯಕತೆಯ ಮಹತ್ವವನ್ನು ಈ ಸಂದರ್ಭದಲ್ಲಿ ತಿಳಿಸಿದರು. ಎಕೆಪಿಎ ಜಿಲ್ಲಾ ಸದಸ್ಯ ಮೈಂದಪ್ಪ ಕೆ.ಎಂ., ಜಿಲ್ಲಾ ಜೊತೆ ಕಾರ್ಯದರ್ಶಿ ಮನು ಎಲ್ಲೋರ, ಎಕೆಪಿಎ ವಲಯ ಜೊತೆ ಕಾರ್ಯದರ್ಶಿ ಗಣೇಶ್ ರೈ, ಯೂನಿಟ್ ಸದಸ್ಯ ರತೀಶ್ ರಾಮು ಉಪಸ್ಥಿತರಿದ್ದರು. ಕಾರ್ಯದರ್ಶಿ ಶಾಲಿನಿ ರಾಜೇಂದ್ರನ್ ಸ್ವಾಗತಿಸಿ, ಯೂನಿಟ್ ಪಿಆರ್‌ಒ ವಿನೋದ್ ಕಲ್ಲಂಗೈ ವಂದಿಸಿದರು.

ಜೂ.27ರಂದು ಜಿಲ್ಲಾ ಅಭಿವೃದ್ಧಿ ಸಮಿತಿ ಸಭೆ

ಕಾಸರಗೋಡು: ಜಿಲ್ಲಾ ಅಭಿವೃದ್ಧಿ ಸಮಿತಿ ಸಭೆಯು ಜೂ.27ರಂದು ಬೆಳಗ್ಗೆ 10.30ಕ್ಕೆ ಜಿಲ್ಲಾಧಿಕಾರಿಗಳ ಸಮ್ಮೇಳನ ಸಭಾಂಗಣದಲ್ಲಿ ನಡೆಯಲಿದೆ. ಶಾಸಕರು, ಅಧಿಕಾರಿಗಳು ಭಾಗವಹಿಸಲಿದ್ದಾರೆ ಎಂದು ಕಾಸರಗೋಡು ಜಿಲ್ಲಾಡಳಿತ ಕಚೇರಿ ಪ್ರಕಟಣೆ ತಿಳಿಸಿದೆ.

ನಾಯನ್ಮಾರಮೂಲೆ ಶಾಲೆಯಲ್ಲಿ ತಂಬಾಕು ವಿರೋಧಿ ಜಾಗೃತಿ ಅಭಿಯಾನ



ಕಾಸರಗೋಡು: ವಿದ್ಯಾರ್ಥಿಗಳು ಮಾದಕ ವ್ಯಸನದ ವಿರುದ್ಧ ಜಾಗೃತರಾಗಬೇಕು. ಎಂದು ಕಾಸರಗೋಡು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಹೇಳಿದರು.

ವಿಶ್ವ ತಂಬಾಕು ರಹಿತ ದಿನಾಚರಣೆ ಅಂಗವಾಗಿ ಜೂನ್ 26ರವರೆಗೆ ಜಿಲ್ಲೆಯಲ್ಲಿ ನಡೆಯುತ್ತಿರುವ ತಂಬಾಕು ವಿರೋಧಿ ಚಟುವಟಿಕೆಗಳ ಅಂಗವಾಗಿ ನಾಯನ್ಮಾರಮೂಲೆ ಟಿಐಎಚ್‌ಎಸ್ ಶಾಲೆಯಲ್ಲಿ ಗುರುವಾರ ಹಮ್ಮಿಕೊಳ್ಳಲಾದ ಜಾಗೃತಿ ಅಭಿಯಾನ ಕಾರ್ಯಕ್ರಮದಲ್ಲಿ ಭಾಗವಹಿಸಿ, ಅವರು ಮಾತನಾಡಿದರು.

ಶಾಲೆ ಆವರಣದಲ್ಲಿ ಫಲಕ ಅಳವಡಿಸಿ

ಜಿಲ್ಲೆಯಲ್ಲಿ ಆರೋಗ್ಯ ಇಲಾಖೆ ಮತ್ತು ಶಿಕ್ಷಣ ಇಲಾಖೆ ಜಂಟಿಯಾಗಿ ಶಾಲೆಗಳಲ್ಲಿ ತಂಬಾಕು ವಿರೋಧಿ ಪ್ರತಿಜ್ಞೆ ಕೈಗೊಳ್ಳುತ್ತಿದೆ. ಈ ಪ್ರಯುಕ್ತ ಶಾಲೆಗಳನ್ನು ಸಂಪೂರ್ಣವಾಗಿ ತಂಬಾಕು ಮುಕ್ತಗೊಳಿಸಲಾಗುವುದು. ಶಾಲೆಗಳ ಮುಖ್ಯದ್ವಾರದಲ್ಲಿ ತಂಬಾಕು ಮುಕ್ತ ಜಾಹೀರಾತು ಫಲಕ ಅಳವಡಿಸಲಾಗುವುದು. ಶಾಲಾ ಆವರಣದಿಂದ 100 ಮೀಟರ್‌ಗಳ ದೂರದವರೆಗೆ ತಂಬಾಕು ಉತ್ಪನ್ನಗಳ ಮಾರಾಟ ನಿಷೇಧಿಸಲಾಗಿದೆ. ಕಾಲೇಜುಗಳಲ್ಲಿ ಎನ್‌ಎಸ್‌ಎಸ್ ಘಟಕಗಳ ಸಹಾಯದಿಂದ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗುವುದು ಎಂದರು.

ಚೆಂಗಳ ಗ್ರಾ.ಪಂ. ಅಧ್ಯಕ್ಷ ವಸಂತ ಅಜಕ್ಕೋಡು ಅಧ್ಯಕ್ಷತೆ ವಹಿಸಿದ್ದರು. ಆರೋಗ್ಯ ಮತ್ತು ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷೆ ಶಾಂತಕುಮಾರಿ ಟೀಚರ್, ನಾಯನ್ಮಾರಮೂಲೆ ವಾರ್ಡ್ ಸದಸ್ಯ ಶಿಹಾಬುದ್ದೀನ್, ಉಪ ಡಿಎಂಒ ಡಾ.ಅಜಯ್ ರಾಜನ್, ತಾಂತ್ರಿಕ ಸಹಾಯಕ ಎಂ.ಚಂದ್ರನ್, ಚೆಂಗಳ ಕುಟುಂಬ ಆರೋಗ್ಯ ಕೇಂದ್ರದ ಆರೋಗ್ಯ ನಿರೀಕ್ಷಕ ಕೆ.ವಿ.ಗೋಪಿನಾಥ್ ಮತ್ತು ಶಾಲಾ ಮುಖ್ಯೋಪಾಧ್ಯಾಯ ಎಸ್.ಅನಿಲ್‌ಕುಮಾರ್ ಉಪಸ್ಥಿತರಿದ್ದರು. ಜಿಲ್ಲಾ ವೈದ್ಯಾಧಿಕಾರಿ ಡಾ.ಬಿ. ಸಂತೋಷ್ ಸ್ವಾಗತಿಸಿ, ಉಪಜಿಲ್ಲಾ ಶಿಕ್ಷಣ ಮಾಧ್ಯಮ ಅಧಿಕಾರಿ ಪಿ.ಪಿ.ಹಸೀಬ್ ವಂದಿಸಿದರು.



ಮಂಜೇಶ್ವರದ ಕೊಟ್ಟೆಕ್ಕೋಡಿ ವಾಣೀ ವಿಲಾಸ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಗೈಲ್ ಇಂಡಿಯಾ ಲಿ. ಮಂಗಳೂರು ಇದರ ವತಿಯಿಂದ ವಿಶ್ವ ಪರಿಸರ ದಿನದ ಪ್ರಯುಕ್ತ ಚಿತ್ರ ರಚನಾ ಸ್ಪರ್ಧೆ ಏರ್ಪಡಿಸಲಾಗಿತ್ತು. ಟ್ರಿನ್‌ಸನ್ ಸಿ.ಲಾರೆನ್ಸ್, ಅಜಯಕುಮಾರ್, ಮೆನೇಜರ್ ವಿಕಾಸ್ ಹಾಗೂ ಪೃಥ್ವಿರಾಜ್, ಶಾಲಾ ಮೆನೇಜರ್ ಡಾ.ಜಯಪ್ರಕಾಶ್ ನಾರಾಯಣ ಕೊಟ್ಟೆಕ್ಕೋಡಿ, ಭಾಗವಹಿಸಿದರು. ಶಾಲಾ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು. ಶಾಲಾ ಮುಖ್ಯೋಪಾಧ್ಯಾಯಿನಿ ರಾಜೇಶ್ವರಿ ಎಸ್., ಅಧ್ಯಾಪಿಕೆ ಸುಶ್ಮಿತಾ ಎಂ.ಎ.ಆರ್. ಉಪಸ್ಥಿತರಿದ್ದರು.



ಉದುಮ ಶಾಸಕ ಕೆ.ನೀಲಕಂಠನ್ ಅವರನ್ನು ಉಪ್ಪಳದ ಮೀಂಜ ಚೌಟರ ಮನೆಯಲ್ಲಿ ಸನ್ಮಾನಿಸಲಾಯಿತು. ಡಾ.ಡಿ.ಸಿ.ಚೌಟ, ಪ್ರಭಾಕರ ಚೌಟ, ಮನೋಹರ ಚೌಟ, ಕಾಂಗ್ರೆಸ್‌ನ ಹಿರಿಯ ನೇತಾರ ಕಂಚಿಲ ಮೊಹಮ್ಮದ್ ಹಾಜಿ, ಮೀಂಜ ಗ್ರಾಮ ಪಂಚಾಯತ್ ಅಧ್ಯಕ್ಷ ತಾಜುದ್ದೀನ್, ಉಪಾಧ್ಯಕ್ಷೆ ಉಷಾ ಪೂಂಜಾ, ಸದಸ್ಯ ಸಿದ್ದಿಕ್, ಜಿಲ್ಲಾ ಪಂಚಾಯತ್ ಹರ್ಷಾದ್ ವರ್ಕಾಡಿ, ಉದ್ಯಮಿ ಕಲೀಮ್, ನಾರಾಯಣ ಹೆಗ್ಡೆ ಕೋಡಿಬೈಲು, ಜನಶ್ರೀ ಮೊಹಮ್ಮದ್ ಮೊದಲಾದವರು ಉಪಸ್ಥಿತರಿದ್ದರು.

ಕಾಸರಗೋಡು ಜಿಲ್ಲಾಡಳಿತ ಕಚೇರಿಯಲ್ಲಿ ಶ್ರುತಿ ಕೆ.ವಿ. ಅವರಿಂದ ಅಧಿಕಾರ ಸ್ವೀಕಾರ

ಹೆಚ್ಚುವರಿ ದಂಡನಾಧಿಕಾರಿಯಾಗಿ ಉದಯಕುಮಾರ್ ಪೆರ್ಲ

ಕಾಸರಗೋಡು: ಕಾಸರಗೋಡು ಜಿಲ್ಲಾ ನೂತನ ಹೆಚ್ಚುವರಿ ದಂಡನಾಧಿಕಾರಿ (ಎಡಿಎಂ) ಉದಯ ಕುಮಾರ್ ಪೆರ್ಲ ಅವರು ಶ್ರುತಿ ಕೆ.ವಿ. ಅವರಿಂದ ಅಧಿಕಾರ ಸ್ವೀಕರಿಸಿ ಹುದ್ದೆ ಅಲಂಕರಿಸಿದರು.

ಉದಯಕುಮಾರ್ ಅವರು 1997ರಲ್ಲಿ ಕಾಸರಗೋಡು ಭೂಸ್ವಾಧೀನ ಕಚೇರಿಯಲ್ಲಿ ಎಲ್‌ಡಿ ಕ್ಲರ್ಕ್ ಆಗಿ ಸರಕಾರಿ ಸೇವೆಗೆ ಸೇರ್ಪಡೆಯಾದರು. ಬಳಿಕ ಕಾಸರಗೋಡು ತಾಲೂಕು ಕಚೇರಿಯಲ್ಲಿ ಸೀನಿಯರ್ ಕ್ಲರ್ಕ್ ಆಗಿ ಕಾರ್ಯನಿರ್ವಹಿಸಿದರು. 2006ರಲ್ಲಿ ಭಡ್ತಿ ಹೊಂದಿ ಗ್ರಾಮಾಧಿಕಾರಿ ಹುದ್ದೆಗೆ ನೇಮಕಗೊಂಡು ಶೇಣಿ, ಆದೂರು, ಬದಿಯಡ್ಕ, ಕುಂಬ್ಡಾಜೆ ಹಾಗೂ ಬೇಳ ಗ್ರಾಮಗಳಲ್ಲಿ ಗ್ರಾಮಾಧಿಕಾರಿಯಾಗಿ ಸೇವೆ ಸಲ್ಲಿಸಿದರು. 2014ರಲ್ಲಿ ಮತ್ತೊಮ್ಮೆ ಭಡ್ತಿ ಹೊಂದಿ ಕಾಸರಗೋಡು ಜಿಲ್ಲಾಧಿಕಾರಿ ಕಚೇರಿಯಲ್ಲಿ ಜೂನಿಯರ್ ಸೂಪರಿಂಟೆಂಡೆಂಟ್ ಆಗಿ ನೇಮಕಗೊಂಡರು. ನಂತರ ಮಂಜೇಶ್ವರ ತಾಲೂಕು ಕಚೇರಿ, ಎಲ್‌ಎಎನ್‌ಎಚ್ ಕಾಸರಗೋಡು ಹಾಗೂ ಆರ್‌ಡಿ ಕಚೇರಿ ಕಾಸರಗೋಡುಗಳಲ್ಲಿ ವಿವಿಧ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸಿದರು. 2020ರಲ್ಲಿ ಭಡ್ತಿ ಹೊಂದಿ ಆರ್‌ಡಿ ಕಚೇರಿಯಲ್ಲಿ ಸೀನಿಯರ್ ಸೂಪರಿಂಟೆಂಡೆಂಟ್ ಆಗಿ ಕಾರ್ಯನಿರ್ವಹಿಸಿದರು. ಬಳಿಕ 2021–2025ರ ವರೆಗೆ ಕಾಸರಗೋಡು ಭೂ ನ್ಯಾಯಮಂಡಳಿಯಲ್ಲಿ ಸೇವೆ ಸಲ್ಲಿಸಿ ಭೂ ಸುಧಾರಣೆಗೆ ಸಂಬಂಧಿಸಿದ ಅನೇಕ ಕಡತಗಳನ್ನು ವೇಗವಾಗಿ ವಿಲೇವಾರಿ ಮಾಡುವ ಮೂಲಕ ಗಮನ ಸೆಳೆದಿದ್ದರು. ಅವರು ಮಂಜೇಶ್ವರ ತಾಲೂಕಿನ ಎಣ್ಮಕಜೆ ಗ್ರಾಮದ ಪೆರ್ಲದ ದಿ.ಮಾಧವ ಚೆಟ್ಟಿಯಾರ್ ಮತ್ತು ಶಾರದಾ ದಂಪತಿಯ ಪುತ್ರ. ಪತ್ನಿ ಶ್ರೀಜಾ ಎಂ.ವಿ.ಕೃಷ್ಣ (ಎಚ್‌ಎಸ್‌ಎಸ್‌ಟಿ, ಎನ್‌ಎಚ್‌ಎಸ್‌ಎಸ್ ಪೆರಡಾಲ) ಮಳ್ಳೇರಿಯ ನಿವಾಸಿ. ಅಜಯ್ ಸಾತ್ವಿಕ್ ಮತ್ತು ಶ್ರೀಲಕ್ಷ್ಮಿ (ವಿದ್ಯಾರ್ಥಿಗಳು) ಮಕ್ಕಳು. ಕಾರ್ಯಕ್ರಮದಲ್ಲಿ ಹುಜೂರು ಶಿರಸ್ತೇದಾರ್ ಸತೀಶ್‌ಕುಮಾರ್, ಸೂಪರಿಂಟೆಂಡೆಂಟ್ ಲೋಕೇಶ್ ಎಂ.ಬಿ. ಮತ್ತು ಇತರ ಅಧಿಕಾರಿಗಳು ಪಾಲ್ಗೊಂಡಿದ್ದರು.



‘ಉತ್ತಮ ಸೇವೆ’ಯ ಗರಿ

ಜಿಲ್ಲಾಡಳಿತದ ಆಪರೇಶನ್ ಸ್ಮೈಲ್ ಯೋಜನೆಯಡಿ ಪಾವೂರು, ಉದ್ಯಾವರ ಹಾಗೂ ಕುಂಜತ್ತೂರು ಗ್ರಾಮಗಳ ವ್ಯಾಪ್ತಿಯ 135 ಕೊರಗ ಸಮುದಾಯದ ಕುಟುಂಬಗಳಿಗೆ ಭೂ ಹಕ್ಕುಪತ್ರ ವಿತರಿಸುವ ಕಾರ್ಯ ಯಶಸ್ವಿಯಾಗಿ ಪೂರ್ಣಗೊಳಿಸಿದಕ್ಕಾಗಿ ಜಿಲ್ಲಾಧಿಕಾರಿಗಳ ‘ಉತ್ತಮ ಸೇವೆ’ ಪ್ರಶಸ್ತಿಗೆ ಭಾಜನರಾಗಿದ್ದರು.

ಜಿಲ್ಲಾ ಮಟ್ಟದ ಕಾರ್ಯಕ್ರಮಕ್ಕೆ ಸಿಗಲಿದೆ ಚಾಲನೆ

ಇಂದು ವಾಚನಾ ಮಾಸಾಚರಣೆ

ಕಾಸರಗೋಡು: ಜಿಲ್ಲಾ ಮಾಹಿತಿ ಸಾರ್ವಜನಿಕ ಸಂಪರ್ಕ ಇಲಾಖೆಯ ಮಾಹಿತಿ ಕಚೇರಿ ಆಯೋಜಿಸಿರುವ ಓದುವ ಮಾಸಾಚರಣೆ ಮತ್ತು ಪಿ.ಎನ್.ಪಣಿಕ್ಕರ್ ಸ್ಮಾರಕ ಜಿಲ್ಲಾ ಮಟ್ಟದ ಉದ್ಘಾಟನೆಯು ಜೂ.19ರಂದು ಬೆಳಗ್ಗೆ 10.30ಕ್ಕೆ ಚೆರ್ಕಳ ಸರಕಾರಿ ಹೈಯರ್ ಸೆಕೆಂಡರಿ ಶಾಲೆಯ ಶಿಹಾಬ್ ತಂಳ್ ಸ್ಮಾರಕ ಮಂಟಪದಲ್ಲಿ ನಡೆಯಲಿದೆ.

ಕಾಸರಗೋಡು ಜಿಲ್ಲಾ ಪಂಚಾಯತ್ ಅಧ್ಯಕ್ಷ ಸಾಬು ಅಬ್ರಹಾಂ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಚೆಂಗಳ ಗ್ರಾಮ ಪಂಚಾಯತ್ ಅಧ್ಯಕ್ಷ ವಸಂತ ಅಜಕ್ಕೋಡು ಅಧ್ಯಕ್ಷತೆ ವಹಿಸಲಿದ್ದಾರೆ. ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಓದುವ ದಿನದ ಸಂದೇಶ ನೀಡಲಿದ್ದಾರೆ. ಕಾಸರಗೋಡು ಬ್ಲಾಕ್ ಪಂಚಾಯತ್ ಅಧ್ಯಕ್ಷ ಅಬ್ದುಲ್ಲಕುಂಞಿ ಚೆರ್ಕಳ ವಿಶೇಷ ಅತಿಥಿಯಾಗಿ ಭಾಗವಹಿಸುವರು. ಪ್ರೊ.ಕೆ.ಪಿ.ಜಯರಾಜನ್ ಅವರು ಪಿ.ಎನ್.ಪಣಿಕ್ಕರ್ ಸ್ಮಾರಕ ಉಪನ್ಯಾಸ ನೀಡಲಿದ್ದಾರೆ. ಜಿಲ್ಲಾ ಶಿಕ್ಷಣ ಉಪನಿರ್ದೇಶಕಿ ಪಿ.ಸವಿತಾ ಓದುವ ದಿನದ ಪ್ರತಿಜ್ಞೆಯನ್ನು ಬೋಧಿಸುವರು. ಡಾ.ಸಂತೋಷ್ ಪನೆಯಾಲ್ ಸಾಂಸ್ಕೃತಿಕ ಉಪನ್ಯಾಸ ನೀಡಲಿದ್ದಾರೆ. ಪ್ರಭಾರ ಪ್ರಾಂಶುಪಾಲ ಎಂ.ರಘುನಾಥ್, ಮುಖ್ಯೋಪಾಧ್ಯಾಯಿನಿ ಸಿ.ವಿ.ಸುಬೈದಾ, ಜನಪ್ರತಿನಿಧಿಗಳು, ಶಾಲಾ ಅಧಿಕಾರಿಗಳು, ಮಾಹಿತಿ ಕಚೇರಿ ಸಿಬ್ಬಂದಿಗಳು, ವಿದ್ಯಾರ್ಥಿಗಳು ಮುಂತಾದವರು ಪಾಲ್ಗೊಳ್ಳುವರು.



ಸುತ್ತಮುತ್ತ

ಕುಂದಾಪುರ ತಾ.ಕಸಾಪ ಸರ್ವಾಧ್ಯಕ್ಷರಾಗಿ ಯು. ಸುರೇಂದ್ರ ಶೆಣೈ ಆಯ್ಕೆ

ಕುಂದಾಪುರ: ಹಿರಿಯ ಪತ್ರಿಕೋದ್ಯಮಿ, ಸಾಹಿತಿ, ಸಂಘಟಕ, 'ಕುಂದಪ್ರಭ' ವಾರ ಪತ್ರಿಕೆಯ ಸಂಪಾದಕ



ಕುಂಭಾಸಿ ನಿವಾಸಿ ಯು. ಸುರೇಂದ್ರ ಶೆಣೈ (ಯು. ಎಸ್. ಶೆಣೈ, ಗಂಗೊಳ್ಳಿ) ಅವರನ್ನು ಜೂನ್ 28 ರಂದು ಕುಂಭಾಸಿ ಆನೆಗುಡ್ಡೆ ಕ್ಷೇತ್ರದಲ್ಲಿ ಶ್ರೀ ವಿನಾಯಕ ಸಭಾ ಭವನದಲ್ಲಿ ನಡೆಯಲಿರುವ ಕುಂದಾಪುರ ತಾಲೂಕು 20ನೇ ಕನ್ನಡ ಸಾಹಿತ್ಯ ಸಮ್ಮೇಳನ 'ನುಡಿ ಬೆಳಕು 2026' ರ ಸರ್ವಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ.

ಉಡುಪಿ ಜಿಲ್ಲಾ ಕಸಾಪ ಅಧ್ಯಕ್ಷ ನೀಲಾವರ ಸುರೇಂದ್ರ ಅಡಿಗರ ಉಪಸ್ಥಿತಿಯಲ್ಲಿ ನಡೆದ ಸಭೆ ಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಕುಂದಾಪುರದ ಅಧ್ಯಕ್ಷ ಡಾ. ಉಮೇಶ ಪುತ್ರನ್ ಈ ಆಯ್ಕೆ ಘೋಷಿಸಿದರು. ಸಾಹಿತ್ಯ ಪ್ರೇರಕರಾಗಿದ್ದು, ಹಲವಾರು ಸಾಹಿತ್ಯ ಕಾರ್ಯಕ್ರಮ ಸಂಘಟಿಸಿ, ನೂರಾರು ಯುವ ಪ್ರತಿಭೆಗಳಿಗೆ ಸಾಹಿತ್ಯ ಕ್ಷೇತ್ರದಲ್ಲಿ ಮುನ್ನಡೆಯಲು ಮಾರ್ಗದರ್ಶನ, ಸ್ಫೂರ್ತಿ ನೀಡಿರುವ ಯು. ಎಸ್. ಶೆಣೈ ಕುಂದಾಪುರ ತಾಲೂಕಿನ ಭಾಷೆ, ಸಾಹಿತ್ಯ, ಸಂಸ್ಕೃತಿ ಉಳಿವಿಗಾಗಿ ಸಾಕಷ್ಟು ಶ್ರಮಿಸಿದವರು. ಬರಹಗಾರರ ಸಮ್ಮಿಲನಗಳ ಮೂಲಕ ಕುಂದಾಪುರ ತಾಲೂಕಿನ ಬರಹಗಾರರನ್ನು ಒಗ್ಗೂಡಿಸುತ್ತಾ ಬಂದಿದ್ದಾರೆ. 'ಸಾಹಿತ್ಯ ಸಪ್ತಾಹ', 'ಕನ್ನಡ ಡಿಂಡಿಮ', 'ಪುಸ್ತಕ ಉತ್ಸವ', 'ನುಡಿ ಬೆಳಕು' ಮುಂತಾದ ನಿರಂತರ ಕಾರ್ಯಕ್ರಮಗಳ ಮೂಲಕ ಸಾಹಿತ್ಯ ಚಟುವಟಿಕೆ ನಡೆಸಿದವರು. 'ಕುಂದ ಕನ್ನಡ ಭಾಷಾಭಿವೃದ್ಧಿ ವೇದಿಕೆ'ಯ ಸಂಚಾಲಕರಾಗಿರುವ ಇವರು ಕುಂದಾಪ್ರ ಕನ್ನಡ ಭಾಷೆ ಉಳಿಸಿ ಬೆಳೆಸಲು ಕಳೆದ 4 ದಶಕಗಳಿಂದ ಹಿರಿಯರಿಗೆ, ಕಿರಿಯರಿಗೆ ಪ್ರೇರಣೆ ನೀಡುತ್ತಾ ಬರುತ್ತಿದ್ದಾರೆ. ಉಡುಪಿ ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿಗಳಾದ ಸುಬ್ರಹ್ಮಣ್ಯ ಶೆಟ್ಟಿ, ನರೇಂದ್ರ ಕುಮಾರ್ ಕೋಟ, ಖಜಾಂಚಿ ಮನೋಹರ ಭಟ್, ಕುಂದಾಪುರ ಕಸಾಪ ಪ್ರಧಾನ ಕಾರ್ಯದರ್ಶಿ ದಿನಕರ ಆರ್. ಶೆಟ್ಟಿ, ಮಂಜುನಾಥ ಕೆ.ಎಸ್. ಅಕ್ಷತಾ ಗಿರೀಶ್ ಉಪಸ್ಥಿತರಿದ್ದರು.

ನಾಳೆ ಕೃತಿ ಲೋಕಾರ್ಪಣೆ

ಶಿರ್ವ: ಶ್ರೀ ನಾರಾಯಣ ಗುರು ಶಿಕ್ಷಣ ಸಂಸ್ಥೆಗಳು ಪಡುಬೆಳ್ಳೆ ಇದರ ಆಶ್ರಯದಲ್ಲಿ ಖ್ಯಾತ ಲೇಖಕರಾದ ಪ್ರೊ.ಎಸ್.ಎನ್.ಡಿ.ಪೂಜಾರಿ ಇವರು ಆಂಗ್ಲ ಭಾಷೆಯಲ್ಲಿ ಸಂಪಾದಿಸಿದ 'ಬಯೋಗ್ರಫಿಕಲ್ ಸ್ಕೆಚ್ ಆಫ್ ಮುದ್ದು ಮೂಡುಬೆಳ್ಳೆ'' ಇದರ ಲೋಕಾರ್ಪಣಾ ಸಮಾರಂಭ ಜೂ.20ರಂದು ಬೆಳಗ್ಗೆ 10.30ಕ್ಕೆ ಪಡುಬೆಳ್ಳೆ ಶ್ರೀ ನಾರಾಯಣ ಗುರು ಆಂಗ್ಲ ಮಾಧ್ಯಮ ಶಾಲಾ ಸಭಾಂಗಣದಲ್ಲಿ ಜರುಗಲಿದೆ.

ನಿವೃತ್ತ ಪ್ರಾಂಶುಪಾಲರು, ಸಾಹಿತ್ಯ ವಿಮರ್ಶಕರಾದ ಡಾ.ಬಿ.ಜನಾರ್ದನ ಭಟ್ ಬೆಳ್ಮಣ್ಣು ಕೃತಿ ಬಿಡುಗಡೆ ಮಾಡಲಿದ್ದು, ಅಧ್ಯಕ್ಷತೆಯನ್ನು ಶಾಲಾ ಆಡಳಿತ ಮಂಡಳಿ ಸದಸ್ಯರು, ಬೆಳ್ಳೆ ಸಿ.ಎ.ಬ್ಯಾಂಕ್ ಅಧ್ಯಕ್ಷರಾದ ಶಿವಾಜಿ ಎಸ್.ಸುವರ್ಣ ವಹಿಸಲಿದ್ದಾರೆ. ಅತಿಥಿಗಳಾಗಿ ಕಾಪು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಇದರ ಅಧ್ಯಕ್ಷ ಬಿ.ಪುಂಡಲೀಕ ಮರಾಠೆ ಶಿರ್ವ, ಕೃತಿ ಲೇಖಕರಾದ ಪ್ರೊ. ಎಸ್.ಎನ್.ಡಿ. ಪೂಜಾರಿ ಮಿರಾಮಾರ್ ಗೋವಾ, ಸಾಹಿತ್ಯ ಸಂಸ್ಕೃತಿ ವೇದಿಕೆ ಬೆಳ್ಳೆ ಇದರ ಸ್ಥಾಪಕರಾದ ಮುದ್ದು ಮೂಡುಬೆಳ್ಳೆ ಭಾಗವಹಿಸಲಿದ್ದಾರೆ. ಆಂಗ್ಲ ಮಾಧ್ಯಮ ಶಾಲಾ ಮುಖ್ಯಶಿಕ್ಷಕರಾದ ರಾಘವೇಂದ್ರ ಸಾಲಿಯಾನ್ ಹಾಗೂ ಕನ್ನಡ ಮಾಧ್ಯಮ ಪ್ರೌಢ ಶಾಲಾ ಮುಖ್ಯ ಶಿಕ್ಷಕಿ ಉಷಾ ಎಸ್. ಉಪಸ್ಥಿತರಿರುವರು. ಸುಜಾತಾ ಸುವರ್ಣ ಮೂಡುಬೆಳ್ಳೆ ನಿರೂಪಿಸಲಿದ್ದಾರೆ.

ಮೊದಲನೇ ಪುಟದಿಂದ

ಡಾಮರಿಗಾಗಿ ಶೋಧ!

ರಸ್ತೆ ತೀರಾ ನಾದುಸ್ಥಿತಿಯಲ್ಲಿರುವುದರಿಂದ ಜನರು ಸುತ್ತು ಬಳಸಿ ಸೇರಬೇಕಾದ ಸ್ಥಳಕ್ಕೆ ತಲುಪಬೇಕಾಗಿದೆ. ಈ ರಸ್ತೆಯ ದುಸ್ಥಿತಿ ಬಗ್ಗೆ ಸಾರ್ವಜನಿಕರು ಹಲವು ಬಾರಿ ಸಂಬಂಧಪಟ್ಟವರ ಗಮನ ತಂದಿದ್ದರೂ ಸಮಸ್ಯೆಗೆ ಶಾಶ್ವತ ಪರಿಹಾರ ದೊರಕಿಲ್ಲ ಎಂದು ದೂರಿದ್ದಾರೆ. ಈ ಭಾಗದಲ್ಲಿ ಉತ್ತಮ ವ್ಯಾಪಾರದ ನಿರೀಕ್ಷೆಯೊಂದಿಗೆ ಆಗಮಿಸುವವರು ಕೆಸರಿನ ರಸ್ತೆಯಲ್ಲಿ ಹರಸಾಹಸ ಪಟ್ಟು ಸಂಚರಿಸಿ, ಕೆಲವೊಮ್ಮೆ ವ್ಯಾಪಾರವೇ ಸಾಧ್ಯವಾಗದೆ ಬರಿಗೈಯಲ್ಲಿ ಹಿಂದಿರುಗುತ್ತಿದ್ದಾರೆ. ಇದರಿಂದ ಸ್ಥಳೀಯ ಆರ್ಥಿಕ ಚಟುವಟಿಕೆಗಳ ಮೇಲೂ ಪರಿಣಾಮ ಬೀಳುತ್ತಿದೆ. ಮಳೆಗಾಲ ತೀವ್ರವಾಗುವ ಮೊದಲು ಸಂಬಂಧಪಟ್ಟ ಇಲಾಖೆ ತುರ್ತು ಕ್ರಮ ಕೈಗೊಂಡು ರಸ್ತೆ ದುರಸ್ತಿ ಕಾರ್ಯ ಆರಂಭಿಸಬೇಕು. ಇಲ್ಲದಿದ್ದರೆ ಈ ರಸ್ತೆ ಸಾರ್ವಜನಿಕರ ಸಂಕಷ್ಟದ ಸಂಕೇತವಾಗಿ ಉಳಿಯುವ ಅಪಾಯವಿದೆ ಎಂಬ ಆರೋಪವು ಕೇಳಿಬಂದಿದೆ.

ನೀಟ್ ಮರು ಪರೀಕ್ಷೆ ಸುವ್ಯವಸ್ಥಿತವಾಗಿ ನಡೆಸಲು ಪೂರ್ವಭಾವಿ ಸಭೆ | ಅಧಿಕಾರಿಗಳಿಗೆ ಡೀಸಿ ಸೂಚನೆ

ಪಾರದರ್ಶಕವಾಗಿ ಪರೀಕ್ಷೆ ನಡೆಸಲು ಎಲ್ಲಾ ಸಿದ್ಧತೆಗಳ ನಡೆಸಿ

ಉಡುಪಿ: ಜಿಲ್ಲೆಯಲ್ಲಿ ಜೂನ್ 21 ರಂದು ನಡೆಯಲಿರುವ ನೀಟ್ (ಯುಜಿ) ಮರು ಪರೀಕ್ಷೆಯಲ್ಲಿ ಯಾವುದೇ ಲೋಪದೋಷ ಉಂಟಾಗದಂತೆ ಪಾರದರ್ಶಕವಾಗಿ ಪರೀಕ್ಷೆ ನಡೆಸಲು ಅಗತ್ಯವಿರುವ ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಳ್ಳುವಂತೆ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಮಣಿಪಾಲ ರಜತಾದ್ರಿಯ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ನೀಟ್ ಮರು ಪರೀಕ್ಷೆ ಸುವ್ಯವಸ್ಥಿತವಾಗಿ ನಡೆಸುವ ಸಂಬಂಧ ಆಯೋಜಿಸಲಾದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ ವತಿಯಿಂದ ನೀಟ್ ಮರು ಪರೀಕ್ಷೆಯು ಜೂ. 21 ರಂದು ಜಿಲ್ಲೆಯ ಒಟ್ಟು 6 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದೆ.

ವಾಲೆಟ್ಸ್ ಹ್ಯಾಂಡ್ ಬ್ಯಾಗ್ ತರುವಂತಿಲ್ಲ

ನೀಟ್ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರದೊಳಗೆ ಮೊಬೈಲ್ ಫೋನ್, ಸ್ಮಾರ್ಟ್ ವಾಚ್‌ಗಳು, ಕ್ಯಾಲ್ಕುಲೇಟರ್, ಬ್ಲೂ ಟೂತ್ ಡಿವೈಸ್, ಇಯರ್ ಫೋನ್ಸ್ ಸೇರಿದಂತೆ ಯಾವುದೇ ಎಲೆಕ್ಟ್ರಾನಿಕ್ ಉಪಕರಣಗಳು ಮತ್ತು ವಾಲೆಟ್ಸ್,



ಹ್ಯಾಂಡ್ ಬ್ಯಾಗ್ ಧರಿಸುವುದು ನಿಷೇಧಿಸಲಾಗಿದೆ ಎಂದ ಅವರು, ಪರೀಕ್ಷೆಗಳು ಆರಂಭವಾಗುವ ಸಮಯಕ್ಕಿಂತ ಸಾಕಷ್ಟು ಮುಂಚಿತ ವಿದ್ಯಾರ್ಥಿಗಳು ಕೇಂದ್ರದಲ್ಲಿ ಹಾಜರಿರಬೇಕು ಹಾಗೂ ತಮ್ಮ ಪರೀಕ್ಷಾ ಪ್ರವೇಶ ಪತ್ರದ ಜೊತೆ ಯಾವುದಾದರೊಂದು ಮೂಲ (ಒರಿಜಿನಲ್) ಗುರುತಿನ ಚೀಟಿಯೊಂದಿಗೆ ಸೂಚನೆಯಲ್ಲಿ ತಿಳಿಸಿರುವಂತೆ 2 ಭಾವಚಿತ್ರಗಳೊಂದಿಗೆ ಪರೀಕ್ಷೆಗೆ ಹಾಜರಿರಬೇಕು ಎಂದರು.

ಸಿಸಿ ಟಿವಿ ಕಡ್ಡಾಯ

ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿ ಕಡ್ಡಾಯ ಅಳವಡಿಸಬೇಕು. ಪರೀಕ್ಷಾ ಕೇಂದ್ರಗಳ ಮುಖ್ಯಸ್ಥರು ಅಭ್ಯರ್ಥಿಗಳಿಗೆ ಕುಡಿಯುವ ನೀರು, ಶೌಚಾಲಯ ಸೇರಿದಂತೆ ಅಗತ್ಯ ಮೂಲಸೌಕರ್ಯ ಕಲ್ಪಿಸಬೇಕು. ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿನ ಪ್ರದೇಶದಲ್ಲಿ ಸೂಕ್ತ ಪೊಲೀಸ್ ಭದ್ರತೆ ಒದಗಿಸಬೇಕು. ಪ್ರಶ್ನೆ ಪತ್ರಿಕೆ ತರಿಸಿಕೊಳ್ಳಲು, ಉತ್ತರ ಪತ್ರಿಕೆ ರವಾನೆಗೆ ಅನುಕೂಲವಾಗುವಂತೆ ವಾಹನ ಸಿದ್ಧವಾಗಿಟ್ಟುಕೊಳ್ಳಬೇಕು. ಪರೀಕ್ಷಾ ಕೇಂದ್ರಗಳ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗದಂತೆ ನಿರಂತರ ವಿದ್ಯುತ್ ಸಂಪರ್ಕ ಕಲ್ಪಿಸುವಂತೆ ಮೆಸ್ಕಾಂ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿದ ಅವರು, ತುರ್ತು ಸಂದರ್ಭ ಎದುರಿಸಲು ಅನುಕೂಲವಾಗುವಂತೆ ಅಗ್ನಿ ಶಾಮಕ ವಾಹನ ಸನ್ನದ್ಧರಾಗಿರಬೇಕು. ಮುಂಜಾಗ್ರತೆ ಯಾಗಿ ಎಲ್ಲಾ ಪರೀಕ್ಷಾ ಕೇಂದ್ರಗಳಿಗೆ ಆರೋಗ್ಯ ಸಹಾಯಕರ

> **2970 ವಿದ್ಯಾರ್ಥಿಗಳು**
> ನೀಟ್ ಮರು ಪರೀಕ್ಷೆ ಜೂ.21 ರಂದು ಮಧ್ಯಾಹ್ನ 2 ರಿಂದ ಸಂಜೆ 5.15 ರ ವರೆಗೆ ನಡೆಯಲಿದೆ. ಈ ಬಾರಿ ಹೆಚ್ಚುವರಿ 15 ನಿಮಿಷಗಳ ಕಾಲಾವಕಾಶ ನೀಡಲಾಗಿದೆ. ಜಿಲ್ಲೆಯಲ್ಲಿ 938 ಬಾಲಕರು, 2032 ಬಾಲಕಿಯರು, 7 ಪಿಡಬ್ಲ್ಯೂಯ ಬಿ.ಡಿ ಅಭ್ಯರ್ಥಿಗಳು ಹಾಗೂ 1 ಸ್ಕ್ರೈಬ್ ಸೌಲಭ್ಯ ಪಡೆದಿರುವ ಅಭ್ಯರ್ಥಿಗಳು ಸೇರಿ ದಂತೆ ಒಟ್ಟು 2970 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲಿದ್ದಾರೆ.
> ● ಸ್ವರೂಪ ಟಿ.ಕೆ , ಡೀಸಿ

ನೇಮಿಸುವಂತೆ ಆರೋಗ್ಯ ಇಲಾಖೆಗೆ ಸೂಚನೆ ನೀಡಿದರು. ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯಿಂದ ಮೆಟಲ್ ಡಿಟೆಕ್ಟರ್ ಅಳವಡಿಸಲಾಗಿದ್ದು, ಬಾಲಕ – ಬಾಲಕಿಯರಿಗೆ ಪ್ರತ್ಯೇಕವಾಗಿ ಫ್ರಿಸ್ಕಿಂಗ್ ನಡೆಸಲಾ ಗುವುದು. ಬಯೋ ಮೆಟ್ರಿಕ್ ದೃಢೀಕರಣದ ಬಳಿಕವೇ ಪರೀಕ್ಷಾ ಕೇಂದ್ರ ಪ್ರವೇಶಿಸಲು ಅವಕಾಶ ನೀಡಲಾಗುತ್ತದೆ. ನೀಟ್ ಪರೀಕ್ಷೆಯ ಜಿಲ್ಲಾ ನೋಡಲ್ ಅಧಿಕಾರಿ

ಎಲ್ಲೆಲ್ಲಿ ಪರೀಕ್ಷೆ ?

ನೀಟ್ ಮರು ಪರೀಕ್ಷೆ ಜಿಲ್ಲೆಯ 6 ಪರೀಕ್ಷಾ ಕೇಂದ್ರಗಳಾದ ಅಜ್ಜರಕಾಡು ಡಾ.ಜಿ.ಶಂಕರ್ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಕೋಟ ವಿವೇಕ ಪಿಯು ಕಾಲೇಜು, ಉಡುಪಿಯ ಎಂ.ಜಿ.ಎಂ ಪಿಯು ಕಾಲೇಜು, ಉಡುಪಿ ಸರ್ಕಾರಿ ಪಿ.ಯು ಬೋರ್ಡ್, ಸರಕಾರಿ ಬಾಲಕಿಯರ ಪ.ಪೂ. ಕಾಲೇಜು ಹಾಗೂ ಬ್ರಹ್ಮಾವರದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ನಡೆಯಲಿದೆ.

ಉಡುಪಿ ಕೇಂದ್ರೀಯ ವಿದ್ಯಾಲಯದ ಪ್ರಾಂಶುಪಾಲ ಎನ್.ಕರೀಂ ಖಾನ್ ಮಾತನಾಡಿದರು. ಅಪರ ಜಿಲ್ಲಾಧಿಕಾರಿ ಅಬೀದ್ ಗದ್ಯಾಳ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸುಧಾಕರ್ ನಾಯಕ್, ಪ.ಪೂ. ಶಿಕ್ಷಣ ಇಲಾಖೆ ಉಪನಿರ್ದೇಶಕ ಮಾರುತಿ, ನೀಟ್ ಪರೀಕ್ಷೆಯ ಡೆಪ್ಯೂಟಿ ಸಿಟಿ ಕೋ-ಆರ್ಡಿನೇಟರ್ ಆದ ಕೇಂದ್ರೀಯ ವಿದ್ಯಾಲಯದ ಶಿಕ್ಷಕ ವಸಂತ ಪದ್ಮಶಾಲಿ ಮತ್ತಿತರರಿದ್ದರು.

ಅಮೃತೇಶ್ವರಿ ಮಹಿಳಾ ಮೀನುಗಾರರ ಸಹಕಾರಿ ಸಂಘದ ಕಟ್ಟಡ 'ಮತ್ಸ್ಯಾಮೃತ' ಲೋಕಾರ್ಪಣೆ



ಕೋಟ: ಮೀನುಗಾರಿಕಾ ಕ್ಷೇತ್ರದಲ್ಲಿ ಕರಾವಳಿ ಭಾಗ ವಿಶೇಷ ಅದರಲ್ಲೂ ಕರ್ನಾಟಕ ಮುಂಚೂಣಿಗೆ ನಿಂತಿದೆ. ಆ ಮೀನುಗಾರಿಕಾ ವೃತ್ತಿಯ ಮೂಲಕ ಅಮೃತೇಶ್ವರೀ ಮಹಿಳಾ ಸಹಕಾರಿ ಸಂಘ ಸ್ಥಾಪಿಸಿ ಮಹತ್ತರ ಮೈಲಿಗಲ್ಲು ಸಾಧಿಸಿದೆ ಎಂದು ಸಂಸದ ಕೋಟ ಶ್ರೀನಿವಾಸ ಪೂಜಾರಿ ಹೇಳಿದ್ದಾರೆ.

ಗುರುವಾರ ಅಮೃತೇಶ್ವರಿ ಮಹಿಳಾ ಮೀನುಗಾರರ ಸಹಕಾರಿ ಸಂಘದ ನೂತನ ಕಟ್ಟಡ 'ಮತ್ಸ್ಯಾಮೃತ'ದ ಉದ್ಘಾಟನಾ ಸಮಾರಂಭ ಉದ್ಘಾಟಿಸಿ ಮಾತನಾಡಿದರು. ಪ್ರಸ್ತುತ ಮೀನುಗಾರಿಕಾ ಕ್ಷೇತ್ರದಲ್ಲಿ 4 ಕೋ. ರೂ. ಅಧಿಕ ಮಂದಿ ಕಾರ್ಯನಿರ್ವಹಿಸುತ್ತಿದ್ದು, ಅಂತಹ ಮೀನುಗಾರಿಕೆ ಮೂಲಕ ಮಹಿಳೆ ಸಹಕಾರಿ ಸಂಘದ ಮೂಲಕ ಸ್ವಾವಲಂಬಿ ಬದುಕು ಕಟ್ಟಿಕೊಂಡಿದ್ದಾರೆ, ಎಂದರು. ಇದೇ ವೇಳೆ ಧರ್ಮರತ್ನಾಕರ ಆನಂದ್ ಸಿ. ಕುಂದರ್ ಅವರನ್ನು ಸನ್ಮಾನಿಸಲಾಯಿತು.

ಅಮೃತೇಶ್ವರಿ ಮಹಿಳಾ ಮೀನುಗಾರರ ಸಹಕಾರಿ ಸಂಘದ ಅಧ್ಯಕ್ಷೆ ಸುಶೀಲಾ ಸೋಮಶೇಖರ್ ಅಧ್ಯಕ್ಷತೆ ವಹಿಸಿದ್ದರು. ವಿಶೇಷವಾಗಿ ಅತಿಥಿಗಳಿಗೆ ಗೌರವಾರ್ಪಣೆ, ಸಾಧನಾ ಅಭಿನಂದನಾ ಗೌರವ , ಮೀನು ಮಾರಾಟ ವೃತ್ತಿಯಲ್ಲಿ ಗಣನೀಯ ಸಾಧನೆ ಮಾಡಿದ ಇಬ್ಬರು ಮಹಿಳೆಯರಿಗೆ ವಿಶೇಷ ಸನ್ಮಾನ, ಸಂಘದ ಸದಸ್ಯರ ಮಕ್ಕಳಿಗೆ ವಿದ್ಯಾರ್ಥಿ ವೇತನ ವಿತರಣೆ ಜರಗಿತು.

ಗೀತಾನಂದ ಫೌಂಡೇಶನ್ ಪ್ರವರ್ತಕ ಆನಂದ್ ಸಿ. ಕುಂದರ್, ಸಹಕಾರ ಸಂಘಗಳ ಜಂಟಿ ನಿಬಂಧಕ ಸುಧೀರ್ ಕುಮಾರ್, ಕೋಟತಟ್ಟು ಗ್ರಾ.ಪಂ ಮಾಜಿ ಅಧ್ಯಕ್ಷ ಸತೀಶ್ ಕುಂದರ್, ಕೋಟ ಪಂ.ಮಾಜಿ ಅಧ್ಯಕ್ಷೆ ಜ್ಯೋತಿ ಬಿ.ಶೆಟ್ಟಿ ಕೋಟ ಸಿ ಎ ಬ್ಯಾಂಕ್ ಅಧ್ಯಕ್ಷ ಡಾ.ಕೃಷ್ಣ ಕಾಂಚನ್, ನಿರ್ದೇಶಕ ಜಿ.ತಿಮ್ಮ ಪೂಜಾರಿ, ನಿವೃತ್ತ ಶಿಕ್ಷಕ ವಿಠ್ಠಲ್ ಗಾಂವ್ಕರ್, ಅಮೃತೇಶ್ವರೀ ಮಹಿಳಾ ಮೀನುಗಾರಿಕಾ ಸಂಘದ ಸಿಇಒ ಶಕುಂತಲ ಕುಮಾರ್, ಶಿಕ್ಷಕ ನರೇಂದ್ರ ಕುಮಾರ್ ಕೋಟ ಇದ್ದರು.

ಬಂಟಕಲ್ ಕಾಲೇಜಿನ ವಿದ್ಯಾರ್ಥಿಗಳಿಂದ ಕೃತಕ ಬುದ್ಧಿಮತ್ತೆ ಆಧಾರಿತ ವ್ಯವಸ್ಥೆ ಅಭಿವೃದ್ಧಿ



ಶಿರ್ವ: ಬಂಟಕಲ್ಲು ಶ್ರೀ ಮಧ್ವ ವಾದಿರಾಜ ತಾಂತ್ರಿಕ ಮಹಾ ವಿದ್ಯಾಲಯದ ಕೃತಕ ಬುದ್ಧಿಮತ್ತೆ ಮತ್ತು ಡಾಟಾ ಸೈನ್ಸ್ ವಿಭಾಗದ ಅಂತಿಮ ವರ್ಷದ ವಿದ್ಯಾರ್ಥಿಗಳಾದ ಕಾವ್ಯ, ಪ್ರಜ್ನಾ, ಶ್ರೀ ಪ್ರಿಯಾ ಹಾಗೂ ಶ್ರೇಯಾ ಶೆಟ್ಟಿ ಇವರು ವಿಭಾಗದ ಮುಖ್ಯಸ್ಥರಾದ ಡಾ. ರಾಜೇಶ್ ನಾಯಕ್ ಇವರ ಮಾರ್ಗದರ್ಶನದಲ್ಲಿ ಮಲ್ಲಿಗೆ ಗಿಡಗಳ ಆರೋಗ್ಯ ಮೇಲ್ವಿಚಾರಣೆ ಮಾಡುವ ನೂತನ ಕೃತಕ ಬುದ್ಧಿಮತ್ತೆ ಆಧಾರಿತ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಿದ್ದಾರೆ.

ಮಲ್ಲಿಗೆ ಗಿಡದ ಪೋಷಕಾಂಶಗಳನ್ನು ವಿಶ್ಲೇಷಿಸಿ ಹಾಗೂ ಎಲೆಗಳ ಚಿತ್ರ ಸಂಸ್ಕರಣಾ ತಂತ್ರಜ್ಞಾನ ಸಂಯೋಜಿಸಿ, ಸಸ್ಯರೋಗಗಳು ಮತ್ತು ಪೋಷಕಾಂಶಗಳ ಕೊರತೆಯನ್ನು ಆರಂಭಿಕ ಹಂತದಲ್ಲಿ ಗುರುತಿಸುವ ಸಾಮರ್ಥ್ಯವನ್ನು ಹೊಂದಿದೆ. ಕೃತಕ ಬುದ್ಧಿಮತ್ತೆ, ಯಂತ್ರ ಅಧ್ಯಯನ ಮತ್ತು

- ■ ಮಲ್ಲಿಗೆ ಗಿಡಗಳ ಆರೋಗ್ಯ ಮೇಲ್ವಿಚಾರಣೆ ಮಾಡುವ ವ್ಯವಸ್ಥೆ ಅಭಿವೃದ್ಧಿ
- ■ ಸಸ್ಯರೋಗಗಳು , ಪೋಷಕಾಂಶಗಳ ಕೊರತೆ ಆರಂಭಿಕ ಹಂತದಲ್ಲಿ ಗುರುತಿ ಸುವ ಸಾಮರ್ಥ್ಯ
- ■ ಮಲ್ಲಿಗೆ ಹೂವಿನ ಉತ್ಪಾದನೆ ಹೆಚ್ಚಲೂ ಸಹಕಾರಿ

ವಿವರಣಾತ್ಮಕ ತಂತ್ರಜ್ಞಾನವನ್ನು ಬಳಸುವ ಈ ವ್ಯವಸ್ಥೆಯು ರೈತರಿಗೆ ಸಮಯೋಚಿತ ಮಾಹಿತಿಯನ್ನು ಒದಗಿಸಿ, ಬೆಳೆ ನಿರ್ವಹಣೆಯನ್ನು ಪರಿಣಾಮಕಾರಿಯಾಗಿ ಕೈಗೊಳ್ಳಲು ಸಹಕಾರಿಯಾಗುತ್ತದೆ. ಇದರಿಂದ ಮಲ್ಲಿಗೆ ಹೂವಿನ ಉತ್ಪಾದನೆ ಹೆಚ್ಚುವುದರ ಜೊತೆಗೆ ಸುಸ್ಥಿರ ಕೃಷಿ ಪದ್ಧತಿಗಳಿಗೂ ಉತ್ತೇಜನ ದೊರೆಯಲಿದೆ.

ಕುಂದಾಪುರ ಉಪ್ಪಿನಕುದ್ರು ಗೊಂಬೆಯಾಟ ಅಕಾಡೆಮಿ: 'ಸೂತ್ರ ಸಂಕಲ್ಪ' ಆಯೋಜನೆ

ಕುಂದಾಪುರ: 350 ವರ್ಷದ ಸುಧೀರ್ಘ ಇತಿಹಾಸ 6 ನೇ ತಲಾಂತರದಲ್ಲಿ ನಿರಂತರ ಪ್ರವಹಿಸುತ್ತಿರುವ ಈ ಕನ್ನಡದ ಮಣ್ಣಿನ ಜಾನಪದ ಕಲೆ ಗೊಂಬೆಯಾಟವನ್ನು ಸರಕಾರದ ಯಾವುದೇ ಧನ ಸಹಾಯ ಪಡೆಯದೇ ತನ್ನದೇ ಆದ ಸ್ವಂತ ಹೋರಾಟದ ಹಾದಿಯಲ್ಲಿ ಅನೇಕ ಸಾಧನೆ ಮಾಡಿರುವ ಉಪ್ಪಿನಕುದ್ರು ಗೊಂಬೆಯಾಟ ಅಕಾಡೆಮಿ ಈ ವಿಶಿಷ್ಟ ಸಂಸ್ಕೃತಿ ಭವಿಷ್ಯತ್ತಿನ ತಲೆಮಾರಿಗೆ ದಾಟಿಸುವಲ್ಲಿ ಸಶಕ್ತ ಕಲಾವಿದನನ್ನು ರೂಪಿಸಲು, ಸಂಪ್ರದಾಯ ಯುವ ಜನತೆಗೆ ಮುಟ್ಟಿಸಲು 'ಸೂತ್ರ ಸಂಕಲ್ಪ' ರೂಪಿಸಿದೆ.

ಅನೇಕ ರಾಷ್ಟ್ರೀಯ, ಅಂತಾರಾಷ್ಟ್ರೀಯ ಪ್ರಶಸ್ತಿ, ಸಂಮಾನ, ಹತ್ತು ಹಲವು ಬಾರಿ ವಿದೇಶ ಪ್ರವಾಸ ದಾಖಲೆಗೈದ ಈ ಕಲೆ ಕನ್ನಡದ ಜಾನಪದ ಸಂಸ್ಕೃತಿ, ಸಂಸ್ಕಾರ, ಸಂಪ್ರದಾಯ ಉಳಿಸಿ, ಬೆಳೆಸಿ, ಬೆಳಗಿಸುವಲ್ಲಿ ನಾಡಿಗೆ ತನ್ನದೇ ಆದ ಮಹತ್ವದ ಕೊಡುಗೆ ನೀಡಿದೆ. ಈ ನಿಟ್ಟಿನಲ್ಲಿ ನಾಡಿನ ಶಾಲಾ– ಕಾಲೇಜು, ವಿದ್ಯಾರ್ಥಿ, ವಿದ್ಯಾರ್ಥಿನಿಯರು, ಸಮಾಜದ ಎಲ್ಲಾ ವರ್ಗದ ಆಸಕ್ತರು, ಎಲ್ಲಾವಯೋಮಾನದವರಿಗೆ ತರಬೇತಿ ನೀಡಿ ಹೊಸ ಸಾಧ್ಯತೆ, ಪ್ರಯೋಗ



ಹಾಗೂ ಹಿರಿಯರಿಂದ ಬಂದ ಸಂಸ್ಕೃತಿ, ಸಂಸ್ಕಾರ, ಸಂಪ್ರದಾಯ ಉಳಿಸಿ, ಬೆಳೆಸಲು ರೂಪಿಸಿರುವ 'ಸೂತ್ರ ಸಂಕಲ್ಪ' ಕಾರ್ಯಕ್ರಮದ ಬಗ್ಗೆ ಆಸಕ್ತರು, ವಿದ್ಯಾರ್ಥಿಗಳು, ಕಲಾವಿದರು ಹಾಗೂ ಸಾರ್ವಜನಿಕರು ಉಪ್ಪಿನಕುದ್ರು ಗೊಂಬೆಯಾಟ ಅಕಾಡೆಮಿ ಸಂಪರ್ಕಿಸಿ ಮಾಹಿತಿ ಪಡೆಯಬಹುದು. ಹೆಸರು ನೊಂದಾಯಿಸಲು ಜೂ.30 ಕೊನೆ ದಿನವಾಗಿದೆ. ಮೊ.ಸಂ. 9448437848/ 7019599689 ಕರೆ ಮಾಡಿ ಮಾಹಿತಿ ಪಡೆಯಬಹುದು ಎಂದು ಅಕಾಡೆಮಿ ಅಧ್ಯಕ್ಷ ಭಾಸ್ಕರ ಕಾಮತ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೈಹಿಕ -ಮಾನಸಿಕ ಆರೋಗ್ಯ ವೃದ್ಧಿಗೆ ಯೋಗ ಉತ್ತಮ ಸಾಧನ: ಡಾ.ಸಾತಪ್ಪ



ಕುಂದಾಪುರ: ಯೋಗವು ದೈಹಿಕ , ಮಾನಸಿಕ ಆರೋಗ್ಯವನ್ನು ವೃದ್ಧಿಸುವ ಅತ್ಯುತ್ತಮ ಸಾಧನವಾಗಿದ್ದು ಪ್ರತಿಯೊಬ್ಬರೂ ತಮ್ಮ ದೈನಂದಿನ ಜೀವನದಲ್ಲಿ ಯೋಗ ಅಳವಡಿಸಿಕೊಳ್ಳಬೇಕೆಂದು ಮುನಿಯಲ್ ಕಾಲೇಜ್ ಆಫ್ ಯೋಗ ಅಂಡ್ ನ್ಯಾಚುರೋಪತಿ ಉಪ ಪ್ರಾಂಶು ಪಾಲ ಡಾ. ಸಾತಪ್ಪ ಹೂವಿನಹಳ್ಳಿ ಕರೆ ನೀಡಿದ್ದಾರೆ.

ಮೂಡ್ಲಕಟ್ಟೆಯ ಐಎಂಜೆ ಕಾಲೇಜ್ ಆಫ್ ಅಲೈಡ್ ಹೆಲ್ತ್ ಸೈನ್ಸಸ್ ಹಾಗೂ ಮೂಡ್ಲಕಟ್ಟೆ ಕಾಲೇಜ್ ಆಫ್ ಫಿಸಿಯೋಥೆರಪಿ, ಮೂಡ್ಲಕಟ್ಟೆ ಕುಂದಾಪುರ ಇವರ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಲಾದ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ 2026 , 10 ದಿನಗಳ ಯೋಗ ಶಿಬಿರಕ್ಕೆ ಬುಧವಾರ ಚಾಲನೆ ನೀಡಿ ಅವರು ಮಾತನಾಡಿದರು.

ಮೂಡ್ಲಕಟ್ಟೆ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಪ್ರಾಂಶುಪಾಲ ಡಾ. ರಾಮಕೃಷ್ಣ ಹೆಗ್ಡೆ ಮಾತನಾಡಿದರು. ಮೂಡ್ಲಕಟ್ಟೆ ಶಿಕ್ಷಣ ಸಂಸ್ಥೆಗಳ ಡೀನ್ ಡಾ. ಪದ್ಮಚರಣ ಸ್ವೈನ್, ಮೂಡ್ಲಕಟ್ಟೆ ನರ್ಸಿಂಗ್ ಕಾಲೇಜು ಪ್ರಾಂಶುಪಾಲೆ ಪ್ರೊ. ಜೆನ್ನಿಫರ್ ಫ್ರೀಡಾ ಮೆನೆಜಸ್, ಐಎಂಜೆ ಕಾಲೇಜ್ ಆಫ್ ಅಲೈಡ್ ಹೆಲ್ತ್ ಸೈನ್ಸಸ್, ಮೂಡ್ಲಕಟ್ಟೆ ಇನ್‌ಸ್ಟಿಟ್ಯೂಟ್ ಆಫ್ ಪ್ಯಾರಾ ಮೆಡಿಕಲ್ ಸೈನ್ಸಸ್‌ನ ಪ್ರಾಂಶುಪಾಲೆ ಪ್ರೊ. ಹೇಮಲತಾ, ಐಎಂಜೆ ಕಾಲೇಜ್ ಆಫ್ ಅಲೈಡ್ ಹೆಲ್ತ್ ಸೈನ್ಸಸ್‌ನ ಉಪ ಪ್ರಾಂಶುಪಾಲೆ ಸೌಜನ್ಯ ಉಪಸ್ಥಿತರಿದ್ದರು.

> **ಆತ್ಮವಿಶ್ವಾಸ ಬೆಳೆಸುತ್ತದೆ**
> ಯೋಗವು ಕೇವಲವ್ಯಾಯಾಮವಲ್ಲ, ಅದು ಸಮಗ್ರ ಜೀವನಶೈಲಿಯಾಗಿದ್ದು, ವಿದ್ಯಾರ್ಥಿಗಳಲ್ಲಿ ಏಕಾಗ್ರತೆ, ಆತ್ಮವಿಶ್ವಾಸ -ಆರೋಗ್ಯಕರ ಮನೋಭಾವ ಬೆಳೆಸುತ್ತದೆ.
> ● ಡಾ. ರಾಮಕೃಷ್ಣ ಹೆಗ್ಡೆ

ಸಾಂತೂರು ಶ್ರೀ ದೇವಳದ ಸುತ್ತು ಪೌಳಿ ಶಿಲಾಮಯ ಕಾರ್ಯಕ್ಕೆ ಪಾದುಕಾನ್ಯಾಸ



ಶಿರ್ವ: ಇತಿಹಾಸ ಪ್ರಸಿದ್ಧ ಸಾಂತೂರು ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಸುತ್ತು ಪೌಳಿಯನ್ನು ಶಿಲಾಮಯಗೊಳಿಸುವ ಅಂಗವಾಗಿ ಗುರುವಾರ ಬೆಳಿಗ್ಗೆ ಪಾದುಕಾನ್ಯಾಸ ಕಾರ್ಯಕ್ರಮ ಉಡುಪಿ ಶ್ರೀ ಕೃಷ್ಣಾಪುರ ಮಠದ ಯತಿವರ್ಯರಾದ ಶ್ರೀ ವಿದ್ಯಾಸಾಗರ ತೀರ್ಥ ಶ್ರೀ ಪಾದರ ದಿವ್ಯ ಉಪಸ್ಥಿತಿಯಲ್ಲಿ ಸಂಪನ್ನಗೊಂಡಿತು.

ಧಾರ್ಮಿಕ ಅನುಷ್ಠಾನ

ಕ್ಷೇತ್ರದ ಪ್ರಧಾನ ತಂತ್ರಿಗಳಾದ ಬೆಳ್ಮಣ್ ನಡಿಗುತ್ತು ವೇದಮೂರ್ತಿ ಸತೀಶ್ ತಂತ್ರಿಗಳ ಮಾರ್ಗದರ್ಶನದಲ್ಲಿ ಪೂರಕ ಧಾರ್ಮಿಕ ಅನುಷ್ಠಾನಗಳು ಜರುಗಿದವು.

ಈ ಸಂದರ್ಭ ಪೂಜ್ಯ ಶ್ರೀಗಳು ಆಶೀರ್ವಚನ ನೀಡಿ ಹರಸಿದರು. ಬ್ರಹ್ಮಕಲಶ ಸಮಿತಿ ಮುಂಬೈ ಸಮಿತಿ ಅಧ್ಯಕ್ಷ ಸಾಂತೂರು ನಡಿಮನೆ ಚಂದ್ರಶೇಖರ ಶೆಟ್ಟಿ, ಕ್ಷೇತ್ರದ ಪ್ರಧಾನ ಅರ್ಚಕ ವೇ.ಮೂ.ವಿಠಲ ಜೋಯಿಸರು, ಅರ್ಚಕರಾದ ವೇ.ಮೂ. ಗೋಪಾಲಕೃಷ್ಣ ತಂತ್ರಿ, ಗುರುರಾಜ ಜೋಯಿಸರು, ಅನಂತ ತಂತ್ರಿಗಳು, ದಯಾನಂದ ಹೆಗ್ಡೆ ಸಾಂತೂರು, ರತ್ನಾಕರ ಶೆಟ್ಟಿ ಸಾಮನಾಡಿ ಗುತ್ತು, ಡಾ.ಸುಧಾಕರ ಶೆಟ್ಟಿ ಕುಂದಬೆಟ್ಟು, ಶ್ರೀ ಕ್ಷೇತ್ರ ಗೆಜ್ಜೆಗಿರಿ ಗೌರವಾಧ್ಯಕ್ಷ ಸಾಂತೂರು ಗರಡಿಮನೆ ರಾಜಶೇಖರ ಕೊಟ್ಯಾನ್, ಮುಂಬೈ ಸಮಿತಿ ಕಾರ್ಯದರ್ಶಿ ಗೀತಾ ಶೆಟ್ಟಿ, ಸ್ಮಿತಾ ರಮೇಶ್ ಶೆಟ್ಟಿ ದಾನಿಗಳಾದ ಜಯ ಶೆಟ್ಟಿ ಬಂಗ್ಲೆಮನೆ, ಕೆ.ಸಿ.ಕಾಮತ್ ಕಾಂಜಾರಕಟ್ಟೆ, ಅರುಣ್ ಶೆಟ್ಟಿ ಸಾಂತೂರು ಮೇಲ್ಮನೆ, ನವೀನ್ ಚಂದ್ರ ಸುವರ್ಣ, ಪ್ರತಾಪ್ ಶೆಣೈ ಮತ್ತಿತರರಿದ್ದರು. ರಘುಪತಿ ಜೋಯಿಸ ಮತ್ತು ಹರಿಕೃಷ್ಣ ತಂತ್ರಿ ವೇದಘೋಷ ಮಾಡಿದರು.

ಶ್ರೀನಿವಾಸ ತಂತ್ರಿ ಸ್ವಾಗತಿಸಿ, ಸಮಿತಿಯ ಪ್ರಧಾನ ಕಾರ್ಯದರ್ಶಿ ಸುಬ್ರಹ್ಮಣ್ಯ ಭಟ್ ಪ್ರಸ್ತಾವನೆಗೈದರು. ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಸುಧೀರ್ ರಾವ್ ಸಾಂತೂರು ವಂದಿಸಿದರು. ಪಿಲಾರು ಸುಧಾಕರ ಶೆಣೈ ಕಾರ್ಯಕ್ರಮ ನಿರೂಪಿಸಿದರು.

ಶ್ರೀ ಗುರುನರಸಿಂಹ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘದ ಕೋಟ ಶಾಖೆಯ ಸ್ಥಳಾಂತರ



ಕೋಟ: ಶ್ರೀ ಗುರುನರಸಿಂಹ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ಸಾಲಿಗ್ರಾಮ ಇದರ ಕೋಟ ಶಾಖೆಯನ್ನು ಸದಸ್ಯರ , ಗ್ರಾಹಕರ ಅನುಕೂಲಕ್ಕೆ ಕೋಟ ಪಡುಕರೆಯಲ್ಲಿ ರುವ ಕಾಲೇಜು ಸಂಕೀರ್ಣಕ್ಕೆ ಗುರುವಾರ ಸ್ಥಳಾಂತರಗೊಂಡಿತು.

ಧಾರ್ಮಿಕ ಪೂಜಾ ಕಾರ್ಯದೊಂದಿಗೆ ಸಂಘದ ಅಧ್ಯಕ್ಷ ಆನಂದ ಸಿ. ಕುಂದರ್ ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿ ಶಾಖಾ ಪರಿಸರದ ಸದಸ್ಯರು ಗ್ರಾಹಕರು ಸಂಘದಲ್ಲಿ ದೊರೆಯುವ ಸವಲತ್ತು ಪಡೆಯಲು ಕರೆ ನೀಡಿದರು.

ಸಂಘದ ಉಪಾಧ್ಯಕ್ಷ ಸಂಜೀವ ಜಿ., ನಿರ್ದೇಶಕರಾದ ಮಂಜುನಾಥ ಎಸ್.ಕೆ., ಡಾ.ಕೆ. ಕೃಷ್ಣ ಕಾಂಚನ್, ಕೆ.ಶಂಕರ ಬಂಗೇರ, ವಸಂತ ಶೆಟ್ಟಿ, ವೈ.ಕೃಷ್ಣಮೂರ್ತಿ ಐತಾಳ, ಶಾಂತಾ ಭಟ್ಟ, ನಾಗರತ್ನ ಬಾಯರಿ ಮತ್ತು ಸವಿತಾ ಪಿ. ಪೂಜಾರಿ ಮೊದಲಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಸಂಘದ ಮುಖ್ಯಕಾರ್ಯನಿರ್ವಾಹಕ ಜಿ. ಎಸ್. ಸೋಮಯಾಜಿ ಸ್ವಾಗತಿಸಿ, ಶಾಖಾ ವ್ಯವಸ್ಥಾಪಕ ಸತೀಶ್ ತಿಂಗಳಾಯ ವಂದಿಸಿ, ಕಾರ್ಯಕ್ರಮ ನಿರೂಪಿಸಿದರು.

- ■ ಸದಸ್ಯರ ಹಾಗೂ ಗ್ರಾಹಕರ ಅನುಕೂಲಕ್ಕೆ ಕೋಟ ಪಡುಕರೆಯಲ್ಲಿ ರುವ ಕಾಲೇಜು ಸಂಕೀರ್ಣಕ್ಕೆ ಸ್ಥಳಾಂತರ
- ■ ಗ್ರಾಹಕರು ಸಂಘದಲ್ಲಿ ದೊರೆಯುವ ಸವಲತ್ತುಗಳ ಸದುಪಯೋಗಿಸಬೇಕು

ಕೋಡಿ ಶಾಲೆಯ ಸಭಾಂಗಣದಲ್ಲಿ ಕೋಡಿ ಗ್ರಾಮಪಂಚಾಯತ್‌ನ ಮಹಿಳಾ ವಿಶೇಷ ಗ್ರಾಮಸಭೆ | ವಿವಿಧ ವಿಷಯಗಳ ಮಾಹಿತಿ

ಮಹಿಳೆಯರು ಕಾನೂನಿನ ಸಮಗ್ರ ಅಧ್ಯಯನ ಮಾಡುವುದು ಇಂದಿನ ಅತ್ಯಗತ್ಯ: ಭಾನುಮತಿ

ಕೋಟ: ಮಹಿಳೆಯರು ಪ್ರಸ್ತುತ ದಿನಗಳಲ್ಲಿ ಕಾನೂನಿನ ಬಗ್ಗೆ ಸಮಗ್ರ ಅಧ್ಯಯನ ಮಾಡಬೇಕು ಆ ಮೂಲಕ ಈ ಸಮಾಜದಲ್ಲಿ ಮುಂಚೂಣಿಯಲ್ಲಿ ಬದುಕು ಕಟ್ಟಿಕೊಳ್ಳಲು ಸಾಧ್ಯವಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕೌನ್ಸಿಲರ್ ಭಾನುಮತಿ ಹೇಳಿದ್ದಾರೆ.

ಗುರುವಾರ ಕೋಡಿ ಶಾಲೆಯ ಸಭಾಂಗಣದಲ್ಲಿ ಕೋಡಿ ಗ್ರಾ.ಪಂ.ನ ವಿಶೇಷ 'ಮಹಿಳಾ ಗ್ರಾಮ ಸಭೆಯಲ್ಲಿ ಮಹಿಳಾ ಹಕ್ಕುಗಳು ಮತ್ತು ರಕ್ಷಣೆ, ಕಾನೂನು ಅರಿವು ಇದರ ಬಗ್ಗೆ ಮಾತನಾಡಿ ಪ್ರಸ್ತುತ ಹೆಚ್ಚಿನ ಪ್ರಕರಣಗಳಲ್ಲಿ ಮಹಿಳೆಯರೆ ಮೋಸಹೋಗುತ್ತಿರುವುದನ್ನು ಕಾಣುತ್ತಿದ್ದೇವೆ ಇದಕ್ಕೆ ಕಾರಣ ಅವರಿಗೆ ಕಾನೂನಿನ ಬಗ್ಗೆ ಅರಿವು ಇಲ್ಲದಿರುವುದೇ ಮುಖ್ಯ ಕಾರಣ ಎಂದರು.

ಸಭೆಯಲ್ಲಿ ಸಿಸಿ ಕ್ಯಾಮರ ಸದ್ದು

ಮಹಿಳಾ ಗ್ರಾಮಸಭೆಯಲ್ಲಿ ಸಾಸ್ತಾನದ ಮೂಲಕ



ಕೋಡಿ ಸೇತುವೆಯಲ್ಲಿ ತ್ಯಾಜ್ಯ ಎಸೆಯುವವರ ಕಣ್ಗಾವಲಿಗೆ ಪಂಚಾಯತ್ ಸಿಸಿ ಕ್ಯಾಮರ ಅಳವಡಿಸಿದ್ದು ಅದು ತ್ಯಾಜ್ಯ ಎಸೆಯುವವರಿಗೆ ಮಾತ್ರವಲ್ಲದೆ ಪಂ. ವ್ಯಾಪ್ತಿಯ ಮಹಿಳೆಯರು ಅದೇ ರಸ್ತೆ ಮೂಲಕ ಸಂಚರಿಸುವಾಗ ರಕ್ಷಣೆಗೂ ಪೂರಕವಾಗಿದೆ ಎಂದು ಪಂ.

> **ಜಾಗೃತಿ ಅಗತ್ಯ**
> ವರದಕ್ಷಿಣೆ ಪಿಡುಗು, ಲೈಂಗಿಕ ಕಿರುಕುಳ ಸೇರಿದಂತೆ ಅನೇಕ ಸಮಸ್ಯೆ ಎದುರಿಸುತ್ತಿದ್ದಾಳೆ, ಸ್ವಾವಲಂಬಿಯಾಗಿ ಬದುಕು ಕಾಣುವಂತಾಗಲು ಅವಳು ಹೊರ ಜಗತ್ತಿನ ಅರಿವು ಅಗತ್ಯ, ಪ್ರಸ್ತುತ ಎಲ್ಲಾ ಕ್ಷೇತ್ರದಲ್ಲಿ ಗುರುತಿಸಿಕೊಳ್ಳುವ ಮಹಿಳೆ ಮಕ್ಕಳ ಬಗ್ಗೆ ಜಾಗೃತಿ ಅಗತ್ಯ.
> ● ಭಾನುಮತಿ

ಕಾರ್ಯವೈಕರಿಗೆ ಶಹಬಾಷ್ ನೀಡಿದರು.

ಆರೋಗ್ಯದ ಕುರಿತು ಕೋಡಿ ಬೇಂಗ್ರೆ ಪ್ರಾ.ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಶಮಾ ಶುಕುರ್ ಸಮಗ್ರ ಮಾಹಿತಿ ನೀಡಿದರು. ಮಹಿಳಾ ಹಕ್ಕುಗಳ ಬಗ್ಗೆ ಸಾಮಾಜಿಕ ಕಾರ್ಯಕರ್ತೆ ತಿಲೋತ್ತಮೆ ನಾಯಕ್ ಮಾಹಿತಿ ನೀಡಿದರು. ಗ್ರಾಮಸಭೆ ನೋಡೆಲ್ ಅಧಿಕಾರಿಯಾಗಿ ಪಂ. ಆಡಳಿತಾಧಿಕಾರಿ ಅನುಷಾ ಭಟ್ ಭಾಗವಹಿಸಿದ್ದರು. ಸಭೆಯ ಮೊದಲ ಗ್ರಾ.ಪಂ.ನಿಂದ ಗ್ರಾಮದ ಮಹಿಳೆಯರಿಗೆ ವಿವಿಧ ಸ್ಪರ್ಧೆ ಏರ್ಪಡಿಸಿ ಸಭೆಯಲ್ಲಿ ಬಹುಮಾನ ವಿತರಿಸಲಾಯಿತು.

ಸರ್ಕಾರದ ವಿವಿಧ ಸವಲತ್ತುಗಳು. ಮಹಿಳೆಯರ ಸುರಕ್ಷತೆ, ಸಬಲೀಕರಣ, ಶಾಸನಬದ್ಧ ಹಕ್ಕುಗಳ ಜಾಗೃತಿ, ಉದ್ಯೋಗ–ಆರ್ಥಿಕ ಯೋಜನೆ, ಗ್ರಾ.ಪಂ. ಮಟ್ಟದಲ್ಲಿ ಮಹಿಳೆಯರಿಗಾಗಿ ಇರುವ ಉದ್ಯೋಗ – ಆರ್ಥಿಕ ಯೋಜನೆಗಳ ಮಾಹಿತಿ ನೀಡಲಾಯಿತು. ಕೋಡಿ ಪಂ.ಮಾಜಿ ಅಧ್ಯಕ್ಷೆ ಗೀತಾ ಖಾರ್ವಿ, ಸಂಜೀವಿ ಒಕ್ಕೂಟ ಅಧ್ಯಕ್ಷೆ ಪೂರ್ಣಿಮಾ, ಪ್ರಾ. ಶಾಲಾಮುಖ್ಯ ಶಿಕ್ಷಕಿ ಸಂಪಾ ಮತ್ತಿತರರಿದ್ದರು. ರವೀಂದ್ರ ರಾವ್ ನಿರೂಪಿಸಿ, ಸಂಜೀವಿನಿ ಒಕ್ಕೂಟ ಎಂಬಿಕೆ ಅನಿತಾ ವಂದಿಸಿದರು.

ಗಂಗೊಳ್ಳಿ ಗ್ರಾಮ ಪಂಚಾಯತ್‌ನ ಮಹಿಳಾ ಗ್ರಾಮಸಭೆ

ಕುಂದಾಪುರ: ಗಂಗೊಳ್ಳಿ ಗ್ರಾ.ಪಂ.ನ 2026–27ನೇ ಸಾಲಿನ ಮಹಿಳಾ ಗ್ರಾಮಸಭೆ ಗಂಗೊಳ್ಳಿ ಗ್ರಾಪಂ ಸಭಾಭವನದಲ್ಲಿ ಬುಧವಾರ ನಡೆಯಿತು.

ಗ್ರಾ.ಪಂ. ಅಧ್ಯಕ್ಷೆ ಜಯಂತಿ ಖಾರ್ವಿ ಅಧ್ಯಕ್ಷತೆ ವಹಿಸಿದ್ದರು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ರೇಖಾ ಅವರು ಗೃಹಲಕ್ಷ್ಮೀ ಯೋಜನೆ, ಉದ್ಯೋಗಿನಿ ಯೋಜನೆ, ಮಾತೃವಂದನಾ ಯೋಜನೆ, ಗರ್ಭಿಣಿ ಮಹಿಳೆಯರಿಗೆ ಪೌಷ್ಟಿಕಾಂಶ ಆಹಾರ ಹಾಗೂ ಮಹಿಳೆ ಮತ್ತು ಮಕ್ಕಳ ಆಹಾರ ಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ಗಂಗೊಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರ ಶುಶ್ರೂಷಕಿ ಪ್ರಜ್ವಲಾ, ಆರೋಗ್ಯ ಇಲಾಖೆ ವಿವಿಧ ಕಾರ್ಯಕ್ರಮಗಳು ಹಾಗೂ ಯೋಜನೆಗಳ ಬಗ್ಗೆ ಮತ್ತು



ಪಲ್ಸ್ ಪೋಲಿಯೊ ಕಾರ್ಯಕ್ರಮದ ಬಗ್ಗೆ ಮಾಹಿತಿ ನೀಡಿದರು. ಕುಟುಂಬ ಸಾಂತ್ವನ ಕೇಂದ್ರ ತಲ್ಲೂರು ಇದರ ಆಪ್ತ ಸಮಾಲೋಚಕಿ ಪೂರ್ಣಿಮಾ ಅವರು ಆಪ್ತ ಸಮಾಲೋಚನೆ ನಡೆಸಿ ಕಾನೂನು ನೆರವಿನ ಬಗ್ಗೆ ಮಾಹಿತಿ ನೀಡಿದರು.ಗ್ರಾ.ಪಂ. ಉಪಾಧ್ಯಕ್ಷ ತಬ್ರೇಜ್, ಪಿಡಿಒ ರವಿ, ಕಾರ್ಯದರ್ಶಿ ಅನೂಪ್ ಶೇಟ್, ಸಂಜೀವಿನಿ ಒಕ್ಕೂಟ ಅಧ್ಯಕ್ಷೆ ಶೋಭಾ ಮತ್ತಿತರರಿದ್ದರು. ನಾರಾಯಣ ಶ್ಯಾನುಭಾಗ್ ಸ್ವಾಗತಿಸಿದರು.